ಕಸ್ತೂರಿ



ಜೂನ್, ೧೯೬೧ ಬೆಲೆ : ೭೫ ನ.ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೇ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಗುಲಾಬಿ ಹೂ
ಎ. ಕೆ. ಬಾಲು

ಚಂದಾ ದರ :

ವಾರ್ಷಿಕ (ಅಂಚೆಸೇರಿ).	ರೂ.೮.೦೦
ಅರ್ಧ ವರ್ಷ —	ರೂ.೪.೫೦
ಬಿಡಿಸಂಚಿಕೆ —	ರೂ.೦.೭೫

Kasturi, June 1962

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ,ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರ ವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಕಸ್ತೂರಿ

ಸಂಚಿಕೆ ೧೦ ಜೂನ್, ೧೯೬೨ ವರ್ಷ ೬

ಪಶ್ಚಾತ್ತಾಪದ ಅಶ್ರುಗಳು

ಒಮ್ಮೆ ಒಬ್ಬ ದೇವದೂತ ಅಪರಾಧ ಗೈದ. ಅವನಿಗೆ ಶಿಕ್ಷೆಯಾಯಿತು. ದೇವರ ಶಾಪದಿಂದಾತ ಮರ್ತ್ಯಲೋಕಕ್ಕೆ ಜನ್ಮತಾಳಿ ಬರಬೇಕಾಗಿತ್ತು. ಶಾಪನಿವೃತ್ತಿಗಾಗಿ ದೂತ ಪರಿಪರಿಯಾಗಿ ಕೇಳಿಕೊಂಡ. ಕೊನೆಗೆ ದೇವರು 'ನೀನು ದೇವರಿಗೆ ಅತ್ಯಂತ ಪ್ರಿಯವಾದ ವಸ್ತುವನ್ನು ತಂದದ್ದಾದರೆ ನಿನ್ನನ್ನು ಮನ್ನಿಸಿ ಪುನಃ ದೇವಲೋಕದಲ್ಲಿ ಕರೆದುಕೊಳ್ಳುವೆ' ಎಂದು ಹೇಳಿದ.

ದೇವರಿಗೆ ಅತ್ಯಂತ ಪ್ರಿಯವಾದುದೇನು? ಎಂಬ ವಿಚಾರದಲ್ಲಿ ದೇವದೂತನು ಅನೇಕ ವರ್ಷಗಳನ್ನು ಕಳೆದ. ಆದರೂ ಬಗೆ ಹರಿಯಲಿಲ್ಲ. ಕೊನೆಗೆ ಎರಡು ಸೈನ್ಯಗಳು ಯುದ್ಧಕ್ಕೆ ಅಣಿಯಾದದ್ದು ಅವನ ಕಣ್ಣಿಗೆ ಬಿತ್ತು. ಅಲ್ಲಿ ಹೋದ. ವಿಷಯವೇನೆಂದು ಕೇಳಿದ. ಶತ್ರುಗಳ ಆಕ್ರಮಣವನ್ನು ಎದುರಿಸಲು ಊರವರು ಒಟ್ಟುಗೂಡಿದ್ದರೆಂದು ತಿಳಿಯಿತು. ಯುದ್ಧವಾಯಿತು.

ಈತ ನೋಡುತ್ತಲೇ ನಿಂತಿದ್ದ. ಊರವರ ಸೈನ್ಯದ ಒಬ್ಬ ತರುಣ ಬಹಳ ಶೌರ್ಯದಿಂದ ಹೋರಾಡಿ ಮಡಿದ. ವೀರಸ್ವರ್ಗ ಪಡೆದ. 'ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಈ ವೀರನು ದೇವರಿಗೆ ಅತ್ಯಂತ ಪ್ರಿಯನಾದಾನು. ಇವನನ್ನೆ ಒಯ್ಯಬೇಕು' ಎಂದ ದೇವದೂತ.

ದೇವದೂತನು ರಾಷ್ಟ್ರಪ್ರೇಮಿಯನ್ನು ಒಯ್ದರೂ ರತ್ನಖಚಿತವಾದ ದೇವಲೋಕದ ದ್ವಾರವು ತೆರೆಯಲಿಲ್ಲ. ದೇವದೂತನು ನಿರಾಶನಾಗಿ ಹಿಂದಿರುಗಿದ.

ಮತ್ತೆ ಆತ ದೇವರಿಗೆ ಅತ್ಯಂತ ಪ್ರಿಯವಾದ ವಸ್ತುವಿನ ಶೋಧದಲ್ಲಿ ಅಲೆಯಲಾರಂಭಿಸಿದ. ಒಂದು ಕಡೆಗೆ ಒಂದು ಮನೆಗೆ ಬೆಂಕಿ ಹತ್ತಿದ್ದನ್ನಾತ ಕಂಡ. ಜನರು ನೂರಾರು ಸಂಖ್ಯೆಯಲ್ಲಿ ಒಟ್ಟಾಗಿದ್ದರು. ಬೆಂಕಿ ಕ್ರೂರವಾದ ನಾಲಗೆ

ಗಳನ್ನು ಚಾಚಿ ಮನೆಯನ್ನು ನುಂಗುತ್ತಿತ್ತು. ಜನರು ಬೆಂಕಿಯನ್ನು ಆರಿಸುವ ಹಲವಾರು ಪ್ರಯತ್ನಗಳನ್ನು ಮಾಡುತ್ತಿದ್ದರು. ಇದನ್ನು ದೇವದೂತನು ನೋಡುತ್ತ ನಿಂತಿರುವಾಗಲೇ ಮನೆಯೊಳಗಿಂದ ಒಬ್ಬ ಸ್ತ್ರೀ ರೋದಿಸುತ್ತ ಧಾವಿಸಿ ಹೊರಗೋಡಿ ಬಂದಳು. ಅವಳ ಒಂದೇ ಒಂದು ಕೂಸು ಒಳಗೆ ಉಳಿದಿತ್ತು. ಆ ಕೂಸನ್ನು ಹೇಗಾದರೂ ಮಾಡಿ ಯಾರಾದರೂ ಸಂರಕ್ಷಿಸಿ ಹೊರಗೆ ತಂದು ತನಗೊಪ್ಪಿಸಬೇಕೆಂದು ಆಕೆ ಕಂಡಕಂಡವರನ್ನು ಬೇಡಿಕೊಳ್ಳುತ್ತಿದ್ದಳು. ಬೆಂಕಿಯಲ್ಲಿ ಹಾರಿ, ತನ್ನ ಪ್ರಾಣದ ಆಸೆಯನ್ನು ಬಿಟ್ಟು ಕೂಸನ್ನು ಉಳಿಸುವ ಪ್ರಯತ್ನಕ್ಕೆ ಯಾರು ಮುಂದಾಗಬೇಕು? ಆ ಹೆಂಗಸು ನಿರಾಶಳಾದಳು. ಅಷ್ಟರಲ್ಲಿ ಒಬ್ಬ ತರುಣ ಒಳ ನುಗ್ಗಿದ. ಬೆಂಕಿಯಲ್ಲಿ ಕಾಣದಾದ. ಅವನದೂ ಆಹುತಿಯಾಯಿತೆಂದು ಜನ ಹೌಹಾರಿದರು. ಆದರೆ ಕೆಲಹೊತ್ತಿನಲ್ಲೇ ಆತ ಕೂಸಿನೊಂದಿಗೆ ಬೆಂಕಿಯೊಳಗಿಂದ ಪಾರಾಗಿ ಹೊರಬಂದ. ಕೂಸನ್ನು ತಾಯಿಯ ಕೈಗೊಪ್ಪಿಸಿದ. ಅವಳ ಆನಂದಕ್ಕೆ ಪಾರಾವಾರವಿರಲಿಲ್ಲ. ಜನರು ತರುಣನ ಸಾಹಸವನ್ನು ಕೊಂಡಾಡಿದರು. ಅಷ್ಟರಲ್ಲೇ ಉರಿಯುವ ಚೌಕಟ್ಟು ತರುಣನ ಮೇಲೆ ಉರುಳಿತು. ತರುಣನಿಗೆ ಗಾಯವಾಯಿತು. ಬೆಂಕಿ ಹತ್ತಿತು. ಆತ ಮೂರ್ಛೆ ಹೋದ. ಜನರು ಅವನನ್ನು ಹೊರಗೆಳೆದು ಉಪಚರಿಸುವುದರಲ್ಲಿ ತೊಡಗಿದರು. ಆದರೂ ಆ ಸಾಹಸಿಗ ಉಳಿಯಲಿಲ್ಲ. ಕೆಲ ಹೊತ್ತಿನಲ್ಲೇ ಪ್ರಾಣ ಪಕ್ಷಿ ಅವನ ದೇಹವನ್ನು ಬಿಟ್ಟು ಹಾರಿಹೋಯಿತು.


ಇದನ್ನೆಲ್ಲ ನೋಡುತ್ತಿದ್ದ ದೇವದೂತನು ಇನ್ನೊಬ್ಬರ ಪ್ರಾಣರಕ್ಷಣೆಗಾಗಿ ತನ್ನ ಪ್ರಾಣಗಳನ್ನೇ ಅರ್ಪಿಸಿದ ಆ ಧೀರನಿಗಾಗಿ ಕಣ್ಣೀರು ತಂದ. ಈತನೇ ದೇವರಿಗೆ ಅತ್ಯಂತ ಪ್ರಿಯನು ಎಂದು ಮನವರಿಕೆ ಮಾಡಿಕೊಂಡು ಅವನನ್ನೆತ್ತಿಕೊಂಡು ಸ್ವರ್ಗಕ್ಕೆ ಹೊರಟ.

ಆದರೆ ಈ ಬಾರಿಯೂ ನಿರಾಶೆಯೇ ದೇವದೂತನ ಪಾಲಿಗೆ ಕಾದಿತ್ತು. ಇನ್ನು ತನಗೆ ಪುನಃ ದೇವಲೋಕದ ದರ್ಶನವಿಲ್ಲೆಂಬ ನಿರಾಶೆಯಲ್ಲೇ ದೇವದೂತ ಹಾಗೂ ಹೀಗೂ ದಿನಗಳೆಯುತ್ತ ಭೂಲೋಕದಲ್ಲಿ ಸಂಚರಿಸುತ್ತಿದ್ದ. ಎಷ್ಟೋ ವರ್ಷಗಳ ತರುವಾಯ ಒಂದು ಸಂಜೆ ಸೂರ್ಯಾಸ್ತದ ಸಮಯಕ್ಕೆ ನಿಸರ್ಗದ ರಮ್ಯ ದೃಶ್ಯವನ್ನೀತ ನೋಡುತ್ತ ಮೈಮರೆತ. ಸೂರ್ಯನ ಹೊಂಗಿರಣಗಳು ಮರಗಳಿಗೆ ಆಭರಣ ತೊಡಿಸಿದಂತೆ ಕಾಡಿನ ಮೇಲೆ ಮೆರೆಯುತ್ತಿದ್ದವು. ಹರಿಯುವ ನದಿಯಲ್ಲಿ ಆರಕ್ತ ಸೂರ್ಯನ ಪ್ರತಿಬಿಂಬ ಬಿದ್ದು ಆ ನೀರೂ ಕೆಂಪಾಗಿರುವಂತೆ ಭಾಸವನ್ನುಂಟು ಮಾಡುತ್ತಿತ್ತು. ಬಣ್ಣಗಳ ಓಕಳಿಯಾಗಿತ್ತು ನಾಲ್ಕೂ ದಿಕ್ಕುಗಳಲ್ಲಿ. ಆ ಸಮಯದಲ್ಲಿ ಒಂದು ಮರದ ಬುಡದಲ್ಲಿ ಒಬ್ಬ ವೃದ್ಧ ಕೂತಿದ್ದ. ಆತ ಖಿನ್ನನಾಗಿದ್ದ. ಯಾವದೊ ಹಳೇ ಪಾಪಕೃತ್ಯದ ಅರಿವಿನಿಂದ ಆ ವೃದ್ಧ ವ್ಯಾಕುಲನಾಗಿದ್ದ. ಆ ನೆನಪು ಅವನನ್ನು ಪೀಡಿಸುತ್ತಿತ್ತು. ಆತ ಕೈಮುಗಿದು ಪರಮಾತ್ಮನನ್ನು ಸ್ಮರಿಸುತ್ತಿದ್ದ.

ವೃದ್ಧನ ಕಣ್ಣುಗಳಿಂದ ಅಶ್ರುಬಿಂದುಗಳು ಕೆಳಗುರುಳತೊಡಗಿದವು. ಈ ಅಶ್ರುಬಿಂದುಗಳನ್ನು ದೇವರಿಗೆ ಒಯ್ದುಕೊಟ್ಟರೆ ಒಂದು ವೇಳೆ ತನ್ನ ಶಾಪ ಮುಕ್ತಿಯಾದೀತೇನೊ ಎಂಬ ಒಂದು ವಿಚಾರ ದೇವದೂತನ ತಲೆಯಲ್ಲಿ ಬಂತು.

ಆ ಅಶ್ರುಗಳನ್ನಾತ ನಿರಾಶೆಯಿಂದಲೆ ದೇವಲೋಕಕ್ಕೆ ಒಯ್ದ. ಆತ ಸ್ವರ್ಗದ ಬಾಗಿಲಿಗೆ ಹೋಗುವುದೇ ತಡ, ಕದಳೆ ವೊಳಗಿತು. ಆತ ಆಶ್ಚರ್ಯಚಕಿತನಾದ. ವೈಭವೋಚಿತವಾದ ರೀತಿಯಲ್ಲಿ ದೇವರು ಈತನನ್ನು ಸನ್ಮಾನಿಸಲು ಬರುತ್ತಿರುವುದು ಕಾಣಿಸಿತು. ಪರಮಾತ್ಮನು ಇವನನ್ನು ತನ್ನ ಹತ್ತಿರದ ಆಸನದಲ್ಲಿ ಕುಳ್ಳಿರಿಸಿ 'ದೇವರಿಗೆ ಅತ್ಯಂತ ಪ್ರಿಯವಾದುದೆಂದರೆ ಇದೇ; ಪಶ್ಚಾತ್ತಾಪದ ಅಶ್ರುಗಳು' ಎಂದು ಹೇಳಿದ. *

ಆಡು ಮುಟ್ಟದ ಗಿಡವಿಲ್ಲ, ;ಇವರಿಗೆ ತಿಳಿಯದ ವಿಷಯವಿಲ್ಲ.



ಮಹಾಪಂಡಿತ ರಾಹುಲ ಸಾಂಕೃತ್ಯಾಯನ

ದಲಕೆ.

ದೇಶದ ಜನತೆ ಭಗವಾನ್ ಬುದ್ಧನ ಕಾಲಿಗೆ ಬಿದ್ದು ಆತನನ್ನು ಬೆಂಬತ್ತಿ ಸಾಗುತ್ತಿದ್ದಂತೆ ಇಂದು ಈ ಕಾಷಾಯವಸ್ತ್ರಧಾರಿ ಸ್ವರ್ಣ ಕಾಂತಿಯ ಭಿಕ್ಷುವಿನ ಬೆನ್ನುಹತ್ತಿದೆ, ಎಂದು ಪ್ರಸಿದ್ಧ ಇತಿಹಾಸಜ್ಞ, ಶ್ರೀ ಕಾಶೀಪ್ರಸಾದ ಜಯಸ್ವಾಲರು ಇಂದಿಗೆ ಮೂವತ್ತೆರಡು ವರ್ಷಗಳ ಹಿಂದೆ 'ಮಾಡರ್ನ ರಿವ್ಯೂ' ಮಾಸಿಕದಲ್ಲಿ ಮೂವತ್ತೆರಡು ವರ್ಷದ ಬೌದ್ಧ ಭಿಕ್ಷುವೊಬ್ಬನ ಬಗೆಗೆ ಬರೆದರು.

ಭಗವಾನ್ ಬುದ್ಧನಂತೆ ಜನತೆಯ ಭಕ್ತಿ ಪ್ರೀತ್ಯಾದರಗಳಿಗೆ ಪಾತ್ರನಾದ ಈ ಗೌರಾಂಗ ಮಹಾಭಿಕ್ಷು ಯಾರು ? ತನ್ನ ಮೂವತ್ತೆರಡನೆಯ ವಯಸ್ಸಿನಲ್ಲಿಯೆ ಇಂಥ ಅಪಾರ ಪ್ರೇಮ ಗಳಿಸಿದ ಈ ವ್ಯಕ್ತಿಯ ಜೀವನ ಉದ್ಬೋಧಕವಾಗಿದೆ. ಸ್ಫೂರ್ತಿಪ್ರದವಾಗಿದೆ. ಎಳೆವರೆಯಲ್ಲಿಯೆ ಗೃಹತ್ಯಾಗ ಮಾಡಿ ದೇಶವಿದೇಶಗಳನ್ನು ಸುತ್ತಿ ಮಹಾಪಂಡಿತನೆಂಬ ಗೌರವಕ್ಕೆ ಪಾತ್ರನಾಗಿ ಭಾರತಮಾತೆಗೆ ತ್ರಿಕರಣಪೂರ್ವಕ ಸೇವೆ ಸಲ್ಲಿಸಿ ಇಂದು ಅರವತ್ನಾಲ್ಕನೆ ವರ್ಷದಲ್ಲಿರುವ ಈ ಮಹಾಸತ್ವ ಬೇರೆ ಇನ್ನಾರೂ ಅಲ್ಲ, ಮಹಾಪಂಡಿತ ರಾಹುಲ ಸಾಂಕೃತ್ಯಾಯನ.

ಅಂದಿನ ಸ್ವರ್ಣಕಾಂತಿ ಇಂದು ಉಳಿದಿಲ್ಲ. ಅಂಗಂ ಗಲಿತಂ ಆಗಿ ಇಂದು ಅವರು ಕಲಕತ್ತೆಯ ಕಾರನಾನಿ ಆಸ್ಪತ್ರೆಯ ಹೃದಯರೋಗಿಗಳ ವಿಭಾಗದಲ್ಲಿ ರುಗ್ಣಶಯ್ಯಾಗತರಾಗಿದ್ದಾರೆ. ದುರ್ದೈವವೆಂದರೆ ಅವರ ಸ್ಮೃತಿ ನಷ್ಟವಾಗ ಹತ್ತಿದೆ.

ಕಡಲಾಳದಲ್ಲಿಳಿದು ಅಲ್ಲಿಯ ಕೆಸರು ಸಿಂಪು ಶಂಖಗಳನ್ನೆಲ್ಲ ನಿವಾರಿಸಿ ಆಣಿ ಮುತ್ತುಗಳನ್ನಷ್ಟೇ ಆರಿಸಿಕೊಡುವ ಮುಳುಗು ಹಾಕುವವನಿಗೆ ಕೇವಲ ಕೂಲಿ ಹಣ ದೊರೆಯುತ್ತದೆ. ಮುತ್ತು ಮಾತ್ರ ಒಡೆಯನ ಕೈಸೇರಿ ಆತ ಸಮೃದ್ಧಿ ಹೊಂದುತ್ತಾನೆ. ಈ ಕೂಲಿಕಾರನು ಮಾತ್ರ ತನ್ನ ಕೂಲಿಹಣದಲ್ಲಿ ಹಾಗೂ ಹೀಗೂ ಕುಟುಂಬ ಪೋಷಣೆ ಮಾಡಿಕೊಳ್ಳಬೇಕು.

ರಾಹುಲರ ಸ್ಥಿತಿಯೂ ಹೀಗೇ ಆಗಿದೆ. ಜ್ಞಾನ

ಸಾಗರದಲ್ಲಿಯ ಆಣಿಮುತ್ತುಗಳನ್ನು ಅವರು ಗ್ರಂಥರೂಪದಲ್ಲಿ ಪ್ರಕಾಶಕರಿಗೆ ಇತ್ತಿದ್ದಾರೆ. ಇದರಿಂದ ವಾಚಕರ ಜ್ಞಾನ, ಪ್ರಕಾಶಕರ ಕೋಶ ಸಮೃದ್ಧವಾದವೇ ಹೊರತು ಈ ಪಂಡಿತನ ಪಾಡನ್ನು ಯಾರೂ ಕೇಳಲಿಲ್ಲ.

ರಾಹುಲರು ಅಸಹಕಾರ ಆಂದೋಲನದಲ್ಲಿ ಭಾಗವಹಿಸಿ ಜೇಲಯಾತ್ರೆಯನ್ನು ಮುಗಿಸಿದ ನಂತರ ಸಾಗರವನ್ನುಲ್ಲಂಘಿಸಿ ಸಿಂಹಳಕ್ಕೆಹೋಗಿ ಅಲ್ಲಿ ಪಾಲಿ ಪ್ರಾಕೃತ ಭಾಷೆಗಳ ಅಜಸ್ರ ಅಧ್ಯಯನವನ್ನು ಮಾಡಿ ಮಹಾ ಪಂಡಿತರೆಂದು ಗೌರವಿಸಲ್ಪಟ್ಟ ನಂತರ, ಗ್ರಂಥರಾಶಿಗಳ ಸಂಚಯನಕ್ಕಾಗಿ ಟಿಬೇಟಿಗೆ ತೆರಳಿದರು.

ಅಲ್ಲಿಂದ ಅವರು ಬರಿಗೈಯಿಂದ ಹಿಂತಿರುಗಲಿಲ್ಲ. ಟನ್ನುಗಟ್ಲೆ ಭಾರದ ಪ್ರಾಚೀನ ಹಸ್ತಲಿಪಿ ಗ್ರಂಥಗಳನ್ನು ಹೊರಿಸಿಕೊಂಡು ಬಂದು ಪಾಟಣಾ ವಸ್ತುಸಂಗ್ರಹಾಲಯಕ್ಕೆ ದಾನ ಮಾಡಿದರು. ಅದರ ಸಂಪಾದನ-ಪ್ರಕಾಶನ ಕಾರ್ಯವನ್ನು ನಿರ್ವಹಿಸಬಲ್ಲ ಯೋಗ್ಯರೆಂದರೆ ರಾಹುಲರೊಬ್ಬರೇ. ಆದರೆ ಅವರಿಗಿದು ಸಾಧ್ಯವಾಗಿಲ್ಲ. ಆ ಅಪಾರ ಗ್ರಂಥರಾಶಿ ಪಾಟಣಾ ಸಂಗ್ರಹಾಲಯದಲ್ಲಿ ಹೇಳಹೆಸರಿಲ್ಲದೆ ಬಿದ್ದುಕೊಂಡಿದೆ. ಹಾಗಿದ್ದರೂ ಈ ಗ್ರಂಥರಾಶಿ, ಜ್ಞಾನಸಾಗರ ಪಾಟಣಾ ಸಂಗ್ರಹಾಲಯದಲ್ಲಿ ಸುರಕ್ಷಿತವಾಗಿದೆ ಎಂಬ ಮಾತೇನೂ ಕಡಿಮೆಯದಲ್ಲ.

ಗ್ರಂಥರಾಶಿಯಲ್ಲಿಯೆ ಇವರು ಮಗ್ನರಾಗಿ ಕುಳಿತು ಬಿಟ್ಟರು ಎಂದೇನಿಲ್ಲ. ಪರದಾಸ್ಯದಲ್ಲಿ ಸಿಕ್ಕು ಬಳಲುತ್ತಿದ್ದ ದೇಶದ ಜನತೆಯ ಬಗ್ಗೆ ಇವರಲ್ಲಿ ಸಹಾನುಭೂತಿ ಉಕ್ಕುತ್ತಿತ್ತು. ಬಿಹಾರದಲ್ಲಿಯ ರೈತ ಚಳವಳಿಯಲ್ಲಿ ಪ್ರಾಮುಖ್ಯತೆಯಿಂದ ಭಾಗವಹಿಸಿ ಸರಕಾರದ ದಂಡನೀತಿಯನ್ನು ಎದುರಿಸಿದರು.

ಇವರು ಕಮ್ಯುನಿಸ್ಟ ಪಕ್ಷವನ್ನು ಸೇರಿ ಭಾರತೀಯ ಜನತೆಯ ಬೌದ್ಧಿಕ ಸೇವೆಯಲ್ಲಿ ತೊಡಗಿದ್ದಾಗಲೇ ಇವರ "ದ್ವಂದ್ವಾತ್ಮಕ ಭೌತಿಕವಾದ" ಎಂಬ ಗ್ರಂಥ ಪ್ರಕಟವಾಯಿತು. ಅವರ ಮೇರುಕೃತಿ 'ಬುದ್ಧಚರ್ಯೆ' ಕೂಡ ಆ ಕಾಲದಲ್ಲಿಯೆ ಪ್ರಸಿದ್ಧವಾಯಿತು. ಆದರೆ ಕಮ್ಯುನಿಸ್ಟ ನೀತಿಯು ಭಾರತೀಯರ ಹಿತಕ್ಕೆ ಅನುಗುಣವಾಗಿಲ್ಲವೆಂದು ಇವರಿಗೆ ಕಂಡುಬಂದ ದಿನವೇ ಇವರು ಆ ಪಕ್ಷವನ್ನು ತ್ಯಜಿಸಿಬಿಟ್ಟರು. ಸರಕಾರವು ಇವರನ್ನು ಉಪೇಕ್ಷಿಸಿಬಿಟ್ಟಿತು. ಇವರು ಪುನಃ ಕಮ್ಯುನಿಸ್ಟ ಪಕ್ಷ ಸೇರಿದರು. ತಮ್ಮ ಕುಟುಂಬದ ಪೋಷಣೆಗಾಗಿ ಇವರು ತಮ್ಮ ಲೇಖನಿಯನ್ನೇ ಅವಲಂಬಿಸಬೇಕಾಯಿತು. ಸ್ವದೇಶದಲ್ಲಿ ಮನ್ನಣೆ ದೊರೆಯಲಿಲ್ಲವೆಂದು ವಿದೇಶಗಳಿಗೆ ಹೋಗಿ ಅಲ್ಲಿ ವಿಖ್ಯಾತರಾಗಿ, ಅಲ್ಲಿಯ ನಿರ್ಬಂಧಗಳು ಅಸಹ್ಯವಾಗಿ, ಸ್ವದೇಶಕ್ಕೆ ಹಿಂತಿರುಗಿದ ಈ ಮಹಾಮಹಿಮರನ್ನು ಭಾರತವು ಗುರುತಿಸಲಿಲ್ಲ; ಮನ್ನಿಸಲಿಲ್ಲ.

ಅಷ್ಟೊತ್ತಿಗೆ ಇವರಿಗೆ ಹೃದ್ರೋಗವು ಗಂಟುಬಿದ್ದಿತು. ಇಲ್ಲಿ ಇರಲಾಗದ ಅವರು ಲಂಕಾಕ್ಕೆ ತೆರಳಿದರು. ಮೊದಲೊಮ್ಮೆ ಬಂದಿದ್ದಾಗ ಮಹಾಪಂಡಿತರೆಂದು ಗೌರವಪಾತ್ರರಾಗಿದ್ದ ಸಿಂಹಳದಲ್ಲಿ ಈ ಸಲ ಜೀವನವು ಸುಗಮವಾಗಲಿಲ್ಲ. ಉತ್ಕಟ ದೇಶಾಭಿಮಾನದಿಂದ ಅವರು ಭಾರತಕ್ಕೆ ಹಿಂತಿರುಗಿದರು. ನಂತರ ಅವರಿಂದ ವಿಶೇಷ ಕಾರ್ಯ ಸಾಧ್ಯವಾಗದೆ ಈಗಂತೂ ಅವರು ಆಸ್ಪತ್ರೆಯಲ್ಲಿದ್ದಾರೆ.

ಮಹಾಪಂಡಿತ ರಾಹುಲ ಸಾಂಕೃತ್ಯಾಯನರ ಅದ್ಭುತ ರೋಮಾಂಚಕಾರಿ ಜೀವನದ ಸಕೃದ್ದರ್ಶನವಿದು! 'ಕ್ಷಣಶಃ ಕಣಶಃ ಚೈವ ವಿದ್ಯಾಂ ಅರ್ಥಂ ಚ ಸಾಧಯೇತ್' ಎಂಬ ಹಿರಿಯರ ಮಾತಿನ ಪ್ರಕಾರ ಇವರು ನಡೆದುಕೊಂಡಾಗ ವಿದ್ಯಾರ್ಜನೆಯನ್ನೇನೊ ಇವರು ಅಪಾರವಾಗಿ ಸಾಧಿಸಿದರು. ಆದರೆ ಆ ಚಂಚಲಲಕ್ಷ್ಮಿ ಮಾತ್ರ ಕೊನೆಯವರೆಗೂ ಇವರಿಗೆ ಕೈಕೊಟ್ಟಳು. ದಿಗಂತವಿಶ್ರಾಂತ ಕೀರ್ತಿಯನ್ನು ಸಂಪಾದಿಸಿರುವ ಈ ಮಹಾಪಂಡಿತನ ಜೀವನದ ಕೆಲವು ವಿವರಗಳನ್ನು ಅರಿತುಕೊಳ್ಳುವದು ಉದ್ಬೋಧಕವಾಗದಿರದು.

ಕರ್ನಲಾ ಗ್ರಾಮದ ಪೂಜಾರಿ ಗೋವರ್ಧನ ಪಾಂಡೆ; ಆತನ ಹೆಂಡತಿ ಕುಲವಂತಿ. ಇವರಿಗೆ ೧೮೯೩ ರ ಎಪ್ರಿಲ್ ೯ ರಂದು ಜನಿಸಿದ ಪುತ್ರನಿಗೆ ಕೇದಾರನಾಥನೆಂದು ನಾಮಕರಣವಾಯಿತು. ಕುಲವಂತಿಯು ಹೆಚ್ಚಾಗಿ ತನ್ನ ತವರುಮನೆಯಲ್ಲಿಯೆ ಇರುತ್ತಿದ್ದುದರಿಂದ ಕೇದಾರನಾಥನು ತನ್ನ

ಅಜ್ಜ ರಾಮಶರಣ ಪಾಠಕನ ನೇತೃತ್ವದಲ್ಲಿ ಬೆಳೆಯಬೇಕಾಯಿತು. ಈ ಅಜ್ಜನೂ ಸಂಚಾರ ಪ್ರಿಯ; ತನ್ನ ಪರಿಭ್ರಮಣದ ಅದ್ಭುತರಮ್ಯ ಕಥೆಗಳನ್ನು ಮೊಮ್ಮಗನಿಗೆ ಹೇಳುತ್ತಿದ್ದನು. ಅಲ್ಲದೆ ಉರ್ದು ಮಿಡಲ್ ಪರೀಕ್ಷೆಯಲ್ಲಿ ಉತ್ತೀರ್ಣನಾದ ಕೇದಾರನಾಥನು ತನ್ನ ಪಠ್ಯಪುಸ್ತಕವೊಂದರಲ್ಲಿ

ಸೈರಕರ ದುನಿಯಾಕಿ ಗಾಫಿಲ
ಜಿಂದಗಾನಿ ಫಿರ ಕಹಾ।
ಜಿಂದಗಿ ಅಗರ ಕುಛ ರಹಿತೊ
ನೌಜವಾನಿ ಫಿರ ಕಹಾ॥

ಎಂಬ ಕವನಪಂಕ್ತಿಯೊಂದನ್ನು ಓದಿ ಅರಗಿಸಿಕೊಂಡಿದ್ದ. ಆತನಲ್ಲಿ ಸ್ವಾಭಾವಿಕವಾಗಿಯೆ ಸಂಚಾರಿ ಪ್ರವೃತ್ತಿಯು ಮೂಡಿ ಬೆಳೆಯಿತು.

ಕೇದಾರನಾಥನಿಗೆ ಹನ್ನೆರಡನೆ ವರ್ಷದಲ್ಲಿಯೆ ವಿವಾಹವಾಯಿತು. ಈ ಬಾಲ್ಯ ವಿವಾಹವೊಂದು ಆತನಿಗೆ ತಮಾಷೆಯಾಗಿತ್ತು. ಆ ಬಗ್ಗೆ ಕೆಲವು ಕವನಗಳನ್ನು ಆತ ಬರೆದ. ಆದರೆ ಅಜ್ಜನ ಕಠೋರ ನಿಯಂತ್ರಣದಲ್ಲಿ ಆ ಕಾವ್ಯಲತೆ ಅಲ್ಲಿಯೆ ಕಮರಿಹೋಗಿ ಜೀವನವು ಕಾರಾಗೃಹವಾಸವಾಗಿ ಪರಿಣಮಿಸಿತು. ಹೀಗಿರುವಾಗ ಒಂದು ದಿನ ಕೇದಾರನ ಕೈಯಿಂದ ತುಪ್ಪದ ಗಿಂಡಿ ನೆಲಕ್ಕೆ ಬಿದ್ದು ತುಪ್ಪವೆಲ್ಲ ಸೂರೆಯಾಯಿತು. ಈ ಘಟನೆಯಿಂದ ಭಯಭೀತನಾದ ಕೇದಾರನು ಅಜ್ಜನನ್ನು ಎದುರಿಸಲಾರದೆ ಆತನು ಕೂಡಿಟ್ಟಿದ್ದ ಇಪ್ಪತ್ತೆರಡು ರೂಪಾಯಿಗಳನ್ನು ಎತ್ತಿಕೊಂಡು ಕಾಲಿಗೆ ಬುದ್ಧೀ ಹೇಳಿದನು.

ಅಜ್ಜನ ಊರಾದ ಪಂದಹಾದಿಂದ ಹೊರಟ ಆತನು ಕಲಕತ್ತೆಗೆ ಬಂದನು. ಧರ್ಮ—ವೇದಾಂತಗಳಲ್ಲಿ ಅಭಿರುಚಿಯಿದ್ದ ಕಾರಣ ಆತನು ಅಧ್ಯಯನ ಸತ್ಸಂಗಗಳಲ್ಲಿ ಕಾಲಕಳೆಯಹತ್ತಿದನು. ಎರಡು ಹೊತ್ತು ಹೊಟ್ಟೆಗೆ ಸರಿಯಾಗಿ ಸಿಗದೆ ತೊಂದರೆಯಾಗಹತ್ತಿದ್ದರಿಂದ ಆತನು ಸಾಧುಗಳನ್ನು ಆಶ್ರಯಿಸಿದನು. ಕೊರಳಲ್ಲಿ ರುದ್ರಾಕ್ಷಿಮಾಲೆ, ಹಣೆಗೆ ವಿಭೂತಿ ಧರಿಸಿ ಅವರೊಟ್ಟಿಗೇ ಇರುತ್ತಿದ್ದನು.

ಕೇದಾರ ೧೪ ವರ್ಷದವನಾದಾಗ ಸ್ವಾಮಿ ಪೂರ್ಣಾನಂದರೆಂಬವರು ಆತನಿಗೆ ಸಿಂಹವಾಹಿನಿ ದುರ್ಗಾದೇವಿಯ ಹೆಸರಿನಲ್ಲಿ ೯ ಲಕ್ಷ ಜಪ ಮಾಡಿದರೆ ಆಕೆಯು ಪ್ರತ್ಯಕ್ಷಳಾಗುವಳಲ್ಲದೆ ಇಷ್ಟಾರ್ಥವನ್ನೂ ಪೂರೈಸುವಳು ಎಂದು ಉಪದೇಶಿಸಿದರು. ಮುಗ್ಧ ಕೇದಾರನು ಅಂತಃಶುದ್ಧಿಯಿಂದ ಜಪಾನುಷ್ಠಾನವನ್ನು ಪೂರೈಸಿದ. ಆದರೆ ಆ ಅಷ್ಟಭುಜಾ ದುರ್ಗೆಯ ದರ್ಶನವಾಗಲಿಲ್ಲ. ಅದಕ್ಕೆ ಆತನು ತನ್ನ ದುರ್ದೈವವನ್ನೇ ಹಳಿದುಕೊಂಡು ಇಂಥ ನಿಷ್ಫಲ ಜೀವನದಿಂದೇನು ಪ್ರಯೋಜನವೆಂದು ದತ್ತೂರಿಯನ್ನು ಅರೆದು ಕುಡಿದು ಆತ್ಮಹತ್ಯೆಗೆಳಸಿದನು. ಆದರೆ ದೈವಸಂಕಲ್ಪ ಬೇರೆಯಿದ್ದಿತು. ಇಡೀ ದಿನ ಆತನು ಮೂರ್ಛಾವಸ್ಥೆಯಲ್ಲಿ ಕಳೆದದ್ದೇ ಬಂತು.

ಈ ಅವಧಿಯಲ್ಲಿ ಕೇದಾರನು ತನ್ನ ಹೆಸರನ್ನು ರಾಮ ಉದಾರ ಬಾಬಾ ಎಂದು ಬದಲಿಸಿಕೊಂಡಿದ್ದನು. ಮೇಲಿನ ಘಟನೆಯ ನಂತರ ಆತನು ಪರಸಾ ಮಠಕ್ಕೆ ಹೋದನು. ಅಲ್ಲಿಯ ಮಠಾಧೀಶರು ಈತನನ್ನು ಮಠದಲ್ಲಿಟ್ಟುಕೊಂಡು ದೇವಪೂಜೆಯ ಕೆಲಸಕ್ಕೆ ಹಚ್ಚಿದರು.

ಇಪ್ಪತ್ತು ವರ್ಷದ ಕೇದಾರನನ್ನು ಆತನ ತಂದೆಯು ಕರ್ನಲಾಕ್ಕೆ ಕರೆದೊಯ್ದನು. ಸಂಸಾರವೊ ವಿದ್ಯಾಧ್ಯಯನವೊ ಎಂಬ ಇಕ್ಕಟ್ಟಿಗೆ ಸಿಕ್ಕು ಬಿದ್ದಿದ್ದ ಆತನು ಪರಸಾಮಠದ ಸಂಬಂಧವನ್ನು ಕಡಿದುಕೊಂಡಿರಲಿಲ್ಲ. ಆಗೀಗ ಅಲ್ಲಿಂದ ಹಣವನ್ನೂ ತರಿಸುತ್ತಿದ್ದ. ಸಾಧುಗಳ ಸಹವಾಸದಲ್ಲಿ ಸಿಗರೇಟ, ಗಾಂಜಾ, ಭಾಂಗ, ತಂಬಾಕು ಸೇವನೆ ಕೂಡ ಆಗಿತ್ತು.

ಜ್ಞಾನಪಿಪಾಸುವಾದ ಕೇದಾರನು ತನ್ನ ಇಪ್ಪತ್ತೆರಡನೆ ವಯಸ್ಸಿನಲ್ಲಿ ಆಗ್ರಾಕ್ಕೆ ಬಂದು ಆರ್ಯ ಮುಸಾಫಿರ ವಿದ್ಯಾಲಯವನ್ನು ಸೇರಿದನು. ಅಲ್ಲಿ ಈತನು ಸಂಸ್ಕೃತ, ಅರಬ್ಬಿ ಭಾಷೆಗಳನ್ನು ಕಲಿತುದಲ್ಲದೆ ಕ್ರಿಶ್ಚನ್, ಇಸ್ಲಾಂ, ಹಿಂದು ಧರ್ಮಗಳನ್ನು ಕೂಲಂಕಷವಾಗಿ ಅಭ್ಯಸಿಸಿದನು. ಅಸ್ಪೃಶ್ಯೋದ್ಧಾರ ಕಾರ್ಯವನ್ನು ಮಾಡಿದನು. 'ವಿದ್ಯಾರ್ಥಿ' ಎಂಬ ಕಾವ್ಯನಾಮದಿಂದ ಲೇಖಗಳನ್ನೂ ಬರೆಯಲು ಪ್ರಾರಂಭಿಸಿದನು. ಆಗ್ರಾದ 'ಮುಸಾಫಿರ' ಪತ್ರಿಕೆಯಲ್ಲಿ ಈತನ ಪ್ರಥಮ ಉರ್ದು ಲೇಖ ಹಾಗೂ ಮೀರತ್ತಿನ 'ಭಾಸ್ಕರ' ಪತ್ರಿಕೆಯಲ್ಲಿ ಈತನ ಪ್ರಥಮ ಹಿಂದೀ

ಲೇಖ ಪ್ರಸಿದ್ಧವಾದವು.

ಶಂಕರಾಚಾರ್ಯರ ವೇದಾಂತದ ಭಕ್ತನಾಗಿದ್ದ ಕೇದಾರ ಅಥವಾ ರಾಮ ಉದಾರ ಬಾಬಾನು ಕಟ್ಟಾ ಆರ್ಯಸಮಾಜವಾದಿಯಾಗಿದ್ದನು. ಈಗೀಗ ಆತನು ಭಾಷಣಗಳನ್ನು ಮಾಡಲಾರಂಭಿಸಿದ್ದನು. ಧರ್ಮದ ಜೊತೆಗೆ ರಾಜಕಾರಣವೂ ಈತನ ಮೇಲೆ ಪ್ರಭಾವ ಬೀರಹತ್ತಿತ್ತು. ರಶಿಯಾ ಕ್ರಾಂತಿಯ ಪ್ರಭಾವವೂ ಆ ಕಾಲದಲ್ಲಿ ವಿಶೇಷವಾಗಿದ್ದಿತು.

ಬೌದ್ಧಧರ್ಮವು ಈತನನನ್ನು ಆಕರ್ಷಿಸಿದ್ದು ಈತನ ಇಪ್ಪತ್ತೇಳನೆ ವಯಸ್ಸಿನಲ್ಲಿ. ಬುದ್ಧನಿಗೆ ಸಂಬಂಧಿಸಿದ ಸ್ಥಳಗಳ ಸಂದರ್ಶನಕ್ಕೆಂದು ಹೊರಟ ಆತನು ಲುಂಬಿನಿಗೆ ಬಂದು ಮುಟ್ಟಿದನು. ಬುದ್ಧನ ಜನ್ಮಸ್ಥಾನವು ಪಶುಬಲಿಯಿಂದ ರಕ್ತರಂಜಿತವಾದುದನ್ನು ಕಂಡು ಆತನ ಮನಸ್ಸಿಗೆ ಆಘಾತವಾಯಿತು. ಇತಿಹಾಸದತ್ತ ಆಕರ್ಷಿಸಲ್ಪಟ್ಟ ಆತನು ಆರ್ಯಸಮಾಜದಿಂದ ದೂರಾಗತೊಡಗಿದನು. ತನ್ನ ಸಂಚಾರಗಳನ್ನು ಕುರಿತು ಕೇದಾರನಾಥನು ಲೇಖಗಳನ್ನು ಬರೆಯಲು ಪ್ರಾರಂಭಿಸಿದ್ದೂ ಇದೇ ಸುಮಾರಿಗೆ.

ಅಂದಿನ ಕಾಲಮಾನಪರಿಸ್ಥಿತಿಗನುಸಾರವಾಗಿ ರಾಜಕೀಯ ಭಾವನೆಗಳೂ ಆತನ ಮನಸ್ಸಿನಲ್ಲಿ ಉದ್ಭವಿಸಹತ್ತಿದವು. ಛಪ್ರಾದಲ್ಲಿ ಮಹಾಪೂರ ಸಂತ್ರಸ್ತರ ಸೇವೆಯನ್ನು ಆಸಕ್ತಿಯಿಂದ ಮಾಡಿದನು. ಆತನ ಭಾಷಣಗಳಲ್ಲಿ ಪರಕೀಯರು ಭಾರತದಲ್ಲಿ ನಡೆಸಿದ್ದ ದಬ್ಬಾಳಿಕೆ, ಶೋಷಣೆಗಳ ಉಲ್ಲೇಖವಿರುತ್ತಿತ್ತು. ೧೯೨೨ ರಲ್ಲಿ ಛಪ್ರಾ ಜಿಲ್ಲಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷನಾಗಿದ್ದ ಕೇದಾರನನ್ನು ಪೋಲೀಸರು ಬಂಧಿಸಿದರು; ಆರು ತಿಂಗಳುಗಳ ಜೇಲುವಾಸವೂ ಲಭಿಸಿತು. ಆಗ ಈತನಿಗೆ ೨೯ ವರ್ಷದ ವಯಸ್ಸು.

ರಾಮ ಉದಾರ ಬಾಬಾ ಛಪ್ರಾ ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿ ಆಯ್ಕೆ ಹೊಂದಿದಾಗ ಗಯೆಯಲ್ಲಿ ಕಾಂಗ್ರೆಸ ಅಧಿವೇಶನ ನಡೆಯಿತು. ಸ್ವರಾಜ್ಯದ ಹಾಗೂ ಬೌದ್ಧರಿಗೆ ಬುದ್ಧಗಯಾ ಮಂದಿರವನ್ನು ಕೊಡಿಸುವುದು ಈ ಎರಡು ವಿಷಯಗಳ ಬಗ್ಗೆ ರಾಮ ಉದಾರ ಬಾಬಾ ಕಾಂಗ್ರೆಸ್ ಅಧಿವೇಶನದಲ್ಲಿ ವಿಶೇಷವಾಗಿ ಪ್ರಯತ್ನಿಸಿದನು. ಬುದ್ಧಗಯಾ ಮಂದಿರವನ್ನು ಬುದ್ಧರಿಗೆ ಒಪ್ಪಿಸುವ ಕುರಿತು ಈತನು ಸಾಕಷ್ಟು ಪ್ರಚಾರ ಮಾಡಿದನಲ್ಲದೆ ಬುದ್ಧರ-ಹಿಂದುಗಳ ಸಭೆಯನ್ನು ಸೇರಿಸಿದ್ದನು.

ಮುಂದೆ ರಾಮ ಉದಾರ ಬಾಬಾ ಅರ್ಥಾತ್ ಕೇದಾರನಾಥನ ಮೇಲೆ ರಾಜದ್ರೋಹದ ಖಟ್ಲೆ ಹಾಕಲಾಯಿತಲ್ಲದೆ ಅವನನ್ನು ಎರಡು ವರ್ಷ ಹಜಾರಿಬಾಗ್ ಜೇಲಿಗೆ ಕಳಿಸಲಾಯಿತು. ರಾಜಕಾರಣದಲ್ಲಿ ತೊಡಗಿದ್ದ ಈ ಕಾಲದಲ್ಲಿ ಗಾಢ ವ್ಯಾಸಂಗಕ್ಕೆ ಅವಕಾಶ ಸಿಗದಂತಾದ್ದರಿಂದ ಈತನು 'ಕುರಾನ್'ವನ್ನು ಹಿಂದಿಗೆ ಭಾಷಾಂತರಿಸಿದನು. ಕೆಲವು ಪ್ರವಾಸಿ ಕಾದಂಬರಿಗಳನ್ನು ಅನುವಾದಿಸಿ ಪ್ರಸಿದ್ಧಿಸಿದನು. ಫ್ರೆಂಚ್, ಅವೆಸ್ತಾ ಭಾಷೆಗಳನ್ನು ಕಲಿತನು. ೩೧ ವರ್ಷದ ರಾಮ ಉದಾರ ಬಾಬಾನಿಗೆ ಬೌದ್ಧ ಧರ್ಮದ ದಾಹವು ಹೆಚ್ಚುತ್ತ ನಡೆದರೂ ಈಶ್ವರನಲ್ಲಿಯ ವಿಶ್ವಾಸ ಮಾತ್ರ ಇನ್ನೂ ಕುಗ್ಗಿರಲಿಲ್ಲ.

ನಂತರ ಹಿಮಾಲಯ ಯಾತ್ರೆಯನ್ನು ಕೈ-ಕೊಂಡನು. ಪ್ರವಾಸದಲ್ಲಿ ಅನಾನುಕೂಲತೆಯಾಗಹತ್ತಿದ್ದರಿಂದ ಪ್ರಸಂಗ ಬಂದಾಗ ಮಾಂಸಾಹಾರವನ್ನು ಸೇವಿಸಹತ್ತಿದನು. ಈತನ ಸಾಹಸಮಯ ಪ್ರವಾಸ ವರ್ಣನೆಗಳನ್ನು ಕೇಳಿ ಮುಗ್ಧರಾದ ಡಾ. ರಾಜೇಂದ್ರ ಬಾಬು ಅವರು ಈತನ ಲಡಾಖ ಯಾತ್ರೆಯ ವರ್ಣನೆಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು.

ಮೂವತ್ನಾಲ್ಕು ವರ್ಷದ ರಾಮ ಉದಾರ ಬಾಬಾನಿಗೆ ಪಾಲಿ ಕಲಿಯಬೇಕೆಂಬ ಇಚ್ಛೆ ಉತ್ಕಟವಾದ್ದರಿಂದ ಸಿಂಹಳ ಯಾತ್ರೆಯನ್ನು ಕೈಕೊಂಡನು. ಅಲ್ಲಿ ಈತನು ವಿದ್ಯಾಲಂಕಾರ ವಿಶ್ವವಿದ್ಯಾಲಯದಲ್ಲಿ ಬೌದ್ಧಧರ್ಮದ ಬಗ್ಗೆ ಗಾಢವ್ಯಾಸಂಗವನ್ನು ಮಾಡಿದ್ದಲ್ಲದೆ ಅದರ ಅಧ್ಯಾಪನವನ್ನೂ ನಡೆಸಿದನು. ಪಾಲಿ ತ್ರಿಪಿಟಕದ ಆಳವಾದ ಅಭ್ಯಾಸವನ್ನೂ ಪೂರೈಸಿದನು. ಈ ಗ್ರಂಥ ಪಠಣದಿಂದ ರಾಮ ಉದಾರ ಬಾಬಾನಲ್ಲಿ ಐತಿಹಾಸಿಕ ತೃಷ್ಣೆ ತೀವ್ರವಾಯಿತು. ಇನ್ನು ತನ್ನಲ್ಲಿ ಬುದ್ಧ ಹಾಗೂ ಈಶ್ವರ ಒಟ್ಟಿಗೆ ಇರಲಾರರು ಎಂದು ಅವನು ನಿರ್ಧರಿಸಿ ಈಶ್ವರನೆಂದರೆ ಕಾಲ್ಪನಿಕ ವಸ್ತು ಎಂದು ಹೇಳಹತ್ತಿದ.

ಟಿಬೇಟಿಗೆ ಹೋಗದೆ ಬೌದ್ಧದರ್ಶನ ಪೂರ್ಣವಾಗಲಾರದೆಂದು ಬಗೆದು ಟಿಬೇಟ್ ಸಂಚಾರವನ್ನು ಕೈಕೊಳ್ಳಬೇಕೆಂದು ರಾಮ ಉದಾರ ಬಾಬಾ ನಿರ್ಧರಿಸಿದನು. ಟಿಬೇಟಿನ ಭಾಷೆಯನ್ನು ಕಲಿತಿದ್ದನು. ಈತನು ಸಿಂಹಳದಿಂದ ಹೊರಡುವ ಕಾಲಕ್ಕೆ ವಿದ್ಯಾಲಯವು ಈತನಿಗೆ 'ತ್ರಿಪಿಟಕಾಚಾರ್ಯ' ಎಂಬ ಪದವಿಯನ್ನಿತ್ತು ಗೌರವಿಸಿತು.

ಅಲ್ಲಿಂದ ಹೊರಟು ಆತನು ಬನಾರಸಕ್ಕೆ ಬಂದನು. ಅಲ್ಲಿಗೆ ಬಂದ ಬಳಿಕ ಆಚಾರ್ಯ ನರೇಂದ್ರದೇವರೊಡನೆ ಮಾತುಕತೆ ನಡೆಸಿ ಕಾಶೀ ವಿಶ್ವವಿದ್ಯಾಲಯದ ಪರವಾಗಿ 'ಅಭಿಧರ್ಮ ಕೋಶ'ದ ಸಂಪಾದನ—ಪ್ರಕಟನ ಕಾರ್ಯವನ್ನು ವಹಿಸಿಕೊಂಡನು.

ಆಗ ಕಾಶಿಯ ವಿದ್ವಾಂಸರು ಇವನಿಗೆ 'ಮಹಾಪಂಡಿತ' ನೆಂಬ ಪದವಿಯನ್ನಿತ್ತು ಗೌರವಿಸಿದರು.

ಈ ತ್ರಿಪಿಟಕಾಚಾರ್ಯ ಮಹಾಪಂಡಿತ ಕೇದಾರನಾಥ ನೇಪಾಳಕ್ಕೆ ತೆರಳಿದನು. ಶಿವರಾತ್ರಿಯ ನಂತರ ಅಲ್ಲಿ ಇರಲು ಕೊಡುವದಿಲ್ಲವೆಂದು ತಿಳಿದುಬಂದದ್ದರಿಂದ ಆತನು ಕಾಷಾಯ ವಸ್ತ್ರ ಧಾರಣ ಮಾಡಿ ಗಡ್ಡ ಮೀಸೆಗಳನ್ನು ಬೆಳೆಸಿ ಯಾರಿಗೂ ಗುರುತು ಸಿಗದಂತೆ ಇರಹತ್ತಿದನು. ತಿಬೇಟಿನ ಕಡೆಗೆ ಹಾಗೇ ಸಾಗಿದನು. ಆಗಲೂ ತಿಬ್ಬತಿ ಭಾಷೆಯ ಅಭ್ಯಾಸ ನಡೆದೇ ಇದ್ದಿತು. ತನ್ನ 'ಕೋಶ'ಕ್ಕಾಗಿ ೧೬೦೦೦ ತಿಬ್ಬತಿ ಶಬ್ದಗಳನ್ನು ಸಂಗ್ರಹಿಸಿದ. ಅನೇಕ ಮಠ-ಮಂದಿರ ಗುಹೆಗಳಲ್ಲಿ ಅಮೂಲ್ಯ ಗ್ರಂಥಗಳ ಹಸ್ತಪ್ರತಿಗಳು ದೊರೆತವು.

ಮಹಾಪಂಡಿತನು ಟಿಬೇಟಿನಿಂದ ೮೧ ಕುದುರೆಗಳ ಮೇಲೆ ತಾನು ಸಂಗ್ರಹಿಸಿದ ಗ್ರಂಥ ಭಾಂಡಾರವನ್ನು ಹೇರಿಕೊಂಡು ಬಂದು ಪಾಟಣಾ ವಸ್ತುಸಂಗ್ರಹಾಲಯಕ್ಕೆ ಅರ್ಪಿಸಿದ.

ರಾಮ ಉದಾರ ಬಾಬಾನು ೩೭ ವರ್ಷದವನಿದ್ದಾಗ ಮತ್ತೊಮ್ಮೆ ಸಿಂಹಳ ಪ್ರಯಾಣವನ್ನು ಕೈಕೊಂಡನು. ಇಷ್ಟೇ ಅಲ್ಲ, ಸಿಂಹಳದಲ್ಲಿ ಬೌದ್ಧ ಧರ್ಮ ದೀಕ್ಷೆಯನ್ನು ಪಡೆದು ಭಿಕ್ಷುವಾದನು. ಆ ಕಾಲಕ್ಕೆ ಮಹಾ ಪಂಡಿತ ಕೇದಾರನಾಥನು 'ರಾಹುಲ ಸಾಂಕೃತ್ಯಾಯನ'ನಾಗಿ ನವಜನ್ಮ ತಾಳಿದನು. ನಂತರ ತನ್ನ ಪ್ರಥಮ ಕೃತಿಯಾದ "ಬುದ್ಧಚರ್ಯೆ"ಯನ್ನು ರಚಿಸಿದನು.

ರಾಹುಲ ಸಾಂಕೃತ್ಯಾಯನನಾಗಿ ಬೌದ್ಧ ಧರ್ಮಕ್ಕೆ ಅಂಟಿಕೊಂಡರೂ ಆತನು ಪರಧರ್ಮ ದ್ವೇಷಿಯಾಗಿರಲಿಲ್ಲ. ಆದರೆ ಈಶ್ವರವಾದಿ ಧರ್ಮವು ಜನಹಿತಕ್ಕೆ ವಿಶ್ವಪ್ರಗತಿಗೆ ವಿರುದ್ಧವಾದುದಾಗಿದೆ ಎಂದು ಆತನ ಭಾವನೆಯಾಗಿದ್ದಿತು. ನಾಲ್ವತ್ತು ವರ್ಷದವನಾಗಿದ್ದ ಆತನಿಗೀಗ ಪಾಷಾಣಗಳ ಮೂಕಭಾಷೆಯೂ ಅರ್ಥವಾಗ ಹತ್ತಿತ್ತು. ಬುದ್ಧನ ಭಗ್ನಮೂರ್ತಿಗಳನ್ನು ಅನೇಕರು ಅನ್ಯದೇವತೆಗಳೆಂದು ಪೂಜಿಸುತ್ತಿದ್ದುದನ್ನು ಕಂಡು ಮರುಗಿದನು.

ರಾಹುಲನು ಪುನಃ ಟಿಬೇಟ್‌ಯಾತ್ರೆ ಕೈಕೊಂಡನು. ಆ ದೇಶದಲ್ಲಿ ಅನೇಕಾನೇಕ ಸಂಸ್ಕೃತ ಗ್ರಂಥಗಳೂ ಉತ್ತರಭಾರತದ ಚಿತ್ರಕಲೆಯೂ ಸುರಕ್ಷಿತವಾಗಿ ಸಂಗ್ರಹಿಸಲ್ಪಟ್ಟಿದುದನ್ನು ಕಂಡುಕೊಂಡನು. ಅಲ್ಲಿ ಲೋಚನಾ ಮಂದಿರದಲ್ಲಿ ಭಾರತೀಯ ಚಿತ್ರಕಲೆಯ ಉತ್ತಮ ಮಾದರಿಗಳಿರುವದನ್ನು ಪ್ರತ್ಯಕ್ಷ ನೋಡಿದನು. ಕ್ಯಾಮೆರಾ ಮೂಲಕ ಚಿತ್ರಗ್ರಹಣ ನಡೆದೇ ಇತ್ತು. ಈ ಸಂಚಾರದಲ್ಲಿಯೆ ಆತ "ಮಜ್ಝಿಮನಿಕಾಯ" ಎಂಬ ಪಾಲಿ ಗ್ರಂಥವನ್ನು ಹಿಂದಿಗೆ ಅನುವಾದಿಸಿದನು.

ಸ್ವದೇಶಕ್ಕೆ ಮರಳಿದ ಆತನು ಸತ್ಯಾಗ್ರಹ ಪ್ರಾರಂಭಿಸಿದ. ಈತನ ಸತ್ಯಾಗ್ರಹವು ಕೇವಲ ಆಳರಸರಾದ ಬ್ರಿಟಿಶರ ವಿರುದ್ಧ ಇದ್ದಿಲ್ಲ. ಬಡವರನ್ನು ಶೋಷಿಸುವವರ ವಿರುದ್ಧವೂ ಸತ್ಯಾಗ್ರಹ ಅವಶ್ಯವೆಂದು ಇವನ ಭಾವನೆಯಾಗಿದ್ದಿತು. ಆಗ ರಾಹುಲನಿಗೆ ಮಾರ್ಕ್ಸ್ ತತ್ವಜ್ಞಾನದ ಅರಿವಿದ್ದಿರಲಿಲ್ಲ. ಆತನು ತನ್ನ ಅಭಿಪ್ರಾಯಗಳನ್ನು "ಇಪ್ಪತ್ತೆರಡನೆ ಶತಮಾನ" ಎಂಬ ಗ್ರಂಥದಲ್ಲಿ ವಿವರವಾಗಿ ನಿರೂಪಿಸಿದ್ದಾನೆ.

ಜಪಾನ, ಮಂಚೂರಿಯಾಗಳನ್ನು ಸುತ್ತಾಡಿಕೊಂಡು ೧೯೩೫ ರಲ್ಲಿ ರಶಿಯಾಕ್ಕೆ ಪ್ರಥಮಾವರ್ತಿ ಭೆಟ್ಟಿಕೊಟ್ಟನು. ಆದರೆ ಆಗ ಆತನಿಗೆ ಅಲ್ಲಿ ಅಷ್ಟು ಸ್ವಾಗತ ದೊರೆಯಲಿಲ್ಲ. ಮತ್ತೆ ಟಿಬೇಟಿಗೆ ಹೋದನು ಈ ಸಲ ಟಿಬೇಟ್ ಸಂಚಾರದಲ್ಲಿ ದಿಙ್ನಾಗನ 'ಪ್ರಮಾಣ ಸಮುಚ್ಚಯ' ಹಾಗೂ ಧರ್ಮ

ಕೀರ್ತಿಯ 'ಪ್ರಮಾಣವಾರ್ತಿಕ', 'ಎಂಬ ಅಮೂಲ್ಯ ಗ್ರಂಥಗಳು ಉಪಲಬ್ಧವಾದವು. ಅಲ್ಲದೆ "ಯೋಗಾಸಾರ ಭೂಮಿ"ಯಂಥ ಅನೇಕ ದುರ್ಮಿಳ ಗ್ರಂಥಗಳೂ ಲಭ್ಯವಾದವು. ಟಿಬೇಟದಲ್ಲಿಯ ಸಾಹಿತ್ಯವು ಆ ದೇಶವನ್ನು ಬಿಟ್ಟರೆ ಇನ್ನೆಲ್ಲಿಯಾದರೂ ಬ್ರಹತ್ ಪ್ರಮಾಣದಲ್ಲಿ ದೊರೆಯಬೇಕಾದರೆ ಅದು ರಾಹುಲ ಸಂಗ್ರಹಿಸಿ ಅರ್ಪಿಸಿರುವ ಸಂಗ್ರಹದಲ್ಲಿಯೆ ಎಂದರಿತ ಪಂ. ಜವಾಹರ ಲಾಲರು ಇವರನ್ನು ಭೆಟ್ಟಿಗೆ ಕರೆಸಿದರು. ಆದರೆ ಅವರ ಹತ್ತಿರ ನನ್ನದೇನು ಕೆಲಸ ಎಂದು ಈ ಮಹಾಭಿಕ್ಷುವು ಅವರ ಭೆಟ್ಟಿಗೆ ಹೋಗಲಿಲ್ಲ. ಅದೇ ತಾನೆ ಕಾಯಿಲೆಯಿಂದೆದ್ದಿದ್ದ ಪಂ. ಜವಾಹರಲಾಲರು ಸ್ವತಃ ತಮ್ಮ ಭೆಟ್ಟಿಗೆ ಬರುವರೆಂದು ರಾಹುಲನಿಗೆ ಗೊತ್ತಾದ ಕೂಡಲೆ ತಾನೇ ಆನಂದ ಭವನಕ್ಕೆ ಹೋಗಿ ಅವರೊಂದಿಗೆ ಟಿಬೇಟ್ ಯಾತ್ರೆಯ ಬಗ್ಗೆ ಮಾತಾಡಿ ಬಂದನು.

ರಶಿಯದ ಆಮಂತ್ರಣದ ಮೇರೆಗೆ ಅಲ್ಲಿಗೆ ಹೋದ ರಾಹುಲ. ರಶಿಯದ ಇನ್‌ಸ್ಟಿಟ್ಯೂಟಿನ ವಿಭಾಗವೊಂದರಲ್ಲಿ ಕಾರ್ಯದರ್ಶಿಯಾಗಿದ್ದ ಲೋಲಾ ಎಂಬುವಳು ಫ್ರೆಂಚ್, ಇಂಗ್ಲಿಷ್, ರಶಿಯನ್, ಮಂಗೋಲಿಯನ್ ಭಾಷೆಗಳನ್ನೂ ಬಲ್ಲವಳಾಗಿದ್ದಳು. ಈಕೆಯು ರಾಹುಲನಿಗೆ ರಶಿಯನ್ ಕಲಿಸಬೇಕು ಎಂದಾಯಿತು. ಮುಂದೆ ಇವರಿಬ್ಬರ ವಿವಾಹವಾಯಿತು. ಇವರು ಕೇವಲ ೪೫ ದಿನ ದಾಂಪತ್ಯ ಜೀವನವನ್ನು ಅನುಭವಿಸಿದರು. ಲೋಲಾಳಿಗೆ ಐಗೋರನೆಂಬ ಪುತ್ರ ಪ್ರಾಪ್ತನಾದನು. ಆತನು ಈಗ ತನ್ನ ತಾಯಿಯ ಜೊತೆಯಲ್ಲಿ ರಶಿಯಾದಲ್ಲಿದ್ದಾನೆ. ರಾಹುಲ ಸ್ವದೇಶಕ್ಕೆ ಹಿಂತಿರುಗಿದ.

ರಶಿಯದ ಪ್ರಖ್ಯಾತ ವಿದ್ವಾಂಸ ಡಾ. ಶ್ಚೇರ ವಾತ್‌ಸ್ಕಿಯ ಸಹಾಯದಿಂದ ಕೆಲವು ಬೌದ್ಧ ಗ್ರಂಥಗಳ ಪರಿಷ್ಕಾರ, ಐರೋಪ್ಯ ಭಾಷೆಗಳಿಗೆ ಅನುವಾದ ಮಾಡಬೇಕೆಂಬ ಉದ್ದೇಶದಿಂದ ರಾಹುಲ ರಶಿಯಾಕ್ಕೆ ಹೋಗಿದ್ದ. ಆದರೆ ರಶಿಯಾದಲ್ಲಿ ರಾಜಕೀಯ ವಾತಾವರಣವು ಅನುಕೂಲವಾಗಿದ್ದಿಲ್ಲವಾದ್ದರಿಂದ ರಾಹುಲನ ಪಾಲಿಗೆ ನಿರಾಶೆಯೆ ಬಂದಿತು.

ಭಾರತಕ್ಕೆ ಬಂದ ನಂತರ ರಾಹುಲ ಗ್ರಂಥ ರಚನೆಗೆ ಪ್ರಾರಂಭಿಸಿದರು. ಅವರ ಪ್ರಸಿದ್ಧ ಕೃತಿಗಳಾದ "ದರ್ಶನ-ದಿಗ್ದರ್ಶನ," "ವೈಜ್ಞಾನಿಕ ಭೌತಿಕವಾದ," "ವೋಲ್ಗಾಸೆ ಗಂಗಾ," "ಮಾನವ ಸಮಾಜ," "ಸಾಮ್ಯವಾದ ಹಿ ಕ್ಯೋಂ" ಎಂಬ ಗ್ರಂಥಗಳು ಈ ಕಾಲದಲ್ಲಿಯೆ ಹೊರಬಂದವು.

೧೯೫೨ ರಲ್ಲಿ ರಾಹುಲ ಪುನಃ ಕಮಲಾ ಎಂಬವಳೊಡನೆ ವಿವಾಹಬದ್ಧರಾದರು. ಈ ಹೆಣ್ಣು ಮಗಳೇ ಈಗ ರಾಹುಲರೊಂದಿಗಿದ್ದಾಳೆ. ಇವರಿಗೆ ಜಯಾ ಮತ್ತು ಚೇತಾ ಎಂಬಿಬ್ಬರು ಮಕ್ಕಳಿದ್ದಾರೆ.

ವಿವಾಹನಂತರ ರಾಹುಲ ಚೀನಕ್ಕೆ ಭೆಟ್ಟಿ ಕೊಟ್ಟು ಬಂದಿದ್ದಾರೆ. ಸಿಂಹಳ ವಿಶ್ವವಿದ್ಯಾಲಯದ ದರ್ಶನ ವಿಭಾಗದ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ.

ಆಡುಮುಟ್ಟದ ಗಿಡವಿಲ್ಲವೆಂಬಂತೆ ರಾಹುಲ ಕಥೆ ಕಾದಂಬರಿ, ಅನುವಾದ, ಕೋಶ, ದೇಶದರ್ಶನ, ಬೌದ್ಧಧರ್ಮ, ನಾಟಕ, ರಾಜನೀತಿ, ಸಾಮ್ಯವಾದ, ವಿಜ್ಞಾನ, ಸಂಸ್ಕೃತ ಭಾಷಾ ಟೀಕಾವ್ಯಾಕರಣ ಹೀಗೆ ನಾನಾ ಪ್ರಕಾರಗಳಲ್ಲಿ ೧೫೦ ಗ್ರಂಥಗಳನ್ನು ಬರೆದಿದ್ದಾರೆ.

ಸದ್ಯ ಕಲಕತ್ತೆಯ ಆಸ್ಪತ್ರೆಯಲ್ಲಿದ್ದಾರೆ. ಅವರ ಸ್ನೇಹಿತ ಡಾ. ಭಗವತ ಶರಣ ಉಪಾಧ್ಯಾಯರು ಇತ್ತೀಚೆಗೆ ಅವರನ್ನು ಕಾಣಲು ಆಸ್ಪತ್ರೆಗೆ ಹೋಗಿದ್ದಾಗ, ಅವರನ್ನು ಹತ್ತಿರ ಕರೆದು "ಲಾಲ ಕಪ್ತಾನ" ಎಂಬ ತಮ್ಮ ಪುಸ್ತಕವನ್ನು ಅವರ ಕೈಗಿತ್ತು "ಇದು ನನ್ನ ಕೊನೆಯ ಪುಸ್ತಕ ಸ್ವೀಕರಿಸಿರಿ" ಎಂದು ಹೇಳಿ ಕೈಜೋಡಿಸಿದರಂತೆ!

ಮಹಾನಗರಿಯಾದ ಕಲಕತ್ತೆಯಲ್ಲಿ ಐವತ್ತು ಲಕ್ಷ ಜನರಿದ್ದಾರೆ. ಆದರೆ ಈ ಮಹಾಪಂಡಿತರ ಬಗೆಗೆ ಚಿಂತಿಸುವವರು ಎಷ್ಟು ಜನ? *

ನನ್ನ ವಿಶ್ವದೃಷ್ಟಿ

ಶ್ರೀ ರಂಗನಾಥ ದಿವಾಕರ

ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನ ವಿಶ್ವದೃಷ್ಟಿಯು, ಆತನ ಜ್ಞಾನ ಸಾಧನಗಳಿಂದ ಪರಿಮಿತವಾಗಿರುತ್ತದೆ. ತಿಳಿವಳಿಕೆ, ವಿಚಾರ, ಅನಿಸಿಕೆ, ಸಂಕಲ್ಪಶಕ್ತಿ, ಶ್ರದ್ಧೆ, ತನ್ನ ಭಾವಕಲ್ಪನೆಗಳ ನಿರೂಪಣೆ ಹಾಗೂ ತನ್ನ ಸಮಗ್ರ ಅನುಭವಗಳ ಪರಿಭಾಷೆಯಲ್ಲಿ ಅವುಗಳನ್ನು ವ್ಯಕ್ತಮಾಡುವ ಶಕ್ತಿ, ಇವೆಲ್ಲವುಗಳನ್ನೂ ಈ "ವಿಶ್ವದೃಷ್ಟಿ"ಯು ಅವಲಂಬಿಸಿರುತ್ತದೆ.

ವಿಶ್ವದೃಷ್ಟಿಯ ಅರ್ಥ

ನನ್ನ ದೃಷ್ಟಿಯಿಂದ 'ವಿಶ್ವದೃಷ್ಟಿ' ಎಂಬುದಕ್ಕೆ ಎರಡು ಅರ್ಥಗಳುಂಟು. ೧) ಸದ್ಯಕ್ಕೆ ಜಗತ್ತು ಇದ್ದಕ್ಕಿದ್ದಂತೆ ಇರುವ ಸ್ವರೂಪದಲ್ಲಿ ಅದನ್ನು ನಾನು ನೋಡುವ ರೀತಿ ಮತ್ತು ಈ ಜಗತ್ತಿನಲ್ಲಿ ನಡೆಯುವ ಘಟನೆಗಳು, ಸಂಗತಿಗಳು ಹಾಗೂ ವ್ಯಕ್ತಿಗಳು, ಇವೆಲ್ಲವುಗಳ ಬಗೆಗೆ ನಾನು ತಾಳಿರುವ ಅಭಿಪ್ರಾಯಗಳು. ೨) ಎರಡನೆಯದು ನಮಗೆ ತಿಳಿದ ಮತ್ತು ಅನುಭವಿಸಿದ ಸಂಗತಿಗಳಲ್ಲಿ ಪರಸ್ಪರ ಸಂಬಂಧ ಕಾಣುವದು ಹಾಗೂ ಆ ವಿಷಯದಲ್ಲಿ ಕೆಲವೊಂದು ಸಾಮಾನ್ಯ ನಿರ್ಣಯಕ್ಕೆ ಬರುವದು. ಅಂದರೆ ನಮ್ಮ ಇರುವಿಕೆಯ ಬಗೆಗೆ ಭೌತಿಕ ಮತ್ತು ಆಧ್ಯಾತ್ಮಿಕ ರೀತಿಯಲ್ಲಿ ನಾನು ತಾಳಿದ ಭಾವನೆ ಹಾಗೂ ನಿರ್ಣಯಿಸಿದ ತಾತ್ವಿಕ ಭೂಮಿಕೆ ಇದರಲ್ಲಿ ಬರುತ್ತದೆ.

ಪ್ರಸ್ತುತ ಲೇಖದಲ್ಲಿ ಎರಡನೆಯದನ್ನು ಕುರಿತು ಕೆಲವು ವಿಚಾರಗಳನ್ನು ವಿವೇಚಿಸಬಯಸುವೆ.

ಸಾಮಾನ್ಯವಾಗಿ ಒಂದು ವ್ಯಕ್ತಿಯು ಜೀವನದ ಬಗೆಗೆ ವಿಶಿಷ್ಟ ತಾತ್ವಿಕ ಭೂಮಿಕೆಯುಳ್ಳವನಾಗಬೇಕಾದರೆ ಅದಕ್ಕೆ ಆತನು ತಲುಪಿದ ಸಾಮಾನ್ಯ ತತ್ತ್ವಗಳೇ ಆಧಾರವಾಗಿರುತ್ತವೆ. ಆದರೆ ಇಲ್ಲಿ ನಾನು ಕೇವಲ ನನ್ನ ವಿಶ್ವದೃಷ್ಟಿಯನ್ನು ಮಾತ್ರ ವಿವರಿಸುವೆ. ಅದರಿಂದ ನಿರ್ಣೀತವಾಗುವ ತತ್ತ್ವಜ್ಞಾನದ ವಿಷಯವನ್ನು ಇಲ್ಲಿ ಪರಿಶೀಲಿಸುವದಿಲ್ಲ.

ನನ್ನ ವಿಶ್ವದೃಷ್ಟಿಯು ಮುಖ್ಯವಾಗಿ ನನ್ನ ಅನುಭವದಿಂದ ಮೂಡಿದೆ. ಇತರರ ವಿಶ್ವದೃಷ್ಟಿಯ ವಿಷಯ ಓದುವದರಿಂದ ಸ್ವಲ್ಪಮಟ್ಟಿಗೆ ಪ್ರಭಾವವುಂಟಾಗಿದ್ದರೂ ಅದೇ ಪ್ರಮುಖ ಅಂಶವಾಗಿಲ್ಲ. ಮತ್ತು ಇಂದು ನಾನು ರೂಪಿಸಿಕೊಂಡಿರುವ ವಿಶ್ವಜೀವನ ದೃಷ್ಟಿಯು ಕೊನೆಯ ಸಿದ್ಧಾಂತವೇನಲ್ಲ. ನನ್ನ ಅನುಭವ ದಿನದಿನಕ್ಕೆ ಹೊಸದಾಗಿರುವದು ಸ್ವಾಭಾವಿಕವಾಗಿರುವದರಿಂದ, ಮತ್ತು ಅನುಭವವೆಂಬುದು ಅನಂತವಾಗಿರುವದರಿಂದ ಕೊನೆಯ ಸಿದ್ಧಾಂತವೆಂಬುದನ್ನು ನಾನು ಹೇಳಿದರೆ ಅರ್ಥವಿರುವದಿಲ್ಲ. ನನ್ನ ಅನುಭವ ನಿಂತಿತೆಂದರೆ ನನ್ನ ಆಯುಷ್ಯವೇ ಪೂರ್ತಿಗೊಂಡಂತೆ. ಆದ್ದರಿಂದ 'ನನ್ನ ವಿಶ್ವದೃಷ್ಟಿ' ಎಂದು ನಾನು ಹೇಳಿದಾಗ ಅದು ಇಂದಿನವರೆಗೆ ರೂಪುಗೊಂಡ ದೃಷ್ಟಿ ಎಂದು ಮಾತ್ರವೇ ಅರ್ಥ. ಅದು ಇನ್ನು ಮುಂದಿನ ಕ್ಷಣದಲ್ಲಿಯೇ ಏನಾಗುವದೋ ಹೇಳಲು ಸಾಧ್ಯವಿಲ್ಲ.

ಅನುಮಾನಗಳು

ಇದಲ್ಲದೆ ನನ್ನ ವಿಶ್ವದೃಷ್ಟಿಯ ಬಗೆಗೆ ಅನುಭವದ ಆಧಾರದಿಂದ ನನ್ನಲ್ಲಿ ದೃಢಗೊಂಡ ಅನುಮಾನಗಳನ್ನು ಮಾತ್ರ ಇಲ್ಲಿ ನಿರೂಪಿಸುವೆ. ಅವುಗಳನ್ನು ಸಮರ್ಥಿಸುವ ತಾರ್ಕಿಕ ಆಧಾರಗಳನ್ನು ನೀಡುವದು ಅವಶ್ಯವಿಲ್ಲ. ಮತ್ತು ನನ್ನ ದೃಷ್ಟಿಯಲ್ಲಿ ಸರಿಯೆಂದೂ ಅದನ್ನೆ ಇತರರು ಸ್ವೀಕರಿಸಬೇಕೆಂದೂ ನಾನು ಒತ್ತಾಯ ಮಾಡಲಾರೆ. ಯಾರೂ ಮಾಡಬಾರದು. ಪ್ರತಿಯೊಬ್ಬನಿಗೂ ತನ್ನದೇ ಆದ ರೀತಿಯಲ್ಲಿ ನಿರ್ಣಯಕ್ಕೆ ಬರುವ ಅಧಿಕಾರವಿದೆ. ಮತ್ತು ಆ ನಿರ್ಣಯಗಳನ್ನು ಧೈರ್ಯದಿಂದ ಸ್ಪಷ್ಟವಾಗಿ ವ್ಯಕ್ತಮಾಡಲು ಆತನು ಹಿಂಜರಿಯಬೇಕಿಲ್ಲ. ಈ ವಿಷಯದಲ್ಲಿ ನಾನು ಹೇಳಬೇಕಾದದ್ದು ವಿಪುಲವಾಗಿದ್ದರೂ ಸಂಕ್ಷೇಪವಾಗಿ ಹೇಳುವೆ.

'ವಿಶ್ವದೃಷ್ಟಿ'ಯ ಪ್ರಶ್ನೆಯುಂಟಾಗುವದಕ್ಕೆ ಕೆಲವೊಂದು ಮೂಲಭೂತ ಅಂಶಗಳು ಅವಶ್ಯವಾಗಿವೆ. ತನ್ನ ಅನುಭವಗಳಲ್ಲಿ ಪರಸ್ಪರ ಸಂಬಂಧ ಕಾಣುವ, ಮತ್ತು ಅವುಗಳನ್ನು ವರ್ಗೀಕರಣ ಮಾಡಿ ಸಾಮಾನ್ಯ ನಿಯಮಗಳನ್ನು ಇಲ್ಲವೆ ತತ್ತ್ವಗಳನ್ನು ಕಂಡುಹಿಡಿಯುವ ಬುದ್ಧಿವಂತ ಜೀವವು ಮೊದಲನೆಯ ಅವಶ್ಯಕತೆಯಾಗಿದೆ.

ಉದಾಹರಣಾರ್ಥವಾಗಿ ಸಸ್ಯಗಳನ್ನು ನೋಡಬಹುದು. ಸಸ್ಯಗಳಿಗೆ ಅಸ್ಪಷ್ಟವಾದ ಪ್ರಜ್ಞೆಯಿದೆ. ಸುಖದುಃಖದ ಸಂವೇದನೆ ಅವುಗಳಿಗೆ ಆಗುವದುಂಟು. ಆದರೆ ಅವುಗಳಿಗೆ ವಿಚಾರಶಕ್ತಿಯಿಲ್ಲ. ಮತ್ತು ಸಾಮಾನ್ಯ ತತ್ತ್ವಗಳನ್ನು ಕಂಡುಹಿಡಿಯಲು ಅವು ಅಸಮರ್ಥವಾಗಿವೆ. ಪ್ರಾಣಿಗಳು ಸಸ್ಯಗಳಿಗಿಂತ ಪ್ರಜ್ಞಾದೃಷ್ಟಿಯಲ್ಲಿ ಹೆಚ್ಚು ವಿಕಾಸಹೊಂದಿದ್ದರೂ ಅವುಗಳೂ ತಮ್ಮ ವಿಶ್ವದೃಷ್ಟಿಯನ್ನು ರೂಪಿಸಿಕೊಳ್ಳಲಾರವು. ಕೇವಲ ಮನುಷ್ಯನು ಮಾತ್ರ, ಅದರಲ್ಲಿಯೂ ಕೆಲವು ಜನರು ಮಾತ್ರ ತಮ್ಮ ವಿಶ್ವದೃಷ್ಟಿಯನ್ನು ಬೌದ್ಧಿಕ ಪರಿಭಾಷೆಯಲ್ಲಿ ರೂಪಗೊಳಿಸಬಲ್ಲರು.

ವಿಶ್ವದೃಷ್ಟಿಯು ನಿಜವಾಗಿ ವ್ಯಕ್ತಿಯ ಬೆಳವಣಿಗೆಯ ಫಲ. ಮೊದಲಿನಿಂದಲೇ ಇದ್ದುದಲ್ಲ. ಅದು ನಮ್ಮ ಮನಸ್ಸಿನಲ್ಲಿ ನಡೆವ ಅನಂತ ಚಿಂತನೆಯ ಕೊನೆಯೆನ್ನಬಹುದು. ನನಗೆ ಅನುಭವಗಳಲ್ಲಿ ಪರಸ್ಪರ ಸಂಬಂಧ ಕಂಡು ಸಾಮಾನ್ಯ ತತ್ತ್ವಗಳನ್ನು ಅಲ್ಲಿ ಅರಸುವದೆಂದರೆ ವಿಶೇಷವಾದ ಆಸಕ್ತಿ ಇದೆ. ಇಂದು ನಾನೇನಾದರೂ 'ವಿಶ್ವದೃಷ್ಟಿ'ಯುಳ್ಳವನಾಗಿದ್ದರೆ ಈ ಪ್ರವೃತ್ತಿಯ ಫಲವಾಗಿ. ನಾನು ದಿನನಿತ್ಯ ನಿರ್ವಹಿಸುವ ಕರ್ತವ್ಯದೊಡನೆ, ಯಾವಾಗಲೂ "ಇದೆಲ್ಲ ಏನು ?" ಎಂದು ಚಿಂತಿಸುತ್ತಲೇ ಇರುವೆ. ಇದರ ಪರಿಣಾಮವೇ ನನ್ನ ವಿಶ್ವದೃಷ್ಟಿ.

ನನ್ನ ಪ್ರಜ್ಞೆ, ಅನುಭವ, ಅವುಗಳ
ಪರಸ್ಪರ ಸಂಬಂಧ ಕಾಣುವಿಕೆ, ಹಾಗೂ
ಅದರಿಂದ ಸಾಮಾನ್ಯ ತತ್ವ ಕಂಡುಹಿಡಿ
ಯುವ ಶಕ್ತಿ ಇವುಗಳ ಫಲವಾಗಿ ಇದು
ರೂಪುಗೊಂಡಿದೆ.

ತತ್-ಪ್ರಜ್ಞೆ

ಪ್ರಜ್ಞೆಯ ವ್ಯಾಖ್ಯೆಯನ್ನು ಇಲ್ಲಿ ಕೊಡುವ ಕಾರಣವಿಲ್ಲ. ಪ್ರಜ್ಞೆ ಎಂದರೆ ಗುರುತಿಸುವ, ಅನ್ನಿಸುವ, ಸಂಕಲ್ಪಿಸುವ ಹಾಗೂ ಅಭಿವ್ಯಕ್ತಗೊಳಿಸುವ ಶಕ್ತಿಯೆಂದು ಹೇಳಿದರೆ ಸಾಕು. ಇನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಪ್ರಜ್ಞೆಯು ಅನುಭವಿಸುವ ಹಾಗೂ ಅಭಿವ್ಯಕ್ತಗೊಳಿಸುವ ಶಕ್ತಿಯಾಗಿದೆ. ಈ ಶಕ್ತಿಯಿಂದಲೇ ನಾನು ನನ್ನ ವಿಶ್ವದೃಷ್ಟಿ ಏನೆಂಬುದನ್ನು ಗ್ರಹಿಸಬಲ್ಲೆ ಮತ್ತು ನಿರೂಪಿಸಬಲ್ಲೆ. ಏಕೆಂದರೆ ಅನುಭವವಿಲ್ಲದ ವಿಶ್ವದೃಷ್ಟಿಯಿಲ್ಲ, ಅಭಿವ್ಯಕ್ತಿ ಇಲ್ಲದಿದ್ದರೆ ಅಂಥ ವಿಶ್ವದೃಷ್ಟಿಗೆ ಅರ್ಥವಿಲ್ಲ. ಅನುಭವಕ್ಕೆ ರೂಪಸಂಕೇತಗಳನ್ನು ನೀಡಲು, ಅದರ ಸ್ವರೂಪವನ್ನು ಕಲ್ಪಿಸಲು ಅಸಮರ್ಥನಾದರೆ ವಿಶ್ವದೃಷ್ಟಿ ಎನ್ನುವದು ನನಗೇ ಅರ್ಥಹೀನವಾಗುವದು. ಇನ್ನು ಶಬ್ದ ಅಥವಾ ಮತ್ತಾವ ಸಂಕೇತದಿಂದಲಾದರೂ ಇತರರಿಗೆ ಅದನ್ನು

ಮನಗಾಣಿಸಲು ಅಸಮರ್ಥನಾದರೆ ಅವರ ದೃಷ್ಟಿಯಿಂದ ನನ್ನ 'ವಿಶ್ವದೃಷ್ಟಿ' ನಿರರ್ಥಕವಾಗುವದು. ಆದ್ದರಿಂದ ಪ್ರಜ್ಞೆಯಲ್ಲಿ ಅನುಭವ ಹಾಗೂ ಅಭಿವ್ಯಕ್ತಿಗಳು ಅನಿವಾರ್ಯ ಅಂಶಗಳೆನ್ನಬಹುದು.

ಇನ್ನು ಅನುಭವದ ಪ್ರಶ್ನೆ ಬಂದೊಡನೆ ಅನುಭವದ ವಿಷಯದ ಪ್ರಶ್ನೆಯೂ ಮುಂದೆಬರುತ್ತದೆ. ನಿಜವಾಗಿ ಹೇಳಬೇಕೆಂದರೆ ಇಡಿ ತತ್ತ್ವಜ್ಞಾನವು ಈ ಎರಡು ವರ್ಗದಲ್ಲಿಯೇ ಉದಯಿಸಿದೆ. ಅನುಭವಕ್ಕೂ, ಅನುಭವದ ವಿಷಯಕ್ಕೂ ಏನು ಸಂಬಂಧ ? ಈ ಪ್ರಶ್ನೆಗೆ ನೀಡುವ ಉತ್ತರವೇ ತತ್ತ್ವಜ್ಞಾನದ ಪ್ರಮುಖ ವಿಷಯವಾಗಿಬಿಡುತ್ತದೆ. ಆದರೆ ಇವೆರಡು ಸಂಗತಿಗಳಿಗೂ ಬೆಲೆಬರುವದು ಪ್ರಜ್ಞಾ ಇದ್ದಾಗ ಮಾತ್ರ. ಸತ್ಯವಸ್ತು ಇಲ್ಲವೆ ವಸ್ತುಸ್ಥಿತಿ ಇರಬಹುದು. ಪ್ರಜ್ಞಾ ಇಲ್ಲದಿದ್ದರೆ ಆ ಸತ್ಯವಸ್ತುವಿನ ಅನುಭವ ಅಸಾಧ್ಯವಾಗುತ್ತಿತ್ತು, ಈ ಸತ್ಯವಸ್ತು ಅಥವಾ "ತತ್" ಎಂಬುದು ಪ್ರಜ್ಞೆ ಇದ್ದರೂ ಇರುತ್ತದೆ, ಇಲ್ಲದಿದ್ದರೂ ಇರುತ್ತದೆ, ಅನುಭವ ಇದ್ದರೂ ಇರುತ್ತದೆ, ಇಲ್ಲದಿದ್ದರೂ ಇರುತ್ತದೆ.

ಜ್ಞೇಯ–ಜ್ಞಾನ–ಜ್ಞಾತಾ

'ತತ್' ಎಂಬುದು ಶಾಶ್ವತವಾಗಿದೆ, ಅನಿರ್ವಚನೀಯವಾಗಿದೆ. ಅದು ಇದೆ. ಏಕೆಂದರೆ ಶೂನ್ಯ'ವನ್ನು 'ಇದೆ' ಎಂದು ಯಾರೂ ಕಲ್ಪಿಸಲಾರರು. ಈ 'ತತ್'ದ ಅನುಭವ ಬರಲು 'ಪ್ರಜ್ಞೆ' ಬೇಕು. ಆದರೆ 'ಅನುಭವದ ಪ್ರಶ್ನೆಬಂದ ತಕ್ಷಣ ಇದು 'ಯಾರಿಗೆ' ಎಂಬ ಪ್ರಶ್ನೆ ಏಳುತ್ತದೆ. 'ಪ್ರಜ್ಞೆ' ಯಾರದು ಎಂಬ ಪ್ರಶ್ನೆ ಉಂಟಾಗುತ್ತದೆ. ಈ ಸಮಸ್ಯೆಯನ್ನು ಭಾರತೀಯ ತತ್ತ್ವಜ್ಞಾನವು ವರ್ಗೀಕರಣ ಮಾಡಿ "ಜ್ಞೇಯ, 'ಜ್ಞಾನ, ಜ್ಞಾತಾ' ಎಂದು ವಿವರಿಸಿದೆ.

'ಜ್ಞೇಯ'ವೆಂಬುದು ಅಸ್ತಿತ್ವದಲ್ಲಿರುವದೆಲ್ಲವೂ ಆಗಿದ್ದು, ಅದು ಅನಂತವಾಗಿದೆ. ಶಾಶ್ವತವಾಗಿದೆ. ಸಾಮಾನ್ಯ ರೀತಿಯಲ್ಲಿ ಅದನ್ನು ಅರಿಯುವದು ಅಸಾಧ್ಯ. ಅಂತಃಸ್ಫೂರ್ತಿಯಿಂದ ಮಾತ್ರ ಅದರ ಜ್ಞಾನ ಸಾಧ್ಯ. ಅದು ತಾದಾತ್ಮ್ಯ ಜ್ಞಾನವೂ ಅಹುದು.

ಜ್ಞಾನವು ಪ್ರಜ್ಞಾಯುತ ವ್ಯಕ್ತಿಯ ಅನುಭವ, ಪ್ರಜ್ಞಾಯುತ ವ್ಯಕ್ತಿಯೆ 'ಜ್ಞಾತಾ' ಎನ್ನಿಸಿಕೊಳ್ಳುತ್ತಾನೆ.

ಇಲ್ಲಿ ನಾವು 'ಜ್ಞೇಯ'ದ ಅನಂತ ವ್ಯಾಪ್ತಿಯನ್ನು ಗಮನಿಸುವದು ಅವಶ್ಯವಿದೆ. ಈಗ ನಮ್ಮ ತಿಳಿವಳಿಕೆಗೆ ನಿಲುಕುವ ಜಡ ಪ್ರಪಂಚವು ಮಾತ್ರ ಜ್ಞೇಯವಲ್ಲ! ಅಥವಾ ಭೌತಶಾಸ್ತ್ರವು ಹೇಳುವಂತೆ 'ಶಕ್ತಿ'ಯು ಮಾತ್ರವೇ ಜ್ಞೇಯವಲ್ಲ. ಅದು ಪ್ರಜ್ಞಾಯುತ ಶಕ್ತಿ ಎನ್ನಬಹುದು. ಅಥವಾ ಸಂಸ್ಕೃತದಲ್ಲಿ ಹೇಳಿದಂತೆ 'ಚಿನ್ಮಯ ಶಕ್ತಿ' ಎನ್ನಬಹುದು. ಈ ಚಿನ್ಮಯ ಶಕ್ತಿಯು ನಿರಂತರ ಚೈತನ್ಯಶೀಲವಾಗಿದೆ. ಅಂದರೆ ಅದನ್ನು ವಿಕಾಸಶೀಲ, ಸತ್ಯ ಅಥವಾ ಭೂತ-ಭವ್ಯ ಎಂದೂ ಕರೆಯಬಹುದು. ಏಕೆಂದರೆ ಅದು ಇರುವದು ಇಷ್ಟೇ ಅಲ್ಲ. ಪ್ರತಿಕ್ಷಣ 'ಏನೋ' 'ಆಗು'ತ್ತಿರುತ್ತದೆ. 'ಇರುವುದನ್ನು' ನಾವು ಅರಿಯಬೇಕಾದರೆ ಅದು ನಮ್ಮ ಪ್ರಜ್ಞೆಯ ಅಂಗವೇ ಆಗಬೇಕು. ಅಂದರೆ ಸತ್ಯವು ಚಿನ್ಮಯವಾಗಬೇಕು ಎಂದರ್ಥ. ಅದರಿಂದ ಪೂರ್ಣ ಸತ್ಯಕ್ಕೆ ಸತ್ ಮತ್ತು ಚಿತ್ ಎಂಬೆರಡು ಮುಖಗಳೆನ್ನಬಹುದು.

ಈಗ ನಮ್ಮಲ್ಲಿರುವ ಪ್ರಜ್ಞಾಭಾಗವು ಸತ್ಯದ 'ಚಿತ್' ಅಂಶವನ್ನು ಅನುಭವವನ್ನಾಗಿ ಹೊಂದುತ್ತಿರುವುದು. ಈ ಅನುಭವಕ್ಕೆ ಸಾಧನಗಳಾಗಿ ಇಂದ್ರಿಯ, ಮನಸ್ಸು, ಬುದ್ಧಿ, ಕಲ್ಪನೆ ಮೊದಲಾದವು ಉಂಟು. ಯಾವಾಗಲೂ ನಾವು ಅನುಭವದ ತೆರೆ ಹರಿದು ನಿಜವಾದ ಮೂಲ ಸತ್ಯ ಏನು ಎಂಬುದನ್ನು ತಿಳಿಯಲು ಹಂಬಲಿಸುತ್ತೇವೆ. ಈ ಹಂಬಲು, ಈ ಅಭೀಪ್ಸೆ, ಜೀವಶಕ್ತಿಯಲ್ಲಿಯೇ ಮೂಲಭೂತವಾಗಿ ಅಡಗಿದೆ. ಇದೇ ನಮಗೆ ಜನ್ಮ ನೀಡಿದ್ದು. ಇದನ್ನೆ ನಮ್ಮ ಪ್ರಾಚೀನ ಋಷಿಗಳು ಒಂದು ಮಂತ್ರದಲ್ಲಿ ಉದ್ಘೋಷಿಸಿದ್ದಾರೆ :

**"ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ"**

ಈ ಮಂತ್ರದಲ್ಲಿಯ ಅಭೀಪ್ಸೆಯೇ ಸೃಷ್ಟಿ ವಿಕಾಸದ ಹಿಂದೆ ಅಡಗಿದ ಪ್ರೇರಕಶಕ್ತಿ. ಹೀಗೆ 'ಸತ್' ಎಂಬುದರಲ್ಲಿ ಶಾಶ್ವತತೆ, ಅನಂತತೆ, ಪರಿಪೂರ್ಣತೆ, ಆನಂದ ಇದ್ದರೆ, 'ಚಿತ್' ಎಂಬುದರಲ್ಲಿ ಕಾಲ, ಸ್ಥಳ, ಅಜ್ಞಾನ, ಅಪೂರ್ಣತೆಗಳು ಇರುತ್ತವೆ. ಈ 'ಚಿತ್' ಎಂಬುದು ಪ್ರಕಟವಾಗಲು ಕಾರಣವೇನು? ಸತ್ಯದಲ್ಲಿ ಪ್ರಕಟವಾಗುವ ಹಂಬಲು ಉಂಟು ಎಂಬುದೇ ಉತ್ತರವಾಗಿದೆ. ಆದರೆ ಈ ಅಭಿವ್ಯಕ್ತಿ ಸ್ವಾಭಾವಿಕವಾದುದು. ಮತ್ತು ಕಾಲಾತೀತವಾದುದು. 'ಸತ್' ಎಂಬುದು ಅನಂತವಾಗಿರುವದರಿಂದ ಅದರ ಅಭಿವ್ಯಕ್ತಿಯೂ ಅನಂತವಾಗಿದೆ. ಸತ್ಯದ ದೃಷ್ಟಿಯಿಂದ ನೋಡಿದಾಗ 'ಅಭಿವ್ಯಕ್ತ'ವಾದುದೆಲ್ಲವೂ ಪರಿಪೂರ್ಣವೆನ್ನಿಸುತ್ತದೆ. ಒಟ್ಟು ಚಿತ್‌ಶಕ್ತಿಯ ಅಂಶನೂ ಅಪೂರ್ಣನೂ ಆದ ವ್ಯಕ್ತಿಯ ದೃಷ್ಟಿಯಿಂದ ಮಾತ್ರ 'ಚಿತ್' ಎನ್ನುವದು ಸಾಕ್ಷೇಪವಾಗಿ, ತುಲನಾತ್ಮಕವಾಗಿ 'ಅಪೂರ್ಣ'ವೆನ್ನಿಸುವದು.

ವಿಕಾಸ ಪಥ

ಚಿದ್ವಿಕಾಸ ಪಥವು ಪ್ರಜ್ಞಾವಂತ ವ್ಯಕ್ತಿಯ ಮೇಲೆ ಹೇರಲ್ಪಟ್ಟ ಪರಿಮಿತಿಗಳಿಂದ ಪ್ರಾರಂಭವಾಗುತ್ತದೆ. ಈ ಪರಿಮಿತಿಯುಂಟಾಗಿರುವುದು, ಕಾಲ, ಸ್ಥಳ, ಪರಿಸ್ಥಿತಿಯ ಮೂಲಕ. ವಿಕಾಸವು ಪರಿಪೂರ್ಣವಾದಾಗ ಪ್ರಜ್ಞೆಯು ಸಮಸ್ತ ದೋಷಗಳಿಂದ ಮುಕ್ತವಾಗಿ ಪರಮಸತ್ಯದೊಡನೆ ಒಂದಾಗುತ್ತದೆ.

ಹಾಗಾದರೆ 'ಪರಮ-ಸತ್ಯ' ಅಥವಾ 'ಸತ್-ಚಿತ್' ಎಂಬುದರ ಪ್ರಜ್ಞಾಸ್ವರೂಪವೇನು? ಸ್ವಾಭಾವಿಕವಾಗಿ ಈ ಪರಮಸತ್ಯವು ಏಕಕಾಲಕ್ಕೆ ಸಾಂತವನ್ನೂ ಅನಂತವನ್ನೂ ಅರಿಯುತ್ತಿರಬೇಕು; ಶಾಶ್ವತವಾದುದನ್ನೂ ಕ್ಷಣಿಕವಾದುದನ್ನೂ ಅರಿಯುತ್ತಿರಬೇಕು. ಅದರಂತೆ, ಸ್ಥಿರ, ಚಲ; ದೇಶ, ದೇಶಾತೀತ; ಪೂರ್ಣ, ಅಪೂರ್ಣ; ಮತ್ತು ಆತ್ಮ, ಜಡ; ಈ ವಿರೋಧಗಳನ್ನು ಏಕಕಾಲಕ್ಕೆ ಕಾಣುತ್ತಿರಬೇಕು.

ಸದ್ಯಕ್ಕೆ ಮಾನವಪ್ರಜ್ಞೆಯು ಈ ವಿರೋಧಾಂಶಗಳನ್ನು ಏಕಕಾಲಕ್ಕೆ ಅರಿಯುವ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದಲೇ ಅದು ದ್ವಂದ್ವ ಭಾವಕ್ಕೊಳಗಾಗಿದೆ. ಆದರೆ ಅನೇಕ ಮಹಾತ್ಮರೂ ಯೋಗಶಾಸ್ತ್ರವೂ ದ್ವಂದ್ವಾತೀತ ಅನುಭವ ಸಾಧ್ಯವೆಂದು ತೋರಿಸಿಕೊಟ್ಟಿರುವದನ್ನು ನಾವು ಬಲ್ಲೆವು. ಆ ಸ್ಥಿತಿಗೆ ಹೋದಾಗ ದ್ವಂದ್ವಗಳು ಒಂದೇ ಸತ್ಯದ ಎರಡು ಮುಖಗಳೆಂಬ ಅರಿವು ಉಂಟಾಗುವದು. ಇಂಥ ವಿಕಾಸಸಿದ್ಧಿಯೇ ಮಾನವಜೀವನದ ಪರಮ ಸಾಧನೆಯಾಗಿದೆ. ಆ ಅವಸ್ಥೆಯಲ್ಲಿ ವ್ಯಕ್ತಿಯು ನಟನಂತೆ ಎಲ್ಲ ತರಹದ ಅನುಭವಗಳನ್ನೂ ಪಡೆದುಕೊಳ್ಳುತ್ತಾನೆ. ಅದೇ ಕಾಲಕ್ಕೆ ತಾನು ಆ ಅನುಭವಗಳಿಗೆ ಅತೀತನಾದವನೆಂಬ ಅರಿವುಳ್ಳವನಿರುತ್ತಾನೆ. ಹಾಗೂ ಆ ದ್ವಂದ್ವಾನುಭವಗಳಿಂದ ಪ್ರಭಾವಿತನಾಗದೆ ನಿಶ್ಚಲನಾಗಿ ಉಳಿಯುತ್ತಾನೆ. ಈ ರೀತಿಯಾಗಿ ನಟನು ತನ್ನ ನಾಟಕದ ಸಂತಸವನ್ನು ಸಮಗ್ರವಾಗಿ ಅನುಭವಿಸಲು ಸಮರ್ಥನಾಗುತ್ತಾನೆ. ಈ ಜೀವನನಾಟಕದ ಪ್ರಜ್ಞೆ ಜಾಗ್ರತವಾಗಲೆಂಬುದೇ ನನ್ನ 'ವಿಶ್ವದೃಷ್ಟಿ'ಯ ಹಿಂದಿನ ಮೂಲ ಅಭೀಪ್ಸೆ. *

ಜಗತ್ತನ್ನರಿಯುವವ ವಿದ್ವಾಂಸ; ತನ್ನ ತಾನರಿವವ ಜ್ಞಾನಿ; ಪರರನ್ನು ಗೆಲ್ಲುವವ ನೇತಾರ; ತನ್ನ ತಾ ಗೆಲ್ಲುವವ ಅಜಿಂಕ್ಯ.



ರಾಮಬಾಣ ಬಿಟ್ಟರೂ ಜಯಮಾತ್ರ ಸಿಗಲಿಲ್ಲ

ಹೌಸ್ ಪಾರ್ಲಿಮೆಂಟ್

ಲಕ್ಷ್ಮಣ ಧಾರವಾಡ

ಮದುವೆಗಿಂತ ಮೊದಲು, ಮದುವೆ ಆದ ನಂತರ ಒಂದು ತಿಂಗಳ ವರೆಗೆ ನನಗೆ ಕುಳಿತಲ್ಲಿ ಮಣೆ, ನಿಂತಲ್ಲಿ ನೀರು ಬರುತ್ತಿತ್ತು. ರಾಜನಂತೆ ನಡೆದಿತ್ತು ನನ್ನ ದೈನಂದಿನ ಜೀವನ, ರಾಣಿ ಬಂದ ಮೇಲೆ. ಆದರೆ ಮುಂದೆ ಈ ರಾಜ ಠೀವಿ ಹೇಳದೇ ಕೇಳದೇ ಕಾಲಿಗೆ ಬುದ್ಧಿ ಹೇಳಿತು.

ನನ್ನನ್ನು ಕಂಡರೆ ಇವಳಿಗೆ ಪ್ರೀತಿ ಇಲ್ಲವೆ? ಛೆ! "ಪ್ರಿಯಕಾಂತಾ" "ಪ್ರಾಣನಾಥಾ" "ಹೃದಯೇಶ್ವರಾ" ಎಂದು ಪ್ರಾರಂಭವಾಗಿ, "ನಿಮ್ಮ ದಾಸಾನುದಾಸಿ" "ಚರಣಕಮಲಗಳ ಸ್ಪರ್ಶಕ್ಕಾಗಿ ಹಾತೊರೆಯುವ..." ಇತ್ಯಾದಿ ಇತ್ಯಾದಿ, ಅವಳ ಪತ್ರಗಳಲ್ಲಿಯ ಶಬ್ದಾಲಂಕಾರ ಬರೀ ನಟನೆಯೆ! ನನ್ನವಳ ಮಾತು ಜೇನಿನಂತೆ ಸಿಹಿ. ಆದರೆ ಈಗಿತ್ತಲಾಗಿ "ಚಹಾ ಚಹಾ" ಎಂದು ಕೂಗಿ, ನನ್ನ ಧ್ವನಿ ಕ್ಷೀಣವಾದ ಮೇಲೆ, ಅರ್ಧ ಕಪ್ಪು ಚಹವನ್ನು ನನ್ನ ಮುಂದೆ ಅಪ್ಪಳಿಸಿ ಬಿರ್‍ನೆ ಹೋಗಿಬಿಡುತ್ತಾಳೆ. ಹಾಗೆಂದು "ಅವ್ವಾ ಚಹಾ ಆಗೇದೇನು" ಎಂದು ಕೇಳಿದರೆ,

"ಮದಿವಿ ಆಗೋತನಕಾ ಮಾಡ್ದೆ. ಇನ್ನ ಬೇಕಾರ ಬಂದಾಕಿ ಮಾಡ್ತಾಳ." ಇದು ಅವ್ವನ ಉತ್ತರದ ಶೈಲಿ.

"ಇವತ್ತ ಇಂವಾ ಮನಿಗರೆ ಬರ್ಲಿ ನೋಡ್ತೀನಿ ಒಂದು ಕೈ" ಎಂದು ಅವ್ವಾ.

"ಇವರು ಬಂದರೆ ಬರ್ಲಿ, ತವರ್ಮನಿಗೆ ಕಳಸ್ರಿ ಅಂತ ಹೇಳಿಬಿಡ್ತೀನಿ" ಈಕಿ ಸೋ ಅನ್ನುವದು.

ಅಡಕೊತ್ತಿನಲ್ಲಿ ಸಿಕ್ಕ ಅಡಿಕೆ ಬೇರೆ ಅಲ್ಲ; ನಾನು ಬೇರೆ ಅಲ್ಲ.

ಪುರಾಣ, ಪುಣ್ಯಕಥೆ, ಕಾದಂಬರಿಗಳನ್ನು ಓದಿ ತೋರಿಸಿದೆ. ರೇಡಿಯೋ ನಾಟಕಗಳನ್ನು ಕೇಳಿಸಿದೆ (ಪಕ್ಕದ ಮನೆಯ ರೆಡಿಯೋದಲ್ಲಿ). ಸಾಲವನ್ನು ಮಾಡಿ, ಸಂಸಾರಕ್ಕೆ ಸಂಬಂಧಿಸಿದ ಎಲ್ಲ ಸಿನೆಮಾಗಳನ್ನೂ ತೋರಿಸಿದೆ ಬುದ್ಧಿ ಬರಲಿ ಎಂದು. ಅವುಗಳೆಲ್ಲಾ ನೋಡುವವರೆಗೆ ಮಾತ್ರ.

"ನನಗೇನ ಮಾಡಂತಿ? ನಾನು ಇಬ್ಬರಿಗೂ ಬೈದೀನಿ. ಈಕಿಗಂತು ಮೂವತ್ತ ವರುಷಾತು ಬೈದs ಬೈತೀನಿ. ಇಬ್ಬರೂ ಕೇಳೂದುಲ್ಲಾ. ನಿನ್ನ ಮನಸಿಗೆ ಬಂದದ್ದ ಮಾಡು" ಅಪ್ಪನ ಪೂರ್ಣ ವಿರಾಮ. ನನ್ನ ಕೇವಲ ಫ್ರೆಂಡ್ಸ್ ಕೆಲವರೆದುರು ನನ್ನ ಪುರಾಣ ಬಿಚ್ಚಿದೆ.

"ಹೋಗೊ, ಎಲ್ಲಾರ ಮನಿ ದ್ವಾಸೀನೂ ತೂತs" ಎಂದರು. ಸಾಮೋಪಾಯ ಭೇದೋಪಾಯಗಳು ಮುಗಿದವು. ಉಳಿದದ್ದು ದಂಡೋಪಾಯ ಮಾತ್ರ. ಇವಳಿಗೆ ಕಪಾಳಮೋಕ್ಷ ಸಿಕ್ಕಾಗ ಎಂಟು ದಿನ ಹಗಲು ರಾತ್ರಿಗಳೆನ್ನದೆ ಅಳುವದಾಯಿತು. ಇನ್ನು ತಾಯಿಗೆ ದಂಡೋಪಾಯವೇ? ಬದುಕಬೇಡವೆ ನಾನು?

ಹಾದೀ ಹುಡುಕಲೇಬೇಕು ಎಂದುಕೊಂಡು ಎಂಟು ದಿವಸ ರಜೆ ಬರೆದು, ನನ್ನ ಕೋಣೆಯ ಬಾಗಿಲನ್ನು ಭದ್ರವಾಗಿ ಮುಚ್ಚಿ ಕುಳಿತುಕೊಂಡೆ.

ಏಳನೆಯ ದಿನ ಸ್ಫೂರ್ತಿ ಸ್ಫುರಿಸಿ ಹೊಳೆಯಿತು ರಾಮಬಾಣ ಉಪಾಯ. ಕುರ್ಚಿಯಿಂದ ಜಿಗಿದೆದ್ದು ಕೂಗಿದೆ:

"ಅವ್ವಾ ಬಾ ಇಲ್ಲೆ. ಏs ನೀನೂ ಬಾ. ತಂಗೀ, ಇಲ್ಲೇ ಕೂಡ್ರಿ ಎಲ್ಲಾರು. ನಾ ಹೇಳೂದನ್ನ ಕಿವಿಗೊಟ್ಟು ಕೇಳ್ರಿ." ಏಳು ದಿನಗಳ ಮೌನ ಸಾಕಷ್ಟು ಪ್ರಭಾವವನ್ನು ಬೀರಿತ್ತು. ಎಲ್ಲರೂ ತೆಪ್ಪಗೆ ಕುಳಿತರು.

"ಅತ್ತಿ- ಸೊಸಿ- ನಾದ್ನಿ, ಇನ್ನ ಮ್ಯಾಲೆ ಬೇಕಾದಷ್ಟು ಬಡದಾಡ್ರಿ." ನಿಮಗ "ಫ್ರೀ ಲೈಸನ್ಸು". ಎಲ್ಲರೂ, ಪೆಚ್ಚ ಮುಖ ಮಾಡಿ ಪಿಳಿ ಪಿಳಿ ಕಣ್ಣು ಬಿಡಲು ಆರಂಭಿಸಿದರು.

"ಆದರ ಒಂದು ಕರಾರು: ನಿಮ್ಮ ಬಡದಾಟಗಳೆಲ್ಲಾ ನನ್ನ ಎದುರಿಗೇನs ಆಗಬೇಕು. ಅವ್ವಾ ಸೊಸಿಗೆ ಬೈಬೇಕಾದ್ರ, ಕಾರಣವನ್ನೂ ಮತ್ತ ಬೈ ಬೇಕಾದದ್ದನ್ನೂ ನನಗ ಹೇಳಬೇಕು. ಅದರಂತೆನs ನೀನೂ. ಮತ್ತ ತಂಗೀನೂ ನನಗ ಹೇಳಬೇಕು. ನಿಮ್ಮ ನಿಮ್ಮೊಳಗ ನಾ ಇಲ್ದಾಗ ಯಾವದೇ ಕಾರಣದಿಂದ ಬಡದಾಡೋ ಹಂಗಿಲ್ಲ. ತಿಳಿತೇನು?" ಕವಲೆತ್ತಿನಂತೆ ಎಲ್ಲರೂ ತಲೆ ಹಾಕಿದರು. ನನ್ನಾಕೆ ಮೂಗು ಮುರಿದಳು. ನನ್ನ ತಂಗಿ ಬಾಯಿ ಬಿಟ್ಟು ಅಂದೇ ಬಿಟ್ಟಳು.

"ನೌಕರಿ ಬಿಟ್ಟು, ಮನ್ಯಾಗs ಕೂಡು ನಮ್ಮ ಬಡಿದಾಟಾ ಕೇಳಕೋತ."

ಅದಕ್ಕೆಂದೇ ಮತ್ತೊಂದು ಗುಂಡು ಹಾರಿಸಿದೆ.

"ಪ್ರತಿ ಶನಿವಾರ ಸಂಜೀ ಮುಂದ ಐದಕ್ಕ ನಾನು ಮೀಟಿಂಗ ಕರೀತೇನಿ. ಆಗ ನಿಮ್ಮ ತಕರಾರಗಳನ್ನು ಕೇಳತೀನಿ. ಏಳಕ್ಕೆ ಮೀಟಿಂಗ ಬರಖಾಸ್ತ." ಮೂರೂ ಮಂದಿ "ಆಂ" ಅಂದರು.

"ಹೌದು. ಶನಿವಾರ ಬರೋತನಕಾ ನೀವು ಯಾರೂ ನನ್ನ ಮುಂದ ತಕರಾರಗಳನ್ನ ಹೇಳೂ ಹಂಗಿಲ್ಲ. ಚಹಾ, ಊಟ, ಕೆಲಸ, ಹುಡುಗರ ಸಾಲಿ, ನನ್ನ ಆಫೀಸು, ಅಪ್ಪನ ಪೂಜೆ—ಎಲ್ಲಾ ಹೊತ್ತಿಗೆ ಸರಿಯಾಗಿ ನಡೀಬೇಕು.

"ಇವತ್ತ ಆದಿತ್ಯವಾರ. ಬರೋ ಶನಿವಾರ ನಮ ಮೊದಲನೆ ಮೀಟಿಂಗು, ಸಂಜಿ ಐದಕ್ಕ, ನೆನಪಿರ್ಲಿ."

*

ಸಾಯಂಕಾಲ ತಿರುಗಾಡಲು ಹೋದಾಗ ಒಂದೆರಡು ಸಲ ಈಕೆ ಗುಣುಗುಣು ಮಾಡಿ "ಅತ್ತೆಯವರು . . ." ಎಂದು ರಾಗ ತೆಗೆದಳು.

"ಊಂಹೂಂ. ಈವತ್ತು ಶನಿವಾರ ಅಲ್ಲಾ" ಎಂದು ಗುಡುಗಿದೆ.

"ಇವತ್ತ ನಾ ಬರೂದಿಲ್ಲಾ. ನೀವs ಹೋಗಿ ಬರ್ರಿ" ಕುಂಟು ನೆವ ಹೇಳಿದಳು ಮರುದಿನ.

"ಯಾವ ಕೆಲಸಕ್ಕೂ ಅಡ್ಡಿ ಆಗತಕ್ಕದ್ದಲ್ಲಾ. ಸುಮ್ಮನ ನಡಿ ಇಲ್ಲಾ ಅಂದ್ರ, ಇನ್ನ ಎಂದೆಂದೂ ವಾಕಿಂಗ ಅನ್ನೋಹಾಂಗಿಲ್ಲ". ನಾನೂ ಮನಸು ಕಲ್ಲು ಮಾಡಿದ್ದೆ. ಗಾಡಿ ಹಳಿಗೆ ಬಂತು.

"ಅಲ್ಲಪಾ, ನಿನ್ನ ಹೆಣ್ತಿಗೆ ಅಷ್ಟ ನೀ ಹೇಳು. ಯಾವಾಗ ನೋಡಿದ್ರೂ . . . "

" ಅವ್ವಾ, ಇವತ್ತ ಶನಿವಾರಲ್ಲಾ "

" ಅಲ್ಲೋ ಅಡಗಿ ಆಗಬೇಕಾದ್ರ . . . "

"ನನಗೇನೂ ಗೊತ್ತಿಲ್ಲಾ. ಶನಿವಾರ ಸಂಜಿ ಐದರ ತನಕಾ ಸುಮ್ಮನ ಇರ್ರಿ."

ಶನಿವಾರ ಬಂದೇಬಿಟ್ಟಿತು. ಮುಂಜಾವಿನಿಂದ ಮನೆಯ ವಾತಾವರಣವೇ ಬದಲಾಗಿದ್ದಿತು. ಅದೇನೋ ಆತುರ. ಕಳವಳ. ಏನಾದೀತು ಎಂಬ ಚಿಂತೆ. ಒಬ್ಬರ ಮುಖವನ್ನು ಇನ್ನೊಬ್ಬರಿಗೆ ನೋಡುವ ಧೈರ್ಯವಿರಲಿಲ್ಲ. ಕೆಲಸಗಳು ಮಾತ್ರ ಯಂತ್ರದಂತೆ ಸಾಗಿದ್ದವು.

ಮಧ್ಯಾನ್ಹ ೨॥ ಗಂಟೆಗೆ ಬಂದು ನೇರವಾಗಿ ನನ್ನ ಕೋಣೆಯನ್ನು ಸೇರಿದೆ. "ಚಹಾ ಮಾಡಿ ೪॥ ಗೆ ಎಬ್ಬಿಸರಿ" ಎಂದು ಸಾರ್ವಜನಿಕವಾಗಿ ಹೇಳಿ ಮಲಗಿಕೊಂಡೆ. ಹತ್ತಾರು ಸಲ ನನ್ನಾಕೆ ವಿನಾಕಾರಣ ಕೋಣೆಯಲ್ಲಿ ಸುತ್ತಾಡಿದಳು. ನಿದ್ದೆ ಹತ್ತಿದ ನಾಟಕ ಮಾಡಿದೆ. ೪॥ ಗೆ ಇನ್ನೂ ಹತ್ತುಮಿನಿಟುಗಳು ಇರುವಾಗಲೆ ಈಕೆ ಬಂದಳು.

"ಏಳ್ರಿ, ಚಹಾ ಆತು."

ಚಹ ಕುಡಿದ ಮೇಲೆ ತಮ್ಮನಿಗೆ ಆರ್ಡರ್ ಮಾಡಿದೆ.

"ಮೋನ್ಯಾ... ಹೋಗು ದೇವರ ಮುಂದಿನ ಘಂಟಿ ತಗೊಂಡ್ಬಾ. ರಂಗಾ, ದೊಡ್ಡ ಜಮಖಾನಿ ಹಾಸಿಲ್ಲೆ. ಎರಡು ಖುರ್ಚಿ ತಂದು ಇಲ್ಲಿಡು. ಒಂದು ಆರಾಮ ಖುರ್ಚಿ ಇನ್ನೊಂದು ಸಾದಾ" ಪೂರ್ವಸಿದ್ಧತೆ ಮುಗಿಯಿತು.

"ಅಪ್ಪಾ, ಇಲ್ಲಿ ಬಾ. ಆರಾಮ ಖುರ್ಚಿ ನಿಂದು, ಕೂಡಿಲ್ಲೆ."

ಢಣ್‌ಢಣ್ ಐದು ಹೊಡೆಯಿತು. ನಾನೂ ದೇವರ ಗಂಟೆಯನ್ನು ಬಾರಿಸಿದೆ. ಅಡುಗೆಮನೆ ಬಾಗಿಲಕ್ಕೆ ಒಬ್ಬರು, ಪಡಸಾಲೆ ಖೋಲಿಗಳ ಬಾಗಿಲಕ್ಕೆ ಒಬ್ಬರು ನಿಂತಿದ್ದರು. ಇಬ್ಬರು ಸಣ್ಣ ತಂಗಿಯರು ತಮ್ಮಂದಿರಿಬ್ಬರು ನನ್ನ ಸುತ್ತಲೂ ನೆರೆದರು.

"ಅಪ್ಪಾ, ನಮ್ಮದು ಒಟ್ಟು ೯ ಮಂದೀ ಸಂಸಾರಾ. ಧಾರವಾಡದಂಥಾ ಊರಾಗ ನನ್ನ ಒಬ್ಬನ ಪಗಾರ ೧೩೦, ಮತ್ತು ನಿನ್ನ ೨೫ ರೂಪಾಯಿ ಪೆನಶನ್- ಇಷ್ಟರಾಗ ನಡೀಬೇಕು. ಹೆಂಗೊ ಏನೊ ದೇವರು ನಡಿಸ್ಯಾನ. ಇಂಥಾದ್ದರಾಗ, ಮನೀ ಒಳಗ ಇರೋ ಮೂರು ಮಂದಿ ಹೆಂಗಸರು ದಿನಾ ಬಡದಾಡಿದ್ರ, ತಿಂದನ್ನಾ ಮೈಗೆ ಹತ್ತೂದುಲ್ಲಾ. ಅದಕ್ಕ ನಾನು ಈ ಹೌಸ್ ಪಾರ್ಲಿಮೆಂಟ್ ಪ್ರಾರಂಭ ಮಾಡೀನಿ. ಶನಿವಾರ ಮಾತ್ರ ೨ ತಾಸು ಇವರಿಗೆ ಬಡದಾಟಕ್ಕೆ, ತಮ್ಮತಮ್ಮ ತಕರಾರಾ ಹೇಳ್ಳಿಕ್ಕೆ. ಏನs ಇದ್ರೂ, ಶನಿವಾರ ಎಲ್ಲಾ ಮುಗೀಬೇಕು. ನಡವ ಯಾರೂ ತಮ್ಮತಮ್ಮೊಳಗ ಝಗಳಾಡಬಾರದು."

"ಆತು ನಿನಗ ಹುಚ್ಚ ಹಿಡದ್ಹಂಗ ಕಾಣತದ. ಹೊಡಿ, ನಿನ್ನ ಮನಸಿಗೆ ಬಂದ್ಹಾಂಗ ಮಾಡು." ಎಂದ ಅಪ್ಪ.

ಅಪರಾಧಿಗಳಂತೆ ಎಲ್ಲರೂ ಮುದುಡಿಕೊಂಡು ಕುಳಿತಿದ್ದರು.

"ಆದಿತ್ಯವಾರದಿಂದ ಇಲ್ಲೀ ತನಕಾ ನಿಮ್ಮ ತಕರಾರುಗಳನ್ನ ಹೇಳ್ರಿ. ಮೊದಲನೆ ಪಾಳಿ ಶಾಂತಾಂದು. ಧಡಾ ಧಡಾ ಹೇಳು." ತಂಗಿ ಅವ್ವನ ಮುಖ, ಇವಳ ಮುಖ ನೋಡಿದಳು.

"......"

"ಈ ಸಭಾದಾಗ ಸ್ಪಷ್ಟ ಆಗಿ ಮಾತಾಡಬೇಕು. ಸಭಾ ಮುಗದ ಮ್ಯಾಲೆ ಯಾರೂ ಮನಸಿನಾಗ ಇಟಗೋಬಾರದು."

ಆದರೂ ಶಾಂತಾ ಬಾಯಿ ಬಿಡಲಿಲ್ಲ.

"ನೋಡು ಒಟ್ಟs ಮೂರ ಸರೆ ಕೇಳ್ತೀನಿ. ಈಗ ಒಮ್ಮೆ ಆತು. ಹೂಂ ಹೇಳು."

"......

"ಕಡಿ ಸರೆ ಇದು. ಹೂಂ ಹೇಳು."

"ಏನ್ಹೇಳತಾರಪಾ ಹೀಂಗ ಕೇಳಿದ್ರ?"

"ಮತ್ಹೆಂಗ ಕೇಳಬೇಕು. ಹೂಂ ಜಲ್ದಿ"

"ಏನಿಲ್ಲಾ"

"ವೆರೀ ಗುಡ್. ಇನ್ನು ನೀನು ಝಟ್‌ಪಟ್"

"ಏನಿಲ್ಲಾ" ಇವಳ ಮುಖ ಬೆವತು ಕೈಕಾಲುಗಳು ನಡುಗುತ್ತಿದ್ದವು.

"ಆಂ? ಏನಂದಿ, ಏನಿಲ್ಲಾ? ವೆರೀ ಗುಡ್. ಅವ್ವಾ, ನಿನ್ನ ಪಾಳಿ ಬಂತು."

"ಇದೆಲ್ಲಾ ಹುಚ್ಚರಾಟಾ ನನಗ ತಿಳಿಯುದುಲ್ಲಪಾ. ತಪ್ಪ ಮಾಡಿದವರ್ನ ದಂಡಿಸಿದ್ದಂಗ ಕೇಳಿದ್ರ ಏನ ಹೇಳ್ತಾರೆ?"

"ದಿನಾ ನಿಮ್ಮ ಬಡದಾಟ ಯಾಕ ಇರ್ತಾವ? ಕಾರಣ ಏನು? ಕಾರಣ ಯಾರು?"

"ಸಾಧ್ಯ ಇಲ್ಲ. ನನಗ ಹೇಳ್ಲಿಕ್ಕೆ ಬರೂದುಲ್ಲಾ"

"ಹಂಗಾರ ಏನೂ ಇಲ್ಲಾ ಅಂತ್ಹೇಳು."

"ಆಗಲಿ ಮಹಾರಾಯಾ. ನಿನ್ಹಂಥಾ ಸುಪುತ್ರಾ ಹುಟ್ಟತಿ ಅಂತ ನನಗ ಗೊತ್ತಿದ್ದಿದ್ದಿಲ್ಲಾ. ಮುಂದಿನ ವಾರ ಬರಸಿ ಇಡಸ್ತೀನಿ ಶಾಂತಾನ ಕಡಿಂದ."

"ಇವತ್ತ ಏನೂ ಇಲ್ಲ ಹೌದಲ್ಲೊ?"

"ಇಲ್ಲಾ"

"ಅಪ್ಪಾ, ಎಲ್ಲಾ ಕೇಳಿದೇನಪಾ. ಇನ್ನ ಬರೂ ಶನಿವಾರ ತನಕಾ ಝಗಳಾ ಅನ್ನೂದು ಸುಳ್ಳು. ಇಲ್ಲಿಗೆ ಇವತ್ತಿನ ಮೀಟಿಂಗು ಬರಖಾಸ್ತ."

ಹುಡುಗರೆಲ್ಲ ಹುಯ್ಯ ಎಂದು ಚೀರುತ್ತ ನೆಗೆದರು. ಈಕೆ ಬಿರುಗಾಳಿಯಂತೆ ಕೋಣೆಯನ್ನು ಹೊಕ್ಕಳು. ಅವ್ವಾ ತಂಗಿ ಅಡುಗೆ ಮನೆ ಸೇರಿ ಗುಜುಗುಜು ಮಾತಿಗಾರಂಭಿಸಿದರು.

ನನ್ನ ಕೈ ನನಗರಿವಿಲ್ಲದೆಯೆ ಮೀಸೆಯನ್ನು ಹುರಿ ಹಾಕಿದವು.

ಅಂದು ರಾತ್ರಿ ೯ ಗಂಟೆಗೆ ಮನೆಗೆ ಬಂದೆ. ಗಂಭೀರ ವಾತಾವರಣವನ್ನು ಕಂಡು ಹೆದರಿಕೆ ಬಂತು. ಅಡುಗೆಮನೆ ಹೊಕ್ಕಾಗ ತಾಟು ಮಣೆಗಳು ಸಿದ್ಧವಿದ್ದವು. ಬಚ್ಚಲಿಗೆ ಕಾಲಿರಿಸಿದೆ. ಬಿಸಿನೀರು ಕಾದಿತ್ತು. ಊಟ ಮುಗಿಸಿ ಕೋಣೆಗೆ ಬಂದರೆ ಹಾಸಿಗೆ ಸಿದ್ಧ. ಆದರೆ ಮಲಗಿದರೆ ನಿದ್ದೆ ಬರಲಿಲ್ಲ.

ಇವಳು ಬಂದು ಪ್ರಾರಂಭ ಮಾಡಿದಳು.

"ಎಲ್ಲೆರೆ ಏನರೆ ಓದೂದು. ಮನಿಗೆ ಬಂದು ಹಂಗs ಮಾಡ್ರಿ ಅನ್ನೂದು. ನನಗ ಹಂಗ ಅಂದ್ರು ಹಿಂಗ ಅಂದ್ರು ಅಂತ ಸ್ಪಷ್ಟವಾಗಿ ಏನ ಹೇಳಬೇಕು ನನ್ನ ತಲಿ. ಅದರಕಿಂತ ಅಂದದ್ದು ಅನಿಸಿಗೊಂಡು ಬಿದ್ದಿರು ಸುಮ್ಮನ ಅಂತ ಯಾಕನ್ನಬಾರ್ದು."

"ಸಾಕು ತಗೀರಿ ನಿಮ್ಮ ಗೊರಕೆ. ನೀವು ಅತ್ಲಾಗ ಹೋದ ಮ್ಯಾಲೆ ಅತ್ತೆವರು, ವಾವನೋರು, ನಿಮ್ಮ ತಂಗಿ ಬಾಯಿಗೆ ಬಂದದ್ದs ಅಂದ್ರು. ನಿಮಗ ಮಾಟಾ ಮಾಡಿಸೀನಿ. ಮನಿ ಬಿಟ್ಟು ಎಲ್ಲಾರ್ನೂ ಓಡಸೊ ಗತ್ತ ಇದು. ಒಂದ ಮನ್ಯಾಗ ಆರ ಮನಿ ಮಾಡಾಕಿ ನೀನು. ಬುದ್ಧಿ ಇಲ್ಲಾ ಕತ್ತಿ ಇದ್ದೀದಿ, ನಿಮ್ಮಪ್ಪಗ ಈ ಪರಿಸ್ಥಿತಿ ಬಂದಿದ್ರ ಏನ ಮಾಡತಿದ್ದಿ, ಒಂದs ಎರಡ...s"

ಮುಂದೆ ಮಾತುಗಳೇ ಹೊರಡಲಿಲ್ಲ. ಗಂಗಾ ಭಾಗೀರಥಿ ಪ್ರಸನ್ನ.

ಆ ಪ್ರವಾಹದಲ್ಲಿ ಇನ್ನೇನು ನಾನು ತೇಲಿ ಹೋಗುವವ. ಅಷ್ಟರಲ್ಲಿ ಪುರಂದರದಾಸರ ಪದ "ಸತಿಗೆ ಸ್ವತಂತ್ರವ ಕೊಡದಿರೊ" ಹೊತ್ತಿಗೆ ಸರಿಯಾಗಿ ನೆನಪಾಯಿತು.

"ಮುಂದಿನ ಶನಿವಾರ ತನಕಾ ಯಾರ ಬಗ್ಗೂ ತಕರಾರ ಹೇಳತಕ್ಕದ್ದಲ್ಲ. ನಿಂದು ತಪ್ಪ ಇದ್ದಿದ್ದಿಲ್ಲಾ ಅಂದ್ರ ಮೀಟಿಂಗಿನಾಗ ಹೇಳಿಬಿಡು. ಹೆದರಿದ್ರ ಕೆಲಸ ಆಗೂದುಲ್ಲಾ" ಎಂದು ಮುಸುಕು ಹಾಕಿ ಮಲಗಿಯೇ ಬಿಟ್ಟೆ.

ಎರಡನೇ ಶನಿವಾರ ಬಂದಿತು. ಢಣ್‌ಢಣ್ ದೇವರ ಗಂಟೆ ಬಾರಿಸಿತು, ಸಭೆ ಕೂಡಿತು.

"ನಾನು ಅಡಿಗ್ಗೆ ಕೂತಾಗ, ಹೇಳಿದ ಸಾಮಾನು, ನಿನ್ನ ಹೇಣ್ತಿ ಕೊಡದಿದ್ರ, ನಾ ಅಡಗಿ ಮಾಡೂದುಲ್ಲಾ."

ಅಬ್ಬಾ, ಅವ್ವನಿಗೆ ಇಷ್ಟ ಧೈರ್ಯ ಬರಬೇಕಾದರೆ? ಸಿದ್ಧತೆ ಸಾಕಷ್ಟು ಆಗಿರಲೇ ಬೇಕು.

"ಎಂದ? ಯಾವಾಗ? ಯಾಕ ಕೊಡಲಿಲ್ಲಾ? ಅಂತ ವಿಚಾರ ಮಾಡಿಯೇನು ಅವ್ವಾ?"

"ಹೂ. ಹೇಣ್ತಿ ಮಾತು ಅಂದ್ರ ನಾವs ಇಷ್ಟೆಲ್ಲಾ ವಿಚಾರ ಮಾಡಬೇಕೇನು? ಹಂಗಿದ್ರ ನೀ ಯಾಕ, ನಿನ್ನ ಈ ಸುಟ್ಟ ಮೀಟಿಂಗ ಯಾಕ?"

"ಹಂಗಲ್ಲವಾ, ಯಾಕ ಕೊಡ್ಲಿಲ್ಲಾ ?

"ನೀನು ಹೇಳು ಶಾಂತಿ"

"ಇವತ್ತs ಮುಂಜಾನೆ ಅನ್ನದ ತಪ್ಪೇಲಿ ಕೊಡು ಅಂತ ನಾಕ ಸಾರೆ ಒದರಿದ್ಲು ಅವ್ವಾ."

ನಾದಿನಿ ಮಾತನಾಡಿದಾಗ ಇವಳ ಕೋಪ ಕೈ ಮೀರಿತು.

"ಆಗ ನಾನು ಬಂಬಿಗೆ ಚಕ್ಕಿ ಹಾಕತಿದ್ದೆ. ಮಡಿ ನೀರಿನ ಮಾಡದಾಗ ಅದs ಅಂತ ಒದರಿ ಹೇಳ್ದೆ. ಆವ್ಯಾಲೆ ರಂಗನ್ನ ಕಳಿಸಿದೆ ಅಂಗಿ ತೆಗದು ಕೊಟ್ಟ ಬಾ ಅಂತ."

"ಹೌದು. ಅಣ್ಣಾ, ವೈನಿ ಹೇಳಿದ ಮ್ಯಾಲೆ ನಾ ಕೊಟ್ಟ ಬಂದೆ."

ಮಾತು ಮುಗಿದರೂ ಮಾನ ಮುಕ್ಕಾಯಿತು.

"ತಾನs ಬಂದು ಕೊಟ್ಟಿದ್ರ, ಕೈ ತುಂಡ ಆಗ ತಿತ್ತೇನು ?" ಅವ್ವ ಗುಣಗುಟ್ಟಿದಳು.

"ಹೊಗಿ ಬ್ಯಾಳಾಗೇದ ಉರಿ ಆರಸು ಅಂದ ದ್ದಕ್ಕ ಥಣ್ಣೀರಲೆ ಮೈ ತೊಳಕೊಬೇಕೇನು, ನಮಗ ಅಪವಾದಾ ಕೊಡ್ಲಿಕ್ಕೆ?" ಅವ್ವ ಮತ್ತೆ ಬುಸುಗುಟ್ಟಿದಳು.

"ಹೂಂ ಹೇಳು, ಅವ್ವನ ಮಾತು ಖರೆ ಏನು?" ಹೆಂಡತಿಗೆ ಹೇಳಿದೆ.

"ಅಂದರ ನಾ ಸುಳ್ಳು ಮಾತಾಡಿದ್ದು ಕೇಳಿ ಯೇನು ?" ಅವ್ವ ಸಿಡಿದೆದ್ದಳು.

"ಅವ್ವಾ ನೀ ಸುಮ್ಮನ ಇರು. ನಾ ಕೇಳಿದ್ದಕ ಆಕಿ ಉತ್ತರಾ ಕೊಡತಾಳ. ಹೂಂ ಹೇಳು."

"...........

"ಸುಮ್ಮನ ಕೂತ್ರ ನಡೆಯೂದುಲ್ಲಾ"

"ಉಗರ ಬೆಚ್ಚಗ ಇದ್ವು"

"ಅದ್ಯಾಕ ಥಣ್ಣಗsನ ಇದ್ವು. ನಾ ನೋಡಿಸೀನಿ ಶಾಂತಾನ ಕಡೆಯಿಂದ."

"ಹೌದು, ಥಣ್ಣೀರ ಸ್ನಾನಾ ಮಾಡಿದ್ರು ವೈನಿ."

"ಹೋಗ್ಲಿ ಬಿಡ್ರೊ" ಕನಿಕರದಿಂದ ಅಪ್ಪ ನುಡಿದ.

"ಇನ್ನೊಮ್ಮೆ ಮಾಡುದುಲ್ಲಾ" ಆಕಿ.

ಗಂಗಾಭಾಗಿರಥಿ ಪ್ರಸನ್ನ.

ಸಭೆ ಮುಗಿಯಿತು.

ತಾಯಿಯ ಮಾನ ಮುಕ್ಕಾಯಿತು. ಹೆಂಡತಿ ಅವಮಾನಿತಳಾದಳು. ತಂಗಿಗೆ ಇಬ್ಬರ ಜಗಳ ದಲ್ಲಿ ಬಾಯಿಹಾಕಿ ಕೈಸುಟ್ಟುಕೊಂಡಂತಾಗಿತ್ತು. ಈ ರೀತಿ ಮನೆಯ ಮೂಲ ಸ್ತಂಭದಂತಿದ್ದ ಮೂರು ಮಂದಿ ಮಹಿಳೆಯರನ್ನು ಕೆಣಕಿ ನಾನು ಬದುಕಿರುವದು ಹೇಗೆ? ಎಂಬ ಮಹಾಪ್ರಶ್ನೆ ನನ್ನೆದುರು ತಾಂಡವ ಪ್ರಾರಂಭಿಸಿತು. ತಿಂದ ಕೂಳು ಹೊಟ್ಟೆಗೆ ಹತ್ತದೇ ಬಿಕ್ಕಳಿಕೆ ಬರುವದ-ಕ್ಕಾರಂಭವಾಯಿತು. ನೀರು, ಕುದುರೆ ಹಾಗೂ ಹೆಣ್ಣಿನ ನೆಲೆ ತಿಳಿಯುವದು ಕಠಿಣ ಎಂಬ ಗಾದೆಯ ಮಾತು ಪ್ರತ್ಯಕ್ಷವಾಯಿತು. ಕಲ್ಪನಾ-ತೀತವಾಗಿ ಮನೆ ವಾತಾವರಣ ಬದಲಾಯಿತು. ಹಗಲು ಹೆಂಗಳೆಯರು ತಮ್ಮತಮ್ಮೊಳಗೆ ಮಾತ ನಾಡುವದನ್ನೂ ಸಹಿತ ನಿಲ್ಲಿಸಿದರು. ಕೈಸನ್ನೆ ಬಾಯಿಸನ್ನೆಯಿಂದಲೇ ಕೆಲಸಗಳು ನಡೆದವು.

"ಇಂದು ಗುರುವಾರ, ನಿನ್ನೆ ಬುಧವಾರ, ನಾಳೆ ಶುಕ್ರವಾರ" ಎಂದು ಇವಳು ಸೂಚನೆಯನ್ನು ಕೊಡದೇ ಬಿಟ್ಟರೆ ನನ್ನಾಣೆ.

ದುರ್ದೈವಕ್ಕೆ ನಡುವಿನ ಎರಡು ಶನಿವಾರ ಟೂರಿಗೆ ಹೊಗುವ ಪ್ರಸಂಗ ಬಂತು. ಮೀಟಿಂ-ಗಿಗೂ ಚಕ್ರ. ಮುಂದೆ ಮೂರನೆ ಶನಿವಾರ "ಹಣಮಪ್ಪಾ ಮೂರು ಕಾಯಿ ಒಡಸ್ತೇನಿ ನಿನಗ, ಈ ಶನಿವಾರ ಸುಸೂತ್ರ ದಾಟಲಿ" ಎಂದು ಬೇಡಿ ಕೊಂಡೆ.

ಢಣ್‌ಢಣ್. ಯಥಾ ಪ್ರಕಾರ ದೇವರ ಗಂಟೆ. ಎಲ್ಲರಕಿಂತ ಮೊದಲು ಮಹಿಳಾಮಣಿ ಯರು ಆಸನಾರೂಢರಾಗಿದ್ದರು, ಹುಡುಗರಂತೂ ಇದ್ದೇ ಇದ್ದರು. ಅಪ್ಪ ಕೆಮ್ಮುತ್ತಾ ನಿಧಾನ ವಾಗಿ ಬಂದು ಕುಳಿತುಕೊಂಡನು. ಹೇಗೆ ಪ್ರಾ-ರಂಭ ಮಾಡಬೇಕು? ಎಷ್ಟು ತಲೆ ಕೆರೆದು ಕೊಂಡರೂ ಹೊಳೆಯಲಿಲ್ಲ.

"ಮನಿ ಗಂಡಸರು ಅಂದ್ರ ಕೋಡ ಮೂಡಿರ-ತಾವೇನು? ವ್ಯಾಳ್ಯಾಕ ಬಂದು ಊಟಾಮಾಡಿದ್ರ ಅನುಕೂಲ" ಅವ್ವನ ಅಕ್ಕಸತನದಿಂದಲೇ ಪ್ರಾರಂಭವಾಯಿತು ಸಭೆ.

"ಸೂಟಿ ಇದ್ದಾಗರೆ ಒಂಚೂರು, ಅನುಕೂಲಾಗಬೇಕು. ಏನ ಬೇಕು ಏನ ಬ್ಯಾಡಾ ಅಂತ ಕೇಳಿ ಸಾಮಾನ ತಂದಕೊಟ್ರ ಮಾಡವರಿಗೂ ಛೊಲೊ, ತಿನ್ನುವವರಿಗೂ ರುಚಿ" ನನ್ನಾಕೆ ಬಿರುಸು ಮಾತನ್ನು ಮೆತ್ತಗೆ "ಛೂ" ಬಿಟ್ಟಳು.

"ಅಣ್ಣ, ನಿನಗೇನೂ ತಿಳಿಯುದುಲ್ಲಪ್ಪಾ. ವೈನಿ ಪ್ರಕೃತಿ ನಾಜೂಕದ. ಜೊಚ್ಚಲಂದ್ರ ಬ್ಹಾಳ ಕಾಳಜಿ ಬೇಕಾಗತದ ಅಂತ ಹಿರೇರ ಹೇಳತಾರ" ತಂಗಿ ತನ್ನ ಪಾಲಿನ ಮಾತನ್ನು ಒಪ್ಪಿಸಿ ಕೈ ತೊಳೆದುಕೊಂಡು ಹಿಂದೆ ಸರಿದಳು. ತಾವೇ ಆಡಬೇಕಾದ ಮಾತುಗಳನ್ನು ಇನ್ನೊಬ್ಬರಿಂದ ಆಡಿಸಿ, ಎಲ್ಲರೂ ತಮ್ಮಷ್ಟಕ್ಕೆ ತಾವು ಸಂಭಾವಿತರೇ ಆದರು. ಅಳ್ಳು ಹುರಿದಂತೆ ಮಾತುಗಳು. ಉತ್ತರ ಕೊಡಲಿಕ್ಕೂ ನನಗೆ ಅವಕಾಶವಿಲ್ಲ. ದಂಗು ಬಡೆದು ಕಕ್ಕಾವಿಕ್ಕಿ ಆಗಿ ಬಾಯಿ ತೆರೆದು ಕುಳಿತುಬಿಟ್ಟೆ. ಮೈ ಬೆವೆತಿತ್ತು.

"ಹಣಮಪ್ಪನ ಗುಡಿಗೆ ಹೋಗಿ ಬರೋಣು ಕತ್ಲಿ ಆಗೂದ್ರಾಗ." ಅವ್ವ ಹತ್ತೀಬುಟ್ಟಿ ಹಿಡಿದು ಹೊರಟೇ ಬಿಟ್ಟಳು. ಬಳಗ ಬೆನ್ನುಹತ್ತಿತು.

ಯಾಕೆ? ಏನು? ಹೆಂಗ? ಮುಂದೇನಗತಿ? ಹೀಂಗ್ಯಾಕಾತು? ಏನೂ ತಿಳಿಯಲಿಲ್ಲ. ನನ್ನ ಶತಪಥಕ್ಕೆ ಅಡುಗೆಮನೆ, ಪಡಸಾಲೆ, ಖೋಲಿ, ಅಂಗಳ, ಹಿತ್ತಲ ಸಾಲದಾದವು. ಬೇಸತ್ತು ಅಪ್ಪನ ಮುಂದೆ ಬಂದು ನಿಂತೆ. ಗೊರಕೆ ಹೊಡೆಯುತ್ತಿದ್ದ.

"ಅಪ್ಪಾ! ಅಪ್ಪಾ!! ಅಪ್ಪಾ!!!

"ಏನೋ ಏನಾತು?"

"ಏನಿಲ್ಲಾ, ಇನ್ನ ಈ ಶನಿವಾರದ ಮೀಟಿಂಗು ಬಂದ ಮಾಡ್ತೀನಿ.

"..............."

"ಗುರುವಿಗೆ ತಿರುಮಂತ್ರ ಆತು."

"ಛೀ ಹುಚ್ಚಪ್ಪಾ. ಬಂದ ಮಾಡ್ತೀನಿ ಅಂತ ಬಾಯ್ಲೆ ಅನಬ್ಯಾಡಾ. ಅಧಿವೇಶನವನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲಾಗಿದೆ" ಅನ್ನು. ಮತ್ತ ಪರಿಸ್ಥಿತಿ ವಿಕೋಪಕ್ಕೆ ಬಂದಾಗ ಇರ್ಲಿ ನಿನ್ನ ಈ "ರಾಮಬಾಣ." *

ನುಡಿಮುತ್ತು

ವಿಷಯವಾಸನೆಯಂಥ ರೋಗವಿಲ್ಲ, ಮೋಹದಂಥ ಶತ್ರುವಿಲ್ಲ, ಕ್ರೋಧದಂಥ ತಾಪದಾಯಕ ಅಗ್ನಿಯಿಲ್ಲ ಮತ್ತು ಜ್ಞಾನದಂಥ ಪರಮ ಸುಖಕಾರಕವಾದದ್ದು ಇನ್ನಾವುದೂ ಇಲ್ಲ.

*   *

ಜಲಬಿಂದು ತಾನು ಪ್ರತ್ಯೇಕವಾಗಿದ್ದು ತಾನೇ ಸಮುದ್ರ ಎಂದು ತಿಳಿದುಕೊಂಡರೆ ಅದು ಮರುಭೂಮಿಯಂತೆ ಒಣಗಿ ಹೋಗುವುದು. ಅದೇ ಸಮುದ್ರದ ಅಸ್ತಿತ್ವವನ್ನು ಮನ್ನಿಸಿ ಸಮುದ್ರದಲ್ಲಿ ಲೀನವಾದರೆ ಸ್ವತಃ ಸಮುದ್ರವಾಗಿಬಿಡುವುದು.

*   *

ಸಾಲ ಬಿಟ್ಟು ಹೋಗುವ ತಂದೆ, ವ್ಯಭಿಚಾರಿ ತಾಯಿ, ಉದ್ಧಟ ಪತ್ನಿ ಮತ್ತು ನಿರಕ್ಷರಿ ಪುತ್ರ— ಇವರೆಲ್ಲರನ್ನೂ ಶತ್ರುಗಳೆಂದೇ ತಿಳಿಯಬೇಕು.



'ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ'
ಎಂದವನದೆಲ್ಲವನ್ನೂ ಬಹಳ ಮಟ್ಟಿಗೆ
ಬಲ್ಲವರು ಇವರೊಬ್ಬರೇ

ಸರ್ವಜ್ಞನನ್ನು ಬಲ್ಲ ಉತ್ತಂಗಿಯವರು

ದ. ಬಾ. ಕುಲಕರ್ಣಿ

ರೆವರೆಂಡ್ ಉತ್ತಂಗಿ ಚೆನ್ನಪ್ಪನವರಿಗೆ ಈಗ ಇಳಿವಯಸ್ಸು. ಎಂಬತ್ತಕ್ಕೆ ಮೀರಿದ ಪ್ರಾಯ. ಧಾರವಾಡದ ಬೀದಿಗಳು ಈಗ ೨-೩ ವರುಷಗಳಿಂದ ಅವರನ್ನು ಕಾಣುತ್ತಲಿಲ್ಲ. ಇಲ್ಲವಾದರೆ ದುಂಡು ಟೊಪ್ಪಿಗೆ ಧರಿಸಿದ, ಗುಂಡು ಮೊಗದ, ತೋರಗಾತ್ರದ, ಮೆಲ್ನಡೆಯ, ಪ್ರಸನ್ನವದನದ ಈ ಜ್ಞಾನವೃದ್ಧರನ್ನು ನಾವು ಆಗಾಗ ಕಾಣುತ್ತಿದ್ದೆವು. ಕುದುರೆ ಗಾಡಿಯಲ್ಲಾದರೂ ಕುಳಿತು ಸರ್ವಜ್ಞ ವಚನದ ಪ್ರತಿಗಳನ್ನು ಅವರಿವರಿಗೆ ಕಳಿಸುವ ಕೆಲಸವಿಟ್ಟುಕೊಂಡು ಅವರು ಆಗಾಗ ನಮ್ಮ ಭಾಂಡಾರಕ್ಕೆ ಸ್ವತಃ ಬಂದು ಹೋಗುತ್ತಿದ್ದರು. ಜತೆಗೆ ಒಬ್ಬ ಹುಡುಗನೋ, ಇವರಿಗಿಂತ ಸುಟಿಯಳಿಯದಿದ್ದ ಒಬ್ಬ ವೃದ್ಧರೋ ಇವರ ಜತೆಗೆ ಬರುವರು. ಈಗ ಅವರು ಬಂದೇ ಇಲ್ಲ. ಅವರ ಸರ್ವಜ್ಞನನ್ನು ಮೈಸೂರು ಸರಕಾರದ ಸಾಹಿತ್ಯಾಭಿವೃದ್ಧಿ ಶಾಖೆಯವರು ಕೊಂಡುಕೊಂಡು ಅವರ ಕೈ ತಪ್ಪಿಸಿದ್ದಾರೆ. ಒಳ್ಳೆಯದೇ ಆಯಿತೆನ್ನಬೇಕು. ಇಲ್ಲವಾದರೆ ಅವರು ಸರ್ವಜ್ಞ ವಚನವನ್ನು ಸಾಗಾಣಿಕೆ ಮಾಡಲು ತಾವೇ ಒದ್ದಾಡುವವರು.

ಶ್ರೀ ಉತ್ತಂಗಿಯವರು ತತ್ತ್ವ-ದೃಷ್ಟಾಂತ-ಸಾಹಿತ್ಯ-ಧರ್ಮಗಳನ್ನು ಆಳವಾಗಿ ಅಭ್ಯಾಸ ಮಾಡಿ ಹಲವು ಮೌಲಿಕ ಬರಹಗಳನ್ನು ಬರೆದಿರುವರಾದರೂ ಅವರು ಸರ್ವಜ್ಞನನ್ನು ಭಗೀರಥ ಪ್ರಯತ್ನದಿಂದ ಒಪ್ಪಗೊಳಿಸಿ, ಪರಿಶೋಧಿಸಿ, ವಿಂಗಡಿಸಿ ಅವನ ಹರಿತವಾದ ಮಾತಿನ ಧಾರೆಯನ್ನು ಯಥಾವತ್ತಾಗಿ ಮಿಂಚಿಸಿ ಹರಿಯಿಸಿದ ಅವರ ಜನ್ಮಸಿದ್ಧವಾದ ಕರ್ತವ್ಯದಿಂದಲೇ ಪ್ರಸಿದ್ಧರಾದವರು.

ಹಲವರ ಬಾಯಿಯಲ್ಲಿ, ಕೆಲವರ ಕೈಬರಹದಲ್ಲಿ ಚಲ್ಲವರಿದ ಸರ್ವಜ್ಞ ವಚನಗಳನ್ನು, ಅಲ್ಲೊಂದು ಇಲ್ಲೊಂದು ಎಂಬಂತೆ ಯಾವೊಂದು ವ್ಯವಸ್ಥೆ ಇಲ್ಲದೆ ಅಚ್ಚುಗೊಂಡವುಗಳನ್ನು ಸಹಸ್ರ ಸಂಖ್ಯೆಯಲ್ಲಿ ಕಲೆ ಹಾಕಿ, ಆ ನಿರ್ಭೀತ, ನಿರಂಕುಶ, ನಿರಹಂಕಾರ ಪುರುಷನ ಗುಡುಗಿನ, ಸಿಡಿಲಿನ ನುಡಿಗುಂಡುಗಳನ್ನು, ಅಣಕದ ಆಣಿಮುತ್ತುಗಳನ್ನು, ಹಾಸ್ಯರಸಾಯನವನ್ನು ವಿಂಗಡಿಸಿ, ಒಪ್ಪಗೊಳಿಸಿ, ಕ್ರಮಗೊಳಿಸಿ ಅವುಗಳ ಸತ್ವವನ್ನು, ಸತ್ಯದ ಬೇರು ಬಿಟ್ಟ ತತ್ತ್ವವನ್ನು ಮಾತಿನ ಬಾಣದಿಂದ, ಅರ್ಜುನ ಪಾತಾಳಗಂಗೆಯನ್ನು ಚಿಮ್ಮಿಸಿದಂಥ ಬೆರಗಿನ ಚಳಕ

ದಿಂದ ಪರಿಣಾಮ ಬೀರುವ ಆ ಮಹಿಮಾವಂತನ ವಚನಗಳನ್ನು ಬೆಡಗು ಬಣ್ಣನೆಯ ವಸ್ತುಗಳ ಅಂಗಡಿಕಾರರು ತೂಗಿಸಿ, ತೆರೆದು, ಹೊಳೆಯಿಸಿ, ಬೆಳಗಿಸಿ ಜನರನ್ನು ಆಕರ್ಷಿಸುವಂತೆ ಮಾಡುವ ಕುಶಲ ಕರ್ಮವನ್ನು ಶ್ರೀ ಉತ್ತಂಗಿಯವರು ಅದರ ಹತ್ತಾರು ಆವೃತ್ತಿಗಳಲ್ಲಿ ಎಡಬಿಡದೆ ಮಾಡುತ್ತ ಬಂದುದನ್ನು ಕನ್ನಡ ವಾಚಕರೆಲ್ಲ ಬಲ್ಲರು.

ಈ ಕರ್ಮಕಾಂಡದಲ್ಲಿ ಚೆನ್ನಪ್ಪನವರಿಗೆ ಬೇಸರವೆಂಬುದೇ ಇಲ್ಲ. ಕೆಲಸ ಮುಗಿಯಿತು–ಎಂಬುದಿಲ್ಲ. ಆ ಮಾತಿನ ತಳಕ್ಕೆ ಇಳಿದಷ್ಟೂ ಅವರಿಗೆ ತೃಪ್ತಿ ಇಲ್ಲ. ಜ್ಞಾನದ ಅಗಾಧತೆಯನ್ನು ಅವರು ಎಲ್ಲ ಬಲ್ಲವನ ನುಡಿಯಲ್ಲೂ ಕಂಡುಂಡರು. ಆ ಸವಿಯನ್ನು, ಆ ಕಹಿ ಮದ್ದನ್ನು ಹಿಡಿದು ಹಿರಿದು ಹಂಚಿದಷ್ಟೂ ಅವರಿಗೆ ಬೇಸರವಿಲ್ಲ.

ಸರ್ವಜ್ಞ ವಚನದ ಹತ್ತಾರು ಆವೃತ್ತಿಗಳಿಗೆ ತಾವು ತಮ್ಮನ್ನು ಗಂಧದಂತೆ ತೇಯ್ದುಕೊಂಡರು. ಸರ್ವಜ್ಞಭಕ್ತರಿಂದ, ನುಡಿ ಜಾಣರಿಂದ ವಚನಗಳನ್ನು, ಮುನ್ನುಡಿ-ಹಿನ್ನುಡಿಗಳನ್ನು, ಸವಿಸಂದೇಶಗಳನ್ನು ಬರೆಯಿಸಿ ಪ್ರಕಟಿಸಿದರು.

'ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ' ಎಂದು ಸರ್ವಜ್ಞನೇ ಹೇಳಿದ. ಅವನದೆಲ್ಲವನ್ನೂ ಬಹಳ ಮಟ್ಟಿಗೆ ಬಲ್ಲವರು ಉತ್ತಂಗಿಯವರೊಬ್ಬರೇ—ಏನೋ! ಯಾಕೆಂದರೆ ಅವರಿಗೆ ಆ ಜ್ಞಾನಪಿಪಾಸೆ ಹಿಂಗಲಿಲ್ಲ. ಆದ್ದರಿಂದಲೇ ಸರ್ವಜ್ಞ ಇವರಿಂದ ಬೆಳಕು ಕಂಡ; ಇವರು ಅವನಿಂದ ಬೆಳಕು ಕಂಡರು.

ಸರ್ವಜ್ಞನಿಗೆ ಯಾವ ಬೆಳಕಿನದೂ ಹಂಗು ಇಲ್ಲದಿರಬಹುದು. ಆದರೆ ತನ್ನನ್ನು ಎಡಬಿಡದೆ ಅರೆದುಕೊಂಡು ಕುಡಿಯುತ್ತಿರುವ ಉತ್ತಂಗಿಯವರನ್ನು ಅವನ ಜೀವಚೇತನೆ ಬಯಲು ಮಾಡಿತು. ಯಾಕೆಂದರೆ ಸರ್ವಜ್ಞನಿಗೆ ಆಲಯದ ಗೋಡೆಗಳಾವವೂ ಇಲ್ಲ. ಅವನನ್ನು ಹಿಡಿದುಕೊಂಡವರು ಬಯಲಾಗಲೇಬೇಕು. ಅವನ ನುಡಿ ರಹಸ್ಯವುಳ್ಳದ್ದಾದರೂ ಮಾನವನ ಮತಿಯನ್ನು ನುಡಿಗೊಡಲಿಯಿಂದ ಭೇದಿಸುವುದೇ ಅವನ ಸ್ವಭಾವ.

ಉತ್ತಂಗಿಯವರು ಕರ್ನಾಟಕದ ಕ್ರಿಸ್ತೀಯ ಸಮಾಜಕ್ಕೆ ಸೇರಿದವರು. ಹಾಗೆ ಮತಾಂತರ ಹೊಂದಿದ ಮೂರನೆಯ ತಲೆಮಾರು ಇವರದು. ಇವರ ಅಜ್ಜ ಚೆನ್ನಪ್ಪ ಗೌಡರು ಯಾವ ಪ್ರಲೋಭನಕ್ಕೂ ಒಳಗಾಗಿ ಮತಾಂತರ ಹೊಂದಿದವರಲ್ಲ. ಅವರಿಗೆ ಶಾಂತಿ ಬೇಕಾಗಿತ್ತು. ಅಧಿಕಾರ-ಅನುಕೂಲಗಳುಳ್ಳ ಕುಟುಂಬದಲ್ಲಿ ಅವರ ಚಿತ್ತ ರಮಿಸಲಿಲ್ಲ. ವೀರಶೈವ ಮತಾವಲಂಬಿಗಳಾದ ಅವರು ಆ ಧರ್ಮದ ಗ್ರಂಥಗಳ ಅಭ್ಯಾಸದಲ್ಲಿ ಮನಶ್ಶಾಂತಿಯನ್ನು ಕಾಣದಾದರು. ಬಾಯ್ಬಲ್‌ನ ಹೊಸ ಒಡಂಬಡಿಕೆ ಅವರ ಜಿಜ್ಞಾಸುವಾದ ಪ್ರವೃತ್ತಿಗೆ ಮನಃಶಾಂತಿಯನ್ನು ನೀಡಿದ್ದರಿಂದ ಅವರು ಆ ಧರ್ಮವನ್ನವಲಂಬಿಸಲು ಸ್ವಧರ್ಮವನ್ನು ತ್ಯಜಿಸಿದರು. ಗೌರವದ ಕುಟುಂಬದ ಶ್ರೀ ಚೆನ್ನಪ್ಪಗೌಡರು ತಮ್ಮನ್ನು-ತಮ್ಮ ಹೆಂಡತಿಯನ್ನು ಅತ್ಯಂತ ಕೀಳೆನಿಸುವ ಸೇವಾಕಾರ್ಯಕ್ಕೆ ಹೂಡಿಕೊಂಡು ಕ್ರಿಸ್ತಶ್ರದ್ಧೆಯನ್ನು ಮೆರೆದು, ನಿಜವಾದ ಕ್ರಿಸ್ತೀಯನಾಗುವ ಅರ್ಹತೆ ಪಡೆದು ಮತದೀಕ್ಷೆ ಹೊಂದಿದರು. ಕ್ರಿಸ್ತೀಯ ಮತದ ಮೂಲ ಧ್ಯೇಯವೇ ಸೇವಾಭಾವ. ಅದು ಎಂದೆಂದೂ ಕೀಳೆನಿಸದು.

ಇಂಥ ಕ್ರಾಂತಿ ವಿಚಾರದ ಅಜ್ಜನ ಧಿಟ್ಟ ಮೊಮ್ಮಕ್ಕಳಾದ ಉತ್ತಂಗಿಯವರು ಕ್ರಿಸ್ತ ಸಮಾಜದಲ್ಲಿ ಉಪದೇಶಕರಾಗಿ ನಿಂತು ಅಲ್ಲಿಯೂ ಶುದ್ಧಿ ಸಂಘಟನೆಗಾಗಿ ಹೋರಾಡಿದರು. ಚೆನ್ನಪ್ಪನವರು ಹರಕೆಯ ಸಂತಾನವಾದ್ದರಿಂದ ಅವರು ತಾಯಿಯ ಹರಕೆ ಸಲ್ಲಿಸಲು ಕ್ರಿಸ್ತಧರ್ಮಸೇವೆಗೆ ತಮ್ಮನ್ನು ತೆತ್ತುಕೊಂಡವರು. ಒಂದು ಸಂಪ್ರದಾಯದಲ್ಲಿ ರೂಢಮೂಲವಾದ ಆಚಾರ-ವಿಚಾರಗಳಲ್ಲಿ ಶಾಂತಿಯನ್ನು ಕಾಣದೆ ಕ್ರಿಸ್ತೀಯರಾದ ಇವರ ಹಿರಿಯರು ಸೇವಾಕಾರ್ಯ

ದಲ್ಲಿ ಲೌಕಿಕವನ್ನೂ ದೂಡಿಕೊಂಡು ಬಂದವರಾದರೆ, ಚೆನ್ನಪ್ಪನವರು ಉಪದೇಶಕರಾಗಿ ಜನರನ್ನು ಕ್ರಿಸ್ತೀಯ ಧರ್ಮದತ್ತ ಸೆಳೆಯಬೇಕಾದ್ದರಿಂದ, ಕ್ರಿಸ್ತೀಯರಾದವರು ನಿಜವಾದ ಕ್ರಿಸ್ತೀಯರಾಗಿರಬೇಕೆಂಬುದು ಶ್ರೀಯುತರು ಆತ್ಮಸಾತ್ ನಂಬುಗೆಯವರಾದ್ದರಿಂದ ಅಲ್ಲಿಯೂ ರೂಢಿಸಿಕೊಂಡ ಸಂಪ್ರದಾಯಶರಣತೆಯ ವಿರುದ್ಧ ಬಂಡು ಹೂಡಬೇಕಾಯಿತು. ಕೇವಲ ಪರಮತ ಖಂಡನೆಯ ನಿಂದಾಸ್ತ್ರದಿಂದಲೇ ಕಾರ್ಯ ಸಾಧಿಸುತ್ತ ಬಂದ ಕ್ರಿಸ್ತ ಸಮಾಜಕಾರ್ಯ ಚೆನ್ನಪ್ಪನವರಿಗೆ ಒಗ್ಗಲಿಲ್ಲ. ಅವರು ಪರಮತಗಳ ತತ್ತ್ವಗಳನ್ನು ಕೂಲಂಕಷವಾಗಿ ಅಭ್ಯಸಿಸಿದರು. ತುಲನಾತ್ಮಕವಾಗಿ ವಿಶ್ಲೇಷಿಸಿದರು. ಅಜ್ಞ ಜನತೆಯನ್ನು ಉದರಂಭರಣದ ಆಸೆಯಿಂದ ಕ್ರಿಸ್ತ ಮತದಲ್ಲಿ ನುಗ್ಗಿಸುವದಕ್ಕಿಂತ ಅವರ ಧರ್ಮತತ್ತ್ವಗಳನ್ನು ಅವರಿಗೆ ತಿಳಿಸಿ ಹೇಳಿ ಅಲ್ಲಿ ಅವರು ರಮಿಸಲಾರರಾದರೆ ಕ್ರಿಸ್ತ ಮತಕ್ಕೆ ಬರಲಿ. ಆಗ ಅದು ನಿಜವಾದ ಮತಾಂತರವಾಗುವದು. ಇಲ್ಲವಾದರೆ ಅದು ಸ್ಥಳಾಂತರ ಮಾತ್ರ- ಎಂಬುದು ಉತ್ತಂಗಿಯವರ ಉಪದೇಶಸರಣಿ. ಇದನ್ನು ಅವರು ಸಾಧಿಸಿ ಧಾರ್ಮಿಕ ಸ್ವಾತಂತ್ರ್ಯ ಪಡೆಯಲು ಇಪ್ಪತ್ತು ವರುಷ ಸತತವಾಗಿ ಮಿಶನ್ನಿನವರೊಡನೆ ಹೋರಾಡಿದರು. ವಿದೇಶೀಯ ಮಿಶನರಿಗಳು ದೇಶೀಯ ಕ್ರಿಸ್ತೀಯರ ತಲೆಯ ಮೇಲೆ ಮೆಣಸನ್ನರೆಯುವ ವಿಧಾನ ಉತ್ತಂಗಿಯವರ ಕ್ಷಾತ್ರವೃತ್ತಿಗೆ ಬರಷಣವಾಯಿತು. ಧರ್ಮ ವಿದೇಶೀಯರದಲ್ಲ. ಕ್ರಿಸ್ತಮತದ ಮೂಲ ತತ್ವವೆಂದರೆ ಮಾನವಸೇವೆ. ಅದರಲ್ಲಿ ಮಿಶನರಿಗಳ ಅಧಿಕಾರ-ವಿಧಾನ-ನೀತಿ ಖಂಡನೀಯವಾಗಿದ್ದಲ್ಲಿ ಭಾರತೀಯ ಕ್ರಿಸ್ತೀಯ ಕೈ-ಮುಚ್ಚಿ ಕುಳಿತಿರಲಾರನೆಂದು ತೋರಿಸಿಕೊಟ್ಟವರು ಉತ್ತಂಗಿಯವರು. ಅದಕ್ಕೆ ಮೂಲಭೂತವಾದ ವರ್ಗಭೇದವನ್ನು ಮೊದಲು ನಿರ್ಮೂಲಗೊಳಿಸಲು ಬದ್ಧಕಂಕಣರಾದರು. ಅದರಿಂದ ಸೇವೆಯ ಸ್ಥಾನದಲ್ಲಿ ಅಡರಿಕೊಂಡ ಅಧಿಕಾರ-ದರ್ಪಗಳು ಹಿಂದೆಗೆಯುವಂತಾಯಿತು. ಮುಂದೆ ಧಾರ್ಮಿಕ ಸ್ವಾತಂತ್ರ್ಯದ ಹೋರಾಟ ಸುಗಮವಾಯಿತು.

ಭಾರತೀಯ ಸ್ವಾತಂತ್ರ್ಯ ಸಮರದ ಪ್ರತ್ಯಕ್ಷ ಅನುಭವ ತಮಗಿಲ್ಲವಾದರೂ ಕ್ರಿಸ್ತೀಯ ಮತದ ಸ್ವಾತಂತ್ರ್ಯ ಹೋರಾಟವು ತಮಗೆ ಪರ್ಯಾಯವಾಗಿ ಆ ಅನುಭವವನ್ನು ನೀಡಿದೆ--ಎಂದವರು ಸಾರಿ ಹೇಳುತ್ತಾರೆ.

ಭಾರತದ ಸ್ವಾತಂತ್ರ್ಯಕ್ಕೆ ಮೂರು ವರುಷಕ್ಕೆ ಮೊದಲೇ ಧಾರ್ಮಿಕ ಸ್ವಾತಂತ್ರ್ಯವನ್ನು ಸಾಧಿಸಿದ ಕ್ರಿಸ್ತ ಸಮಾಜದ ಭಾರತೀಯರು ಎರಡು ಬಗೆಯ ಸ್ವಾತಂತ್ರ್ಯದ ಫಲಕ್ಕೆ ಪಾತ್ರರಾದದಕ್ಕೆ ದ್ವಿಗುಣಿತವಾದ ಸಂತಸಪಡುವಂತಾಗಿದೆ ಎಂಬುದಾಗಿ ಉತ್ತಂಗಿಯವರು ಆನಂದಾಶ್ರು ಸುರಿಸಿದ್ದಾರೆ. ಭಾರತೀಯ ಸ್ವಾಭಿಮಾನ, ಶ್ರದ್ಧೆ, ಸಹಿಷ್ಣುತೆ ಮತ್ತು ವಿಶಾಲಮತಿಗಳು ಉತ್ತಂಗಿಯವರಿಗೆ ಜನ್ಮಜಾತವಾಗಿ ಬಂದಂಥವು. ಅದಕ್ಕೆ ವ್ಯತಿರಿಕ್ತವಾಗಿ ಕಂಡುದನ್ನು ಅವರು ತಮ್ಮ ದೈವಜ್ಞಾನ ಶಾಲೆಯ ವಿದ್ಯಾರ್ಥಿ ದೆಸೆಯಲ್ಲೇ ಎದುರಿಸಿದರು. ಅದಕ್ಕೂ ಮೊದಲು, ಪ್ರಾಥಮಿಕ ಶಾಲೆಯಲ್ಲಿ ಭೂಮಿತಿಯ ಕುರುಡು ನಂಬುಗೆಯನ್ನು ಅವರ ಸೂಕ್ಷ್ಮಮತಿ ಒಪ್ಪಲಿಲ್ಲ. ಬಿಂದುವಿಗೆ ಪರಿಮಾಣವಿಲ್ಲ; ಸರಳ ರೇಖೆಗೆ ಗಾತ್ರವಿಲ್ಲ ಎಂಬ ಗ್ರಹಿಕೆಯನ್ನು ಅವರು ಸಮ್ಮತಿಸದೆ ಅಲ್ಲೇ ಮಾಸ್ತರರ ಕೂಡ ಯುದ್ಧಕ್ಕೆ ನಿಂತರು. ಮುಂದೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಭೂಮಿತಿ ಪತ್ರಿಕೆಗೆ ಉತ್ತರ ಬರೆಯದೆ ಶೂನ್ಯವನ್ನೇ ಚಿತ್ರಿಸಿ ವಿದ್ಯಾಭ್ಯಾಸಕ್ಕೆ ಶರಣು ಹೊಡೆದರು.

ಎಳೆತನದಿಂದ ಬಂಡು ಹೂಡುತ್ತ ಬಂದ ಉತ್ತಂಗಿಯವರು ನ್ಯಾಯಕ್ಕಾಗಿ ಸದಾ ಹೋರಾಡುತ್ತಲೇ ಸತ್ವ ಮತ್ತು ಸ್ವತ್ವಗಳನ್ನು ಸಾಧಿಸಿ ತೋರಿದರು.

ತತ್ವಗಳಿಗಾಗಿ ಹೋರಾಡುವವನು ಬದುಕಿನಲ್ಲಿ ಅಸುಖವನ್ನು ಕೈಮಾಡಿ ಕರೆದಂತೆ. ಸುಖಿ

ವನ್ನು ಕೈಯಾರೆ ದೂಡಿದಂತೆ. ಚೆನ್ನಪ್ಪನವರು ಬದುಕಿನಲ್ಲಿ ಸದಾ ತಾಪತ್ರಯಗಳನ್ನು ಎದುರಿಸಬೇಕಾಯಿತು. ಬಡತನ ತಮಗೂ, ಕುಟುಂಬಕ್ಕೂ ಕೈ ತೊಳೆದುಕೊಂಡು ಬೆನ್ನುಹತ್ತಿದ ರೋಗರುಜಿನಗಳು. ಅವರ ಧೃತಿಯೇ ಅವರನ್ನು ಕಾಪಾಡಿದೆ. ಕಾರ್ಯಪ್ರವೃತ್ತಿ ಅವರನ್ನು ಸಾವಿನಿಂದ ದೂರ ಸರಿಸಿದೆ.

ಸರ್ವಜ್ಞವಚನ ಸಂಗ್ರಹ ಮತ್ತು ಸಂಸ್ಕರಣದ ಸಮಯ ಅವರನ್ನು ಹಿಡಿದುಕೊಂಡ ಬೇನೆ ಅವರನ್ನು ನುಂಗಲಿಲ್ಲ; ಉಗುಳಿತು. ನನ್ನ ಸ್ವಾರ್ಥ- ಪ್ರಶಂಸೆಯ ಕಾರ್ಯವಿದಾಗಿದ್ದರೆ ನುಂಗು; ಇದೊಂದು ಸೇವಾ ಕಾರ್ಯವಾಗಿದ್ದರೆ ಉಗುಳು—ಎಂದು ಚೆನ್ನಪ್ಪನವರು ಈಶ್ವರನನ್ನು ಪ್ರಾರ್ಥಿಸಿದರು. ಅವರು ಬದುಕಿ ಆ ಕಾರ್ಯವನ್ನು ಒಪ್ಪವಾಗಿ ಮುಗಿಸಿದರು. ಮತ್ತದನ್ನೆ ಹಿಡಿದುಕೊಂಡು ಜೀವಾವಧಿಯಲ್ಲೆಲ್ಲ ಸಂಸ್ಕರಿಸುತ್ತಲೇ ಬಂದರು. ಇದು ಸಾಕು—ಅವರ ನಿಸ್ವಾರ್ಥಪರತೆಗೆ ನಿದರ್ಶನ.

ಚೆನ್ನಪ್ಪನವರ ಕುಟುಂಬ ಸುಭಕ್ತವ್ವನವರು ಇವರಿಗೆ ತಕ್ಕ ಸತಿ. ಸರ್ವಜ್ಞ ಕಾರ್ಯದಲ್ಲಿ ಈ ಅರ್ಧಾಂಗಿಯ ಪಾಲು ಸಮಪಾಲು. ಪತಿಗೆ ಎರಡೂ ಕೈಯಿಂದ ನೆರವಾದವರು ಅವರು. ಮಾಸ್ತರಿಣಿಯಾಗಿದ್ದುಕೊಂಡು ಇವರ ಪರಿಮಿತ ಗಳಿಕೆಯ ಹಿಟ್ಟಿಗೆ ಉಪ್ಪು ಬೆರಸಿದರು. ಸರ್ವಜ್ಞ ವಚನ ಸಂಗ್ರಹಣ ಸಂಸ್ಕರಣ ಕಾರ್ಯದಲ್ಲಿ ಬೇಸರಿಯದೆ ಪ್ರತಿ ಸಂಪ್ರತಿಗಳನ್ನು ಎಡಬಿಡದೆ ಮಾಡಿಕೊಟ್ಟು ಬಲ ನೀಡಿದರು. ಹಿರಿಯರ ಸೇವೆ, ಮಕ್ಕಳ ಪಾಲನೆಗಳನ್ನು ಗೃಹಿಣಿಯಾಗಿ ನಿರ್ವಹಿಸಿದರು. ಈ ತ್ರಿವಿಧ ಸೇವೆಯಲ್ಲಿ ಅವರು ಬಳಲಿ ಸುದೀರ್ಘವಾಗಿ ಹಾಸಿಗೆ ಹಿಡಿದರೆ ಉತ್ತಂಗಿಯವರು ಅವರನ್ನು ಇಪ್ಪತ್ತೈದು ವರ್ಷ ಕಾಲ ಆರಯ್ದು ಸಲಹಿದರು. ಸತಿ ಸುಭಕ್ತವ್ವ ಮಲಗಿದಲ್ಲೇ ತಮ್ಮ ತಾಳ್ಮೆಯಿಂದ ಪತಿಯನ್ನು ಬೆಂಬಲಿಸಿದರು. ಮಕ್ಕಳಿಗೆ--ಮೊಮ್ಮಕ್ಕಳಿಗೆ ಕಥಾಲಾಪ, ಪಾಠ-ಪ್ರವಚನಗಳು ಈ ಯಜಮಾನಿಯಿಂದ ಕೊನೆಯವರಿಗೂ ದೊರೆತವು. ಮಲಗಿ ಮಲಗಿ ಮೈಯ ಚರ್ಮ-ಎಲುವುಗಳೇ ಸುಕ್ಕಿ-ಸವೆದುವಲ್ಲದೆ ಈ ಸತಿಯ ಧೃತಿ-ದೀಧಿತಿಗಳು ಉಡುಗಲಿಲ್ಲ. ಈ ಪತಿವ್ರತೆ ಪತಿಯಿಂದ ಅವಿರತವಾದ ಆರಯ್ಕೆ ಹೊಂದಿ ಅವರಿಗೆ ಸತೀವ್ರತ ಬಿರುದು ಕೊಡಿಸಿದರು.

ಈ ಕ್ರಿಯಾಶೀಲ ಕುಟುಂಬಕ್ಕೆ ಒಂಬತ್ತರ ಸಂತಾನಶ್ರೀ. ಇವರ ಹಿರಿಯ ತಲೆಮಾರಿನವರು ಸಂತಾನಕ್ಕೆ ಬಾಯ್ಬಿಟ್ಟು ಹೊತ್ತ ಹರಕೆಗಳೆಷ್ಟೊ, ಸಲ್ಲಿಸಿದ ಸೇವೆಗಳೆಷ್ಟೋ.

ಒಂಬತ್ತರಲ್ಲಿ ಐಯ್ವರು ಹೆಣ್ಣು ಮಕ್ಕಳಲ್ಲಿ ಒಬ್ಬಾಕೆ ತೀರಿದ್ದು, ನಾಲ್ಕು ಗಂಡು ಸಂತಾನದಲ್ಲಿ ಇಬ್ಬರು ತೀರಿದ್ದು ಈ ಪುತ್ರವತ್ಸಲ ದಂಪತಿಗಳಿಗೆ ಕಾಯ್ದು ಬರೆ ಎಳೆದಂತಾಯಿತು. ಹನ್ನೊಂದರ ಪ್ರಾಯದ ಸುಶೀಲ ಸದೃಢ, ಜಾಣ ಮಗ ತೀರಿದಾಗ ಮನೆಯ ಬೆಳಕು ಹೋಯಿತೆಂದು ಆ ಮನೆಯ ನಂದಾದೀಪವಾದ ಈ ಸತಿ ಶಿರೋಮಣಿ ಶೋಕಿಸಿದ್ದನ್ನು ಉತ್ತಂಗಿಯವರು ಹೇಳುವಾಗ ಯಾರಿಗೂ ಹೃದಯ ಕರಗಿಬರುತ್ತದೆ.

ಆರು ಮಕ್ಕಳನ್ನು ಪೋಷಿಸಿ, ಬೆಳಸಿ, ವಿದ್ಯಾವ್ಯಾಸಂಗ ಮಾಡಿಸಿ ಮದುವೆಮಾಡಿ ಹೆಣ್ಣು ಮಕ್ಕಳು ನಾಲ್ಕು ಮನೆಗಳನ್ನು ನಿಲ್ಲಿಸಿದ್ದನ್ನು ಈ ದಂಪತಿಗಳು ಕಂಡರು. ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬರು ರೇಲ್ವೆ ಖಾತೆಯಲ್ಲಿ, ಇನ್ನೊಬ್ಬ ವಿದ್ಯಾಖಾತೆಯಲ್ಲಿ ಸೇವೆ ಸಲ್ಲಿಸುತ್ತ ಮನೆ ನಡಸಿಕೊಂಡು ಬಂದುದನ್ನು ನೋಡಿದರು.

ಚೆನ್ನಪ್ಪನವರು ಏಳು ವರ್ಷಗಳ ಹಿಂದೆ ಒಬ್ಬಂಟಿಗರಾದರು. ಇಪ್ಪತ್ತೈದು ವರುಷಗಳವರೆಗೆ ಬೇನೆ ಸಹಿಸಿದ ಜೀವ ಇವರನ್ನಗಲಿ ವೃದ್ಧಾಪ್ಯದಲ್ಲಿ ನೆರೆ ತಪ್ಪಿಸಿತು.

ಇಂದವರು ನಿಸ್ಸಂಗ ಸಂಗಿಗಳು. ಅಂದವರು ಸಂಗ-ನಿಸ್ಸಂಗಿಗಳು. ಅವರದು ನಿಜವಾದ ಚಿರಂತನ ಸಂಗ ಜಿಜ್ಞಾಸೆ!

ಉತ್ತಂಗಿಯವರಿಗೆ ಮೂಲತಃ ಇದ್ದದ್ದು ಯಾಂತ್ರಿಕ ಆಸಕ್ತಿ. ಆದರೆ ಅವರು ಹರಕೆಯ

ಕಾರಣದಿಂದ, ಪ್ರತಿಕೂಲ ವಾತಾವರಣದಿಂದ ಯಂತ್ರಪಟುವಾಗದೆ ತಂತ್ರಪಟುವಾಗಬೇಕಾಯಿತು. ಉಪದೇಶಕ ತಂತ್ರ ಸೂತ್ರ ಅವರಿಗೆ ಆಗಿಬರದೆ ಸ್ವತಂತ್ರ ಮಾರ್ಗಾವಲಂಬಿಗಳಾದರು. ಹರ್ಬರ್ಟ ಸ್ಪೆನ್ಸರನ 'ನಾಸ್ತಿಕತೆ' ಅವನ ಮಾನಸಿಕ ಅಶಾಂತಿಗೆ, ಅವನ ಮರಣಕ್ಕೆ ಕಾರಣವಾಯಿತೆಂಬ ವಿಪರ್ಯಸ್ತ ಹೇಳಿಕೆ ಉತ್ತಂಗಿಯವರ ಕುತೂಹಲವನ್ನು ಕೆರಳಿಸಿ, ಸಂದೇಹವಾದಿಗಳಾದ ಪೇನ್, ಇಂಗರ್ಸೊಲ್, ವಾಲ್ಟೇರರ ಕೃತಿಗಳತ್ತ ಜಿಜ್ಞಾಸುಭಾವ ಜಾಗ್ರತವಾಗಿ ಅವರ ಅಭ್ಯಾಸ ಕ್ಷಿತಿಜ ವಿಸ್ತಾರವಾಗಿ ತುಲನಾತ್ಮಕ, ಚಿಕಿತ್ಸಕವೃತ್ತಿ ಮೈಗೂಡಿಕೊಂಡಿತು. ಮುಂದದೇ ಅವರ ಕ್ಷಾತ್ರವೃತ್ತಿಯಾಗಿ ಮೆರೆದು ಸತ್ಯಸಾಧನೆಗೆಯ್ದಿತು.

ಅವರ ಶ್ರದ್ಧೆ ನಿಚ್ಚಳವಾಗಿದ್ದರಿಂದ ಧರ್ಮಮಾರ್ಗದ ಹರವು ಹೆದ್ದಾರಿಯಾಯಿತು. ಕ್ರಿಸ್ತಶ್ರದ್ಧೆಗೆ ಅವರ 'ಬನಾರಸಕ್ಕೆ ಬೇತ್ಲಹೇಮನ ವಿನಂತಿ' ಹೇಗೋ ಹಾಗೆ ಅವರ ಅನುಭಾವ ಮಾರ್ಗಕ್ಕೆ 'ಅನುಭವ ಮಂಟಪ' ನಿದರ್ಶನ. 'ಹಿಂದೂ ಸಮಾಜದ ಹಿತಚಿಂತಕ' ಮತ್ತು 'ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ' ಇವರ ಸಮಾಜದ ಪುನರ್ನಿರ್ಮಾಣದ ಕನಸುಗಳು. 'ದೃಷ್ಟಾಂತ ದರ್ಪಣ' ಮತ್ತು 'ನಾರಾಯಣ ವಾಮನ ತಿಲಕ' ಗ್ರಂಥಗಳು ಅವರ ಧರ್ಮಜಿಜ್ಞಾಸೆಯ ಸಮತೋಲ ತಕ್ಕಡಿ ಪರಡಿಗಳು. ವಚನ ವಾಙ್ಮಯದ ಅಭ್ಯಾಸದ ಸಂಕೇತಗಳಾಗಿ 'ಸಿದ್ಧರಾಮ ಸಾಹಿತ್ಯಸಂಗ್ರಹ' ಮತ್ತು 'ಮೋಳಿಗೆ ಮಾರಯ್ಯ ವಚನ'ಗಳ ಸಂಪಾದಿತ ಶೋಧಕ ಪ್ರತಿಗಳಿವೆ. ಸರ್ವಜ್ಞ ವಚನಗಳ ಸಂಗ್ರಹ ಮತ್ತು ಅದರ ಪ್ರಸ್ತಾವನೆಯ ವಿಮರ್ಶಾ ವಿಧಾನಗಳು ಅವರ ಸಾಹಿತ್ಯ ಶಕ್ತಿಯ ಪರಾಕಾಷ್ಠೆ!

ಉತ್ತಂಗಿಯವರು ತಮ್ಮನ್ನು 'ತಿರುಳುಗನ್ನಡದ ತಿರುಕ' ಎಂದುಕೊಳ್ಳುತ್ತಾರೆ. ಈ ಮಾತಿಗೆ ಅವರು ಸರ್ವಜ್ಞನ 'ತಿರಿವರಿಂ ಸಿರಿವಂತರಾರು?' ಎಂಬ ಉಕ್ತಿಯನ್ನು ರಕ್ಷೆಯಾಗಿ ಪಡೆದಿದ್ದಾರೆ.

ಆ ಸರ್ವಜ್ಞ ಇವರನ್ನು ಸಾಹಿತ್ಯಸಮ್ಮೇಳನದ ಹಿರಿ ಗದ್ದುಗೆಯನ್ನೇರಿಸಿದ. (ಕಲಬುರ್ಗಿ, ೧೯೪೯)

ಸರ್ವಜ್ಞ ಮೂರ್ತಿಯ ಚಲನಚಿತ್ರವೊಂದು ಇವರ ಶುಭಾಶೀರ್ವಾದದಿಂದ ಸಿದ್ಧವಾಗಿದೆ.

ಇವರು ಅತ್ಯಂತ ಪರಿಶ್ರಮದಿಂದ ಬರೆದಿಟ್ಟ ಭಗವದ್ಗೀತೆಯ ಶಬ್ದಸೂಚಿ (ಇಂಗ್ಲಿಷಿನಲ್ಲಿ) ಮತ್ತು ದೇವಪುತ್ರನ ಸೋಜಿಗದ ಸೃಷ್ಟಿ ಎಂಬ ಆಂಗ್ಲಕಾವ್ಯ ಇವುಗಳು ಪ್ರಕಟವಾಗಬೇಕು. ಅವರು ಬರೆಯಬೇಕೆಂದು ಹೊಳವು ಹಾಕಿದ ಕ್ರಿಸ್ತನ ವೈಶಿಷ್ಟ್ಯಪೂರ್ಣವಾದ ಚರಿತ್ರೆಯು ಬರೆದಾಗಬೇಕು; ಪ್ರಕಟವಾಗಬೇಕು.

ಅವರಿಗೆ ವೃದ್ಧಾಪ್ಯ. ನಮ್ಮ ವಿಶ್ವವಿದ್ಯಾಲಯಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಇಂಥ ಹಿರಿಜೀವದ ಅನುಭವವನ್ನು ಅವರ ಗ್ರಂಥ ಪ್ರಕಟನೆಗೆ ನೆರವಾಗುವದೆಂದಲ್ಲ—ಸ್ವತಃ ಕೈಕೊಂಡು ಕಾರ್ಯರೂಪಕ್ಕೆ ತರಬೇಕು. ಕ್ರಿಸ್ತಚರಿತೆ ಬರೆಯಲು ವಿದ್ವಾಂಸರನ್ನು ಅವರ ನೆರವಿಗೆ ಕೊಟ್ಟು ಆಗಮಾಡಿಸಬೇಕು.

ಉತ್ತಂಗಿಯವರನ್ನು ಪುರಸ್ಕರಿಸುವದೆಂದರೆ ಸರಕಾರ, ವಿಶ್ವವಿದ್ಯಾಲಯಗಳು ತಮ್ಮನ್ನು ತಾವೇ ಪುರಸ್ಕರಿಕೊಂಡಂತೆ. ಇಂಥವರ ಸಾಹಿತ್ಯ-ಸಂಶೋಧನೆ, ಅನುಭವ, ಅನುಭಾವಗಳು ನಾಳಿನ ಆಸ್ತಿಯಾಗಿ ನಾಡಿಗೇ ಉಳಿಯುವಂಥದು.

ಈ ಅರಿವನ್ನು ಎಲ್ಲಾ ಬಲ್ಲ ಸರ್ವಜ್ಞ ಏನೊಂದೂ ಅರಿಯದ ಕರ್ಮಕ್ಷೇತ್ರದ (ಪಂಡಾಜನರಿಗೆ) ಅರ್ಚಕರಿಗೆ ಕರುಣಿಸಲಿ. ಸರ್ವಶಕ್ತ, ಸರ್ವಜ್ಞ, ಸರ್ವಾತ್ಮ, ಸರ್ವಾಂತರ್ಯಾಮಿ ನಮ್ಮ ಉತ್ತಂಗಿಯವರ ಶತಮಾನೋತ್ಸವವನ್ನಾಚರಿಸುವ ಸುಯೋಗವನ್ನು ಕನ್ನಡಿಗರಿಗೆ ತಂದುಕೊಡಲಿ. *

ಬಾಯಿ ಬಿರುಸಾಗಿದ್ದರೂ ಅವರ
ಅಂತರಂಗ ಮೃದುವಾಗಿತ್ತು

ಅಭಿಮಾನಿ ಅಜ್ಜ

ಮೊ. ದಾ. ದೇಶಮುಖ

೩೦ ನು ಅಜ್ಜನ ಶ್ರಾದ್ಧ. ಎಲ್ಲ ಕಕ್ಕಂದಿರು, ಅವರ ಮಕ್ಕಳು, ಎಲ್ಲ ಅತ್ತೆಂದಿರು- ಎಲ್ಲರೂ ಈ ದಿನ ಒಟ್ಟಾಗಿದ್ದೇವೆ. ಹಿರೇ ಕಕ್ಕನ ಕಿರೇ ಮಗನ ಹೆಂಡತಿ ಹಡೆದು ಇನ್ನೂ ಐದು ವಾರ ಸಹ ಆಗಿಲ್ಲ— ಅವಳೂ ಬಂದಿದ್ದಾಳೆ. ನಡುವಿನ ಅತ್ತೆಯ ಒಂದೂವರೆ ವರ್ಷದ ಮೊಮ್ಮಗ ಸತ್ತು ಇನ್ನೂ ೧೫ ದಿನವೂ ಆಗಿಲ್ಲ. ಆದರೆ ಅವರೂ ಎಲ್ಲ ದುಃಖ ಮರೆತು ಬಂದಿದ್ದಾರೆ. ಶ್ರಾದ್ಧಕ್ಕೆಂದು ಹೀಗೆ ಒಟ್ಟಾದವರು ಸುಮಾರು ೫೦ ಜನರಾದರೂ ಇರಬಹುದು.

ಈ ರೀತಿ ನಾವೆಲ್ಲ ಒಟ್ಟಿಗೆ ಸೇರುವ ಸಂದರ್ಭಗಳು ವರ್ಷದಲ್ಲಿ ಎರಡೇ. ಒಂದು ದೀಪಾವಳಿ, ಇನ್ನೊಂದು ಅಜ್ಜನ ಶ್ರಾದ್ಧ. ಆದರೆ ದೀಪಾವಳಿಯ ವೇಳೆಗೆ ಒಬ್ಬೊಬ್ಬರು ಒಂದೊಂದು ಕಾರಣದಿಂದ ತಪ್ಪಿಸುತ್ತಾರೆ. ಮೇಲಾಗಿ ಹಬ್ಬದ ಹೊತ್ತಿಗೆ ಪೇಟೆಯೂರನ್ನು ಬಿಟ್ಟು ಹಳ್ಳಿಯಲ್ಲಿ ಬರುವುದೂ ಈಗ ಅವರಿಗೆ ಸೇರುವದಿಲ್ಲ.

ಆದರೆ ಶ್ರಾದ್ಧದ ಮಾತು ಬೇರೆ. ಶ್ರಾದ್ಧ ಕಾರಂಜಗಾವ್‌ದಲ್ಲೇ ಆಗಬೇಕು. ನಾವೆಲ್ಲರೂ ಬಂದು ಪ್ರಸಾದಗ್ರಹಣ ಮಾಡಬೇಕು. ಎಲ್ಲರೂ ಬರುತ್ತೇವೆ. ಆದರೆ ಎಲ್ಲರಲ್ಲೂ ಅಜ್ಜನ ಪೂಜ್ಯ ಸ್ಮರಣೆ ಜಾಗೃತವಾಗುವದೆಂದೇನೂ ಇಲ್ಲ. ಅಜ್ಜನದು ವಿಚಿತ್ರ ಸ್ವಭಾವ. ತುಸು ಸಿಡುಕಿನದು. ಅಂತೆಯೇ ಅವರು ತಮ್ಮ ಜೀವಮಾನದಲ್ಲಿ ಎಷ್ಟೋ ಜನರ ಮನನೋಯಿಸಿದರು. ಅಂದರೆ ಅವರು ಕ್ರೂರಿಗಳಲ್ಲ; ಆದರೂ ಹಿಡಿದದ್ದೇ ಹಟದ ಜಾತಿಯವರು. ತಮ್ಮ ವಂಶ, ಮನೆತನ,

'ಸತ್ಯಕಥಾ'ದಿಂದ



ಪರಂಪರೆಗಳ ಬಗ್ಗೆ ಅವರ ಮತಗಳು ನಿಶ್ಚಿತವಾಗಿದ್ದವು. ಅದೇ ಇತರರ ಮತ್ತು ಮನೆಯವರ ಮನನೋಯಿಸಲು ಕಾರಣವಾಗುತ್ತಿತ್ತು. ಒಮ್ಮೆ ಅವರ ಪ್ರೀತಿಯ ಹಿರೇಮಗಳು ತವರಿಗೆ ಬಂದಾಗ ತನ್ನ ಮಕ್ಕಳಿಗೆ ಪೇಟೆಯೂರಲ್ಲಿ ಒಳ್ಳೇ ಹಾಲು ಸಿಗುವದಿಲ್ಲೆಂದು ಏನೋ ಮಾತಿಗೆ ಮಾತು ಬಂದಾಗ ಅಂದಳು. ಕೂಡಲೇ ಅಜ್ಜ ತಮ್ಮ ಆನೆಯಂಥ ದೊಡ್ಡ, ಈಯಲಿಕ್ಕಾದ ಆಕಳನ್ನು ಮರಡಿಯಿಂದ ತರಿಸಿದರು. ಇಷ್ಟೇ ಅಲ್ಲ; ಇಬ್ಬರು ಆಳುಗಳನ್ನು ಜೊತೆಯಲ್ಲಿ ಕೊಟ್ಟು ಆಕಳನ್ನು ಒಯ್ದು ಮಗಳ ಮನೆಯಲ್ಲಿ ಕಟ್ಟಿಸಿದರು. ಆದರೆ ಮುಂದೆ ಮಕ್ಕಳಿಗೆ ಹೈನಕ್ಕೆಂದು ಕಳಿಸಿದ ಆಕಳ ಹಾಲನ್ನು ಅಳಿಯ ಮಾರುತ್ತಾನೆಂದು ಹೇಗೊ ಅಜ್ಜನಿಗೆ ತಿಳಿಯಿತು. ಅಲ್ಲಿಗೆ ಹೋಗಿ ಆಕಳನ್ನು ತಿರುಗಿ ತಂದೇ ಬಿಟ್ಟರು. ಮಗಳ ಮನೆಮುಟ್ಟಿ ವಸ್ತುಸ್ಥಿತಿಯನ್ನರಿತು "ಬ್ರಾಹ್ಮಣಕುಲದಲ್ಲಿ ಹುಟ್ಟಿ ಹಾಲು ಮಾರುತ್ತೀರಾ?" ಎಂದು ಬಾಯಿಗೆ ಬಂದಂತೆ ಅಳಿಯನನ್ನು ಬೈದರು. ಗೂಟಕ್ಕೆ ಕಟ್ಟಿದ ಆಕಳು ಮತ್ತು ಕರುವನ್ನು ತಾವೇ ಬಿಚ್ಚಿಕೊಂಡು ಮೂವತ್ತೈದು ಮೈಲು ನಡೆದುಕೊಂಡು ಮನೆಗೆ ಬಂದರು. ಪುನಃ ಅವರ ಬಾಗಿಲಲ್ಲಿ ಕಾಲು ಹಾಕಲಿಲ್ಲ. ಮುಂದೆ ವಿಷಮಜ್ವರದಿಂದ ಅತ್ತೆ ಕಾಲವಾದರೂ ಇವರು ಅತ್ತ ಹಣಿಕಿ ಹಾಕಲಿಲ್ಲ. ಇದೆಲ್ಲ ನೋಡಿದರೆ ಅಜ್ಜ ಕ್ರೂರರೆನಿಸುತ್ತಾರೆ. ಆದರೆ ಮನೆಯ ಎತ್ತು ಲಕ್ಷ್ಮ್ಯಾ ಕಾಲುಬೇನೆಯಿಂದ ಸತ್ತಾಗ ಅಜ್ಜ ಚಿಕ್ಕ ಮಕ್ಕಳಂತೆ ಗೋಳೋ ಎಂದು ಅತ್ತದ್ದು ನೆನಿಸಿಕೊಂಡರೆ ಅವರೆಷ್ಟು ದಯಾಮಯರೆಂದು ಕಂಡುಬರುವದು.

ಶ್ರಾದ್ಧದ ಊಟ ಮುಗಿಸಿ ಏಳುವಷ್ಟೊತ್ತಿಗೆ ಹೊತ್ತು ಹೊರಳಿರುತ್ತದೆ. ಆಮೇಲೆ ಹೆಂಗಸರ ಊಟ, ಎಲೆ ಬಡಿಸಿ ಕೊಡುವುದು, ಪಾತ್ರೆಗಳನ್ನು ತೆಗೆದಿಟ್ಟು ಎಲ್ಲ ಹಸನು ಮಾಡುವಷ್ಟರಲ್ಲಿ ದೀಪಹಚ್ಚುವ ವೇಳೆಯಾಗುತ್ತದೆ. ಆಗ ಎಲ್ಲರೂ ಒತ್ತಟ್ಟಿಗೆ ಕೂಡುತ್ತೇವೆ. ನಮ್ಮ ನಡುವೆ ಅಜ್ಜಿಯೂ ಬಂದು ಕೂಡುತ್ತಾಳೆ. ಎಲ್ಲರೂ ಮಾತಾಡುವದು ಅಜ್ಜನ ಬಗ್ಗೆಯೇ! ಆಗ ಯಾರೋ ಒಬ್ಬರು ಚಿಕ್ಕ ಕಕ್ಕನ ಲಗ್ನದ ನೆನಪು ತೆಗೆಯುತ್ತಾರೆ. ಅದಾಗಿ ಇಂದಿಗೆ ೨೦-೨೨ ವರ್ಷಗಳಾದರೂ ಆ ನೆನಪು ನನಗಿಂದಿಗೂ ಇಂದಿನಂತೆನಿಸುತ್ತದೆ.

ಇಲ್ಲಿಯೇ ಕಕ್ಕನ ಲಗ್ನದ ನಿಶ್ಚಯವಾದದ್ದು. ಇಲ್ಲಿ ಲೋಡಿಗೊರಗಿ ಅಜ್ಜ ಕೂತಿದ್ದರು. ಅತ್ತ ನಾನಾಜಿ ಮತ್ತು ಹಿರೇ ಕಕ್ಕ ಕೂತಿದ್ದರು. ಅಲ್ಲಿ ಕಂಬದ ಹತ್ತಿರ ಕಾರಕೂನರು ಮತ್ತು ಊರ ಪ್ರತಿಷ್ಠಿತರು ಕೂತಿದ್ದರು. ಮತ್ತು ಇಂದು ಅಜ್ಜನ ಫೋಟೋ ಇರುವ ಗೋಡೆಯ ಬಳಿ ಕಿರಿಯ ಚಿಕ್ಕಮ್ಮನ ಕಕ್ಕ ಮತ್ತು ಅವರ ಕಡೆಯ ಬೇರೆ ಜನರು ಕೂತಿದ್ದರು. ಅವರು ನಮ್ರರಾಗಿ, ಕೈಮುಗಿದು ಅಜ್ಜನೊಂದಿಗೆ ಮಾತಾಡುತ್ತಿದ್ದರು. ಆಗ ಅಜ್ಜನ ವರ್ಚಸ್ಸು ಈ ಭಾಗದಲ್ಲಿ ಬಹಳಿತ್ತು.

ಎಲ್ಲ ಮಾತುಕತೆ ಮುಗಿದು ಬೀಗರು ಹೊರಟು ನಿಂತಾಗ ಅಜ್ಜ "ಇದು ನಮ್ಮಲ್ಲಿಯ ಕಡೇ ಕಾರ್ಯ. ನಮ್ಮ ವ್ಯವಸ್ಥೆ ಚೊಕ್ಕಾಗಬೇಕು. ತಿಳೀತೇನು?" ಎಂದು ಹೇಳಿದರು.

ಆಗ ಚಿಕ್ಕಮ್ಮನ ಚಿಕ್ಕಪ್ಪ ಬಾಗಿ "ನಾವು ಬಡವರು. ತೂಗಿಸಿಕೊಂಡು ಹೋಗುವ ಭಾರ ನಿಮ್ಮದು" ಎಂದರು.

ದೇವರೂಟದ ಮುನ್ನಾದಿನವೇ ನಮ್ಮ ದಿಬ್ಬಣ ಹೊರಟಿತು. ಸುಮಾರು ೩೦೦ ಜನರಿದ್ದೆವು. ನಮ್ಮ ವಾಡೇದಿಂದ ನಾಗೋರಾವ ಮುಂಡೆಯವರ ಬಾವಿಯ ವರೆಗೆ ಸವಾರಿಗಾಡಿಗಳ ಸಾಲು ಹತ್ತಿತ್ತು. ಒಟ್ಟು ಅರವತ್ತು ಸವಾರಿ ಗಾಡಿಗಳೂ ಐದು ಸಾಮಾನು ತುಂಬಿದ ಚಕ್ಕಡಿಗಳೂ ಇದ್ದವು. ಎಲ್ಲಾ ಎತ್ತುಗಳ ಮೈಮೇಲೆ ಝೂಲುಗಳಿದ್ದವು. ಕೊರಳಲ್ಲಿ ಗಗ್ಗರಿಗಳಿದ್ದವು. ನಮ್ಮ ಕಡೆಯ ಬೀಗರೂ ದೊಡ್ಡ ದೊಡ್ಡ ಜನರೇ ಇದ್ದರು. ತಾಲೂಕಿನ ಪುಢಾರಿಗಳು, ವ್ಯಾಪಾರಿಗಳು, ವಕೀಲರು, ಡಾಕ್ಟರರು, ಸರಕಾರಿ ನೌಕರರು ಇವರೆಲ್ಲರಿದ್ದರು. ಮದ್ದು ಹಾರಿಸುತ್ತ



ನ್ಯೂ ಶೊರಾಕ್ (ಶೊರಾಕ್), ಅಹಮ್ಮದಾಬಾದ್. ನ್ಯೂ ಶೊರಾಕ್, ನಡಿಯಾದ್. ಸ್ಟ್ಯಾಂಡರ್ಡ್, ಬೊಂಬಾಯಿ. ಸ್ಟ್ಯಾಂಡರ್ಡ್, (ನ್ಯೂ ಚೈನಾ) ಬೊಂಬಾಯಿ. ಸ್ಟ್ಯಾಂಡರ್ಡ್, ದೇವಾಸ್. ಸಸೂನ್, ಬೊಂಬಾಯಿ. ಸಸೂನ್, (ನ್ಯೂ ಯುನಿಯನ್), ಬೊಂಬಾಯಿ. ಸುರತ್ ಕೋಟನ್, ಸುರತ್. ಮಫತ್‌ಲಾಲ್ ಫೈನ್, ನವಸಾರಿ. ಗಗಲ್‌ಭಾಯಿ ಜೂಟ್, ಕಲ್ಕತ್ತ. ಇಂಡಿಯನ್ ಡೈಸ್ಟಫ್, ಬೊಂಬಾಯಿ.

KAN

SISTAS-MG-20

ವಾದ್ಯಧ್ವನಿಯೊಂದಿಗೆ ನಮ್ಮ ದಿಬ್ಬಣ ರೇವತಿಯ ಬಸ್ ಸ್ಟ್ಯಾಂಡನ್ನು ತಲುಪಿತು. ಅಲ್ಲಿ ಆರು ಲಾರಿಗಳು ಸ್ಪೇಶಲ್ಲಿನ ಬೋರ್ಡುಗಳನ್ನು ತಗಲಿಸಿಕೊಂಡು ನಮಗಾಗಿ ಕಾದಿದ್ದವು. ಅವುಗಳಿಂದ ಸಾವರಗಾವಿಗೆ ಹೋಗಿ ಅಲ್ಲಿಂದ ಬೀಗರೂರಿಗೆ ಸವಾರಿಗಾಡಿಗಳಿಂದಲೇ ಹೋಗಬೇಕಾಗಿತ್ತು.

ಸಾವರಗಾವ್ ಮೋಟಾರುಸಾಗಾಟದ ದೊಡ್ಡ ಊರು. ಅಲ್ಲಿ ರಾಜೂಲಾಲಾನ ದೊಡ್ಡ ಧರ್ಮಶಾಲೆ ಒಂದಿದೆ. ಗಾಡಿಗಳಿಗೆ ಸವಾರಿ ಕಟ್ಟಿ ಎತ್ತುಗಳನ್ನು ಹೂಡಿಯಾಗುವವರೆಗೆ ವಿಶ್ರಾಂತಿ, ಉಪಾಹಾರ ಮಾಡಲೆಂದು ನಮಗಾಗಿ ಈ ಧರ್ಮಶಾಲೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಆ ಮೇರೆಗೆ ಅತ್ತ ನಡೆಯಿರೆಂದು ಬೀಗರು ವಿನಂತಿ ಮಾಡಿದರು. ಛತ್ರದ ಹೆಸರು ಕೇಳಿದೊಡನೇ ಅಜ್ಜ ಕೆಂಡವಾದರು. "ಧರ್ಮಶಾಲೆಯಲ್ಲಿ ನಿಲ್ಲಲಿಕ್ಕೆ ನಾವೇನು ಫಕೀರ-ಬೈರಾಗಿಗಳೇನು ? ಇಷ್ಟು ದೊಡ್ಡ ಊರಲ್ಲಿ ನಮಗೋಸ್ಕರ ಒಂದು ವಾಡೆ ಸಿಗಲಿಲ್ಲವೇನು? ಮೊದಲೇ ತಿಳಿಸಿದ್ದರೆ ನಮ್ಮ ವ್ಯವಸ್ಥೆ ನಾವೇ ಮಾಡಿಕೊಳ್ಳುತ್ತಿದ್ದೆವು."

"ಆದರೆ..."

"ಆದರೆ–ಏನು ನಿಮ್ಮ ತಲೆ?" ಎಂದು ಗರ್ಜಿಸಿ ಅಜ್ಜ ಸ್ಟ್ಯಾಂಡಿನ ಮೇಲಿನ ಆಲದಮರದ ಅಡಿಯಲ್ಲಿ ಜಮಖಾನಗಳನ್ನು ಹಾಸಲು ಆಳುಗಳಿಗೆ ಹೇಳಿದರು. ಅವಸರವಸರದಿಂದ ಬೀಗರು ಫಲಾರದ ಸಾಮಾನುಗಳನ್ನು ತಂದರು. ಆದರೆ ಅವರ ಫಲಾರ ಮುಟ್ಟಲು ಅಜ್ಜ ಒಪ್ಪಲಿಲ್ಲ. ನಮ್ಮ ಡಬ್ಬಿಗಳನ್ನೇ ತೆಗೆಸಿದರು. ನಾವೆಲ್ಲ ಫಲಾರಕ್ಕೆ ಕೂತೆವು. ಪಾಪ! ಬೀಗರ ಕಡೆಯವರು ಅಪಮಾನಿತರಾಗಿ ದೂರ ನಿಂತರು. ಅವರು ನಿಂತಿರುವಾಗ ನಾವಷ್ಟೇ ತಿನ್ನುವುದಕ್ಕೆ ಮನಸ್ಸಾಗಲಿಲ್ಲ. ನಮ್ಮ ದೊಡ್ಡ ಕಕ್ಕ ಹೋಗಿ ಅವರನ್ನು ಕರೆದರು. ಯಾರೂ ಬರಲಿಲ್ಲ. ಕಡೆಗೆ ಅಜ್ಜನೇ ಹೋದರು. "ಹಸಿದ ಹೊತ್ತಿನಲ್ಲಿ ನಾವಷ್ಟೇ ತಿಂದು ನೀವು ಸುಮ್ಮನಿರುವುದು ನಮಗೆ ಶೋಭಿಸದು. ನೀವೂ ಬರ್ರಿ." ಎಂದರು.

"ನಾವು ತಿಂದೇ ಹೊರಟಿದ್ದೇವೆ?

"ತಿಂದರೇನಾಯಿತು? ನಡೆಯಿರಿ" ಆಗಲೂ ಅವರು ಏಳದ್ದರಿಂದ ಅಜ್ಜ ಆಣೆ ಹಾಕಿದರು. ಕೈಹಿಡಿದು ಎಳೆದೇ ತಂದರು. ಮತ್ತೆ ಆಗ್ರಹ ಮಾಡಿ ಹೊಟ್ಟೆತುಂಬ ತಿನ್ನಿಸಿದರು. ಅಷ್ಟೊತ್ತಿಗೆ ಗಾಡಿಗಳು ತಯಾರಾದವು. ನಾವೆಲ್ಲಾ ಹತ್ತಿದೆವು. ಆದರೆ ನಾವು ಮನೆಯಿಂದ ಹೊರಟಾಗಿನ ಕಿಂತ ಈಗ ಬೀಗರು ಕಳಿಸಿದ ಗಾಡಿಗಳು ಎಂಟು ಹತ್ತು ಕಡಿಮೆ ಇದ್ದವು. ಚಿಕ್ಕಮ್ಮನ ಕಕ್ಕ ಬಂದು ಹೇಳಿದರು.

"ಇವರಿಷ್ಟು ಜನರನ್ನು ಊರಿಗೆ ಮುಟ್ಟಿಸಿ ಕೂಡಲೇ ಗಾಡಿಗಳನ್ನು ಮರಳಿ ಕಳಿಸುವೆ. ಅಂದರೆ ಉಳಿದವರು ಎರಡನೇ ಬಾರಿಗೆ ಬರಬಹುದು."

"ಅಲ್ಲೀತನಕ ಆಲದ ಗಿಡದ ಬುಡದಲ್ಲಿ ಕೂತ ನಮ್ಮ ಜನರು ಏನು ಮಾಡಬೇಕು ? "

"ಧರ್ಮಶಾಲೆಯಲ್ಲಿ—"

"ಧರ್ಮಶಾಲೆಯಲ್ಲಿ ಕೂಡಲಿಕ್ಕೆ ನಮ್ಮನ್ನೇನೂಂತ ತಿಳಿದಿದ್ದೀರಿ ನೀವು? ಛಲೋ ವ್ಯವಸ್ಥೆ ಮಾಡಿರೆಂದು ಮೊದಲೇ ಹೇಳಿದ್ದಿಲ್ಲೇನು? ನಮ್ಮ ದಿಬ್ಬಣ ಹೀಗೆ ಹರಹರಕಾಗಿ ಬರಲಾರದು. ಹೋದರೆ ಒಟ್ಟಿಗೆ ಹೋಗುವವರು ನಾವು."

"ಊರಲ್ಲಿ ಮತ್ತೆರಡು ಲಗ್ನಗಳಿವೆ. ಆದ್ದರಿಂದ ಕೆಲವು ಗಾಡಿಗಳು ಅತ್ತ ಹೋದವು."

"ಹಾಗಿದ್ದರೆ ನಮಗೆ ಮೊದಲೇ ತಿಳಿಸಬೇಕಿತ್ತು! ನಮ್ಮ ವ್ಯವಸ್ಥೆ ನಾವೇ ಮಾಡಿಕೊಳ್ಳುತ್ತಿದ್ದೆವು." ಎಂದು ಅಜ್ಜ ಗಾಡಿಗಳ ಹತ್ತಿರ ಹೋಗಿ ಹತ್ತಿದ್ದವರೆಲ್ಲರನ್ನೂ ಇಳಿಯಹೇಳಿದರು.

"ನಡೆಯಿರಿ. ನಡೆದೇ ಹೋಗೋಣ. ಯಾರೊಬ್ಬರೂ ಗಾಡೀ ಹತ್ತಬೇಡಿರಿ."

ಅಜ್ಜ ಮುಂದಾದರು. ಬೀಗರ ಕಡೆಯವರು ವಿನಂತಿಮಾಡಿದರು. ಕೈಜೋಡಿಸಿದರು. ಆದರೆ ಅಜ್ಜ ಹೊರಳಿ ಅವರನ್ನು ನೋಡಲೂ ಇಲ್ಲ. ಅವರು ಮುಂದೆ; ಅವರ ಹಿಂದೆ ನಾವೆಲ್ಲರು.

ನಮ್ಮ ಹಿರೇ ಕಕ್ಕ ಮಾತ್ರ ದೊಡ್ಡ ದೊಡ್ಡ ಜನರನ್ನು ನಡೆಸಿಕೊಂಡು ಹೋಗಬೇಕಾಯಿತಲ್ಲ ಎಂದು ಸಂಕೋಚಪಟ್ಟುಕೊಂಡರು. ಆದರೂ ಅಜ್ಜನ ಮುಂದೆ ಯಾರ ನಾಲಿಗೆಯೂ ಏಳುತ್ತಿದ್ದಿಲ್ಲ. ಹುಡುಗರು, ಮುದುಕರು, ಬೇಸೆಯವರು ಎಲ್ಲರೂ ನಡೆದರು. ಬರಿದಾದ ಗಾಡಿಗಳು ಮತ್ತು ಸಪ್ಪಳಮಾಡದೇ ಹಿಂಬಾಲಿಸುವ ವಾದ್ಯಗಾರರು ಹೀಗೆ ದಿಬ್ಬಣ ಹೊರಟಿತು. ಅಜ್ಜನ ಈ ಛಲದ ಸ್ವಭಾವದಿಂದಂತೂ ಬೀಗರು ನಡುಗಿ ಹೋದರು.

ಮರುದಿನ ಸಾಯಂಕಾಲದ ವರೆಗೆ ಎಲ್ಲ ವಿಧಿಗಳು ಸುರಳೀತ ನಡೆದವು. ಸೀಮಾಂತ ಪೂಜೆಗೆ ತುಸು ಹೊತ್ತು ಮೊದಲು ಚಿಕ್ಕಮ್ಮನ ತಂದೆ ಮತ್ತು ಕಕ್ಕ ನಮ್ಮ ಕಡೆಯ ಹಂದರದಲ್ಲಿ ಬಂದು ನಮ್ಮ ದೊಡ್ಡ ಕಕ್ಕನನ್ನು ಬದಿಗೆ ಕರೆದುಕೊಂಡು ಹೋಗಿ, "ನಾವು ಬಡವರು. ಹೊಟ್ಟೆಯಲ್ಲಿ ಹಾಕಿಕೊಳ್ಳಿರಿ." ಎಂದು ಹೇಳತೊಡಗಿದರು.

"ಆದದ್ದಾದರೂ ಏನು?"

"ವರದಕ್ಷಿಣೆಯಲ್ಲಿ ೧೦೦೦ ರೂಪಾಯಿ ಕಡಿಮೆ ಬಿದ್ದಿವೆ. ೧೫ ದಿನಗಳಲ್ಲಿ ವ್ಯವಸ್ಥೆ ಮಾಡುತ್ತೇವೆ. ಈಗಿನ ಮಟ್ಟಿಗೆ ನಮ್ಮ ಮರ್ಯಾದೆ ಉಳಿಸಿರಿ."

ಇನ್ನು ಇದನ್ನು ಅಜ್ಜನಿಗೆ ಹೇಳುವುದು ಹೇಗೆ? ಅಂತೂ ಎಲ್ಲರೂ ಅವರ ಕಡೆಗೆ ಬಂದರು. ಅಜ್ಜನ ಸಿಟ್ಟು ಅತಿಯಾಯಿತು. "ನಮ್ಮ ಮನೆತನ, ನಮ್ಮ ಗೌರವ,— ನಿಮಗೆ ಗೊತ್ತಿಲ್ಲೇನು?" ಎಂದು ಗುಡುಗಿದರು.

"ಒಬ್ಬರಿಂದ ದುಡ್ಡು ಬರಬೇಕಾಗಿತ್ತು. ಆದರೆ ಅವನ ಅಣ್ಣ ಸತ್ತದ್ದರಿಂದ ೧೩ ದಿನ ಆದ ಹೊರತು ಕೊಡುವದಿಲ್ಲ ಎನ್ನುತ್ತಿದ್ದಾನೆ."

"ನಾಲ್ಕು ಮಂದೀ ನಡುವೆ ನಮ್ಮ ಮರ್ಯಾದೆ ಹೋದೀತು."

"ತಪ್ಪು ಮನ್ನಿಸಿರಿ." ತಲೆಬಾಗಿದರು ಬೀಗರು. ಕೂಡಲೆ ಅಜ್ಜ ಅವರನ್ನು ಹತ್ತಿರ ಕರೆದು, "ನಮ್ಮನ್ನೇನು ಕಟುಕರೆಂದು ತಿಳಿದಿರೇನು? ಇನ್ನು ನಮ್ಮ ನಿಮ್ಮ ಮರ್ಯಾದೆ ಒಂದೇ" ಎಂದು ಹೇಳಿ ತಮ್ಮ ಹತ್ತಿರದ ೧೦೦೦ ರೂಪಾಯಿಗಳನ್ನು ಅವರಿಗೆ ಕೊಟ್ಟು "ನಾಲ್ಕು ಮಂದೀ ಎದುರಿಗೆ ನಾವು ಒಂದು ಪೈ ಕೂಡ ಕಡಿಮೆ ತಕ್ಕೊಳ್ಳಲಾರೆವು. ನಮ್ಮ ನಿಮ್ಮ ಲೆಕ್ಕಾಚಾರ ಆ ಮೇಲೆ ನೋಡಿದರಾಯಿತು. ನಡೆಯಿರಿ." ಎಂದರು.

ಲಗ್ನ ಊಟ ಎಲ್ಲ ಯಥಾರೀತಿ ಪಾರಾಯಿತು. ಆದರೆ ಮೆರವಣಿಗೆಯ ಹೊತ್ತಿಗೆ ಮತ್ತೆ ಗದ್ದಲವಾಯಿತು. ಅವರು ಕೊಟ್ಟ ಸೀರೆಗಳು ಸ್ವಲ್ಪ ಕಡಿಮೆ ಬೆಲೆಯುವಿದ್ದವು. ಅದರಿಂದ ಮತ್ತೆ ಅಜ್ಜ ಸಿಟ್ಟಾದರು. ಮತ್ತು ಬೀಗರಿಗೆ ಹೇಳಿಬಿಟ್ಟರು. "ಇನ್ನು ನೀವು ನಮ್ಮ ಬಾಗಿಲಿಗೆ ಬರಬೇಡಿರಿ; ಮಗಳನ್ನೂ ಕರೆಯಬೇಡಿರಿ. ಇಂದಿನಿಂದ ನಿಮ್ಮ ಪಾಲಿಗೆ ಆಕೆ, ಅವಳ ಪಾಲಿಗೆ ನೀವು ಸತ್ತಿರಿ."

ನಾವು ಕಾರಂಜಗಾವಕ್ಕೆ ಮರಳಿದೆವು. ಮುಂದೆ ಎರಡು ತಿಂಗಳಲ್ಲಿ ಬೀಗರು ಐದು ಸಲ ಪತ್ರ ಬರೆದು ಮಗಳನ್ನು ಕರೆದೊಯ್ಯಲು ಯಾವಾಗ ಬರೋಣವೆಂದು ಕೇಳಿದರು. ಅಜ್ಜ ಒಂದಕ್ಕೂ ಉತ್ತರ ಕೊಡಲಿಲ್ಲ. ಆದರೂ ಚಿಕ್ಕಮ್ಮನನ್ನು ಮಾತ್ರ ಅಜ್ಜ ಬಲು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಬಂದವರ ಹೋದವರ ಮುಂದೆಲ್ಲ ಚಿಕ್ಕಮ್ಮನನ್ನು ಹೊಗಳುತ್ತಿದ್ದರು.

ಒಂದು ಮುಂಜಾನೆ ಬಾಗಿಲಲ್ಲಿ ಒಂದು ಸವಾರಿಗಾಡಿ ಬಂದು ನಿಂತಿತು. ಗಾಡಿಯಿಂದ ಚಿಕ್ಕಮ್ಮನ ಊರವರಾದ ಮಾನಾಜಿರಾವ ಪಾಟೀಲರು ಇಳಿದರು ಹಣ್ಣಾದ ಮೀಸೆ, ಐದೂ ಬೆರಳಲ್ಲಿ ಉಂಗುರುಗಳು. ಅವರು ಚಿಕ್ಕಮ್ಮನ ಮನೆಯಲ್ಲಿ ಸಲಿಗೆಯಿದ್ದವರು. ಚಿಕ್ಕಮ್ಮನನ್ನು ಸ್ವಂತ ಮಗಳಂತೆ ಪ್ರೀತಿಸಿದವರು. ಆ ಊರ ಸುತ್ತುಮುತ್ತಿನ ಹಳ್ಳಿಗಳಲ್ಲಿ ಒಳ್ಳೇ ವರ್ಚಸ್ಸಿದ್ದವರು. ತುಂಬ ಗಟ್ಟಿಗರು. ಸ್ವಾಭಿಮಾನಿಗಳು. ಸ್ವಂತ ಮಗಳನ್ನೇ ಕರೆಯಲು ಅವಳ ಗಂಡನ ಮನೆಗೆ ಹೋದವರಲ್ಲ; ಆದರೆ ನಮ್ಮ ಚಿಕ್ಕಮ್ಮನನ್ನು ಕರೆಯಲು ಸ್ವತಃ ಬಂದಿದ್ದರು.

ಪಾಟೀಲರು ಬಂದಾಗ ಅಜ್ಜ ಹಿತ್ತಲಬಾಗಿಲ

ಕಡೆಕೂತಿದ್ದರು. ಕಾರಕೂನರು ಅಂಜಂಜುತ್ತಲೇ ಅವರ ಹತ್ತಿರ ಹೋಗಿ ಸಮಾಚಾರ ತಿಳಿಸಿದರು. ಅಜ್ಜನ ಸಿಟ್ಟು ಉಕ್ಕೇರಿತು. ಏನೋ ಬಾಯಲ್ಲಿ ವಟಗುಡುತ್ತಲೇ ಹೊರಗೆ ಬಂದರು. ಗೌಡರು ನಮಸ್ಕರಿಸಿದರು. ಸಿಟ್ಟಿನಲ್ಲೇ ಅದನ್ನು ಸ್ವೀಕರಿಸಿದರು. ಮತ್ತು ಮೂಕರಂತೆ ತಕ್ಕೆಗೆ ಒರಗಿ ಕೂತುಬಿಟ್ಟರು. ಗೌಡರೇ ಆ ಈ ಸುದ್ದಿ ಮಾತಾಡಿದರು. ಆದರೆ ಅಜ್ಜ ಪಿಟ್ಟೆನ್ನಲಿಲ್ಲ. ಕಡೆಗೆ ಬೇಸತ್ತು ಗೌಡರು ಅಂದರು:

"ಸಂಜೆಗೇ ನಾವು ಹೊರಡುವೆವು."

"ಹುಂ."

"ಹುಡಿಗೆಯನ್ನು ಕರೆದೊಯ್ಯುವೆ."

"ಯಾವ ಹುಡಿಗೆ?"

"ನಮ್ಮ—"

"ನಿಮ್ಮ ಪಾಲಿಗವಳು ಸತ್ತಳೆಂದು ತಿಳಿಯಿರಿ."

"ಆದರೀಗ ಅಂಥಾ ಅನ್ಯಾಯವಾದರೂ ಏನಾಗಿದೆ?"

"ನಮ್ಮ ಗೌರವಕ್ಕೆ ಮಸಿ ಬಳೆದು ನೀವೇ ಕೇಳುತ್ತೀರೇನು?"

"ವರದಕ್ಷಿಣೆಯಲ್ಲಿ ನಿಂತ ರಕಮನ್ನು ಈಗ ತಂದಿದ್ದೇನೆ."

"ದುಡ್ಡು ನಾಯಿ ನೆಕ್ಕುವುದಿಲ್ಲ. ಅದನ್ನ ಹೇಳುವದಿಲ್ಲ ನಾನು. ನಿಮ್ಮಲ್ಲಿ ನಮಗೆ ಸರಿಯಾದ ಸತ್ಕಾರ ಸಿಗಲಿಲ್ಲ."

"ನಮ್ಮಿಂದ ತಪ್ಪಾಗಿರಬಹುದು. ಕ್ಷಮಿಸಿರಿ.

"ಮೆರವಣಿಗೆಯ ಕಾಲಕ್ಕೆ ಆಕೆ ನಿಮಗೂ ನೀವು ಅವಳಿಗೂ ಸತ್ತಿರೆಂದು ನಾನು ಹೇಳಿದ್ದೆ. ಇಲ್ಲಿ ಅವಳಿಗೆ ಏನೂ ಕೊರತೆಯಾಗಿಲ್ಲ. ಸುಖದಲ್ಲಿದ್ದಾಳೆ." ಬಗಲಕಸಿಯ ಅಂಗಿಯನ್ನು ತೆಗೆದೊಗೆದು ಅಜ್ಜ ಜನಿವಾರದಿಂದ ಬೆನ್ನು ತಿಕ್ಕಿಕೊಳ್ಳುತ್ತ ಕೂಗಿದರು. "ಒಳಗೆ ಯಾರಿದ್ದೀರಿ? ಸ್ನಾನಕ್ಕೆ ನೀರುತೋಡಿರಿ." ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ಗೌಡರು ಮುಂಡಾಸನ್ನು ತೆಗೆದು ತೊಡೆಯ ಮೇಲಿಟ್ಟುಕೊಂಡು ವಿಚಾರಮಗ್ನರಾಗಿ ಕಣ್ಣುಮುಚ್ಚಿ ಕೂತರು. ಅಜ್ಜ ಕಾರಕೂನರ ಮುಂದಿನ ಕಿರ್ದಿಯನ್ನು ಎಳೆದುಕೊಂಡು ನೋಡತೊಡಗಿದರು. ಆಮೇಲೆ ಸ್ನಾನಕ್ಕೆ ನೀರು ತೋಡಿರುವುದಾಗಿ ತಿಳಿದಮೇಲೆ ಅಜ್ಜ ಎದ್ದು ಒಳಗೆ ಹೋದರು.

ಅವರು ಒಳಗೆ ಹೋದ ಮೇಲೆ ಚಿಕ್ಕಮ್ಮ ಚಹದ ಕಪ್ಪಿನೊಂದಿಗೆ ಹೊರಗೆ ಬಂದಳು. ಅಜ್ಜನ ಮಾತುಗಳಿಂದ ಅವಳ ಎದೆ ಇನ್ನೂ ಹಾರುತ್ತಿತ್ತು. ಕಣ್ಣುಗಳಲ್ಲಿ ನೀರು ಕೂಡಿದ್ದವು. ಗೌಡರೊಂದಿಗೆ ಅಜ್ಜ ಮಾತಾಡಿದಷ್ಟು ಒರಟಾಗಿ ಯಾರೂ ಎಂದೂ ಮಾತಾಡಿರಲಿಲ್ಲ. ಗೌಡರೂ ಸ್ವಾಭಿಮಾನಿಗಳೆಂದು ಅವಳಿಗೆ ಗೊತ್ತಿತ್ತು. ಇನ್ನು ಮುಂದೇನಾಗುವುದೋ ಎಂದು ಹೆದರಿದ್ದಳು. "ಹೇಗೆ ನಡೆದಿದೆ?" ಎಂದು ಗೌಡರು ಕೇಳಿದರು. ಚಿಕ್ಕಮ್ಮ ಗಳಗಳನೆ ಅತ್ತುಬಿಟ್ಟಳು. ಗೌಡರು ಸಮಾಧಾನ ಹೇಳಿದರು. ಆಮೇಲೆ ಚಿಕ್ಕಮ್ಮ ತವರಿನ ಜನರ ಸುದ್ದಿ, ನೆರೆಹೊರೆಯವರ ವಿಚಾರ, ದನಗಳ ವಿಚಾರ, ಗಿಡ-ಬಳ್ಳಿಗಳ ವಿಚಾರ ಕೇಳಿದರು. ಕೊನೆಗೆ ತಡೆಯಲಿಕ್ಕಾಗದೆ— "ನೀವು ನನ್ನನ್ನು ಕರೆದೊಯ್ಯಲು ಬಂದಿದ್ದೀರಾ?" ಎಂದು ಕೇಳಿದಳು.

"ಹೌದು."

"ಆದರೆ ನಾನು ನಿಮ್ಮ ಪಾಲಿಗೂ ನೀವು ನನ್ನ ಪಾಲಿಗೂ ಸತ್ತೆನೆಂದು ಮಾವ ಹೇಳುತ್ತಾರಲ್ಲ?"

"ಇಲ್ಲ ಅಂದೆರೂ ಸಂಬಂಧ ಕಡಿದುಹೋಗುವದೇ?"

"ಒಮ್ಮೆಯಾದರೂ ನನ್ನನ್ನು ಅತ್ತ ಒಯ್ಯಿರಿ. ಅವರೆಲ್ಲರ ನೆನಪು ಬಹಳ—ಬಹಳ ಆಗುತ್ತಿದೆ."

"ಹುಚ್ಚೀ, ನಿನ್ನನ್ನು ಒಯ್ಯಲಿಕ್ಕೆ ಬಂದವನು ಒಯ್ಯಲಿಕ್ಕಾಗದಿದ್ದರೆ ಮರಳಿ ಊರಿಗೆ ಮೋರೆ ತೋರಿಸಲಾರೆ."

ಚಿಕ್ಕಮ್ಮನಿಗೆ ನೆಮ್ಮದಿಯಾಯಿತು. ಬರಿದಾದ ಕಪ್ಪುಬಸಿ ಒಳಗೊಯ್ದಳು.

ಅಜ್ಜ ಸ್ನಾನಮುಗಿಸಿ ಜೋರುಜೋರಾಗಿ ಸ್ತೋತ್ರ ಪಠಿಸುತ್ತ ಅಂಗಳಲ್ಲಿ ತುಲಸೀದಲಗಳನ್ನು ಹರಿಯಲು ಹೋದರು.


LIFEBUOY
LIFEBUOY SOAP
SOAP
ಎಷ್ಟು ಗೆಲುವು, ಆರೋಗ್ಯದ ಉಲ್ಲಾಸ ಲೈಫ್‌ಬಾಯ್
ಯಿಂದ ಸ್ನಾನ ಮಾಡಿದ ಮೇಲೆ! ಯಾರಿಗೂ ಕೊಳೆಯಿಂದ
ಮತ್ತು ಕ್ರಿಮಿಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ
ಲೈಫ್‌ಬಾಯ್ ಸೋಪು ಕೊಳೆಯಲ್ಲಿರುವ ಕ್ರಿಮಿಗಳನ್ನು
ತೊಳೆದು ತೆಗೆಯುತ್ತದೆ. ಲೈಫ್‌ಬಾಯ್‌ಯಿಂದ
ಮನೆಯವರೆಲ್ಲರಿಗೆ ಆರೋಗ್ಯ.
ಲೈಫ್‌ಬಾಯ್ ಎಲ್ಲಿದೆಯೋ
ಅಲ್ಲಿದೆ ಆರೋಗ್ಯ!
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ
L.29-X29 KN

ಹೊಲೆಯರ ಸಿದ್ದ್ಯಾ ಬಂದಿದ್ದ. ಅವನು ಅಜ್ಜನನ್ನು ಕಂಡು ಅಂದ—

"ಸನಮಾಡತೀಂನರೀಯಪ್ಪಾ ಧಣೇರ."

"ಸುಖವಾಗಿರು ಸೂಳೇಮಗನs" ಎಂದು ಅಜ್ಜ ಸಿಟ್ಟಿನಿಂದ ಬೈದೇ ಆಶೀರ್ವದಿಸಿದರು.

"ಕಟ್ಟಿಗೇ ಗಾಡಿ ತಂದೇನರಿ."

"ಅಲ್ಲಿ ಒಟ್ಟು."

ಆತ ಒಟ್ಟತೊಡಗಿದ. ಅಜ್ಜ ತುಲಸಿ ಹರಿಯ ತೊಡಗಿದರು. ಗೌಡರು ತಡೆಯಲಾರದೆ, ಅಂದರು.

"ಹಾಗಾದರೆ ಹುಡುಗೀನ್ನ ಕಳಸ್ತೀರಲ್ಲ ?"

"ಗೌಡರೇ, ಆಕೆ ನಿಮ್ಮ ಮಗಳಾದರೂ ನಮ್ಮ ಸೊಸೆಯಾಗಿದ್ದಾಳೆ. ಇನ್ನು ಆಕೆ ನಮ್ಮ ಕುಲಕ್ಕೆ ಸೇರಿದ್ದಾಳೆ. ನಮ್ಮ ಕುಲದ ಅವಮರ್ಯಾದೆ ನಿಮ್ಮ ಅಂಗಳದಲ್ಲಿ ಆಗಿದೆ. ಇನ್ನು ನಮ್ಮ ವಂಶ-ದವರಾರೂ ನಿಮ್ಮ ಬಾಗಿಲಿಗೆ ಬರಲಾರರು."

"ಹೀಗಂದರೆ ಹೇಗೆ ನಡೆದೀತು ?"

"ಯಾಕಾಗಬಾರದು ? ನಮ್ಮ ಮನೆತನದ ಕೀರ್ತಿ ಕೇಳಿಲ್ಲವೇನು ನೀವು ?"

"ತಪ್ಪಾಗಿದ್ದರೆ ಕ್ಷಮಿಸಿರಿ. ಹಿಂದಿನದನ್ನೆಲ್ಲ ಮರೆತುಬಿಡಿರಿ."

"ಹೇಗ ಮರೆಯಬೇಕು ? ನಮ್ಮ ಅಂಗಳದಲ್ಲಿ ನಿಮ್ಮ ಮರ್ಯಾದೆ ಕಳೆದರೆ ನೀವು ಸುಮ್ಮನಾದೀರೇನು ?"

"ಮಗಳಿಗಾಗಿ ಮರೆತೇವು."

"ಹಾಗಿದ್ದರೆ ಅಲ್ಲಿ ಹಾಕಿದ ಜಾಲೀ ಕಟ್ಟಿಗೆ ನೀವು ಸ್ವತಃ ಒಡೀರಿ. ಕೊಡಲಿ ಬೇಕಾದ್ರೆ ಹೊಲ್ಯಾ ಕೊಡ್ತಾನೆ. ಕಟ್ಟಿಗಿ ಅಷ್ಟು ಒಡೀರಿ. ನಿಮ್ಮ ಮಗಳ್ನ ಕರಕೊಂಡು ಹೋಗಿರಿ."

ಎಂದು ಅಜ್ಜ ತುಲಸಿ ತುಂಬಿದ ತಟ್ಟೆಯನ್ನು ತಕ್ಕೊಂಡು ಒಳಗೆ ಹೋದರು. ಗೌಡರ ಸಿಟ್ಟು ಮಿತಿಮೀರಿತು. ಅವರ ಮೈ ನಡುಗಲಾರಂಭಿಸಿತು. ಅಂಗಿ ತೆಗೆದರು. ಧೋತರ ಮೇಲೇರಿಸಿ ಟೊಂಕಕ್ಕೆ ಸಿಕ್ಕಿಸಿದರು. ಸಿದ್ದ್ಯಾನ ಕೈಯಿಂದ ಕೊಡಲಿ ತಕ್ಕೊಂಡು ಕಟ್ಟಿಗೆ ಒಡೆಯತೊಡಗಿದರು. ಐದೂ ಬೆರಳಲ್ಲಿ ವಜ್ರದ ಹರಳಿನ ಬಂಗಾರದ ಉಂಗುರಗಳನ್ನು ಹಾಕಿಕೊಂಡ ಮಾನಾಜೀರಾವ್ ಪಾಟೀಲರು ಕಟ್ಟಿಗೆ ಒಡೆಯತೊಡಗಿದರು. ಚಿಕ್ಕಮ್ಮ ಅಳಲಾರಂಭಿಸಿದರು. ಉಳಿದವರೂ ಏನಾಗುವದೋ ಎಂದು ಗಾಬರಿಯಾದರು. ವಾಡೆಯ ಹತ್ತಿರ ಊರ ಜನ ಗುಂಪುಗುಂಪಾಗಿ ಕೂಡತೊಡಗಿದರು. ಶ್ರೀಮಂತ, ಕುಲವಂತ, ಗೌರವಸ್ಥ ಗೌಡರು ಹಾರುವರ ಬಾಗಿಲಲ್ಲಿ ಕಟ್ಟಿಗೆ ಒಡೆಯುವದನ್ನು ಕಂಡು ಎಲ್ಲರೂ ದಿಗಿಲ್ಗೊಂಡಿದ್ದರು.

ಮೂರು ಗಂಟೆಯೊಳಗೆ ಎಲ್ಲ ಕಟ್ಟಿಗೆ ಒಡೆದು ಹಾಕಿದರು ಗೌಡರು. ಪೂಜೆಯ ನೀರನ್ನು ತುಲಸಿ ಕಟ್ಟೆಯಲ್ಲಿ ಚೆಲ್ಲಲಿಕ್ಕೆ ಬಂದಿದ್ದ ಅಜ್ಜ ನೋಡಿ ಚಕಿತರಾದರು. ಬೆವರೊರಿಸುತ್ತ ನಿಂತ ಗೌಡ-ರನ್ನು ಕಂಡು ಅಜ್ಜ ಮಡಿಯುಟ್ಟವರು ಹಾಗೇ ಕಟ್ಟೀ ಇಳಿದು ಗೌಡರ ಹತ್ತಿರ ಹೋಗಿ ಅವರನ್ನು ಆಲಿಂಗಿಸಿ ಹೆಮ್ಮೆಯಿಂದ ಹೇಳಿ-ದರು:

"ಗೌಡರೇ, ನಿಮ್ಮನ್ನು ಹೆತ್ತ ತಾಯಿ ಧನ್ಯಳು. ಮಾತಿನಂತೆ ನಡೆದಿರಿ ನೀವು. ನಮ್ಮಂತೇ ನೀವೂ ದೊಡ್ಡ ಮನೆತನದವರು. ಇನ್ನು ನಿಮ್ಮನ್ನು ತಡೆಯುವುದಿಲ್ಲ. ನಿಮ್ಮ ಮಗಳನ್ನು ಕರೆದುಕೊಂಡು ಹೋಗಿರಿ." ಆಮೇಲೆ ಗೌಡರನ್ನು ಕೈ-ಹಿಡಿದು ಒಳಗೆ ಕರೆತಂದು ಕೂಡ್ರಿಸಿದರು. ಬಾಸುಂದಿ, ಪುರಿ, ಶಾಕಪಾಕಾದಿಗಳ ಸಂಭ್ರಮ-ವೇ ಸಂಭ್ರಮ ನಡೆಯಿತು. ಬೆಳ್ಳೀ ತಾಟುಗಳನ್ನು ಹಾಕಿಸಿದರು. ರಂಗೋಲಿ ಹಾಕಿಸಿದರು. ಊದಿನ ಕಡ್ಡಿ ಹಚ್ಚಿ ಇಟ್ಟರು. ಊರೊಳಗಿನ ೧೫-೨೦ ಪ್ರತಿಷ್ಠಿತ ಜನರನ್ನೂ ಪಂಕ್ತಿಗೆ ಕರೆದರು. ಒತ್ತಾಯದಿಂದ, ಆಣೆಹಾಕಿ, ಆಗ್ರಹದಿಂದ ಗೌಡರಿಗೆ ಊಟ ಬಡಿಸಿದರು ಅಜ್ಜನವರು.

ಬಿಸಿಲು ತಿರುಗಿದ ಮೇಲೆ ಸಿಂಗರಿಸಲ್ಪಟ್ಟ ಸವಾರಿ ಗಾಡಿಯಲ್ಲಿ ಕೂತು ಮಾನಾಜೀರಾವ ಪಾಟೀಲರೂ ಚಿಕ್ಕಮ್ಮನವರೂ ತವರೂರ ದಾರಿ ಹಿಡಿದರು!

*



‘ಸ್ಟ್ರಾಂಗ್‌ಲಿಂಗ್ ಫಿಗ್ ಟ್ರೀ’ ಎಂಬ ಹೆಸರಿನ ಗಿಡವಿದೆ. ಬಳ್ಳಿಯಂತಿರುವ ಈ ಗಿಡ ಎಂಥ ಬಲವಾದ ಮರವನ್ನೇ ಸುತ್ತಿಕೊಳ್ಳಲಿ, ಸಾವಕಾಶವಾಗಿ ಆ ಗಿಡದ ಜೀವವನ್ನೇ ಹೀರಿಬಿಡುತ್ತದೆ.

ಎಂಥೆಂಥ ಚಮತ್ಕಾರದ ಗಿಡಗಳಿವೆ ಬಲ್ಲಿರಾ?

ಸಸ್ಯಲೋಕದ ವಿಚಿತ್ರ

ಕ್ಯಾಪ್ಟನ್ ಎಂ. ಜಿ. ಕೆ. ಮೂರ್ತಿ

ಸಾಮಾನ್ಯವಾಗಿ ಸಸ್ಯಲೋಕದಲ್ಲಿಲ್ಲದ ಕೆಲ ವಿಲಕ್ಷಣ ಸ್ವಭಾವಗಳನ್ನು ಕೆಲವು ಗಿಡಗಳು ಹೊಂದಿವೆ. ಸಸ್ಯಗಳು ಸಂಪೂರ್ಣವಾಗಿ ಶಾಕಾಹಾರಿಗಳು ಮತ್ತು ಅವುಗಳ ಜೀವನಶಕ್ತಿಗೆ ಮಾಂಸಾಹಾರದ ಅವಶ್ಯಕತೆಯೇ ಇಲ್ಲವೆಂಬ ಭಾವನೆಯು ಲೋಕಮಾನ್ಯವಾಗಿದ್ದಾಗ್ಯೂ ಸೃಷ್ಟಿಯಲ್ಲಿ ಕೆಲವು ಮಾಂಸಭಕ್ಷಣೆಯ ಗಿಡಗಳೂ ಇವೆ. ಇವು ಹುಳಗಳನ್ನು ಹಿಡಿದು ತಿಂದು ಜೀವಿಸುತ್ತವೆ. ಸನ್‌ಡ್ಯೂ ಎಂಬ ಗಿಡಕ್ಕೆ, ನೊಣಗಳು ಅಂಟಿಕೊಳ್ಳುವ ಕಾಗದದಂತೆ ಜಿಗುಟಾದ ಎಲೆಗಳಿರುವುದರಿಂದ, ಅವುಗಳ ಮೇಲೆ ಕೂಡುವ ಹುಳಗಳು ಅಂಟಿಕೊಂಡು ಬೋನಿನೊಳಗೆ ಬಿದ್ದಂತೆ ಸಿಕ್ಕಿಬೀಳುತ್ತವೆ. ಗಿಡವು ತನ್ನ ಎಲೆಗಳಿಂದ ಆ ಪ್ರಾಣಿಗಳನ್ನು ಸುರುಳಿಸುತ್ತಿ ಅವುಗಳನ್ನು ಹೀರಿ ಶೋಷಿಸುತ್ತದೆ. ಬ್ಲಾಡರ್ ವಾರ್ಟ್ ಎಂಬ ಗಿಡವು ಇಲಿಯ ಬೋನಿನಂಥ ಬಲು ಚಾತುರ್ಯದ ಹಂಚಿಕೆಯನ್ನು ಹೊಂದಿ, ತಂತ್ರ ಮತ್ತು ಕೃತ್ರಿಮದಿಂದ ಹುಳಗಳನ್ನು ಹಿಡಿಯಬಲ್ಲದು. ಆ ಗಿಡದ ಬೇರುಗಳಲ್ಲಿರುವ ಹೂಜಿಯ ಆಕಾರದ ತೆಳು ಚೀಲಗಳಲ್ಲಿ ಹುಳಗಳು ಸಿಕ್ಕಿಬಿದ್ದು, ಗಿಡವು ಅವುಗಳನ್ನು ಜೀರ್ಣಿಸಿಕೊಂಡು ಪುಷ್ಟಿ ಪಡೆಯುತ್ತದೆ. ಈ ಗಿಡವು ವರ್ಷದ ಅಧಿಕಾಧಿಕ ಕಾಲವೆಲ್ಲಾ ನೀರಿನೊಳಗೇ ಜೀವಿಸಿದ್ದರೂ ಹೂವಾಗಿ ವಿಕಸಿಸುವ ಋತುವಿನಲ್ಲಿ ಚೀಲಗಳಿಗೆ ಗಾಳಿ ತುಂಬಿಕೊಂಡು ಸಸಿಯು ಮೇಲೆದ್ದು, ಗಾಳಿ ತುಂಬಿದ ಚೀಲಗಳು ಹೂಗಳನ್ನು ನೀರಿನ ಮೇಲೆ ತೇಲಿಸುತ್ತವೆ. ಜೀವಂತ ಹುಳಗಳು ಅಲ್ಲಿಗೆ ಆಕರ್ಷಿಸಲ್ಪಟ್ಟು, ಅವುಗಳನ್ನು ಸಂತಾನಕಾರಕವಾಗಿ ಮಾಡುತ್ತವೆ. ಹೂಜಿಗಿಡದ ಎಲೆಗಳು ಹೂಜಿಯ ತಳದಲ್ಲಿ ಮುಳುಗಿ ಬಿದ್ದ ಹುಳಗಳನ್ನು ಜೀರ್ಣಿಸಿ, ಯವಕ್ಷಾರಜನಕವನ್ನು ತಮ್ಮ ಆರೈಕೆಗೆ ಪ್ರಯೋಗಿಸುತ್ತವೆ. ಬರ್ಡ್ಸ್‌ನೆಸ್ಟ್ ಆರ್ಚಿಡ್ ಎಂಬ ಗಿಡವು ಮತ್ತೊಂದು ಜಾತಿ ಗಿಡದ ಬೇರನ್ನು ತಿಂದು ಜೀವಿಸುತ್ತದೆ.

ಕೆಲವು ಪರೋಪಜೀವಿ ಗಿಡಗಳ ವಿಶೇಷ ಗುಣ ಲಕ್ಷಣವೇನೆಂದರೆ, ಅವುಗಳ ಆಹಾರವನ್ನು ಪಣಿ ಮಾಡಲು ಅವಕ್ಕೆ ಎಲೆಗಳು ಅಗತ್ಯವಿಲ್ಲದ್ದ ರಿಂದ, ಆ ಗಿಡಗಳಲ್ಲಿ ಒಂದು ಎಲೆಯೂ ಹುಟ್ಟು ವದಿಲ್ಲ.

ಕೆಲವು ಗಿಡಗಳು ಇತರ ಗಿಡಗಳ ಮೇಲೆ ಏರಿಹೋಗಿ ಅವುಗಳ ಸಾರವನ್ನು ಕಿತ್ತು ತಿಂದು ಜೀವಿಸುತ್ತವೆ. ಅಂಥ ಗಿಡಗಳಿಗೆ ಬೇರಿಲ್ಲ; ಅವು ನೆಲವನ್ನು ಮುಟ್ಟುವುದಿಲ್ಲ. ಡೈ ಆಟಂ ಎಂಬ ಸೂಕ್ಷ್ಮ ಪರಿಮಾಣದ ಸಸ್ಯವು ಕೊಳ, ಹೊಯಿಲುಗಳ ನೀರಿನಲ್ಲಿ ಓಡಾಡುತ್ತದೆ; ಅದಕ್ಕೆ ಬೇರಿಲ್ಲ. ಅದು ಅತ್ಯಂತ ಫಲವತ್ತಾಗಿ, ಎರ ಡೆರಡು ದಿನಗಳಲ್ಲಿ ದ್ವಿಗುಣ ವೃದ್ಧಿಹೊಂದು ತ್ತದೆ. ಅಸಂಖ್ಯಾತವಾದ ಈ ಸಸ್ಯವೂ ಇತರ ಕೆಲವು ಸಸ್ಯಗಳೂ ಸಮುದ್ರದ ನೀರಿನಲ್ಲಿ ಯಥೇ-ಚ್ಛವಾಗಿ ವರ್ಧಿಸಿ, ತೂಗಾಡುವ ಉದ್ಯಾನ ವನದಂತೆ ಅತಿ ರಮ್ಯದೃಶ್ಯವನ್ನು ಬೀರುತ್ತವೆ. ಇವುಗಳೊಂದಕ್ಕೂ ಬೇರಿಲ್ಲ.

ವಿಕ್ಟೋರಿಯಾ ರೆಗಿನ್ ಎಂಬ ತಾವರೆಗಿಡವು ನಾಲ್ಕು ಅಡಿ ಅಗಲದ ಎಲೆಗಳನ್ನು ಬಿಡುತ್ತದೆ. ಕೆಲವು ಒಬ್ಬ ಮನುಷ್ಯನ ಭಾರವನ್ನು ಹೊರು ವಷ್ಟು ಬಲವಾಗಿವೆ. ಈ ಗಿಡದ ಹೂವು ಅರಳು ವುದು ರಾತ್ರಿಯಲ್ಲಿ ಮಾತ್ರ. "ಡಕ್‌ವೀಡ್ಸ್" ಎಂಬ ಸಸ್ಯವು ಎಷ್ಟು ಚಿಕ್ಕದೆಂದರೆ, ಅದರ ಎಪ್ಪತ್ತುಲಕ್ಷ ಸಂಖ್ಯೆಗಳನ್ನು ಒಂದರ ಪಕ್ಕದ ಲ್ಲೊಂದಾಗಿ ವಿಕ್ಟೋರಿಯಾ ರೆಗಿನಾದ ಒಂದು ಎಲೆಯ ಮೇಲೆ ಇಡಬಹುದು. ಆಂಡೀಸ್ ಪರ್ವತದಲ್ಲಿ ಬೆಳೆಯುವ "ಕಂಬಳಿ ಮರಗಳು" ಅತ್ಯಾಶ್ಚರ್ಯಕರವಾಗಿವೆ. ಅವುಗಳ ತೊಗಟೆ ನಿಂದ, ಉಣ್ಣೆಯ ಕಂಬಳಿಗಳಂತೆ ಮೃದುವಾ ಗಿಯೂ ನಯವಾಗಿಯೂ ಇರುವ ಅತಿರಮ್ಯ ಕಂಬಳಿಗಳನ್ನು ಸುಲಭವಾಗಿ ತಯಾರುಮಾಡ ಬಹುದು. ತೊಗಟೆನ ಒಳಭಾಗದ ತಂತುಗಳನ್ನು ಪ್ರಕೃತಿಯು ಎಷ್ಟು ಸೂಕ್ಷ್ಮವಾಗಿ ಜೋಡಿಸಿದೆ ಯೆಂದರೆ, ಆ ಕಂಬಳಿಗಳನ್ನು ಮಡಚಿಡಬಹುದು.

"ಚಿಮ್ಮುವ ಸೌತೇಬಳ್ಳಿ"ಯು ತನ್ನ ಬೀಜಗಳನ್ನು ಶ್ರೇಣಿ ಪರಂಪರೆಯಲ್ಲಿ ಕಾರಂಜಿ ಬುಗ್ಗೆಯ ನೀರಿನ ಹಾರುವಿಕೆಯಂತೆ ಎತ್ತರಕ್ಕೆ ಜಗಿಸು ತ್ತದೆ. ಗಸಗಸೆ ಗಿಡವು ಒಂದು ಚದುರಡಿ ಭೂ ಮಿಯ ಮೇಲೆ ೬,೦೦೦ ಕ್ಕಿಂತಲೂ ಹೆಚ್ಚಾದಷ್ಟು ಬೀಜಗಳನ್ನು ಉದುರಿಸುತ್ತದೆ; ಅವೆಲ್ಲಾ ಒಂದೇ ಕಾಲದಲ್ಲಿ ಮೊಳೆಯುತ್ತವೆ. "ಸನ್‌ರೋಸ್" ಎಂಬ ಗಿಡವು ತನ್ನ ಬಿತ್ತಗಳನ್ನೆಲ್ಲಾ ಒಂದೇ ಕಾಲದಲ್ಲಿ ಸುರಿಯುತ್ತಿದೆ. ಬೇಸ್‌ಬರ್ಕ್ ಬೇರೆ ಬೇರೆ ಅಳತೆಗೆ ಸರಿಯಾಗಿ ತಯಾರಾದ ಗೋ-ಟನ್ನು ಉತ್ಪನ್ನ ಮಾಡುತ್ತದೆ. ಈ ಗಿಡದ ತೊಗ ಟೆಯನ್ನು ತೆಗೆದರೆ ಕಾರ್ಖಾನೆಯಲ್ಲಿ ಪ್ರಯತ್ನ ಪೂರ್ವಕವಾಗಿ ತಯಾರಾದ ಗೋಟಿನಂತೆ ಒತ್ತ ಟ್ಟಿಗೆ ನೆಯ್ದ ಗೋಟಿನ ತಂತುಗಳು ಸ್ವಾಭಾವಿಕ ವಾಗಿ ಕಂಡುಬರುತ್ತವೆ. ಇಂಗ್ಲಂಡ್ ದೇಶದ ರಾಜನಾಗಿದ್ದ ದ್ವಿತೀಯ ಚಾರ್ಲ್‌ಸ್ ಎಂಬು ವವನಿಗೆ ಜಮೇಯಿಕಾ ದೇಶದ ಸರ್ಕಾರವು ಸ್ವಭಾವಸಿದ್ಧವಾದ ಈ ಲೇಸ್‌ನ ತೊಡಿಗೆಗಳನ್ನು ಉಡುಗರೆಯಾಗಿ ಕೊಟ್ಟಿತ್ತು.

"ಕಂಪಾಸು ಗಿಡ"ಕ್ಕೆ ಒಂದು ವಿಶೇಷ ಗುಣ ವಿದೆ. ಮೇರೆಗಳೇ ಕಾಣದ ಸಮುದ್ರಮಧ್ಯದಲ್ಲಿ ದಿಕ್ಕು ತಿಳಿಯಲು ನಾವಿಕರು ಉಪಯೋಗಿಸುವ ಅಯಸ್ಕಾಂತ ಸೂಜಿಯು ಸದಾ ಕಾಲವೂ ಉತ್ತರ-ದಕ್ಷಿಣ ದಿಕ್ಕುಗಳನ್ನೇ ತೋರಿಸುವಂತೆ ಈ ಗಿಡದ ಎಲೆಗಳೂ ಕೊಂಬೆಗಳೂ ಸದಾ ಉತ್ತರ ಮುಖವನ್ನೇ ತೋರಿಸುತ್ತವೆ. ಈ ಕಾರಣ ದಿಂದ "ಕಂಪಾಸುಗಿಡ"ವೆಂಬ ಅನ್ವರ್ಥ ನಾಮವು ಬಂದಿದೆ. "ಸಂಗೀತದ ಗಿಡಗಳು" ನಾನಾ ಬಗೆಯ ಉಚ್ಚ ಸ್ವರದ ನಾದಗಳನ್ನು ಹಾಡುತ್ತವೆ. ವೆಸ್ಟ್ ಇಂಡೀಸ್ ಮತ್ತು ಬಾರ್ಬಡಾಸ್ ಪ್ರಾಂತದಲ್ಲಿರುವ ಗಿಡಗಳ ವಿಜಾತೀಯ ಆಕಾ ರದ ಎಲೆಗಳ ಮೇಲೆ ಗಾಳಿ ಬೀಸಿದಾಗ ಎಡಬಿ ಡದೆ ಎತ್ತರ ಮಟ್ಟದ ಸಿಳ್ಳು ಧ್ವನಿಯು ಕೇಳಿಸು ತ್ತದೆ. ಒಂದು ಜಾತಿ ಜಾಲಿ ಗಿಡದ ಚಿಗುರು ಗಳನ್ನು ಕ್ರಿಮಿಗಳು ಕಚ್ಚಿ, ಆ ಚಿಗುರುಗಳು

ಉಬ್ಬಿ, ಗೋಲಾಕಾರದ ಚೀಲಗಳಂತೆ ರೂಪಾಂತರವನ್ನು ಹೊಂದಿ ಹುಳಗಳು ರಂಧ್ರಗಳನ್ನು ಕೊರೆದು ಹೊರಟನಂತರ ಆ ಚೀಲಗಳು ಗಾನ ವಾದ್ಯವಾಗಿ ಪರಿಣಮಿಸುತ್ತವೆ. ಆ ರಂಧ್ರಗಳಲ್ಲಿ ಗಾಳಿ ಬಂದಾಗ ಕೊಳಲಿನ ನಾದಕ್ಕೆ ಸಮನಾದ ಸ್ವರವು ಉತ್ಪತ್ತಿಯಾಗುತ್ತದೆ.

"ಟೆಲಿಗ್ರಾಫ್" ಗಿಡದ ಎಲೆಗಳು ದೃಷ್ಟಾರ್ಥವಾದ ಯಾವ ಕಾರಣವೂ ಇಲ್ಲದೆ ಆಶ್ಚರ್ಯಕಾರಕ ರೀತಿಗಳಲ್ಲಿ ಅಲುಗಾಡುತ್ತವೆ. ಬಲವಾದ ಬೆಳಕು ಬಿದ್ದಾಗ ಈ ಎಲೆಗಳು ಇದ್ದಕ್ಕಿದ್ದಹಾಗೆ ಮೇಲಕ್ಕೂ ಕೆಳಕ್ಕೂ ಪಕ್ಕದಿಂದ ಪಕ್ಕಕ್ಕೂ ಚಲಿಸುತ್ತಾ, ಅಂಡಾಕಾರದ ಗಮನದಲ್ಲಿ ಶ್ರೇಣಿ ಪರಂಪರೆಯಲ್ಲಿ ಸುತ್ತುತ್ತಲೇ ಇರುತ್ತವೆ. ಎರಡು ಮೂರು ನಿಮಿಷ ಈ ರೀತಿ ಚಲಿಸಿ, ಸ್ವಲ್ಪ ಕಾಲ ನಿಂತು, ಪುನಃ ಹಾಗೆಯೇ ಸುತ್ತುತ್ತಾ ಹೋಗುತ್ತವೆ. ಈ ಚಲನೆಗಳು ಟೆಲಿಗ್ರಾಫ್ ಯಂತ್ರದ ಸೂಜಿಯ ಚಲನೆಗಳನ್ನು ಹೋಲುವುದರಿಂದ ಈ ಗಿಡಗಳಿಗೆ "ಟೆಲಿಗ್ರಾಫ್ ಗಿಡ"ವೆಂಬ ಅನ್ವರ್ಥ ನಾಮವು ಲೋಕಮಾನ್ಯವಾಗಿ ಬಂದಿದೆ. ರಾತ್ರಿಯಲ್ಲಿ ಈ ಎಲೆಗಳ ಅಲುಗಾಟವು ಸಂಪೂರ್ಣವಾಗಿ ನಿಂತು ಹೋಗಿ, ಗಿಡವು ತನ್ನ ಎಲೆಗಳನ್ನೆಲ್ಲಾ ಒಟ್ಟಿಗೆ ಸೇರಿಸಿಕೊಂಡು ನಿದ್ರಿಸುತ್ತದೆ. ಅಂತ್ಯದ ಎಲೆಗಳು ಮಾಲದೆ ನೆಟ್ಟಗೆ ನಿಂತಿರುತ್ತವೆ. ಮತ್ತೊಂದು ಜಾತಿಯ ಗಿಡದ ಎಲೆಗಳು ಅನೇಕ ಗಂಟೆಗಳು ಸಿಡುಕಿನಿಂದ ಚಲಿಸುತ್ತಾ, ಚಲನೆಯು ನಿಂತು, ಪುನಃ ಅನೇಕ ಗಂಟೆಗಳ ಕಾಲ ಹಿಡಿಯುತ್ತಾ ಚಲಿಸುತ್ತವೆ. ಇದಕ್ಕೆ ಕಾರಣವೇನೆಂಬ ಪ್ರಶ್ನೆಗೆ ಈವರೆಗೂ ಸರಿಯಾದ ಉತ್ತರವಿಲ್ಲ—ನಿಸರ್ಗದ ಲೀಲೆ.

ಕೆಲವು ಗಿಡಗಳಿಗೆ ಅತ್ಯಲ್ಪ ಸ್ಪರ್ಶ ತಾಕಿದರೂ ಅವುಗಳ ಎಲೆಗಳೆಲ್ಲಾ ಮುಚ್ಚಿ ಹೋಗಿ ಕಾಂಡವೂ ಸೊರಗಿ ಬೀಳುತ್ತದೆ. ಕೆಲವು ಸಸ್ಯಗಳು ಬೆಳೆಯುವ ಪ್ರವೃತ್ತಿಯಲ್ಲಿ ಅಸಾಧಾರಣ ಬಲವನ್ನು ಪ್ರದರ್ಶಿಸುತ್ತವೆ. "ಕೋಲ್ಟ್ಸ್‌ಫುಟ್" ಗಿಡವು ಕಲ್ಲರಗಿನ ನೆಲಮಚ್ಚನ್ನೂ



ಗಿಡಗಂಟಿಯಂತೆ ಕಾಣುವ ಈ ಜಾತಿಯ ಗಿಡಗಳು ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತವೆ. ಇವುಗಳ ಮೂಲಕ ನೀರಡಿಸಿ ಸಾಯುವ ಸ್ಥಿತಿಗೆ ಮುಟ್ಟಿದ ಎಷ್ಟೋ ಜನ ಬದುಕಿಕೊಂಡಿದ್ದಾರೆ.

ಭೇದಿಸಿಕೊಂಡು ಹೊರಹೊರಡುತ್ತದೆ. ಆಳಿಂಬೆಯು ಗಟ್ಟಿಯಾದ ಟೆನಿಸ್ ಆವರಣಗಳನ್ನೂ ಇರಿದು, ತನ್ನ ಮಾರ್ಗವನ್ನು ಸುರಂಗದಂತೆ ಕೊರೆದು, ಮೇಲಕ್ಕೇಳುತ್ತದೆ. "ಡ್ಯಾಫೊಡಿಲ್" ಸಸ್ಯದ ಎಳೇ ಚಿಗುರಿನ ತುದಿಯು ಬರ್ಚಿಯ ಕೊನೆಯಂತೆ ಮೊನೆಯಾಗಿ, ಬಹು ಕಠಿಣ ಭೂಮಿಯನ್ನು ಭೇದಿಸಿ ತೂರಿಕೊಂಡು ಹಬ್ಬುತ್ತದೆ. ಕೆಲವು ಗಿಡಗಳೂ ಅವುಗಳ ಎಲೆಗಳೂ ಕಲ್ಲಿನಂತೆ ಕಾಣುತ್ತವೆ. ಮನುಷ್ಯನ ರಕ್ತನಾಳದಲ್ಲಿ ರಕ್ತದ ಗಡ್ಡೆಯು ಸಿಕ್ಕಿಕೊಂಡರೆ ಹೃದಯ ವೇದನೆಯೂ ಪಾರ್ಶ್ವವಾಯುವೂ ಸಂಭವಿಸುವಂತೆ, ಕೆಲವು ಗಿಡಗಳ ನಾಳಗಳಲ್ಲಿ ಒಂದು ಬಗೆ ಗಡ್ಡೆ ಸಿಕ್ಕಿ ಅವುಗಳಿಗೂ "ಹೃದಯವೇದನೆ," "ಪಾರ್ಶ್ವವಾಯುವು" ಬರುತ್ತವೆ. ಕೆಲವು ಗಿಡಗಳಲ್ಲಿ ಅಪಾಯಕರವಾದ ನಂಜಿನ ಎಣ್ಣೆಯು ನೆಲೆಸಿರುತ್ತದೆ. ಅದು ಮನುಷ್ಯರ ಬಟ್ಟೆಗಾಗಲೀ, ಚರ್ಮಕ್ಕಾಗಲೀ ತಗಲಿದರೆ ಬಹು ತೊಂದರೆಯಾಗುತ್ತದೆ. ಐವಿ ಎಂಬ ಲತೆಯ ಮೇಲೆ ಯಾರಾ

ದರೂ ನಡೆದು ಹೋಗಿ, ನಂತರ ಜೋಡುಗಳನ್ನು ತೆಗೆದಿಟ್ಟರೂ ಆ ಲತೆಯ ವಿಷವು ಅಂಟುತ್ತದೆ. ಆ ಲತೆಯು ಬೆಂಕಿ ಹತ್ತಿ ಉರಿದರೂ ಅದರ ಹೊಗೆಯಲ್ಲಿ ಉಗ್ರವಾದ ನವೆ, ದದ್ದುಗಳನ್ನುಂಟುಮಾಡುವಷ್ಟು ವಿಷವಿದೆ. ದೊಡ್ಡ ಪ್ರಾಣಿಗಳನ್ನು ಕೊಲ್ಲತಕ್ಕ ಈ ವಿಷದ ಎಲೆಗಳು, ಬಹು ಪುಟ್ಟ ಪ್ರಾಣಿಗಳನ್ನು ಕೊಲ್ಲದೆ ಅವಕ್ಕೆ ಪೋಷಿತ ಆಹಾರವಾಗಿವೆ. ಎಂಥ ಆಶ್ಚರ್ಯ! ಮತ್ತೊಂದು ವಿಶೇಷವೇನೆಂದರೆ ಮನುಷ್ಯನಿಗೆ ವಿಷವಲ್ಲದ ಅನೇಕ ಗಿಡಗಳನ್ನು ಇತರ ಪ್ರಾಣಿಗಳು ವರ್ಜಿಸುತ್ತವೆ.

ಕೆಲವು ವೃಕ್ಷಗಳು ಯಾವ ಪ್ರಾಣಿಗಿಂತಲೂ ಬಹು ದೀರ್ಘ ಕಾಲ ಜೀವಿಸುತ್ತವೆ. ಒಂದು ಪುರಾತನ ಮರದ ನೆರಳಿನಲ್ಲಿ ೨೦೦೦ ವರ್ಷಗಳ ಹಿಂದೆ ಹಿಪ್ಪೊಕ್ರೇಟ್ಸ್ ಎಂಬ ಪ್ರಸಿದ್ಧ ವೈದ್ಯ ಶಾಸ್ತ್ರಜ್ಞನು ತನ್ನ ಶಿಷ್ಯರಿಗೆ ಬೋಧಿಸುತ್ತಿದ್ದನು. ಆ ಮರವು ಇನ್ನೂ ಜೀವಂತವಾಗಿದೆ. ಅದಕ್ಕಿಂತಲೂ ೪೦೦ ವರ್ಷಗಳ ಹಿಂದೆ ಆ ಮರವು ಹುಟ್ಟಿತೆಂದು ಐತಿಹ್ಯವು ಹೇಳುತ್ತದೆ. ಆ ಮರದ ಸುತ್ತಳತೆ ೩೦ ಅಡಿ. ಕ್ಯಾಲಿಫೋರ್ನಿಯಾ ರಾಷ್ಟ್ರದಲ್ಲಿರುವ ಜಾಯಿಂಟ್ ಸಿಕ್ವಾಯ್ಡ್ ಎಂಬ ಮರಗಳು ಸಮಾರು ೪,೦೦೦ ವರ್ಷ ಜೀವಿಸುತ್ತವೆ. ಅವುಗಳ ಎತ್ತರ ೨೭೫ ಅಡಿ, ಅಡ್ಡಳತೆ ೨೫ ಅಡಿ. ಕೆಲವು ಮರಗಳು ಎತ್ತರದಲ್ಲಿ ೩೫೦-೪೦೦ ಅಡಿಗಳೂ ಸುತ್ತಳತೆಯಲ್ಲಿ ೯೬ ಅಡಿಗಳೂ ಇವೆ. ಇವುಗಳಲ್ಲಿ ಒಂದು ಮರದ ಮುಖ್ಯ ಭಾಗವನ್ನೆಲ್ಲಾ ಕತ್ತರಿಸಿದ ನಂತರ ಭೂಮಿಯಲ್ಲಿ ಉಳಿದ ಮರದ ಕೊರಡನ್ನು ನೃತ್ಯದ ಗದ್ದಿಗೆಯಾಗಿ ರೂಪಾಂತರಿಸಲು, ಅದು ೪೦ ಕ್ಕಿಂತಲೂ ಹೆಚ್ಚು ಮಂದಿ ಜನರನ್ನು ಒಳಗೊಳ್ಳಬಲ್ಲದು! ಬ್ರಿಟಿಷ್ ಕೋಲಂಬಿಯಾ ದೇಶದ ದೇವದಾರು ಮರಗಳು ೨೫೦-೩೦೦ ಅಡಿ ಎತ್ತರ ಬೆಳೆಯುತ್ತವೆ. ಈ ಮರದ ಮುಂಡದೊಳಗೆ ಒಂದು ದೊಡ್ಡ ಮಂಡಲಿಯು ಔತನದ ಊಟಕ್ಕೆ ನೆರೆಯಲು ಸಾಧ್ಯ. ಒಂದು ಜಾತಿ ಕ್‌ಓವ: ರವು ೧,೫೦೦ ವರ್ಷ ಬದುಕಬಲ್ಲದು.

ಕೆಲವು ಗಿಡಗಳಿಗೂ ಅವುಗಳಲ್ಲಿ ನೆಲಸಿರುವ ಪ್ರಾಣಿಗಳಿಗೂ ಒಂದು ಬಗೆ ವಿಜಾತೀಯ ಸ್ನೇಹ ಪ್ರವೃತ್ತಿಯಿದೆ. ಅವುಗಳಿಗಿರುವ ಪರಸ್ಪರ ಮೈತ್ರಿ, ಪರಸ್ಪರ ಸಹಕಾರ, ಅವಿಚ್ಛಿನ್ನ ಹೊಂದಿಕೆಯು ಎಷ್ಟರಮಟ್ಟಿನವೆಂದರೆ, ಒಂದರ ಜೀವವು ಮತ್ತೊಂದರ ಜೀವನವನ್ನಲಂಬಿಸಿ, ಅವೆರಡೂ ಜೀವಗಳೂ ಐಕ್ಯವಾಗಿ, ಇದೆಂತಹ ವಿಚಿತ್ರ ಗೆಳೆತನವೋ ಎಂದು ಬೆರಗು ಮಾಡುತ್ತವೆ. ಬೋರ್ನಿಯೊ ದೇಶದ ಒಂದು ಜಾತಿ ಗಿಡದಲ್ಲಿ ಯಾವಾಗಲೂ ಒಂದು ಬಗೆಯ ಕ್ರೂರ ಸ್ವಭಾವದ ಇರುವೆ ಹಿಂಡುಗಳು ನೆಲಸಿರುತ್ತವೆ. ಇರುವೆ ಆ ಗಿಡದೊಳಗೆ ಬಾರದಿದ್ದರೆ, ಎಳೆತನದಲ್ಲಿಯೇ ಗಿಡದ ಬೆಳವಣಿಗೆಯು ಸಂಪೂರ್ಣವಾಗಿ ನಿಂತು ಹೋಗಿ, ಸಸ್ಯವು ನಾಶವಾಗುತ್ತದೆ. ಇರುವೆಗಳ ಸ್ತೋಮವು ಅಡಿಮರದಲ್ಲಿ ರಂಧ್ರವನ್ನು ಕೊರೆದು ವೆಜ್ಜ ವೆಜ್ಜದ ಕೋಣೆಗಳನ್ನು ರಚಿಸಿ, ಅಲ್ಲಿ ವಸತಿ ಮಾಡುತ್ತವೆ. ಇರುವೆಗಳು ಗಿಡವನ್ನು ಕಚ್ಚಿದಾಗ ಒಂದು ಬಗೆ ವಿಷಪದಾರ್ಥವು ಉತ್ಪತ್ತಿಸಿ, ಅದು ಗಿಡದ ವೃದ್ಧಿಗೆ ಅವಶ್ಯಕವಾದ ವೆಜ್ಜ ವೆಜ್ಜದ ಬಲೆಯಂತಿರುವ ರಚನೆಯನ್ನು ನಿರ್ಮಿಸುತ್ತದೆ. ಪಕ್ಷಿ, ಹುಳ, ಇತರ ಪ್ರಾಣಿಗಳು ಆ ಗಿಡದ ಗೋಜಿಗೆ ಬಂದಕೂಡಲೆ, ಇರುವೆಗಳು ಗೂಡಿನಿಂದ ಹೊರಹೊರಟು, ಪ್ರಾಣಿಗಳನ್ನು ಅಟ್ಟಿ ಗಿಡವನ್ನು ರಕ್ಷಿಸ ತ್ತವೆ. ಇರುವೆಗೆ ಗಿಡದ ಆಶ್ರಯ, ಗಿಡಕ್ಕೆ ಇರುವೆಯಿಂದ ರಕ್ಷಣೆ—ಈ ಪರಸ್ಪರ ಪ್ರಯೋಜನಗಳೇ ಅವುಗಳ ಗೆಳೆತನಕ್ಕೆ ಮೂಲ ತತ್ವ. ಅಮೇರಿಕಾ ದೇಶದಲ್ಲಿ ಜಾಲೀಗಿಡದ ಮುಳ್ಳುಗಳೊಳಗೆ ಒಂದು ಬಗೆ ಇರುವೆಗಳು ವಾಸಿಸುತ್ತವೆ. ಗಿಡದ ಹಣ್ಣುಗಳು ಇರುವೆಗಳ ಆಹಾರ. ಈ ಹಣ್ಣುಗಳು ಒಂದೇಸಾರಿ ಪಕ್ವವಾಗದೆ, ಕಾಲಾವಧಿಯಲ್ಲಿ ಒಂದೊಂದಾಗಿ ಪಕ್ವವಾಗುವದರಿಂದ, ಇರುವೆಗಳು ಅವುಗಳನ್ನೇ ಕಾಯುತ್ತಾ ಎಲೆಗಳಿಗೆ ಕಾವಲಾಗಿ, ಶತ್ರುಗಳನ್ನು ಓಡಿಸುತ್ತವೆ.

ಫ್ರಾನ್ಸ್ ದೇಶದಲ್ಲಿ ಬೆಳೆದಿರುವ "ಅವಳಿಜವಳಿ" ಗಿಡಗಳು ಸಸ್ಯಪ್ರಪಂಚದಲ್ಲಿ ಅಸಾಧಾರಣ ದೃಶ್ಯ. ಒಂದೇ ಶರೀರದಲ್ಲಿ ಎರಡು ಬೇರೆ ಬೇರೆ ಮರಗಳನ್ನುಳ್ಳ, ಪ್ರಕೃತಿವಿರುದ್ಧವಾದ, ಈ ನೋಟವು ಆಶ್ಚರ್ಯಾತೀತವಾಗಿದೆ. ಮೇಲಿನ ಮರವು ಕೆಳಗಿನ ಮರದ ಮೇಲೆ ಬೆಳೆದಿದೆ. ಕೆಳಗಿನ ಮರದ ಮುಂಡದ ಮೇಲೆ ಒಂದು ದೊಡ್ಡ ರಂಧ್ರವಾಗಿ, ಅದನ್ನು ಬಹಳ ವರ್ಷಕಾಲ ತೊಗಟೆ, ಒಡಕು ಕುಡಕುಗಳ ರಾಶಿಗಳು ತುಂಬಿ, ಅಲ್ಲಿ ಮತ್ತೊಂದು ಬೇರೆ ಜಾತಿಯ ಮರವು ಬೇರೂರಿ, ವೃದ್ಧಿಸಿ, ಭೂಮಿಯ ಮೇಲೆ ಬೆಳೆದಷ್ಟೇ ಪುಷ್ಟಿಯಾಗಿ ನಿಂತಿದೆ. ಕೆಳಗಿನ ಮರವೂ ಸಮೃದ್ಧಿಯಾಗಿದೆ. ಟೋಕಿಯೋ ನಗರದಲ್ಲಿ ಅತ್ಯಾಶ್ಚರ್ಯಕರವಾದ ಒಂದು ದೃಶ್ಯವಿದೆ. ಸ್ವಾಭಾವಿಕವಾಗಿ ೧೦-೧೫ ಅಡಿ ಎತ್ತರ ಬೆಳೆಯುವ ನಾನಾ ಜಾತಿಯ ಮರಗಳ ಬೀಜಗಳನ್ನು ಜಪಾನಿನಲ್ಲಿ ಪಿಂಗಾಣಿ ಪುಷ್ಪ ಕುಂಭಗಳಲ್ಲಿ ನೆಟ್ಟು, ಗಿಡವು ಮೇಲಕ್ಕೆ ಬೆಳೆಯುವುದನ್ನು ತಡೆಹಾಕಿ, ಅಡ್ಡವಾಗಿ, ಸಮಕಟ್ಟಾಗಿ, ಸುರಳಿಸುತ್ತಿ ಅಥವಾ ಅಧೋಮುಖವಾಗಿ ಬೆಳೆಯುವಂತೆ ಮಾಡಿರುವುದರಿಂದ ಗಿಡಗಳು ಬಹು ಗಿಡ್ಡಾಗಿ ಎರಡು ಅಡಿ ಅಥವಾ ಇನ್ನೂ ಕಡಮೆ ಎತ್ತರದಲ್ಲಿವೆ. ಹತ್ತು ವರ್ಷದ ಗಿಡವು ೧೨ ಅಂಗುಲ ಎತ್ತರವಿದೆ. ೪೦ ವರ್ಷ ವಯಸ್ಸಿನ ಗಿಡವು ೧೨ ಅಂಗುಲ ಎತ್ತರ. ಎಲ್ಲಕ್ಕಿಂತಲೂ ವೃದ್ಧವಾಗಿ, ೧೫೦-೨೦೦ ವರ್ಷಗಳ ದೇವದಾರು ಮರವು ಎರಡು ಅಡಿ ಮಾತ್ರ ಎತ್ತರವಿದೆ. ಬ್ರುಸೆಲ್ಸ್ ಪಟ್ಟಣದ ಒಂದು ದೊಡ್ಡ ರಸ್ತೆಯಲ್ಲಿ ಎರಡು ಪಕ್ಕಗಳಲ್ಲೂ ಚೆಸ್ಟ್‌ನಟ್ ಮರದ ಸಾಲುಗಳು ಬೆಳೆದಿವೆ. ಒಂದು ಪಕ್ಕದ ಸಮೀಪದಲ್ಲಿ ಟ್ರಾಂ-ಗಾಡಿಗಳು ಹೋಗುತ್ತವೆ. ಆ ಪಕ್ಕದಲ್ಲಿರುವ ಮರಗಳ ಎಲೆಗಳು ಆಗಸ್ಟ್ ತಿಂಗಳಿನಲ್ಲುದುರಿ ಹೋಗಿ, ಅಕ್ಟೋಬರ್‌ನಲ್ಲಿ ಪುನಃ ಮೊಳೆಯುಯುತ್ತವೆ. ಇನ್ನೊಂದು ಪಕ್ಕದ ಮರಗಳ ಎಲೆಗಳು ಡಿಸೆಂಬರ್‌ವರೆಗೂ ಇದ್ದು, ಮುಂದಿನ ವಸಂತ ಋತುವಿನಲ್ಲಿ ಮಾತ್ರ ಅರಳುತ್ತವೆ. ಟ್ರಾಂನ ವಿದ್ಯುತ್ ಪ್ರವಾಹವು ಭೂಮಿಯಿಂದ ದಾಟಿ, ಸಮೀಪದಲ್ಲಿರುವ ಮರಗಳ ಬೇರಿನ ಮೇಲೆ ಪ್ರಭಾವವನ್ನು ಬೀರುವುದೇ ಮರಗಳ ಉತ್ಕಟವರ್ತನೆಗೆ ಕಾರಣವೆಂದು ನಂಬಿಕೆ ಇದೆ*

ವಿವಾಹ ಎಂದರೇನು ?

ವಿವಾಹವು ಒಂದು ಲಾಟರಿ ಇದ್ದಂತೆ. ಅದರಲ್ಲಿ ಪುರುಷ ತನ್ನ ಸ್ವಾತಂತ್ರ್ಯವನ್ನು ಪಣಕ್ಕಿಟ್ಟರೆ ಸ್ತ್ರೀ ತನ್ನ ಪ್ರಸನ್ನತೆಯನ್ನು ಪಣವೊಡ್ಡುತ್ತಾಳೆ.

— ಫ್ರಾನ್ಸ್ ಗಾದೆ

ಕೇವಲ ಒಂದು ಘಂಟೆಯಲ್ಲಿ ಮುಗಿಯುವ ವಿವಾಹೋತ್ಸವವು ಜೀವನಪರ್ಯಂತ ಕಷ್ಟಕ್ಕೆ ಕಾರಣವಾಗುತ್ತದೆ.

—ಈಡಿಷ್ ಗಾದೆ

ಮೊದಲನೆಯ ಬಾರಿ ವಿವಾಹವಾಗುವುದು ಕರ್ತವ್ಯ, ಎರಡನೆಯ ಬಾರಿ ಆಗುವುದು ಮೂರ್ಖತನ, ಮೂರನೆಯ ಬಾರಿ ಆಗುವುದು ಹುಚ್ಚುತನ.

—ಡಚ್ ಗಾದೆ

—ಸಂಗ್ರಹ: ಎಚ್. ಎಲ್. ಅಮರನಾಥ

ಇದರಿಂದ ಜಗತ್ತಿನಲ್ಲಿಯು ವರ್ಣಕಲಹ ಇಲ್ಲದಂತಾದೀತು

ಮೈ ಬಣ್ಣ ಬದಲಾಯಿಸಲು ಸಾಧ್ಯವಿದೆ

ಬಿ. ಎಸ್. ನರಹರಿರಾವ್

ಸುಮಾರು ಒಂದು ವರ್ಷದ ಹಿಂದೆ ಕುತೂಹಲ ಹಾಗೂ ಕ್ರಾಂತಿಕಾರಕ ಸುದ್ದಿಯೊಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆಫ್ರಿಕಾ ಖಂಡದ ವೈದ್ಯರೊಬ್ಬರಿಗೆ ಪರಿಶೋಧನೆಯ ನೆರವಿನಿಂದ ನಿಗ್ರೋಗಳನ್ನು ಶ್ವೇತವರ್ಣೀಯರಾಗಿ ಮಾಡಲು ಸಾಧ್ಯವಾಗಿದೆಯೆಂಬ ಈ ಸೋಜಿಗದ ಸುದ್ದಿ ಇಂದ್ರಜಾಲ, ಮಹೇಂದ್ರಜಾಲದ ಕೈಚಳಕವಲ್ಲ. ಇದು ಕಟ್ಟು ಕಥೆಯೂ ಅಲ್ಲ. ವಿಜ್ಞಾನ ಈ ಬಗ್ಗೆ ಈಗಾಗಲೆ ಸಾಕಷ್ಟು ಮುಂದೆ ಸಾಗಿದೆ. ಪ್ರಾಯಶಃ, ಕೆಲವು ವರ್ಷಗಳ ನಂತರ ಇದು ಮತ್ತಷ್ಟು ಜನಪರಿಚಿತವಾಗಿ ವರ್ಣ ಕಲಹದ ಬೇರನ್ನೇ ನಿರ್ಮೂಲ ಮಾಡಲು ಮಾನವಜನಾಂಗಕ್ಕೆ ನೆರವು ನೀಡುವುದೋ ಏನೊ!

ಕಪ್ಪು ವರ್ಣದ ಮಾನವನೆಂದರೆ ಯಾರಿಗೂ ಆದರವಿಲ್ಲ; ಅಕ್ಕರೆಯಿಲ್ಲ. ಗುಣಕ್ಕಿಂತ ಸಾಮಾನ್ಯವಾಗಿ ವ್ಯಕ್ತಿಯ ವರ್ಣಕ್ಕೆ ನಮ್ಮಲ್ಲಿ ಇಂದು ಹೆಚ್ಚು ಮಾನ್ಯತೆಯಿದೆ. ಮದುವೆಯಾಗುವ ಹೆಣ್ಣು ಕಪ್ಪಾದರೆ, ಮದುವೆಯಾಗುವ ಸಂಭವ ಕಡಿಮೆಯಾಗಬಹುದು. ಉತ್ತಮರಾದ ಆರ್ಯರ ವರ್ಣ ಬಿಳುಪಿನ ಸಂಕೇತವಾಗುತ್ತದೆಯೆಂದೂ ದಸ್ಯುಗಳು ಮತ್ತು ರಾಕ್ಷಸರ ವರ್ಣ ಕಪ್ಪೆಂದೂ ಭಾರತೀಯರ ಪುರಾತನ ಇತಿಹಾಸ ತಿಳಿಸುತ್ತದೆ. ಶ್ವೇತವರ್ಣೀಯರು ಸರ್ವಕಾಲವೂ ಇತರ ವರ್ಣದವರನ್ನು ಆಳಬೇಕೆಂಬ ಪ್ರಬಲ ದುರಾಸೆಯ ಫಲವಾಗಿ, ಜಗತ್ತಿನಲ್ಲಿ ಇಂದು ವರ್ಣಭೂತ ವಿನಾಶದ ಬೃಹದ್ ರೂಪ ತಾಳಿದೆ. ಗೃಹದ ಶಾಂತಿಯಂತೆ ವಿಶ್ವಶಾಂತಿಗೆ ಈ ವರ್ಣಸಮಸ್ಯೆಯು ಅಡಿಪಾಯವಾಗಿ ಇಂದು ನಿಂತಿದೆ. ಇಂತಹ ಮೂಲಭೂತ ಸಮಸ್ಯೆಯ ವೈಜ್ಞಾನಿಕ ಹಿನ್ನೆಲೆ ಸ್ವಾರಸ್ಯ ಹಾಗೂ ಕುತೂಹಲಜನಕವಾಗಿದೆ.

ನಮ್ಮ ಚರ್ಮದ ವರ್ಣಕ್ಕೆ, ದೇಹದ ಆ ಭಾಗದಲ್ಲಿ ಮನೆ ಮಾಡಿರುವ 'ಮೆಲಾನಿನ್' ಎಂಬ ರಾಸಾಯನಿಕ ವಸ್ತು ಕಾರಣವಾಗಿದೆ. ಕಪ್ಪುಮಿಶ್ರಿತ ಕಂದು ವರ್ಣ ಈ ವಸ್ತುವಿಗಿರುತ್ತದೆ. ಚರ್ಮ, ಕೂದಲು ಮತ್ತು ಕಣ್ಣುಗಳ ವರ್ಣಕ್ಕೆ ಇದು ಕಾರಣವಾಗಿದೆ. ಈ ರಾಸಾಯನಿಕ ವಸ್ತುವನ್ನು ಉತ್ಪಾದಿಸುವ ಕೋಶಗಳಿಗೆ 'ಮೆಲಾನೊ ಸೈಟ್ಸ್' ಎಂಬ ಹೆಸರಿದೆ. ಚರ್ಮದ ಹೊರ ಮತ್ತು ಒಳಪದರಿನ ನಡುವಿನ ಪ್ರದೇಶದಲ್ಲಿ ಈ ಕೋಶಗಳು ಅಪರಿಮಿತ ಪ್ರಮಾಣದಲ್ಲಿರುತ್ತವೆ. ಈ ಕೋಶಗಳ ನಿಬಿಡತೆ ವಿರಳತೆಗಳು ವ್ಯಕ್ತಿಯ ವರ್ಣವನ್ನು ನಿರ್ಧರಿಸುವ ಪ್ರಧಾನ ಅಂಶವಾಗಿರುವದಾಗಿ ತಿಳಿದುಬಂದಿದೆ.

ಎರಡು ನಿರ್ನಾಳ ಗ್ರಂಥಿಗಳಲ್ಲಿ 'ಮೆಲಾನಿನ್' ರಾಸಾಯನಿಕ ವಸ್ತು ಜನ್ಮತಾಳುತ್ತದೆ. ಇಂಥ ದ್ರವಗಳು 'ಹಾರ್ಮೋನ್' ಎಂಬ ನಾಮಧೇಯದಿಂದ ಖ್ಯಾತಿ ಪಡೆದಿವೆ. ಅತ್ಯಲ್ಪ ಪ್ರಮಾಣದಲ್ಲಿ ಉತ್ಪಾದನೆಯಾಗುವ ಈ ದ್ರವಗಳು ದೇಹದ ಬೆಳವಣಿಗೆಗೆ ಅತ್ಯಾವಶ್ಯಕವಾಗಿವೆ. ಇವುಗಳ ಅಭಾವದಿಂದ ಹಲವಾರು ಬಗೆಯ ವಿಚಿತ್ರ ರೋಗ–

ರುಜಿನಗಳು ಪ್ರಾರಂಭವಾಗುತ್ತವೆ.

'ಪಿಟುಯೇಟರಿ' (Pituatory) ಎಂಬ ಅತಿ ಸಣ್ಣದಾದ ನಿರ್ನಾಳ ಗ್ರಂಥಿಯಿಂದ ವರ್ಣ ಜನಕ ರಾಸಾಯನಿಕ ದ್ರವ ಹೊರಬೀಳುತ್ತದೆ. ಕಪ್ಪೆಗಳ ನೆರವಿನಿಂದ ಪ್ರಯೋಗಗಳನ್ನು ನಡೆಸಿದಾಗ, ಅಪೇಕ್ಷಿತ ವರ್ಣ ಹೊಂದಲು ಈ ದ್ರವ ಸಹಾಯ ಮಾಡುವುದೆಂದು ಗೊತ್ತಾಗಿದೆ.

ಮಗುವಿನ ಜನನಕ್ಕೆ ಪೂರ್ವದಲ್ಲಿ ತಾಯಿಯ ಉದರದಲ್ಲಿರುವ ಭ್ರೂಣದಲ್ಲಿ ಈ ಕೋಶಗಳು ಪ್ರಥಮಬಾರಿಗೆ ಕಾಣಿಸಿಕೊಳ್ಳುತ್ತವೆ. ಭ್ರೂಣಕ್ಕೆ ಮೂರು ತಿಂಗಳಾಗುವ ವೇಳೆಗೆ ಇವು ಪ್ರವರ್ಧಮಾನಕ್ಕೆ ಬಂದಿರುತ್ತವೆ. ತಮ್ಮ ತಾತ್ಕಾಲಿಕ ಸ್ಥಾನಗಳನ್ನು ತ್ಯಜಿಸಿ ಅವು ಶಾಶ್ವತ ಸ್ಥಾನಗಳನ್ನು ಆಗಲೇ ಪ್ರವೇಶಿಸುತ್ತವೆ.

ಈ 'ಮೆಲಾನೊ ಸೈಟ್ಸ್' ಕೋಶಗಳ ರಚನೆ ನರಗಳ ರಚನೆಯಂತೆ ಸಾಮಾನ್ಯ ಗುಣ-ಲಕ್ಷಣಗಳಿಂದ ಕೂಡಿರುತ್ತದೆ. ಆಕಾರ, ಶಾಖೆಗಳ ರಚನೆಯ ದೃಷ್ಟಿಯಿಂದ ಇವೆರಡೂ ಒಂದೇ ರೀತಿ ಕಂಡುಬರುತ್ತದೆ. ಮುಖ, ಕತ್ತು ಮತ್ತು ಕಂಕುಳಿನ ಸಂದಿಗಳಲ್ಲಿ ಇವುಗಳ ಸಂಖ್ಯೆ ಅತಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಆದುದರಿಂದ ಇಲ್ಲಿ ಚರ್ಮದ ವರ್ಣ ಹೆಚ್ಚು ಮಂದವಾಗಿರುತ್ತದೆ. ಅಂಗೈ ಅಂಗಾಲುಗಳು ಮತ್ತು ಈ ಗುಂಪಿನ ಕೆಲವು ಅವಯವಗಳಲ್ಲಿ ವರ್ಣಹೀನತೆಗೆ ಇವುಗಳ ಪರಿಮಿತ ಸಂಖ್ಯೆ ಕಾರಣವಾಗಿದೆ.

ನೀಲೀ ವರ್ಣದ ಕಣ್ಣು, ಕಪ್ಪು ಕಣ್ಣಿಗಿಂತ ಕೆಲವು ವ್ಯಕ್ತಿಗಳಿಗೆ ಸುಂದರವಾಗಿ ಕಾಣಬಹುದು. ಆದರೆ ಸಾಮಾನ್ಯವಾಗಿ ಕಪ್ಪು ಕಣ್ಣಿನ ಸುಂದರ ವ್ಯಕ್ತಿಗಳಿಗೆ ನಮ್ಮ ದೇಶದಲ್ಲಿ ಹಿರಿಯ ಸ್ಥಾನವಿದೆ. ಕಪ್ಪು ಕಣ್ಣಿನಲ್ಲಿ 'ಮೆಲಾನಿನ್' ರಾಸಾಯನಿಕ ವಸ್ತು ಅಧಿಕ ಪ್ರಮಾಣದಲ್ಲಿರುತ್ತದೆ. ಇದರ ಮೇಲೆ ಬೆಳಕು ಬಿದ್ದಾಗ, ತನ್ನ ನೈಜವಾದ ಕಪ್ಪು ವರ್ಣವನ್ನು ಅದು ಪ್ರತಿಬಿಂಬಿಸುತ್ತದೆ. ನೀಲಿ ಕಣ್ಣಿನ ವ್ಯಕ್ತಿಗಳಲ್ಲಿ 'ಮೆಲಾನಿನ್' ಜನಕ ಕೋಶಗಳ ಸಂಖ್ಯೆ ಕಡಿಮೆಯಾ

ಗಿರುತ್ತದೆ. ಈ ದೃಷ್ಟಿಯಿಂದ ಅನಿವಾರ್ಯವಾಗಿ ಈ ವರ್ಗದ ವ್ಯಕ್ತಿಗಳು ನೀಲಿ ಕಣ್ಣನ್ನು ಪಡೆಯುತ್ತಾರೆ.

'ಮೆಲಾನಿನ್' ರಾಸಾಯನಿಕ ವರ್ಣಜನಕ ವಸ್ತುವಿನ ಬಗ್ಗೆ ೧೯೨೦ ರಲ್ಲಿ ಬ್ಲೂರ್ನೋಬಾಕ್ ಎಂಬ ವಿಜ್ಞಾನಿ ಪರಿಶೋಧನೆಗಳನ್ನು ಪ್ರಾರಂಭಿಸಿದನು. ಅಂದಿನಿಂದ ಇಂದಿನ ವರೆವಿಗೂ ಈ ಕಾರ್ಯ ಅವ್ಯಾಹತವಾಗಿ ಮುಂದುವರಿಯುತ್ತಿದೆ. ೧೯೫೧ ರ ವೇಳೆಗೆ ಇಂತಹ ರಾಸಾಯನಿಕ ವಸ್ತುವನ್ನು 'ಪಿಟ್ಯುಯೇಟರಿ' ಗ್ರಂಥಿಯಿಂದ ನಿಖರವಾಗಿ ತಯಾರಿಸುವ ವಿಧಾನ ಗೊತ್ತು ಮಾಡಲಾಯಿತು. M S H ಎಂಬ ನಾಮಧೇಯವನ್ನು ಈ 'ಮೆಲಾನಿನ್ ಸ್ಟಿಮುಲೇಟಿಂಗ್ ಹಾರ್ಮೋನ್'ಗೆ ಕೊಡಲಾಗಿದೆ. ಈ ಹಾರ್ಮೋನ್‌ನಲ್ಲಿ ಎರಡು ರೂಪಗಳಿವೆ. ಇವುಗಳಿಗೆ ಕ್ರಮವಾಗಿ 'ಆಲ್ಫಾ' ಮತ್ತು 'ಬೀಟಾ' ಎಂದು ಕರೆಯಲಾಗಿದೆ. M S H ರಾಸಾಯನಿಕ ವಸ್ತುವನ್ನು ಇಂಜೆಕ್ಷನ್ ಮೂಲಕ ಮಾನವ ದೇಹ ಪ್ರವೇಶಿಸುವಂತೆ ಮಾಡಿದಾಗ, ಕೇವಲ ಒಂದು ದಿವಸದಲ್ಲಿ ಆತನ ವರ್ಣ ಹೆಚ್ಚು ಕಪ್ಪಾಗುತ್ತದೆ. ಇದು ಕೆಲಕಾಲ ತೀವ್ರಗತಿಯಿಂದ ಮುಂದುವರಿದು ೩-೪ ವಾರಗಳು ಕಳೆಯುವ ವೇಳೆಗೆ ಸಾಮಾನ್ಯ ಪರಿಸ್ಥಿತಿಗೆ ಬರುತ್ತದೆ. ನಿಗ್ರೋಗಳ ಮೇಲೆ ಈ ಬಗೆಯ ಪ್ರಯೋಗ ನಡೆಸಿದಾಗ ಹೆಚ್ಚು ಪರಿಣಾಮಕಾರಿಯಾಗಿ ಕಂಡುಬರುತ್ತದೆ.

ಕಪ್ಪೆಯ ಚರ್ಮದಲ್ಲಿ ವರ್ಣವ್ಯತ್ಯಾಸಗಳನ್ನು ಸುಲಭವಾಗಿ ಪರಿಶೀಲಿಸಬಹುದು. ವಾತಾವರಣಕ್ಕೆ ಸರಿಹೊಂದಿಸಿಕೊಳ್ಳುವ 'ಗೋಸುಂಬೆ' (Chamelean) ವಿವಿಧವರ್ಣ ವಿನ್ಯಾಸಗಳನ್ನು ಅತ್ಯಲ್ಪಕಾಲದಲ್ಲಿ ಪ್ರದರ್ಶಿಸುತ್ತದೆ. ಈ ಬಗೆಯ ವಿಚಿತ್ರಶಕ್ತಿ, ಅತ್ಯಲ್ಪಪ್ರಮಾಣದಲ್ಲಿ ಉತ್ಪತ್ತಿಯಾಗುವ ಮೆದುಳಿನ 'ಪಿನಿಯಲ್' (Pineal) ಗ್ರಂಥಿಯಿಂದ ಜನಿಸುವ ಹಾರ್ಮೋನ್‌ನಿಂದ ಸಾಧ್ಯವಾಗಿದೆ. ಈ ಗ್ರಂಥಿಯು ಮಾನವನಲ್ಲಿಯೂ ಇದೆ. ಈ ಗ್ರಂಥಿಯಿಂದ ಹಾರ್ಮೋನ್ ಪಡೆಯುವ ವಿಧಾನವನ್ನು ಜಪಾನ್ ದೇಶದ ವಿಜ್ಞಾನಿ ವೈ. ತಕಹಾಸೆ ಗೊತ್ತುಮಾಡಿದನು. ಇದರ ನೆರವಿನಿಂದ ಕಪ್ಪೆಯ ಚರ್ಮದ ವರ್ಣ ತೆಳುವಾಗುತ್ತದೆ. ಈ ಹಾರ್ಮೋನ್ ಯಾವ ರೀತಿ ರಾಸಾಯನಿಕ ಕ್ರಿಯೆ ನಡೆಸುತ್ತದೆ ಎಂಬ ಅಂಶ ಇನ್ನೂ ಪೂರ್ಣವಾಗಿ ನಿರ್ಧಾರವಾಗಿಲ್ಲ. ಆದರೆ, ಈ ಪೀನಿಯಲ್ ಹಾರ್ಮೋನ್ ಹಿರಿಯ ಪ್ರಮಾಣದಲ್ಲಿ ಪಡೆಯುವ ವಿಧಾನ ನಿರ್ಮಿತವಾಗಿದೆ. ಹಸುವಿನ ದೇಹದಲ್ಲಿ ಈ ಗ್ರಂಥಿಯ ತೂಕ ಕೇವಲ ೨೦೦ ಮಿ. ಗ್ರಾಂಗಳು. ಇದರ ಅರ್ಧ ಭಾಗ ನೀರಿನ ಅಂಶವಾಗಿದೆ. ೨೦-೩೦ ಸಾವಿರ ಶುಷ್ಕಗ್ರಂಥಿಗಳನ್ನು ಒಂದು ದೊಡ್ಡದಾದ ಕಾಗದದ ಚೀಲದಲ್ಲಿ ಸುಲಭವಾಗಿ ತುಂಬಬಹುದು. ಈ ವರ್ಗದ ರಾಸಾಯನಿಕ ವಸ್ತುವಿಗೆ (ಹಾರ್ಮೋನ್) 'ಮೆಲಾಟೋನಿನ್' ಎಂಬ ಹೆಸರು ಕೊಡಲಾಗಿದೆ. ಈ ಹಾರ್ಮೋನ್ ಬಳಸಿ ಮನುಷ್ಯನ ದೇಹದ ಕಪ್ಪುವರ್ಣದ ತೀವ್ರತೆ ಕಡಿಮೆ ಮಾಡಲು ಸಾಧ್ಯವಿದೆಯೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಈ ಕಾರ್ಯ ಸತತವಾಗಿ ಮುಂದುವರಿಯಬೇಕಾಗಿದೆ. ಪ್ರಾಯಶಃ ಕೆಲವು ವರ್ಷಗಳ ನಂತರ ಅಪೇಕ್ಷಿತ ಮಟ್ಟದಲ್ಲಿ ಇದು ಫಲದಾಯಕವಾದಲ್ಲಿ ಜಗತ್ತಿನ ವರ್ಣಕಲಹ ನಿರ್ನಾಮವಾಗಬಹುದು.

*

ರಷ್ಯಾದ ವಿಖ್ಯಾತ ಕವಿ ಪುಷ್ಕಿನ್ ಶರತ್ ಋತುವಿನಲ್ಲಿ ಮಾತ್ರ ಬರೆಯುತ್ತಿದ್ದರು. ಒಮ್ಮೆ ಬರೆದುದನ್ನು ಅವರು ಪುನಃ ಪರಿಷ್ಕರಿಸುತ್ತಿರಲಿಲ್ಲ.

ಈ ಜನರಿಗೆ ಬೀರ್ ಎಂದರೆ ಪಂಚಪ್ರಾಣ

ಬವೇರಿಯದ ಒಂದು ನೋಟ

ಲೇ: ವಿ. ಎನ್. ಕುಲಕರ್ಣಿ

ಅನು: ಜಿ. ಎಸ್. ಸ್ವಾಮಿ

ಆಲ್ಪ್ಸ ಪರ್ವತಶ್ರೇಣಿಯಲ್ಲಿಯ ಒಂದು ಚಿತ್ರದಂತಹ ಸುಂದರ ಗ್ರಾಮ! ಅದರ ಹಿಂಬದಿಯಲ್ಲಿ ಗೋಡೆಯಂತೆ ನಿಂತಿದ್ದ ಉತ್ತುಂಗ ಶಿಖರಗಳು ಆಕಾಶದತ್ತ ಮೋರೆ ಮಾಡಿ ನಿಂತಿದ್ದವು. ಒಂದು ಮಗ್ಗುಲಲ್ಲಿ ತೀರ ಆಳವಾದ ದರಿ! ನಮ್ಮ ಬಸ್ಸು ದಣಿದು ಬಂದು ನಿಂತ ಪಟಾಂಗಣದ ನಾಲ್ಕೂ ದಿಕ್ಕಿನಲ್ಲಿ ರೆಸ್ಟೊರಾ, ಕ್ಯಾಫೆ, ಬೀರ್ ಗೃಹಗಳು.

ನಮ್ಮ ವಿಲಾಸಿ ಪೋಸ್ಟ್ ಬಸ್ಸು ಅಲ್ಲಿ ಹತ್ತು ನಿಮಿಷ ವಿಶ್ರಾಂತಿಗಾಗಿ ತಂಗುವದಿದ್ದಿತು. ಅಷ್ಟರಲ್ಲಿಯೇ ಬೀರಿನ ಒಂದೊಂದು "ಮಗ್ಗು" ಉದರದಲ್ಲಿಳಿಸಲು ಅರ್ಧಕ್ಕಿಂತ ಹೆಚ್ಚು ಪ್ರಯಾಣಿಕರು ಕೆಳಕ್ಕಿಳಿದರು. ದಕ್ಷಿಣ ಜರ್ಮನಿಯಲ್ಲಿಯ ಈ ಬವೇರಿಯನ್ನನಿಗೆ ಕುಳಿತಾಗ ನಿಂತಾಗ ಬೀರ್ ಬೇಕು. ಅಚ್ಚ ಬವೇರಿಯನ್ನನು ಬೀರ್ ಕುಡಿಯುತ್ತಲೇ ಜನಿಸುವನೆಂದೂ ಬೀರ್ ಗುಟಕರಿಸುತ್ತಲೇ ಪ್ರಾಣ ತ್ಯಜಿಸುವನೆಂದೂ ಇಲ್ಲಿಯ ಲೋಕಖ್ಯಾತಿ!

ದಕ್ಷಿಣ ಜರ್ಮನಿಯಲ್ಲಿ ಆಲ್ಪ್ಸ ಪರ್ವತದ ತೊಡೆಯ ಮೇಲೆ ಹಾಗೂ ಅಡಿಯಲ್ಲಿ ಪಸರಿಸಿದ ಬವೇರಿಯಾ ದೇಶದಲ್ಲಿ ನಾನು ಅದೆಷ್ಟೋ ಸಲ ಪ್ರವಾಸ ಮಾಡಿದುದರಿಂದ ಬವೇರಿಯನ್ನರ ಈ ಬೀರ್ ಪ್ರೇಮವು ನನಗೆ ಚನ್ನಾಗಿ ಗೊತ್ತಿದ್ದಿತು. ಬವೇರಿಯಾ ಈ ಪ್ರಾಂತದ ಆಂಗ್ಲೇಯ ನಾಮ. ಜರ್ಮನ್ ಭಾಷೆಯಲ್ಲಿ ಈ ವಿಭಾಗಕ್ಕೆ "ಬಾಯರ್ನ್" ಎನ್ನುವರು. ಇಲ್ಲಿನ ಜನಗಳಿಗೆ "ಬಾಯರಿಶ್" ಎಂದು ಕರೆಯುವರು. ಮ್ಯುನಿಚ್ ನಗರವು ಈ ಪ್ರಾಂತದ ರಾಜಧಾನಿ. ಜರ್ಮನ್ ಭಾಷೆಯಲ್ಲಿ "ಮುಂಚೆನ" ಎನ್ನುವರು ಈ ನಗರಕ್ಕೆ.

ನಮ್ಮ ಬಸ್ಸು ಮುಂದಿನ ಪ್ರಯಾಣಕ್ಕಾಗಿ ಅಡಿಯಿಡಲಾರಂಭಿಸಿತು. ಪೇಟೆಯಲ್ಲಿ ವ್ಯಾಪಾರ



ಮಾಡಿಕೊಂಡ ಮನೆಯ ಕಡೆಗೆ ತೆರಳಲು ಸಿದ್ಧಳಾದ ಓರ್ವ ಮಹಿಳೆಯು ಕೈಮುಂದೆ ಮಾಡುತ್ತ ಕೂಗಿದಳ, "ಡ್ರೈವರ್ ತಡೆ. ಟಿಗರ್ನಸೆ ವರೆಗೆ ಬರುವವಳಿದ್ದೇನೆ."

ಆಶ್ಚರ್ಯವೆಂದರೆ ಬಸ್ಸು ಒಂದಿಷ್ಟು ಮುಂದೆ ಸಾಗಿ ಒಂದು ಮನೆಯ ಮುಂದೆ ನಿಂತಿತು. ಅದೇ ಆ ಮಹಿಳೆಯ ಮನೆ. ಡ್ರೈವರನಿಗೆಲ್ಲವೂ ಗೊತ್ತು.

"ಥೂ, ಥೂ ಈ ಬಾಯರಿಶ್ ಜನಕ್ಕೆ ವೇಳೆಯ ಬೆಲೆಯೇ ಅರಿವಿಲ್ಲ. ನಿಯಮಿತತನವನ್ನು ಹೇಗೆ ಆಚರಿಸಬೇಕೆಂಬುದೇ ಈ ಜನಗಳು ಅರಿಯರು." ಓರ್ವ ಸಹಪ್ರವಾಸಿನಿ ಗುಡುಗಿದಳು.

"ತೀರ ಹದಿನೆಂಟನೇ ಶತಕದಲ್ಲಿದ್ದಂತಿದೆ ಈ ಬಾಯರ್ನ್" ಆಕೆಯ ಪತಿ ನನ್ನನ್ನು ನೋಡುತ್ತ ದನಿಗೂಡಿಸಿದ. "ಇಲ್ಲಿಯ ಸೌಂದರ್ಯಸ್ಥಳಗಳನ್ನು ನೋಡಲು ದೂರದೂರದ ವಿದೇಶಿ ಪ್ರವಾಸಿಗಳು ಬರುವರು. ಅವರು ಏನೆಂದು ತಿಳಿದುಕೊಂಡಾರು? ಇಡೀ ಜರ್ಮನಿಯಲ್ಲೆಲ್ಲ ಇಂತಹ ಅವ್ಯವಸ್ಥೆ ಇದೆಯೆಂದು ಭಾವಿಸಬಹುದು. ಬಸ್ ಸ್ಟಾಪ್ ಇಲ್ಲದಲ್ಲಿ ಜನಗಳಿಗಾಗಿ ಬೀದಿಯಲ್ಲಿಯೇ ಬಂಡಿ ನಿಲ್ಲಿಸುವದು ಅಕ್ರಮವಲ್ಲವೇ!"

"ಫುಸ್‌ಸ್... ಫಡ್!" ಕಲ್ಲೆ ಮೀಶೆಯ ಓರ್ವ ಬವೇರಿಯನ್ ಪ್ರಯಾಣಿಕ ಕೈಯಲ್ಲಿಯೇ ಬೀರ್ ಬಾಟಲಿ ಒಡೆದ. ನನ್ನೆಡೆಗೆ ನೋಡುತ್ತ ನುಡಿದ, "ಭಾರತಕ್ಕೆ ಶುಭವಾಗಲಿ! ನಿಮ್ಮ ದೇಶದಲ್ಲಿಯ ಬಸ್ಸುಗಳು ತೀರ ಸರಿಯಾಗಿ ನಡೆಸಲ್ಪಡುತ್ತಿವೆಯೇ?" ಆತ ಬಾಟಲಿಯನ್ನು ಮುಖಕ್ಕೆ ಹಚ್ಚಿದ.

ಬಹುಶಃ ಎಲ್ಲ ಪ್ರಯಾಣಿಕರು ಕಿಲಿಕಿಲಿ ನಕ್ಕರು. ಏಕೆಂದರೆ ಅವರೆಲ್ಲರೂ ಬವೇರಿಯನ್ನರು. ಅವರೆಲ್ಲರ ಗುರಿ ಆ ಟೀಕಾಕಾರರಾದ ದಂಪತಿಗಳೆಂಬುದು ಬೇರೆ ಹೇಳಬೇಕೇ!

ಇದೇ ಸಮಯದಲ್ಲಿ ಹೊಸ ಪ್ರಯಾಣಿಕಳು ಬಂದು ಬಸ್ಸಿನಲ್ಲಿ ಕುಳಿತಳು. ಬಸ್ಸು ಹೊರಟಿತು.

ಬವೇರಿಯದಲ್ಲಿ ಕಾಲಿಟ್ಟೊಡನೆ ಜರ್ಮನಿ ಬಿಟ್ಟು ಯಾವುದೊಂದು ಬೇರೊಂದು ದೇಶದಲ್ಲಿ ನಾವಿರುವೆವೆಂಬ ಭಾವನೆಯಾಗುವದು. ಎಂಟೆಂಟು ದಿನ ಕ್ಷೌರ ಮಾಡಿಸದಿದ್ದ ಗಟ್ಟಿಗರಾದ ಒಕ್ಕಲಿಗರನ್ನು ಇಲ್ಲಿ ಕಾಣಬಹುದು. ಅವರ ಚರ್ಮದ ಚಡ್ಡಿಯು ಅವರ ಜೀವಿತದ ಸಂಗಾತಿ....

ಟಿಗರ್ನಸೆ ಇಲ್ಲವೆ ಟಿಗರ್ನ್ ಸರೋವರದ ಸೌಂದರ್ಯದ ಬಗ್ಗೆ ನಾನು ಅದೆಷ್ಟೋ ಕೇಳಿದ್ದೆ. ಈ ಸರೋವರದ ತೀರದಲ್ಲಿ ನೆಲೆಸಿದ ಒಂದು ಗ್ರಾಮದ ಹೆಸರು ಟಿಗರ್ನಸೆ ಎಂದಿದೆ. ಮಂದಗತಿಯಿಂದ ನಮ್ಮ ಬಸ್ಸು ಸರೋವರದ ದಂಡೆಗುಂಟ ನಡೆಯಿತು. ಆ ನಿಸರ್ಗ ಸೌಂದರ್ಯವು ಕಣ್ಮನಗಳನ್ನು ತಣಿಸಲಾರಂಭಿಸಿತು. ಅದೆಷ್ಟೋ ಲೇಖಕರು, ಕವಿಗಳು, ಚಿತ್ರಕಾರರು, ಕಲಾವಂತರು ಟಿಗರ್ನಸೇದ ತೀರದಲ್ಲಿ ಸುರಮ್ಯವಾದ ಚಿಕ್ಕದಾದ ಕುಟೀರವನ್ನು ಕಟ್ಟಿಕೊಂಡು ವಾಸಿಸುವರು. ವರುಷೆರಡು ವರುಷಗಳಲ್ಲಿ ಒಮ್ಮೆಯಾದರೂ ಎಂಟು ಹತ್ತು ದಿನಗಳ ಬಿಡುವನ್ನು ಪಡೆದು ಟಿಗರ್ನಸೇದ ಪರಿಸರದಲ್ಲಿ ವಾಸಿಸಬೇಕೆಂದು ಅನೇಕರು ಪ್ರಯತ್ನಿಸುತ್ತಿರುವರು.

ನಾನು ಟಿಗರ್ನಸೆ ಸೇರಿದುದು ಆ ದಿನ ಸಂಧ್ಯಾಕಾಲ. ಹಾಟೆಲ್ ಶೋಧಿಸಿ ಒಂದು ಕೋಣೆ ದೊರಕಿಸಿದೆ. ಊರಲ್ಲಿ ಒಮ್ಮೆ ಅಲೆದಾಡಿ ಬಂದೆ.

ಮರುದಿನ ಮುಂಜಾವಿನಲ್ಲಿ ತಿರುಗಾಡಿ ಬರಲು ನಾನು ಹೊರಬಿದ್ದೆ. ಬೇಸಿಗೆಯ ಉಡುಪು ಧರಿಸಿದ ಒಂದು ಜೋಡಿಯು ನನ್ನ ಮುಂದೆಮುಂದೆ ನಡೆದಿತ್ತು. ಅವರಲ್ಲಿ ಗಂಡಸಿನ ಮೈಯಲ್ಲಿ ಕೇವಲ ಈಜುವ ಕೆಂಪು ಚಡ್ಡಿ ಮಾತ್ರ ಇತ್ತು. ಆತನ ಮಡದಿಯ ಅಂಗಾಂಗಗಳು ಸುಂದರ ಹಾಗೂ ಪ್ರಮಾಣಬದ್ಧವಾಗಿದ್ದವೆಂಬುದನ್ನು ನಾನು ಹೇಳಬಲ್ಲೆ. ಇದರ ಕಾರಣವಿಷ್ಟೇ: ಆಕೆಯ ದೇಹವು ವಿವಸ್ತ್ರವಾಗಿದ್ದಿತು—ಈಜುವ ಚಡ್ಡಿ ಹಾಗೂ ನಾಲ್ಕು ಬೆರಳು ಅಗಲಾದ ವಕ್ಷಸ್ಥಳಕ್ಕೆ ಕಟ್ಟಿದ ಪಟ್ಟಿ. ಸರಿ ಇಷ್ಟೇ!

ಕೆಲವಂತರ ಮುಂದೆ ಸಾಗಿದ ಮೇಲೆ ಟಿಗರ್ನ್

ಸೇದ ಒಂದೇ ಒಂದಾದ ಬೀದಿ ಬಂದಿತು. ಈ ಮಾರ್ಗವೆಲ್ಲ ಇಂತಹದೇ ವಸ್ತ್ರಧಾರಿಗಳಾದ ಸ್ತ್ರೀಪುರುಷರಿಂದ ತುಂಬಿತ್ತು.

ಈ ಮೋಜು ನೋಡುತ್ತ ನಾನು ಕೊಂಚ ಮುಂದೆ ಸಾಗಿದೆ. ಒಂದು ಕಟ್ಟಡದ ಮೇಲೆ "Tegernseer Zeitung" ಎಂದು ಬರೆದ ಹಲಗೆಯಿದ್ದಿತು. "ಟೆಗರ್ನಸೆ ವಾರ್ತೆ" ಎಂಬ ದೈನಿಕದ ಕಛೇರಿಯದು. ಅನುಕೂಲವಾದರೆ ಸಂಪಾದಕ ಮಹಾಶಯರ ಪರಿಚಯ ಮಾಡಿಕೊಳ್ಳಬೇಕೆಂದು ನಾನು ಒಳಕ್ಕೆ ಸೇರಿದೆ. ಓರ್ವ ಚಪಲ ಸುಂದರಿಯು ನನ್ನನ್ನು ಸ್ವಾಗತಿಸಿದಳು.

"ನಿಮಗಾಗಿ ನಾನೇನು ಮಾಡಬಲ್ಲೆ?"

"ಸಂಪಾದಕರನ್ನು ನಾನು ಕಾಣಬಹುದೇ?" ನಾನು ನನ್ನ ಭೇಟಿಯ ಚೀಟಿಯನ್ನು ಆಕೆಯ ಕೈಯಲ್ಲಿಡುತ್ತ ಕೇಳಿದೆ. ನನ್ನ ಚೀಟಿಯನ್ನೋದಿ ಆಕೆಗೆ ಭಾರಿ ಆಶ್ಚರ್ಯ, ಆನಂದಗಳಾದಂತೆ ಕಂಡುಬಂದಿತು. "ಅನು ತಡೆಯಿರಿ" ಎಂದು ಹೇಳಿ ಆಕೆಯು ಫೋನಿನ ನಂಬರನ್ನು ತಿರುಗಿಸಿ ಓರ್ವ ಭಾರತೀಯ ಪತ್ರಕಾರರು ಭೇಟಿಗಾಗಿ ಕಾದಿದ್ದಾರೆಂಬ ವಾರ್ತೆಯನ್ನು ಸಂಪಾದಕರಿಗೆ ತಿಳಿಸಿದಳು. ಆಮೇಲೆ ನನ್ನ ಕಡೆಗೆ ತಿರುಗಿ "ಸಂಪಾದಕರು ಇನ್ನು ತಾಸಿನಲ್ಲಿ ಬರುವರು. ಆಮೇಲೆ ಕಾಣಲು ಬರುತ್ತೀರಾ? ನಿಮಗೆ ಟೆಗರ್ನಸೇ ಬಗ್ಗೆ ಒಂದಿಷ್ಟು ವಿವರಗಳನ್ನು ಕೊಡಲೆ? ಎಂದರೆ ಅತ್ತಿತ್ತ ಅಲೆದಾಡಿ ನೀವು ವೇಳೆ ಕಳೆಯಬಹುದು!" ಎಂದು ಹೇಳಿದಳು.

ಆಕೆ ಒಂದು ತೀರ ದೊಡ್ಡದಾದ ಬಣ್ಣದ ನಕಾಶೆಯನ್ನು ಮೇಜಿನ ಮೇಲೆ ಪಸರಿಸಿ ಟೆಗರ್ನಸೇದ ಅಕ್ಕಪಕ್ಕದ ಪರಿಸರದಲ್ಲಿದ್ದ ಎಲ್ಲ ಸ್ಥಳಗಳ ಯಥಾಸ್ಥಿತ ವಿವರಗಳನ್ನು ಹೇಳಿದಳು. ಆ ವಿಶಾಲ ನಕಾಶೆಯ ಚಿಕ್ಕ ಆವೃತ್ತಿಯನ್ನು ನನ್ನ ಕೈಗಿತ್ತು "ಮತ್ತೆ ಕೂಡಿದಾಗ್ಗೆ ಬನ್ನಿ ಸಂಪಾದಕರನ್ನು ಕಾಣಲು. ಅವರು ಇಲ್ಲ ಇದ್ದೇ ಇರಾರೆ. ಮನಸೇಚ್ಛೆಯಂತೆ ತಿರುಗಾಡಿ ನಾಲ್ಕೂ ದಿಕ್ಕಿನಲ್ಲಿ. ನೋಡಿದಲ್ಲೆಲ್ಲ ವಿಪುಲ ಸೃಷ್ಟಿಸೌಂದರ್ಯವು ಹಬ್ಬಿ ಹರಿದಿದೆ ಇಲ್ಲಿ! ಸರಿ. ನಿಮಗೆ ಏನು ಸೇರುತ್ತದೆ? ಒಂದು ಬಟ್ಟಲು ಬೀರ್ ತೆಗೆದುಕೊಳ್ಳುವಿರಾ?" ಎಂದು ಕೇಳಿದಳು.

ಅಬ್ಬಾ! ಬೆಳಗಿನಲ್ಲಿ ಹಾಸಿಗೆಯಿಂದೆದ್ದಾಕ್ಷಣ ಬೀರು? ನಾನು ಬವೇರಿಯಾದಲ್ಲಿರುವೆನಲ್ಲವೆ?

ಆ ತರುಣಿಯಿಂದ ಅಪ್ಪಣೆ ಪಡೆದು ನಾನು ಮತ್ತೆ ಮುಂದೆ ಸಾಗಿದೆ. ಸರಸ್ಸಿನ ತೀರದಲ್ಲಿ ಕೆಲವಂತರ ಕ್ರಮಿಸಿದ ಮೇಲೆ ಅದಕ್ಕೆ ಕಟ್ಟಿದ ಒಂದು ಕಟ್ಟೆ ಸಮೀಪಿಸಿತು. ಆ ಕಟ್ಟೆಯ ಮೇಲೆ ಬಹಳ ಜನ ನಿಂತಿದ್ದರು. ಸಂಪೂರ್ಣ ವಸ್ತ್ರದಲ್ಲಿ ನಾನೊಬ್ಬನೇ ಇದ್ದೆ ಆ ಸಮುದಾಯದಲ್ಲಿ. ನನಗೆ ಹೇಗೆ ಹೇಗೋ ಎನಿಸಲಾರಂಭಿಸಿತು ಆ ಅರ್ಧನಗ್ನ (ನಿಜವಾಗಿ ಹೇಳುವುದೆಂದರೆ "ಒಂಭತು ಹತ್ತಾಂಶ ನಗ್ನ) ಸಮಾಜದಲ್ಲಿ. ನಾನು ನನ್ನ ಕೋಟು ತಗೆದು ಭುಜದ ಮೇಲೆ ಚೆಲ್ಲಿ ಶರ್ಟಿನ ಎರಡೂ ತೋಳುಗಳನ್ನು ಮೊಳಕೈ ವರೆಗೆ ಮಡಿಚಿದೆ. ಟಾಯ್ ತೆಗೆದು ಕೋಟಿನ ಜೇಬಿನಲ್ಲಿ ತುರುಕಿದೆ. ಹಾಗೂ ಶರ್ಟಿನ ಕುತ್ತಿಗೆಯ ಹತಿರಿನ ಎರಡು ಬಟನಗಳನ್ನೂ ಬಿಚ್ಚಿದೆ.

"ಹ್ಯಾಲೋ ಇಂಡಿಯಾ ಎಲ್ಲವೂ ಸರಿಯೆ?" ಕಪ್ಪು ಕನ್ನಡಕ ಧರಿಸಿದ ಓರ್ವ ಬರಿಮೈಯ ಮನುಷ್ಯನು ಹಸ್ತಾಂದೋಲನಕ್ಕಾಗಿ ಕೈ ಮುಂದೆ ಚಾಚಿದ. ಆತನ ಜತೆಯಲ್ಲಿ ಮೇಲೆ ವರ್ಣಿಸಿದ (ಒಂಭತ್ತು ಹತ್ತಾಂಶ ನಗ್ನ) ಪೋಷಾಕಿನಲ್ಲಿದ್ದ ಆತನ ಸತಿಯೂ ಇದ್ದಳು. ತುಸು ಗಾಬರಿಯ ಮನಃಸ್ಥಿತಿಯಲ್ಲಿಯೇ ನಾನು ಅವರ ಸಂಗಡ ಮಾತಾಡಲಾರಂಭಿಸಿದೆ. ಏಕೆಂದರೆ ನನ್ನ ಪೂರ್ವಪರಿಚಯವಿದ್ದಂತೆ ಆ ದಂಪತಿಗಳು ತೋರಿಸುತ್ತಿದ್ದರು. ನನಗಂತೂ ಅವರ ಪರಿಚಯವಿದ್ದಂತಿರಲಿಲ್ಲ. ಕ್ರಮೇಣ ಎಲ್ಲ ಸಂಗತಿಯ ಮೇಲೆ ಪ್ರಕಾಶ ಬೀಳಲಾರಂಭಿಸಿತು. ನಿನ್ನಿನ ದಿನ ಬಸ್ಸಿನಲ್ಲಿ ಗುರುಗುರುಸುತ್ತಿದ್ದ ಜನ ಅವರು. ನಾವು ಪರಸ್ಪರ ಪರಿಚಯ ಮಾಡಿಕೊಂಡೆವು. ಹೇರ್ ಹಾಗೂ ಫ್ರಾವು ಫೋಗಲ್-ಅವರು ಉತ್ತರ ಜರ್ಮನಿಯಲ್ಲಿಯ ಬ್ರೆಮನ್

ಪಟ್ಟಣದ ನಾಗರಿಕರು. ನಾನು ಸಮೀಪದಲ್ಲಿಯೇ ಇದ್ದ ಹ್ಯಾಂಬರ್ಗ್ ಪಟ್ಟಣದ ರಹಿವಾಸಿ. ಸರೋವರದ ಆಚೆ ತೀರದಲ್ಲಿ ಕಾಣುತ್ತಿದ್ದ ಬಾಡ್ ವೀಸ್ಸೇ ಕಡೆಗೆ ಅವರು ಹೊರಟಿದ್ದರು.

"ಆ ಸ್ಥಳ ತೀರ ರಮ್ಯವಾಗಿದೆ. ಎರಡು ವರುಷಗಳ ಹಿಂದೆ ನಾವು ಒಮ್ಮೆ ಅಲ್ಲಿ ಒಂದು ತಿಂಗಳಿದ್ದೆವು. ಬನ್ನಿ ನಮ್ಮ ಜತೆಯಲ್ಲಿ ಆಕಡೆ ಅವಕಾಶವಿದ್ದರೆ!"

ಕರೆಯುತ್ತಾರೆಂದಮೇಲೆ ನಾನು ಸಿದ್ಧ!

ತೀವ್ರವೇ ಒಂದು ಚಿಕ್ಕ ನಾಕೆ ಬಂದು ಬಾಡ್ ವೀಸ್ಸೇ ದಿಸೆಯಲ್ಲಿ ನಮ್ಮನ್ನು ತೆಗೆದುಕೊಂಡು ಸಾಗಿತು. ಸರೋವರದ ಮಧ್ಯದಿಂದ ಸುತ್ತಮುತ್ತಲಿನ ಸೃಷ್ಟಿಯನ್ನು ನಾನು ನಿರೀಕ್ಷಿಸಲಾರಂಭಿಸಿದೆ. ಸುತ್ತುಮುತ್ತು ದೂರದಲ್ಲಿ ಆಲ್ಪ್ಸ ಶ್ರೇಣಿಯ ಕಡಿದಾದ ಪರ್ವತಶಿಖರಗಳು. ಅವುಗಳ ಮೇಲೆ ಅಲ್ಲಲ್ಲಿ ಇನ್ನೂ ಹಿಮವು ಮಿನುಗುತ್ತಲಿದ್ದಿತು. ಅರಣ್ಯಭಾಗದ ಹಚ್ಚನ್ನ ಹಸಿರು ಪಟ್ಟಿಗಳು ಅಲ್ಲಲ್ಲಿ ಕಂಗೊಳಿಸುತ್ತಿದ್ದವು. ಸುತ್ತಲಿನ ವನರಾಜಿಯಲ್ಲಿ ಚಿತ್ರವಿಚಿತ್ರ ಬಣ್ಣದ ಪುಷ್ಪಗಳ ಹಾಸಿಗೆ ಹಾಸಿದ್ದಿತು.

"ಎದುರಿನಲ್ಲಿ ಕಾಣುವುದೇ ಬಾಡ್ ವೀಸ್ಸೇ ನೋಡಿ." ಹೇರ್ ಫುಲ್ಲರ್ ನನಗೆ ಹೇಳಲಾರಂಭಿಸಿದನು. "ಅಲ್ಲಿ ಔಷಧೀಯ ನೀರಿನ ನಿಸರ್ಗ ಪ್ರವಾಹಗಳಿವೆ. ಅವುಗಳ ನೀರಿನಲ್ಲಿ ಪ್ರಾಮುಖ್ಯವಾಗಿ ಅಯೋಡಿನ್ ಹಾಗೂ ಗಂಧಕ ಇದೆ. ಸಂಧಿವಾತ, ರಕ್ತದ ಒತ್ತಡ, ತ್ವಚರೋಗ, ಹೃದಯವಿಕಾರ, ಹಾಗೂ ಸ್ತ್ರೀಯರ ವಿಕಾರ ಮುಂತಾದ ರೋಗಗಳು ಈ ನೀರಿನಿಂದ ವಾಸಿಯಾಗುತ್ತವೆ. ಅದೆಷ್ಟೋ ವೈದ್ಯವಿಶಾರದರು ಈ ಸೆಲೆಗಳ ನೀರನ್ನುಪಯೋಗಿಸಿ ರೋಗಿಗಳನ್ನು ವಾಸಿಮಾಡಿದ್ದಾರೆ. ಸಂಧಿವಾತದಿಂದ ಬಳಲುತ್ತಿದ್ದ ನಾನು ಹಾಗೂ ಬೇರೆ ಎಂಥದೋ ವ್ಯಾಧಿಯಿಂದ ಬಳಲುತ್ತಿದ್ದ ನನ್ನ ಪತ್ನಿ ಇಲ್ಲಿಯೇ ಎರಡು ವರುಷಗಳ ಹಿಂದೆ ಪೂರ್ಣ ಗುಣ ಹೊಂದಿದ್ದೇವೆ. ನಾವು ಈವಾಗ ಸಹಜ ಡಾಕ್ಟರರನ್ನು ಕಾಣಲು ಹೊರಟಿದ್ದೇವೆ!"

ಬಾಡ್‌ವೀಸ್ಸೇಯಲ್ಲಿ ಸರೋವರದ ತೀರದ ಮೇಲೆ ಒಂದು ತೀರ ವಿಶಾಲವಾದ ಹಾಲ್ (ದಿವಾಣ ಖಾನೆ) ಇದೆ. ಇಲ್ಲಿಯ ಸೆಲೆಗಳ ನೀರಿನಿಂದ ಹೇಗೆ ಗುಣಹೊಂದಬೇಕೆಂಬ ಬಗ್ಗೆ ಎಲ್ಲ ವಿವರಗಳು ಇಲ್ಲಿ ದೊರೆಯುತ್ತವೆ. ಇಲ್ಲಿ ಕೂಡ ಸುತ್ತಲಿನ ವಾತಾವರಣ ರಮ್ಯವಾಗಿದೆ. ಆದರೆ ಅದಾರಿಗೆ ಗೊತ್ತು, ನಾವು ಒಂದು ದೊಡ್ಡ ಆಸ್ಪತ್ರೆಯ ಉದ್ಯಾನದಲ್ಲಿ ಸಂಚರಿಸುತ್ತಿದ್ದೇವೆಂಬ ಭಾವ ಮೂಡುತ್ತದೆ.

ಸಾಯಂಕಾಲ ಆರು ಗಂಟೆಗೆ ನಾನು ಜಿಗರ್ನಸೇದಲ್ಲಿ ವಿನೋದಕ್ಕಾಗಿ ತಿರುಗಾಡುತ್ತಿದ್ದೆ. ನನ್ನ ಮುಂದೆ ಸಾವಿರ ಜನರ ಗುಂಪು ಬಲಬದಿಯ ಬೀದಿಯ ಕಡೆಗೆ ತಿರುಗಿದುದು ಕಾಣಿಸಿತು. ಸವಿನೆನಹಿಗಾಗಿ ಕೊಡುವ ವಸ್ತುಸಂಗ್ರಹವಿದ್ದ ಒಂದು ಅಂಗಡಿಯಲ್ಲಿ ಬೇರೆ ಬೇರೆ ವಸ್ತುಗಳನ್ನು ಒಂದೆರಡು ನಿಮಿಷ ನಿರೀಕ್ಷಿಸಿ ಮುಂದೆ ಸಾಗಿದ ನಂತರ ನಾನು ಬಲಬದಿಯ ಬೀದಿಯ ಕಡೆಗೆ ತೆರಳಿದೆ. ಆದರೆ ಅಲ್ಲಿ ಒಬ್ಬರೂ ಕಂಡುಬರಲಿಲ್ಲ. ಹಾಗೆಯೇ ಮುಂದೆ ಸಾಗಿದೆ [illegible]ಲ್ಲೊಂದು ವಿಶಾಲವಾದ ಪ್ರಾಚೀನ ಕಟ್ಟಡ ಕಂಡಿತು. ಅದರ ಭವ್ಯವಾದ ಬಾಗಿಲುಗಳನ್ನು ತೆರೆದು ಒಳಕ್ಕೆ ನೋಡಿದೆ. ಅದೊಂದು ಚರ್ಚ್. ಅಲ್ಲಿ ಒಂದು ಹುಳ ಕೂಡ ಇರಲಿಲ್ಲ. ಇದೇ ಬದಿಯಲ್ಲಿ ತೆರಳಿದ ಇಷ್ಟು ಜನ ಹೋದುದಾದರೂ ಎಲ್ಲಿ? ನಾನು ಚರ್ಚನಿಂದ ಹೊರಬಿದ್ದು ಆ ಬೀದಿಯಲ್ಲಿ ಮತ್ತೆ ಮುಂದೆ ಸಾಗಿದೆ ಮುಂದೆ ಸರೋವರದ ನೀರು ಕಾಣಲಾರಂಭಿಸಿತು. ಬೀದಿ ಅಲ್ಲಿಯೇ ಮುಕ್ತಾಯವಾಗಿದ್ದಿತು.

ಆಂ! ಈ ಜನಗಳ ಗುಂಪು ಹೋದುದಾದರೂ ಎಲ್ಲಿ? ನನಗೆ ಆ ರೀತಿ ಭ್ರಮೆಯಾಯಿತೇ?

ಚರ್ಚಿನ ಎದುರಿನಲ್ಲಿ ಒಂದು ಟ್ಯಾಕ್ಸಿ ನಿಂತಿದ್ದಿತು. ಅದರ ಡ್ರೈವರನನ್ನು ನಾನು ಕೇಳಿದೆ. ಆದರೆ ಆತನು ಏನೊಂದೂ ಉತ್ತರ ಕೊಡದೆ

ನಗೆಯೊಟದಿಂದ ಕೈ ತಿರುವುತ್ತ ಆ ಕಟ್ಟಡದ ಮಹಾದ್ವಾರದತ್ತ ಬೆರಳು ಮಾಡಿ ತೋರಿಸಿದ.

"ಅಲ್ಲಿ ಒಬ್ಬರೂ ಕಾಣುವುದಿಲ್ಲ ?" ನಾನಂದೆ.

"ಆ ಮಹಾದ್ವಾರಕ್ಕೆ ಸನಿಯದಲ್ಲಿಯೇ ಎಡ ಬದಿಯಲ್ಲಿ ಒಂದು ಚಿಕ್ಕ ಬಾಗಿಲಿದೆ. ಅದನ್ನು ತೆರೆದು ನೋಡಿ!" ಡ್ರೈವರನು ಕಣ್ಣು ಹಾರಿಸುತ್ತ ಚೇಷ್ಟೆಯಿಂದ ಹೇಳಿದ.

ನಾನು ಕದ ತೆರೆದು ಒಳಕ್ಕೆ ಹೋದೆ. ಎಲಾ! ಕ್ಷಣ ಹೊತ್ತು ಮಂತ್ರಮುಗ್ಧನಂತೆ ಮುಂದಿನ ದೃಶ್ಯ ನೋಡುತ್ತ ನಿಂತೆ.

ಅವಾಢವ್ಯ ಆಕಾರದ ಒಂದು ಬೀರ್‌ಗೃಹ ವಿದ್ದಿತದು. ಒಳಕ್ಕೆ ಅಷ್ಟೇನೂ ಜನಸಮ್ಮರ್ದ ವಿರಲಿಲ್ಲ. ನಾನು ಅತ್ತಿತ್ತ ನೋಡಲಾರಂಭಿಸಿದೆ.

ಕೆಂಪು ಗಜ್ಜರಿಯಂಥ ತುಂಬಿದ ಕಪೋಲದ ಓರ್ವಪರಿಚಾರಿಕೆ ನನಗೆಂದಳು, "ಇಲ್ಲಿ ನೋಡು. ನಿನಗಾಗಿ ಇಲ್ಲಿ ಎಷ್ಟು ರಮ್ಯವಾದ ಸ್ಥಳವಿದೆ! ಇಲ್ಲಿ ಕುಳಿತುಕೋ!"

ಒಂದು ಗೋಡೆಗೆ ಆತುಕೊಂಡು ನಾನು ಕುಳಿತೆ

ನಾನು ಮಾತನಾಡುವ ಪೂರ್ವದಲ್ಲಿಯೇ ಆಕೆಯು ಒಂದು "ಕ್ರುಗ್" ಬೀರ್ ನನ್ನ ಮುಂದೆ ತಂದಿಟ್ಟಳು. ಚೀನೀ ಮಣ್ಣಿನ ಮಧ್ಯಮ ಆಕಾರದ ಉಪ್ಪಿನಕಾಯಿ ಭರಣಿಯನ್ನು ನೀವು ನೋಡಿರಬಹದು. ಅಷ್ಟು ದೊಡ್ಡದು ಹಾಗೂ ಅಷ್ಟು ದಪ್ಪವಾಗಿದ್ದಿತಾ ಕ್ರುಗ್. ಕೈಯಲ್ಲಿ ಹಿಡಿಯಲು ಬರಬೇಕೆಂದು ಅದಕ್ಕೊಂದು ಹಿಡಿಕೆಯಿದ್ದಿತು. ಅದರಲ್ಲಿ ಸಾಧಾರಣ ಒಂದು ತಂಬಿಗೆಯಷ್ಟು (ಇಲ್ಲವೆ ಒಂದು ಸೇರು) ಆದರೂ ಬೀರ್ ಇರಬಹುದು!

ನಾನೇನೂ ಅಂಥ ಜಟ್ಟಿ ಆಳಲ್ಲ. ಏನೋ ಅದನ್ನು ತೆಗೆದುಕೊಳ್ಳಬೇಕೆಂದು ಆ ಕ್ರುಗ್ ಎತ್ತಲು ಪ್ರಯತ್ನಿಸಿದೆ. ಆದರೆ ಅದು ಒಬ್ಬ ಘಾಂಡಿಗನ ಕಾರ್ಯವೆಂಬುದು ತಿಳಿಯಿತು.

"ಎಲೋ, ತಿನ್ನಲು ಏನಾದರೂ ತಿಂಡಿ ಬೇಕೇ?" ಆ ಪರಿಚಾರಿಕೆ ನನ್ನ ಮೇಲೆ ಹರಿಹಾಯ್ದಳು. ನನಗೆ ಆಕೆಯು ಪುನಬಂದಂತೆ "ಬಾರೋ, ಹೋಗೋ" ಎನ್ನುತ್ತಿದ್ದಳು. ಆಕೆಯ ಮುಖದಲ್ಲಿ ಮಾತ್ರ ಆತ್ಮೀಯತೆಯಿತ್ತು.

"ನನಗೆ ತುಸು ಚಹ ಬೇಕು!"

"ಏನು ಚೇಷ್ಟೆ ಮಾಡುತ್ತಿರುವೆಯಾ? ಇಂತಹ ಉಷ್ಣ ಹವೆಯಲ್ಲಿ ಚಹ ಕುಡಿಯುವನಂತೆ! ನೀನೇನು ಇಂಗ್ಲಂಡ್ ದೇಶದವನೋ? ಹಳ್ಳಿ ಮುಕ್ಕ!"

ಬವೇರಿಯನ್ನರ ಸಹಜ ಆತ್ಮೀಯ ಭಾವನೆಯಿಂದ ಆಕೆಯು ಪ್ರೇಮದಿಂದಲೇ ಇಷ್ಟು ಬಾಯಿ ಸಡಿಲು ಬಿಟ್ಟಿದ್ದಳು.

ಎದುರಿನಲ್ಲಿಯೇ ಕುಳಿತ ಓರ್ವ ಮಧ್ಯಮ ವರ್ಗೀಯ ಗೃಹಸ್ಥನು ನನ್ನ ಹತ್ತರ ಆದರ ಪೂರ್ವಕವಾಗಿ ಬಂದು ಕುಳಿತು ಅವಳಿಗೆ ಹೇಳಿದ, "ಏನೇ, ಇವರು ವಿದೇಶೀಯ ಟೂರಿಸ್ಟರಿದ್ದಾರೆ. ಬಹುತರ ಭಾರತೀಯರಿರಬೇಕು. ಅವರಿಗೆ ಬೇಕಾದ ಚಹ ತಂದು ಕೊಡು ಮೊದಲು!"

"ಅಯ್ಯಯ್ಯೊ, ಎಂತಹ ಪ್ರಮಾದ! ಕ್ಷಮಿಸಿ, ಸಾವಿರ ಸಲ ಕ್ಷಮೆ ಕೇಳುವೆ. ನೀವು ಮ್ಯುನಿಚ್‌ದಲ್ಲಿಯ ಯಾವನೋ ವಿದ್ಯಾರ್ಥಿಯಿರಬಹುದೆಂದು ನನ್ನ ಭಾವನೆಯಾಗಿದ್ದಿತು!" ಅವಳಿಗೆ ನಾಚಿಕೆಯಾದಂತಾಯಿತು. ಆಕೆಯ ನೈಸರ್ಗಿಕ ಕೆಂಪು ಮುಖವು ಮತ್ತಷ್ಟು ಕೆಂಪೇರಿತು.

"ವಿಪರೀತ ಭಾವಿಸಬೇಡಿ" ಆ ಗೃಹಸ್ಥ ವಿನಯಪೂರ್ವಕ ನನಗೆಂದ. ಇಂತಹ ಗ್ರಾಮೀಣ ವಾತಾವರಣದಲ್ಲಿಯ ಬವೇರಿಯನ್ ಜನ ತಮ್ಮತಮ್ಮಲ್ಲಿ ಆತ್ಮೀಯತೆಯಿಂದ ಮಾತಾಡುವಾಗ "ಏನೋ, ಎಂತೋ" ಎಂದು ಸಂಬೋಧಿಸುವರು. ಅದೇಷ್ಟೋ ಬವೇರಿಯನ್ ಜನ ನಿಮ್ಮಂತೆ ಕಂದು ವರ್ಣದವರಿದ್ದಾರೆ. ಆದುದರಿಂದ ನೀವು ಕೂಡ ಇತ್ತಕಡೆಯವರೇ ಎಂದು ಆಕೆ ಭಾವಿಸಿರಬಹುದು."

ಆ ಮನುಷ್ಯ ಮ್ಯುನಿಚ್‌ದಲ್ಲಿಯ ಓರ್ವ ಪ್ರಾಧ್ಯಾಪಕರಿದ್ದು ಸದ್ಯ ಹದಿನೈದು ಇಪ್ಪತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕರೆದು

ಕೊಂಡು ಪ್ರವಾಸಕ್ಕಾಗಿ ಬಂದಿದ್ದರು. ಅವರಿಂದ ಟಿಗರ್ನ್‌ಸೀಕ್ಕೆ ಹನ್ನೆರಡು ನೂರು ವರುಷಗಳ ಪ್ರಾಚೀನ ಹಾಗೂ ಮನೋರಂಜಕ ಇತಿಹಾಸ ವಿದ್ದುದು ತಿಳಿಯಿತು.

"ಈಗ ನಾವು ಕುಳಿತ ಸ್ಥಳ ಕೂಡ ಐತಿಹಾಸಿಕ ಮಹತ್ವದ್ದಿದೆ. ಮಗ್ಗುಲಲ್ಲಿಯೇ ಚರ್ಚ್ ಇದೆ. ಅದರಾಚೆ ಅರಮನೆಯಿದೆ. ನಿಜ ಸಂಗತಿಯೆಂದರೆ ಇದೆಲ್ಲ ಒಂದೇ ಕಟ್ಟಡ..." ಪ್ರಾಧ್ಯಾಪಕರು ವಿವರಗಳನ್ನಿತ್ತರು.

"ಹೀಗೋ? ಸರಿಯಾದ ವ್ಯವಸ್ಥೆ! ರಾಜಕಾರಣದಿಂದ ಬೇಜಾರಾದ ಸಮಯಕ್ಕೆ ಚರ್ಚಿಗೆ ಬಂದು ಧರ್ಮಪ್ರವಚನವನ್ನು ಕೇಳುವುದು, ಅದರಿಂದ ತಲೆಶೂಲಿಯಾದರೆ ಬೀರ್‌ಗೃಹ ಪ್ರವೇಶಿಸಿ ಮದಿರಾಪಾನ. ನಿಜವಾಗಿ ಬುದ್ಧಿವಂತರು ನಿಮ್ಮ ಪೂರ್ವಜರು!" ನಾನೆಂದೆ.

"ಸರಿ, ಸರಿ!" ಪ್ರಾಧ್ಯಾಪಕರು ನಗುತ್ತ ನುಡಿದರು. "ಹೆನ್ರಿಕ್ ಫಾನ್ ಟ್ರಾಯಿತಕೆ ಎಂಬೋರ್ವ ಮಹಾ ಇತಿಹಾಸಕಾರನು ಹೇಳುವಂತೆ 'ಒಂದೇ ಮಾಳಿಗೆಯಡಿಯಲ್ಲಿ ಇಡೀ ಬವೇರಿಯವನ್ನೆಲ್ಲ ಒಂದುಗೂಡಿಸುವ ಮೋಹಿನಿ ವಿದ್ಯೆಯನ್ನು ಈ ಕಟ್ಟಡ ಸಾಧಿಸಿದೆ. ಪೂಜಾಸ್ಥಾನ, ಅರಮನೆ, ಹಾಗೂ ಬೀರ್‌ಗೃಹ! ನಿಜವಾಗಿ ಹೇಳಬೇಕೆಂದರೆ ಬವೇರಿಯದ ಈ ಮೂರು ವೈಶಿಷ್ಟ್ಯಗಳು ಇಂದಿಗೂ ಕೂಡ ಅಚ್ಚಳಿಯದೆ ಉಳಿದಿವೆ. ಬವೇರಿಯನ್ನರಂತಹ ದೇವಭಕ್ತರೂ ಧಾರ್ಮಿಕ ಪ್ರವೃತ್ತಿಯ ಜನರೂ ಬೇರೆಡೆಯಲ್ಲಿ ಕ್ವಚಿತ್ತಾಗಿ ದೊರೆಯುವರು. ಪ್ರಜಾಸತ್ತೆಯ ಅನೇಕ ಪ್ರಯೋಗಗಳು ಜರ್ಮನಿಯಲ್ಲಿ ಆಗಿವೆ, ಆಗುತ್ತಲಿವೆ; ಮಧ್ಯದಲ್ಲಿ ಹಿಟ್ಲರನ ಸರ್ವಾಧಿಕಾರತ್ವವು ಬಂದು ಹೋಯಿತು. ಆದರೆ ಬವೇರಿಯನ್ನರು ಇಲ್ಲಿಯ ರಾಜಮನೆತನದ ಪ್ರತಿನಿಧಿಯನ್ನು ಇದುವರೆಗೂ ತಮ್ಮ ಸಾರ್ವಭೌಮನೆಂದು ಮನ್ನಿಸುವರು, ಹಾಗೂ ಆ ರೀತಿ ಜೈಜೈಕಾರವನ್ನು ಕೂಡ ಮಾಡುವರು. ಬೀರಿಲ್ಲದ ಬವೇರಿಯವೆಂದರೆ ನೀರಿಲ್ಲದ ಮೀನಿನಂತೆ...! ಹೀಗಿದೆ ಮೋಜು ನೋಡಿ!"



ಅರಮನೆ, ಚರ್ಚು ಮತ್ತು ಬೀರಿನ ಅಂಗಡಿ ಇವುಗಳನ್ನು ಹೊಂದಿರುವ ಪ್ರಾಚೀನ ಕಟ್ಟಡ

ಸಾಯಂಕಾಲವಾದಂತೆ ಆ ಬೀರ್ ಗೃಹವು ಜನರಿಂದ ಪ್ರಫುಲ್ಲಿತವಾಗ ತೊಡಗಿತು. ಅಚ್ಚುಕಟ್ಟಾದ ಪೋಷಾಕಿನ ಟೂರಿಸ್ಟರೂ ಈಗ ಬರಲಾರಂಭಿಸಿದರು. ಮಧ್ಯದಲ್ಲಿಯೇ ಏನಿಲ್ಲೆಂದರೂ ನೂರು ಜನ ಟೂರಿಸ್ಟರು ಒಳಗೆ ಪ್ರವೇಶಿಸಿದರು. ಹೋಟೆಲಿನಲ್ಲಿ ಅವರ ಎರಡು ಬಸ್ಸುಗಳು ನಿಂತಿದ್ದವಂತೆ. ನನಗೆ ಮೊದಲಿನಿಂದಲೂ ಒಂದು ಸಂಗತಿ ಚುಚ್ಚುತ್ತಲಿದ್ದಿತು. ಏಕೆಂದರೆ

ಬಹುಜನರು ನನ್ನನ್ನೇ ನೋಡುತ್ತಿದ್ದರು. ಹಲ ಕೆಲವರು ನನ್ನಕಡೆಗೆ ಬೆರಳು ಮಾಡಿ ತೋರಿ ಸುತ್ತಿದ್ದರು. ಎದುರಿಗಿನ ಗೋಡೆಯ ಮೇಲಿದ್ದ ವಿವಿಧಚಿತ್ರಪಟಗಳನ್ನು ನಾನು ನೋಡುತ್ತಲಿದ್ದೆ. ಅಂತಹದೇ ಬೇರೊಂದು ಚಿತ್ರಪಟ ನನ್ನ ಹಿಂಬದಿಯ ಗೋಡೆಯಮೇಲೆ ಇರಬಹುದು

ಕೆಲಕಾಲದ ನಂತರ ಪ್ರಾಧ್ಯಾಪಕ ಮಹಾಶಯರು ತಮ್ಮ ಮೊದಲಿನ ಸ್ಥಾನಕ್ಕೆ ತೆರಳಿದರು. ಅದನ್ನು ನೋಡಿ ಓರ್ವ ತರುಣನು ನನ್ನೆಡೆಗೆ ಬಂದು ವಿನಯದಿಂದ ಕೇಳಿದ: "ಈಗಲೇ ನಾವು ರೋಟನ್‌ಬರ್ಗದಿಂದ ಬಂದಿದ್ದೇವೆ. ಎಂಬತ್ತು ಶಿಕ್ಷಕ ಶಿಕ್ಷಕಿಯರ ಸಮೂಹವಿದೆ ನಮ್ಮದು ನಮ್ಮ ಜತೆಯಲ್ಲಿ ಕುಳಿತುಕೊಳ್ಳಲು ಬರುತ್ತೀರಾ? ನಮಗೆಲ್ಲ ಅತ್ಯಾನಂದವಾಗುವದು."

ನನಗೂ ಕೂಡ ಅದೇ ಬೇಕಾಗಿದ್ದಿತು. ನಾನು ಅವರನ್ನು ಕೂಡಿಕೊಂಡೆ. ಈವಾಗ ಆ ಬೀರ್ ಗೃಹವು ಸಂಪೂರ್ಣವಾಗಿ ಜನರಿಂದ ತುಂಬಿತ್ತು. ಜನಗಳ ಕಿಲಿಬಿಲಿಯಿಂದ ಗೋಡೆಗಳೆಲ್ಲ ಮಾತಾಡುತ್ತಿರುವಂತೆ ಭಾಸವಾಗುತ್ತಿತ್ತು. ಆ ತರುಣ ಸ್ತ್ರೀಪುರುಷರ ಸ್ನೇಹಭಾವದಿಂದ ಉಲ್ಹಸಿತನಾಗಿದ್ದೆ. ಮಾತುಕಥೆಗ ಕಳೆಯೇರಿತ್ತು.

"ಎದುರಿನ ಗೋಡೆಯ ಮೇಲಿದ್ದ ಚಿತ್ರಪಟವನ್ನು ನೋಡಿದಿರಾ?" ನನ್ನ ನೆರೆಯ ಶಿಕ್ಷಿಕೆಯು ಕೇಳಿದಳು. ನಿಜ. ನಾನು ಆ ಚಿತ್ರಪಟವನ್ನು ಇದು ವರೆಗೂ ನೋಡಿರಲಿಲ್ಲ. ಏಕೆಂದರೆ ಇದುವರೆಗೆ ನಾನು ಆ ಚಿತ್ರಪಟದ ಕೆಳಕ್ಕಿದ್ದೆನಲ್ಲವೇ?

ಯಾವುದೋ ಕಾಲದಲ್ಲಿ ಓರ್ವ ಚಿತ್ರಕಾರನು ಎಲ್ಲ ಗೋಡೆಗಳ ಮೇಲೆ ಇಂತಹ ಬಣ್ಣ ತುಂಬಿದ ಚಿತ್ರಗಳನ್ನು ಬರೆದಿಟ್ಟಿದ್ದಾನೆ. ಅರ್ಥಪೂರ್ಣ, ವಿನೋದಿ ಹಾಗೂ ವಾಸ್ತವಿಕ! ಆ ಚಿತ್ರಗಳನ್ನು ಅಳುಕಿಸಬಾರದೆಂದು ನೂರಾರು ವರುಷ ಗೋಡೆಗೆ ಬಣ್ಣವನ್ನೇ ಒಳೆದಿರಲಿಲ್ಲ.

ಅವುಗಳಲ್ಲಿ ತೀರ ಲೋಕಪ್ರಿಯವಾದ ಚಿತ್ರವೆಂದರೆ ಈ ಧಾಂಡಿಗ ಬಾಯರಿಶ್ ಮನುಷ್ಯನದು. ಬಾಯರಿಶ್‌ನಿಗೆ ಬೀರ್ ಅತಿ ಪ್ರಿಯವಾದುದು. ಬೀರ್ ಸೇವನೆಯಿಂದ ಮನುಷ್ಯನ ಬೊಜ್ಜು ಬೆಳೆಯುವುದರಿಂದಲೇ ಬವೇರಿಯನ್ ಜನರು ದೊಡ್ಡ ಹೊಟ್ಟೆಯವರಿದ್ದಂತೆ ಕಾಣುತ್ತದೆ. ಈ ಒಕ್ಕಲಿಗನನ್ನು ನೋಡಿ. ತನ್ನ ನಾಯಿಯನ್ನು ಕರೆಯಲು ಕೊಂಬು ಊದಿ ಊದಿ ದಣಿದಿದ್ದರಿಂದ ಆತನು ಈಗ ಬೊಜ್ಜಿಗೆದ್ದು ಅದನ್ನು ಬೈಯ್ಯುತ್ತಿರುವನು!

ಆತನ ಪ್ರಾಮಾಣಿಕ ನಾಯಿಯು ಯಾವಾಗಲೋ ಆತನ ಅಡಿಯಲ್ಲಿ ಬಂದು ನಿಂತಿದ್ದು ತನ್ನ ಧನಿಯನಿಗೆ ಹುಚ್ಚುಗಿಚ್ಚು ಹತ್ತಿದೆಯೇ ಎಂದು ಚಿಂತಿಸುತ್ತಿದೆ!

ತಾತ್ಪರ್ಯವೇನಂದರೆ ಇದೆಲ್ಲ ಬೀರಿನ ಪ್ರಭಾವ! ಈ ಸದ್ಗೃಹಸ್ಥನಿಗೆ ತನ್ನ ನಗಾರಿಯಂತಹ ಹೊಟ್ಟೆಯ ಬುಡದಲ್ಲಿ ನಿಂತ ನಾಯಿಯು ಹೇಗೆ ಕಾಣಬೇಕು?

ಕೇವಲ ಆ ಚಿತ್ರವನ್ನು ಮತ್ತೆ ಮತ್ತೆ ನೋಡುವುದಕ್ಕಾಗಿ ಸ್ನೇಹಿತರಿಗೆ ತೋರಿಸುವುದಕ್ಕಾಗಿ ಹಾಗೂ ಆ ಬೀರ್ ಗೃಹದ ಸ್ನೇಹಪೂರ್ಣ ವಾತಾವರಣವನ್ನು ಯಥೇಚ್ಛ ಸವಿಯುವದಕ್ಕಾಗಿ ಟೆಗರ್ನಸೇದ ಪ್ರವಾಸವನ್ನು ನಾನು ಮೂರು ನಾಲ್ಕು ಸಲ ಆ ಮೇಲೆ ಮಾಡಿರಬಹುದು.

ಒಂದು ಸಂಗತಿಯನ್ನರಹುವುದು ಉಳಿಯಿತಲ್ಲ?

ಟೆಗರ್ನಸೇ ಸರೋವರದ ಒಂದು ಮಗ್ಗುಲಲ್ಲಿ ಒಂದು "ಆಕಾಶಗಾಡಿ" (Ropeway) ಇದೆ. ಕಬ್ಬಿಣದ ಹಗ್ಗದ ಮೇಲೆ ಜಾರುತ್ತ ಹೋಗುವ ತೀರ ದೊಡ್ಡದಾದ ಪೆಟ್ಟಿಗೆಯಿಂದ ಕೇವಲ ಹತ್ತು ಹನ್ನೆರಡು ನಿಮಿಷಗಳಲ್ಲಿ ಸುಮಾರು ಆರು ಸಾವಿರ ಅಡಿ ಎತ್ತರದ ವಾಲಬರ್ಗ್‌ವೆಂಬ ಆಲ್ಪ್ಸ ಪರ್ವತದ ಒಂದು ಶಿಖರದ ಮೇಲೆ ಹೋಗಲು ಬರುತ್ತದೆ. ಬೇರೆ ಬೇರೆ ಕಾಲದಲ್ಲಿ ಇಲ್ಲಿ ಕಾಣುವ ಸೃಷ್ಟಿಸೌಂದರ್ಯವೆಂದರೆ ನೇತ್ರಗಳಿಗೆ ಹಬ್ಬದೂಟವೇ!

ಆದರೆ ಅದೇಕೋ ಯಾರಿಗೆ ಗೊತ್ತು, ಟೆಗರ್ನ-

ಸೇದ ನೆನಪಾಯಿತೆಂದರೆ ಮೊದಲು ನನಗೆ ಆ ನಾಯಿಯ ಮಾಲಿಕನ ಚಿತ್ರ ಕಣ್ಣುಮುಂದೆ ಕಟ್ಟುತ್ತದೆ. ಇಡೀ ಬವೇರಿಯವೆಲ್ಲ ಈ ಚಿತ್ರ ದಲ್ಲಿ ಸಮಾವೇಶವಾಗಿದೆಯೇನೊ!

ಆಶಿಕ್ಷಕ ಸಮುದಾಯವು ಬವೇರಿಯನ್ನರ ಬೀರ್ ಪ್ರೇಮದ ಬಗ್ಗೆ ಅದೆಷ್ಟೋ ವಿನೋದ ಪೂರ್ಣ ಕತೆಗಳನ್ನೂ ತುಣುಕುಮಿಣುಕುಗಳನ್ನೂ ಹೇಳಿತು. ಬವೇರಿಯನ್ನರು ಯಾವುದೊಂದು ವಸ್ತುವಿನ ಆಳತೆಯನ್ನು ಹೇಳಬೇಕಾದರೆ ಬೀರಿನ ಪೀಪುಗಳ ಲೆಕ್ಕದಲ್ಲಿ ಹೇಳುವರಂತೆ! "ಇಂತಿಂತಹಳು ತೀರ ಕುಳ್ಳಿರುವಳು ಗೊತ್ತೆ?. ಒಂದು ಪೀಪಿನಷ್ಟು ಕೂಡ ಎತ್ತರಿಲ್ಲ ಆಕೆ!" ಇಲ್ಲವೆ "ಆ ಧನಿಕನು ಹೊಸ ಮನೆ ಕಟ್ಟಿಸಿದ್ದಾನಲ್ಲವೇ, ಅದು ಏನಿಲ್ಲವೆಂದರೂ ನೂರು ಪೀಪಿನಷ್ಟು ಸಹ ಜವಾಗಿ ಎತ್ತರವಿದೆ!" ಭಾರತೀಯ ರೈತರು "ಕೈಮಾರಿನಷ್ಟು ಹೊತ್ತು ಏರಿದೆ" ಎಂದು ಹೇಳು ವುದಿಲ್ಲವೆ? ಹಾಗೆಯೆ ಇದು.

ಆ ದಿನ ಬೀರ್‌ಗೃಹವನ್ನು ಬಿಟ್ಟು ತೆರಳುವಾಗ ನಾನು ನನ್ನ ಬಿಲ್ಲಿನ ಬಗ್ಗೆ ವಿಚಾರಿಸಿದೆ. "ಬಿಲ್ ಎಂಥದು? ಆ ರೋಟನಬುರ್ಗ್ ಜನಗಳು ಎಲ್ಲರ ಬಿಲ್ಲು ಚುಕ್ತಾ ಮಾಡಿದ್ದಾರೆ!" ಆಕೆಯೆಂದಳು.

"ನಾನು ಮೊದಲು ಚಹ ಮುಂತಾದ್ದು ತೆಗೆದು ಕೊಂಡೆ. ಅವರ ಬಿಲ್ಲು?"

"ಇಂದಿನ ಮಟ್ಟಿಗೆ ನೀವು ನನ್ನ ಅತಿಥಿಗಳು. ನನ್ನ ನೆನಪಿಗಾಗಿ ಈ ನಾಲ್ಕು ಕಾರ್ಡುಗಳನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳಿ!"

ಗೋಡೆಯ ಮೇಲಿನ ಚಿತ್ರಗಳ ಪ್ರತಿಗಳಿದ್ದವು ಅವು. ನನಗೆ ಅತೀವ ಆನಂದವಾಯಿತು.

"ಬಾರೋ. ಹೋಗೋ" ಎಂದು ಕರೆದು ಈ ವಿದೇಶಿ ಅತಿಥಿಯ ಅವಮಾನ ಮಾಡಿದೆನೆಂಬ ನಾಚಿಕೆ ಭಾವ ಅವಳ ಮುಖದಲ್ಲಿದ್ದಿತು.

"ನಿನ್ನ ಹೆಸರು?" ನಾನು ಕೇಳಿದೆ.

"ಬೇರ್ಥಾ!"

"ಇದು ನೋಡು ಬೇರ್ಥಾ, ಆತ್ಮೀಯತೆ ಯಿಂದ ಹಾಗೂ ಪ್ರೇಮದಿಂದ ನೀನು ಯಾರ ಜೊತೆಯಲ್ಲಾದರೂ ಮಾತಾಡಿದರೆ ಒಂಟಿ ಹೆಸ ರಿನಿಂದ ಕರೆಯುವಿಯಲ್ಲವೇ?" ನಾನು ಕೇಳಿದೆ.

"ಸರಿ. ಬಾಯರ್ನದಲ್ಲಿ ಆ ರೀತಿಯಿದೆ!"

"ನನಗೆ ಈ ರೀತಿ ನೂರಕ್ಕೆ ನೂರು ಸಮ್ಮತ ವಿದೆ. ನನ್ನ ಹೆಸರು ಪಂಡಿತ. ನನಗೆ ಏನೋ, ಎಂತೋ ಅನ್ನು, ನೋಡೋಣ."

"ಇನ್ನು ಅದು ಸರಿ ಹೊಂದಲಾರದು." ಆಕೆ ನಾಚುತ್ತ ಹೇಳಿದಳು "ಮತ್ತೊಂದಾದರೂ ನೀವು ಬಂದಿರೆಂದರೆ ಕರೆಯುವೆನು "ಏ ಪಂಡಿತ" ಎಂದು. ಆಯಿತೇ?" ಆಕೆಯ ಮುಖದ ಹಾಸ್ಯ ಹೆಚ್ಚಾಗಿ ಅರಳಿತು. *



ಮಾತೃಭಕ್ತಿ

ಶ್ರೀ ಕೃಷ್ಣ ಸಾಂದೀಪನಿ ಗುರುಗಳ ಬಳಿ ವಿದ್ಯಾಭ್ಯಾಸ ಪೂರೈಸಿದ ಮೇಲೆ ಸೂಕ್ತ ಗುರುಕಾಣಿಕೆಯನ್ನು ಸಮರ್ಪಿಸಿದನು. ಗುರುಗಳು ಆನಂದಿತರಾಗಿ "ವರ" ಕೇಳೆಂದರು. ಆ ಕಾಲದಲ್ಲಿ ಆ ರೀತಿಯಿತ್ತು. ಶ್ರೀ ಕೃಷ್ಣ ಮತ್ತಾವುದನ್ನೂ ಕೇಳದೆ, "ಮಾತೃ ಹಸ್ತೇನ ಭೋಜನಂ" ಅಂದರೆ ತನಗೆ ಯಾವಾಗಲೂ ತಾಯಿಯ ಹಸ್ತದಿಂದಲೇ ಭೋಜನವಾಗುವಂತೆ ಅನುಗ್ರಹಿಸಿ ಎಂದು ಕೇಳಿಕೊಂಡನು. ಗುರುಗಳು "ತಥಾಸ್ತು" ಎಂದರು. ಮುಂದೆ ಶ್ರೀ ಕೃಷ್ಣ ಸ್ವರ್ಗಸ್ಥನಾದ ಮೇಲೆಯೇ, ಅವನ ತಾಯಿ "ದೇವಕಿದೇವಿ"ಯೂ ಸ್ವರ್ಗಸ್ಥಳಾದಳು. — ಜಿ. ಬಿ. ಕಾಂಬೇಕರ್



ನನ್ನ ಮನೆಯವರೆಲ್ಲರಿಗೆ
ಹಮಾಮ್
ಎಂದರೆ ಬಹಳ ಪ್ರೀತಿ. ಅದರಲ್ಲಿ
ಅಡಗಿರುವ ಒಂದು* ಗುಣದಿಂದ ನನಗೆ
ಉಳಿತಾಯವಾಗುತ್ತದೆ!
HAMAM
the family soap
* ವನಸ್ಪತಿ ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣದಿಂದ ಹಮಾಮ್ ಗಟ್ಟಿಯಾಗಿರುವುದು ಮಾತ್ರವಲ್ಲದೆ ಕೊನೆಯವರೆಗೆ ಸುಗಂಧಮಯವಾಗಿರುತ್ತದೆ. ನೆನಪಿಡಿರಿ. ಪ್ರತಿಯೊಂದು ಹಮಾಮ್ ಸಾಬೂನು ಹೆಚ್ಚು ಸಮಯ ಬರುತ್ತದೆ!
ಟಾಟಾ ತಯಾರಿಕೆ
THY-21-KAN



ಇಂಥ ಭಿಕ್ಷುಕನಾಗುವುದಕ್ಕೆ
ಯೋಗ್ಯತೆ ಬೇಕು

ಭಿಕ್ಷುಕ

ಮೂಲ: ಮಾಮಾ ವರೇರಕರ್
ಅನು : ರಾ. ನಾ. ರತನ್

ಗೋಂದೂ ಬಾಬ್ ಗೋವಾದ ಸುಪ್ರಸಿದ್ಧ ವ್ಯಾಪಾರಿಗಳು. ನಮ್ಮಲ್ಲಿ ಹೇಗೆ ವ್ಯಾಪಾರಿಗಳ ಹೆಸರ ಜೊತೆಗೆ 'ಸೇಠ್' ಅಥವಾ 'ಸಾಹುಕಾರ' ಉಪಪದಗಳು ಉಪಯೋಗಿಸಲ್ಪಡುತ್ತವೆಯೋ ಅದೇ ತರಹ ಗೋವಾದಲ್ಲಿ 'ಬಾಬ್' ಉಪಪದ ಪ್ರಚಲನೆಯಲ್ಲಿದೆ.

ಗೋಂದೂ ಬಾಬ್ ಪಂಜಿಮದ ಬಹಳ ದೊಡ್ಡ ವ್ಯಾಪಾರಿಗಳಾಗಿದ್ದರು. ಅಲ್ಲಿ ಅವರಿಗೆ ತಮ್ಮದೇ ಆದ ಒಂದು ಬ್ಯಾಂಕು ಇತ್ತು ಎಂದು ಹೇಳಿದರೆ ತಪ್ಪೇನಿಲ್ಲ. ಇಂದಿಗೂ ಕೂಡ ಇಂತಹ ಖಾಸಗಿ ಬ್ಯಾಂಕುಗಳು ಗೋವಾದಲ್ಲಿವೆ.

ವ್ಯಾಪಾರಿಯಾದ್ದರಿಂದ ಗೋಂದೂ ಬಾಬ್‌ರ ಕೀರ್ತಿ ಅತ್ಯಂತ ಹೆಚ್ಚಾಗಿತ್ತು. ಹುಂಡಿ ಎಷ್ಟೇ ದೊಡ್ಡ ರಕಮಿನದಾಗಿರಲಿ; ಅದು ಅವರ ಅಂಗಡಿಯಲ್ಲಿ ಮುರಿಯದೆ ಹೋದದ್ದು ಎಂದೂ ಇಲ್ಲ.

ಅತಿಥಿಸತ್ಕಾರಕ್ಕೂ ಸಹ ಅವರ ಹೆಸರು ಬಹುಶ್ರುತವಾಗಿತ್ತು. ಕೊಂಕಣ ಸೀಮೆಯ ಇತರ ಭಾಗಗಳ ಸಾರಸ್ವತ ಬ್ರಾಹ್ಮಣರು ತಮ್ಮ ತಮ್ಮ ಕುಲದೇವತೆಯ ದರ್ಶನಕ್ಕೆಂದು ಗೋವಾಕ್ಕೆ ಬಂದಾಗಲೆಲ್ಲಾ, ದೇವಸ್ಥಾನಕ್ಕೆ ಹೋಗುವಾಗ ಮತ್ತು ಅಲ್ಲಿಂದ ಹಿಂದಿರುಗುವಾಗ ಸಾಮಾನ್ಯವಾಗಿ ಎಲ್ಲರೂ ಮೊಟ್ಟಮೊದಲು ಗೋಂದೂ ಬಾಬ್‌ರ ಮನೆಯಲ್ಲಿ ಬೀಡುಬಿಡುತ್ತಿದ್ದರು. ರಾಮನವಮಿ ಮತ್ತು ಮಾಘ ಪೂರ್ಣಿಮೆಯ ಯಾತ್ರಾಕಾಲದಲ್ಲಿ ಗೋಂದೂಬಾಬ್‌ರ ಮನೆಯಲ್ಲಿ ಎಷ್ಟು ಸಡಗರವಿರುತ್ತಿತ್ತೆಂದರೆ,

ನೋಡಿದವರು ಅವರ ಮನೆಯಲ್ಲಿ:ಯಾವುದೋ ವಿವಾಹ ಸಮಾರಂಭ ನಡೆಯುತ್ತಿದೆ ಎನ್ನಬೇಕು.

ಇಂಥದೇ ಒಂದು ಯಾತ್ರೆಯ ಕಾಲದಲ್ಲಿ ನಾವು ಗೋವಾಕ್ಕೆ ತೆರಳಿದ್ದೆವು. ಯಾವ ಮಹಾನುಭಾವರ ಜತೆ ನಾವು ಗೋವಾಕ್ಕೆ ಹೋಗಿದ್ದೆವೋ ಅವರು ಗೋಂದೂ ಬಾಬ್‌ರಿಗೆ ಘನಿಷ್ಠ ಮಿತ್ರರಾಗಿದ್ದರು. ನಾವು ಗೋವಾ ಸಂದರ್ಶಿಸುತ್ತಿರುವುದು ಅದೇ ಮೊದಲು.

ಗೋಂದೂ ಬಾಬ್‌ರು ನಮಗೆ ನೀಡಿದ ಆತಿಥ್ಯವು ಒಬ್ಬ ರಾಜನಿಗೆ ಮಾಡಿದ ಸತ್ಕಾರದಂತಿತ್ತು. ಎಲ್ಲರಿಗೆ ಭೋಜನಕ್ಕೆಂದು ಬೆಳ್ಳಿ ತಟ್ಟೆಗಳು ಮತ್ತು ಕೂಡಲು ಪುಟ್ಟಪುಟ್ಟ ಹೊನ್ನ ಹೂವುಳ್ಳ ವರ್ಣರಂಜಿತ ಆಸನಗಳನ್ನು ನೋಡಿದ ಮೇಲಂತೂ ನಾವು ದಂಗುಬಡಿದು ಹೋದೆವು! ಬೊಂಬಾಯಿಯ ಶ್ರೀಮಂತಿಕೆಯೊಡನೆ ಈ ಸಿರಿತನದ ಹೋಲಿಕೆ ನಮಗೆ ಬಹು ಅಪೂರ್ವವೆನಿಸಿತು!

ಬೊಂಬಾಯಿಯಲ್ಲೇನು...ಅಬ್ಬಬ್ಬಾ ಅಂದರೆ ಕುರ್ಚಿಗಳು, ಮೇಜುಗಳು, ಕೋಚ್ ಗಾಡಿ, ದೊಡ್ಡ ದೊಡ್ಡ ಕನ್ನಡಿಗಳು, ಅಲಮಾರುಗಳು ಮತ್ತು ಹೆಚ್ಚೆಂದರೆ ರತ್ನಗಂಬಳಿಗಳಿರುತ್ತವೆ— ಅಷ್ಟೇ. ಆದರೆ ಚಿನ್ನ ಬೆಳ್ಳಿಯ ಈ ಭರ್ಜರಿ ಪ್ರದರ್ಶನವನ್ನು ಕಂಡು ನಮಗೆ ಮಂಕು ಬಡಿದುಹೋಯಿತು! ಚಿನ್ನ-ಬೆಳ್ಳಿಯ ಇಷ್ಟೊಂದು ಅಪವ್ಯಯ ನಾವು ಈ ಮೊದಲು ಎಲ್ಲಿಯೂ ನೋಡಿರಲಿಲ್ಲ. ಇತ್ತ ಕುರ್ಚಿ, ಮೇಜು, ಕೋಚ್ ಮತ್ತು ರತ್ನಗಂಬಳಿ ಮುಂತಾದವುಗಳಿಗೆ ಕೂಡ ಯಾವ ಕೊರತೆಯಿರಲಿಲ್ಲ.

ನಮಗೆ ಪ್ರಾಚೀನ ಕಾಲದ ಇತಿಹಾಸ ನೆನಪಾಗಲಾರಂಭಿಸಿತು. ಭಾರತೀಯ ಗತವೈಭವದ ಅವಶೇಷ ಭಾಗವು ಇಂದಿನ ವರೆಗೂ ಗೋವಾದಲ್ಲಿಯೇ ಉಳಿದು ಹೋಗಿದೆಯೆಂದೆನ್ನಿಸಲಾರಂಭಿಸಿತ್ತು.

ಎಲ್ಲಿ ನೋಡಿದರಲ್ಲಿ ಲಕ್ಷ್ಮೀ ಮೂರ್ತಿಮಂತಳಾಗಿ ವಿಲಾಸವಾಡುತ್ತಿದ್ದಾಳೋ ಏನೋ ಎಂದು ಭಾಸವಾಗುತ್ತಿತ್ತು. ಮನೆ ಹೆಂಗಸರು ಸ್ವಯಂ ಬಡಿಸುತ್ತಿದ್ದರು. ಅಂದರೆ ಅವರ ಮನೆಯಲ್ಲಿ ಭಟ್ಟರಾಗಲಿ ಅಥವಾ ನೌಕರರಾಗಲಿ ಇರಲಿಲ್ಲವೆಂದರ್ಥವಲ್ಲ. ಆದರೆ ಅತಿಥಿಗಳಿಗೆ ತಕ್ಕ ವ್ಯವಸ್ಥೆಗಳನ್ನೆಲ್ಲಾ ಮನೆ ಜನರೇ ಮಾಡಬೇಕು. ಇದು ಅಲ್ಲಿಯ ಸಂಪ್ರದಾಯ. ಆ ಸ್ತ್ರೀಯರು ಅಡಿಯಿಂದ ಮುಡಿಯವರಿಗೆ ಮಾಣಿಕ್ಯ ಮುತ್ತುಗಳ ಆಭರಣಗಳಿಂದ ತುಂಬಿ ಶೋಭಿಸುತ್ತಿದ್ದರು.

ಭೋಜನಾನಂತರ ಕೈ ತೊಳೆದುಕೊಂಡೆವು. ಕರವಸ್ತ್ರವನ್ನು ಹಿಡಿದುಕೊಂಡು ಮನೆ ಹುಡುಗರೇ ನಿಂತಿದ್ದರು. ನಮ್ಮ ಕೈಗಳನ್ನೂ ಕೂಡ ಅವರೇ ತೊಳೆಸಿದ್ದರು.

ಊಟವಾದ ಮೇಲೆ ಸಾಮಾನ್ಯವಾಗಿ ಎಲ್ಲರೂ ಮಲಗಿ ನಿದ್ರೆಹೋದರು. ಸ್ಟೀಮ್ ಬೋಟಿನಲ್ಲಿ ಪ್ರಯಾಣ ಮಾಡಿದ ಕಾರಣ ಎಲ್ಲರೂ ಬಳಲಿ ಹೋಗಿದ್ದರು. ಹಾಸಿಗೆಗಳ ವ್ಯವಸ್ಥೆಯನ್ನು ನೋಡಿ ನಮಗೆ ಅಷ್ಟೇ ಆಶ್ಚರ್ಯವಾಯಿತು! ಹದಿನೈದು ಇಪ್ಪತ್ತು ಅತಿಥಿಗಳಿಗೆ ಒಂದೇ ತರಹದ ಸ್ವಚ್ಛ ಕೋಮಲ ಸುಪ್ಪತ್ತಿಗೆಗಳು ಮತ್ತು ಅಂಚು ಕಟ್ಟಿದ ರಜಾಯಿಗಳು ಸುವ್ಯವಸ್ಥಿತವಾಗಿ ಒದಗಿಸಲ್ಪಟ್ಟಿದ್ದವು.

ಅಂಚುಕಟ್ಟಿದ ಕೋಮಲ ರಜಾಯಿಯ ಸ್ಪರ್ಶಸುಖವನ್ನು ಬಿಟ್ಟು ನಾನು ಮಾತ್ರ ಹೊರಗಿನ ಜಗಲಿ ಮೇಲೆ ಹೋಗಿ ಕುಳಿತುಬಿಟ್ಟಿದ್ದೆ. ಸಮುದ್ರ ಪ್ರಯಾಣದಿಂದ ನನಗೆ ಯಾವ ತೊಂದರೆಯಾಗಲಿಲ್ಲ. ಆದಕಾರಣ ಬಳಲಿಕೆ ಅನುಭವವಾಗುತ್ತಿರಲಿಲ್ಲ. ಪುಕ್ಕಟೆ ಮೃದು ಹಾಸಿಗೆ ಸಿಕ್ಕುಬಿಟ್ಟಿದೆಯೆಂದು, ಹೋಗಿ ಅದರ ಮೇಲೆ ಬಿದ್ದುಕೊಂಡಿರೋಣ ಎಂಬ ವಿಚಾರ ನನಗೆ ಹಿಡಿಸಲಿಲ್ಲ.

ಗೋವಾದ ಹಳೆಯ ಮನೆಗಳ ಮುಂಭಾಗವು ನಮ್ಮಲ್ಲಿನ ಪ್ರಾಚೀನ ಮಂದಿರಗಳ ಸಭಾಮಂಟಪಗಳಂತೆ ಇರುತ್ತದೆ. ಬಾಗಿಲನ್ನು ಬಿಟ್ಟು ಮನೆಯ ಮೂರು ಕಡೆಗಳಲ್ಲಿಯೂ ಗಾರೆಯಿಂದ

ಕಟ್ಟಿದ ಮಜಬೂತಾದ ಜಗಲಿಗಳಿರುತ್ತವೆ. ಆ ಜಗಲಿಗಳಲ್ಲೊಂದರ ಮೇಲೆ ನಾನು ಕುಳಿತಿದ್ದೆ.

ನೋಡಿದರೆ ಗೋಂದೂ ಬಾಬ್ ನನಗಿಂತಲೂ ಮೊದಲೇ ಆ ಜಗಲಿಗಳಲ್ಲಿ ಇನ್ನೊಂದರ ಮೇಲೆ ತಳವೂರಿದ್ದರು. ನನ್ನನ್ನು ನೋಡುತ್ತಲೇ ಅವರೆಂದರು: "ಏಕೆ ಸ್ವಾಮಿ! ನೀವು ನಿದ್ದೆ ಹೋಗಲಿಲ್ಲ?"

ನಾನೆಂದೆ, "ಮಧ್ಯಾಹ್ನ ಮಲಗಿ ನನಗೆ ಅಭ್ಯಾಸವಿಲ್ಲ. ಏನಾದರೂ ಮಲಗಿಬಿಟ್ಟರೆ ರಾತ್ರಿ ನಿದ್ರೆ ನಿಷಿದ್ಧವಾಗಿ ಬಿಡುತ್ತದೆ."

ನನ್ನ ಮಾತು ಕೇಳಿ ಗೋಂದೂಬಾಬ್‌ರು ನಕ್ಕುಬಿಟ್ಟರು. ಆದರೆ ಆ ಹಾಸ್ಯದಲ್ಲಿ ಖಿನ್ನತೆಯ ಹೊಳಪು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ನಮಗೆ ಆತಿಥ್ಯ ನೀಡಿದ ಸಮಯದಲ್ಲಿ ಯಾವ ವ್ಯಕ್ತಿ ಅತ್ಯಂತ ಉಲ್ಲಸಿತ ಸ್ವಭಾವದಿಂದ ಓಡಾಡುತ್ತಿದ್ದನೋ ಅವನು ಈಗ ತಾನೇ ಖಿನ್ನ ಮನಸ್ಕನಾಗಬೇಕಾದರೆ ಅಂಥದ್ದು ಏನಾಗಿ ಹೋಯಿತು? ಈ ಪ್ರಶ್ನೆ ನನ್ನ ಮನಸ್ಸಿನಲ್ಲಿ ಮೂಡಿತು. ಕಾರಣ ಕೇಳಿಬಿಡೋಣವೆಂದು ಮನಸ್ಸಿಗೆ ಅನ್ನಿಸಿತು ಕೂಡ, ಆದರೆ ಧೈರ್ಯ ಬರುತ್ತಿರಲಿಲ್ಲ. ನನ್ನ ಉತ್ತರ ಕೇಳಿ ಅವರು ಕತ್ತು ಆ ಕಡೆ ತಿರುಗಿಸಿಕೊಂಡು ಬೀದಿಯತ್ತ ನೋಡಲಾರಂಭಿಸಿದರು.

ನಾನು ಒಂದೇಸಮನೆ ದೃಷ್ಟಿ ನೆಟ್ಟು ಅವರ ಮುಖದತ್ತ ನೋಡುತ್ತಲಿದ್ದೆ- ಕ್ಷಣ ಕ್ಷಣಕ್ಕೂ ಅವರ ಮುಖ ಹೆಚ್ಚು ಹೆಚ್ಚಾಗಿ ಸಪ್ಪೆಯಾಗುತ್ತಾ ಹೋಗುತ್ತಿದೆಯೆಂದು ಕಂಡು ಬರುತ್ತಿತ್ತು. ಅವರ ಕಣ್ಣುಗಳು ತುಂಬಿಕೊಂಡಿವೆಯೆಂದು ಕೂಡ ನನಗೆ ಭಾಸವಾಯಿತು.

ಇದೇ ಸಮಯಕ್ಕೆ ಸರಿಯಾಗಿ ಭಿಕ್ಷುಕನೊಬ್ಬ ಬಂದು ಅವರ ಬಾಗಿಲಲ್ಲಿ ನಿಂತುಕೊಂಡ. ಗೋವಾದ ಭಾಷೆಯಲ್ಲಿ ಅವನು ಕೂಗು ಹಾಕಿದ. "ಭಿಕ್ಷೆ ನೀಡಿ ಮಹಾಸ್ವಾಮಿ!" ಗೋಂದೂ ಬಾಬ್ ಎದ್ದರು. ಒಳಗಿನಿಂದ ಬೊಗಸೆ ತುಂಬ ಅಕ್ಕಿ ತಂದು ಅವನ ಜೋಳಿಗೆಯಲ್ಲಿ ಹಾಕಿಬಿಟ್ಟರು. ಅಕ್ಕಿ ಜೋಳಿಗೆಗೆ ಹಾಕುವ ಸಮಯದಲ್ಲಿ ಒಂದು ತೊಟ್ಟು ಕಣ್ಣೀರು ಅವರ ಕಣ್ಣುಗಳಿಂದ ಟಪ್ಪನೆ ಬಿಕ್ಷುಕನ ಮಣಿಕಟ್ಟಿನ ಮೇಲೆ ಬಿತ್ತು.

ಭಿಕ್ಷುಕ ಒಮ್ಮೆಂದೊಮ್ಮೆ ಬೆಚ್ಚಿ ಕತ್ತೆತ್ತಿ ನೋಡಿದ. ಇಬ್ಬರ ಕಣ್ಣುಗಳು ಪರಸ್ಪರ ಭೆಟ್ಟಿಯಾದವು. ಗೋಂದೂ ಬಾಬ್‌ರ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಹರಿಯುತ್ತಿತ್ತು.

ಭಿಕ್ಷೆ ಹಾಕಿ ಗೋಂದೂ ಬಾಬ್ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಲು ತಿರುಗುತ್ತಿರುವಂತೆಯೇ ಆ ಭಿಕ್ಷುಕ ಗೋವಾ ಭಾಷೆಯಲ್ಲಿ ಕೇಳಿದ, "ಯಾಕಯ್ಯ ಬ್ರಾಹ್ಮಣ? ಅಳ್ತಾ ಇರೋದ್ಯಾಕೆ?"

ಗೋಂದೂ ಬಾಬ್ ಹೇಳಿದರು, "ಏನಿಲ್ಲ. ಸುಮ್ಮನೆ. ಇನ್ನೂ ಭಿಕ್ಷೆ ಹಾಕಲಾ?"

ಭಿಕ್ಷುಕ ಅವರ ಮುಖದತ್ತ ಒಂದೇ ಸಮ ನೆಟ್ಟ ದೃಷ್ಟಿಯಿಂದ ನೋಡುತ್ತಲಿದ್ದ. ಒಂದು ಕ್ಷಣ ಕಳೆದ ಕೂಡಲೇ ಅವನೆಂದ, "ಬೆಂಕಿ ಹಚ್ಚು ನಿನ್ನ ಭಿಕ್ಷಕ್ಕೆ! ಮೊದಲು ಹೇಳು, ನಿನ್ನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತೇಕೆ? ನಿನ್ನಂತಹ ಶ್ರೀಮಂತ– ಸಾವಿರಾರು ಹೊಟ್ಟೆಗಳನ್ನು ಕಾಪಾಡುವವ– ಅನೇಕ ಮೊಮ್ಮಕ್ಕಳ ಅಜ್ಜ– ನಿನ್ನ ಅನ್ನದಿಂದ ನಾನು ಬದುಕಿದೆ ಮತ್ತು ಈಗ ನೀನು ದುಃಖಪೀಡಿತನಾಗಿರುವಾಗ ಇನ್ನೂ ಭಿಕ್ಷೆ ಬೇಕೆ ಅಂತಾ ಕೇಳುತ್ತಿದ್ದೀಯಾ? ಹೇಳಯ್ಯಾ ಹೇಳು, ಮನೇಲಿ ಯಾರಾದರೂ ಕಾಯಿಲೆಯಿದ್ದಾರಾ?"

ಗೋಂದೂ ಬಾಬ್‌ಗಳು ತಲೆಯನ್ನಲ್ಲಾಡಿಸಿ "ಯಾರೂ ಇಲ್ಲ" ಎಂದರು. ಅಂದ ಮಾತ್ರಕ್ಕೆ ಭಿಕ್ಷುಕ ಸುಮ್ಮನಾಗಲಿಲ್ಲ. ಮುಂದುವರಿದು ಅವನೆಂದ, "ಯಾರೂ ಕಾಯಿಲೆಯಿಲ್ಲದಿದ್ದರೆ ನಿನ್ನ ಕಣ್ಣುಗಳು ನೀರು ತುಂಬಿಕೊಂಡು ಇದ್ದದ್ದೇಕೆ? ನಿನ್ನ ದುಃಖಕ್ಕೆ ಕಾರಣ ತಿಳಿದ ಹೊರತು ನಾನು ಇಲ್ಲಿಂದ ಒಂದು ಹೆಜ್ಜೆಯೂ ಮುಂದಿಡುವುದಿಲ್ಲ. ಅಲ್ಲಯ್ಯಾ! ಯಾರೇ ಆಗಲಿ ತಮ್ಮ ದುಃಖವನ್ನು

ಇತರರೊಡನೆ ಹೇಳಿಕೊಳ್ಳಬೇಕು. ಯಾರು ಯಾವ ರೀತಿಯ ಸಹಾಯ ನೀಡಬಲ್ಲರೋ ಯಾರು ಬಲ್ಲರು?"

ಗೋಂದೂ ಬಾಬ್‌ರು ಬಹಳ ಹೊತ್ತು ಸುಮ್ಮನಿದ್ದು, ತರುವಾಯ ಹೇಳಿದರು, "ನಿನ್ನೊಡನೆ ಹೇಳಿ ಪ್ರಯೋಜನವೇನು? ನನಗೊದಗಿ ಬಂದಿರುವ ಸಂಕಟ ಬಹಳ ದೊಡ್ಡದು. ನಿನ್ನಂತಹ ಭಿಕ್ಷುಕ ಅದನ್ನು ನಿವಾರಿಸಲಾರ. ಕಾಯಿಲೆ ಏನಾದರೂ ಆಗಿದ್ದರೆ ನೀನು ಯಾವುದಾದರೂ ಒಂದು ಗಿಡಮೂಲಿಕೆಯನ್ನು ಹೇಳಿಬಿಡ್ತಿದ್ದೆ. ಆದರೆ ಈ ಸಂಕಟವೇ ಬೇರೆ ತರಹದ್ದು. ಭಿಕ್ಷುಕ ಅದನ್ನು ದೂರ ಮಾಡಲಾರ—"

ಭಿಕ್ಷುಕನೆಂದ, "ನೋಡಯ್ಯ ಬ್ರಾಹ್ಮಣ, ಹೀಗೇಕೆ ನೀನು ಧೈರ್ಯ ಕೈಬಿಡ್ತಿದ್ದೀಯಾ? ಯಾರು, ಯಾವಾಗ, ಯಾವ ರೀತಿ ಸಹಾಯ ಮಾಡಿಬಿಡ್ತಾನೋ!... ಯಾರೂ ಹೇಳಲಾರರು. ನಾನು ಭಿಕ್ಷುಕನಾದರೇನಂತೆ? ದೇವರು ಯಾರ ಬಾಯಿಂದ ಏನು ಹೇಳಿಬಿಡ್ತಾನೋ— ಇದು ಯಾರಿಗೂ ಗೊತ್ತಾಗುವುದಿಲ್ಲ. ಏನೂ ಸಂಕೋಚ ಪಡಬೇಡ. ಮನಸ್ಸು ಬಿಚ್ಚಿ ನನಗೆ ಹೇಳಿಬಿಡು, ನಿನಗೇನು ತೊಂದರೆ?"

ಭಿಕ್ಷುಕನ ಮಾತುಗಳಿಂದ ಗೋಂದೂಬಾಬ್ ತುಸು ಧೈರ್ಯ ತಂದುಕೊಂಡಂತೆ ಕಂಡು ಬಂದರು. ಮನಸ್ಸು ಗಟ್ಟಿಮಾಡಿ ಅವರೆಂದರು, "ಏನು ಹೇಳಲಪ್ಪಾ, ಈವತ್ತು ಮಾನಹೋಗುವ ಪ್ರಸಂಗ ಬಂದೊದಗಿದೆ. ಎರಡು ಲಕ್ಷದ ಬೊಂಬಾಯಿಯ ಹುಂಡಿ ಬಂದಿದೆ. ಅಂಗಡೀಲಿ ಐವತ್ತು ಸಾವಿರಕ್ಕಿಂತ ಒಂದು ಪೈಸಾನೂ ಹೆಚ್ಚಾಗಿಲ್ಲ. ಮನೆ ಒಡವೆಗಳನ್ನು ಮಾರಿದರಂತೂ ಇಷ್ಟು ಹಣ ಸುಲಭವಾಗಿ ಸಿಕ್ಕುಬಿಡುತ್ತದೆ. ಅದಕ್ಕಾಗಿ ಹೋಗಿ ಹೆಂಗಸರು-ಮಕ್ಕಳ ಮುಂದೆ ಕೈ ಒಡ್ಡಲೇ? ಅವರ ಹತ್ತಿರ ಹೋಗಿ, ನನ್ನನ್ನು ಸಂಕಟದಿಂದ ಪಾರು ಮಾಡೋ ಸಲುವಾಗಿ ನೀವು ನಿಮ್ಮ ಒಡವೆಗಳನ್ನು ನನಗೆ ಕೊಟ್ಟುಬಿಡಿ ಅಂತಾ ಕೇಳಲಾ? ಬೇರೆ ಸಾಹುಕಾರರಿದ್ದಾರೆ, ಅವರು ಈ ರಕಮು ಕೊಡಬಲ್ಲರು. ಆದರೂ ಅವರು ನನಗೆ ಪರಮ ವೈರಿಗಳು. ಅವರೆಲ್ಲ ನಾನು ದಿವಾಳಿ ಯಾವಾಗ ಏಳ್ತೀನೋ ಅನ್ನೋದನ್ನೇ ಹೊಂಚು ಹಾಕ್ತಾ ಇದ್ದಾರೆ. ಅಂಥವರ ಬಾಗಿಲಿಗೇ ಹೋಗಿ ಸಾಲ ಹೇಗೆ ಕೇಳಲಿ? ಸಂಜೆ ಆರು ಗಂಟೆಗೆ ಮೊದಲು ಈ ಹುಂಡಿಯನ್ನೇನಾದರೂ ಬಿಡಿಸಿಕೊಳ್ಳದಿದ್ದಲ್ಲಿ ವಿಷ ತಿಂದು ಪ್ರಾಣ ಕಳೆದುಕೊಳ್ಳೋದು ಬಿಟ್ಟು ನನಗೆ ಬೇರಾವ ದಾರಿಯಿಲ್ಲ. ಈವತ್ತು ನಾನು ದಿವಾಳಿ ಏಳ್ತೀನಿ, ಆದ್ದರಿಂದ ಎಲ್ಲರೂ ಉತ್ಸುಕರಾಗಿ ಕಾಯುತ್ತಿದ್ದಾರೆ. ಇಂಥ ಸಮಯದಲ್ಲಿ ಏನು ಮಾಡಲಿ? ಅಯ್ಯಾ! ನನ್ನ ಬಗ್ಗೆ ನಿನಗೆ ಕನಿಕರ ಉಂಟಾಯಿತು ನಿಜ, ಆದರೆ ಈ ಸಂಕಟದಲ್ಲಿ ನೀನು ನನಗೇನು ಸಹಾಯ ಮಾಡಬಲ್ಲೆ!"

ಭಿಕ್ಷುಕ ಗಹಗಹಿಸಿ ನಕ್ಕುಬಿಟ್ಟು ಹೇಳಿದ, "ಹತ್ ತೇರೀಕೆ! ಆಗಿಹೋಯ್ತು, ಇಷ್ಟೇನಾ ವಿಷಯ? ನಡೀ ನನ್ನ ಜತೇಲಿ. ನೋಡು, ಈ ಭಿಕ್ಷುಕನದ್ದೂ ಸಹ ಒಬ್ಬ ಶ್ರೀಮಂತನ ಮೇಲೆ ಎಷ್ಟು ಪ್ರಭಾವವಿದೆ ಅನ್ನೋದನ್ನ!"

ಅವನ ಈ ಮಾತು ಕೇಳಿ ನಾನು ಒಮ್ಮೆಲೇ ದಂಗಾಗಿಬಿಟ್ಟೆ! ಗೋಂದೂ ಬಾಬ್‌ರೂ ಆಶ್ಚರ್ಯಚಕಿತರಾಗಿ ಬಿಟ್ಟವರಂತೆ ಕಂಡುಬಂತು. ಆದರೆ ಭಿಕ್ಷುಕನು ಆಗ್ರಹ ಮಾಡಿದ ಕಾರಣ ಅವರು ಬಟ್ಟೆ ಹಾಕಿಕೊಂಡು ಬಂದರು. ಮತ್ತು ಅವನೊಡನೆ ಹೋಗಲು ತಯಾರಾಗಿ ನಿಂತರು.

ನಾನು ಸಹಜವಾಗಿ ಅವರನ್ನು ಕೇಳಿದೆ, "ನಾನೂ ಬರಲೇನು ನಿಮ್ಮ ಕೂಡ?"

ತಡೆದು ನಿಂತು ಗೊಂದೂ ಬಾಬ್‌ರು ಹೇಳಿದರು, "ನಡೀರಿ. ಆದರೆ ಯಾರ ಜೊತೆಯಲ್ಲೂ ಏನೂ ಬಾಯಿ ಬಿಡಬೇಡಿ."

ನಾವು ಮೂವರೂ ಸದ್ದಿಲ್ಲದೆಯೆ ತೆರಳಿದೆವು.

*

ಸ್ವಲ್ಪ ಹೊತ್ತಾದ ಬಳಿಕ ನಾವು ಒಬ್ಬ ಕ್ರೈಸ್ತ ಮಹಾಶಯರ ಬಂಗಲೆ ಎದುರಿಗೆ ಬಂದು ನಿಂತೆವು. ಆ ಬಂಗಲೆ ಫ್ರೆಂಚ್ ಮಾದರಿಯಿಂದ ಕಟ್ಟಿದ್ದು. ಮುಂಭಾಗದಲ್ಲಿ ವಿಲಾಯತಿ ಹೂಗಳ

ತೋಟವಿತ್ತು. ನಮ್ಮನ್ನು ಪ್ರಾಕಾರದ ದ್ವಾರದ ಬಳಿ ನಿಂತಿರುವಂತೆ ಹೇಳಿ ಭಿಕ್ಷುಕ ಒಳಗೆ ಹೊರಟು ಹೋದ.

ನಾವು ಅಲ್ಲಿ ಬಹಳ ಹೊತ್ತಿನಿಂದ ನಿಂತು ಕೊಂಡಿರುವಂತೆ ನಮಗೆ ಭಾಸವಾಯಿತು.

ನಮ್ಮ ಮನಸ್ಸಿಗೆ, ಈ ರೀತಿ ಹುಚ್ಚರಂತೆ ನಾವು ಎಲ್ಲಿಯವರೆಗೆ ಇಲ್ಲೇ ನಿಂತುಕೊಂಡಿರ ಬೇಕೆಂಬ ಕಲ್ಪನೆಯ ಅರಿವೂ ಕೂಡ ಆಯಿತು.

ಗೋಂದೂ ಬಾಬ್‌ರು ನನ್ನೊಡನೆ ಹೇಳಿದರು, "ನಾನೂ ಎಂಥ ಹುಚ್ಚ! ಒಬ್ಬ ಭಿಕ್ಷುಕ ಭರ ವಸೆ ಕೊಟ್ಟ ಅಂತಾ ಕಡು ಲೋಭಿಯಂತೆ ನಾನೂ ಕೂಡ ಅವನ ಹಿಂದೆ ಬಿದ್ದೆ. ದಾರಿಯಲ್ಲಿ ಎಷ್ಟು ಹೊತ್ತಿನಿಂದ ಈ ರೀತಿ ನಾನೊಬ್ಬನೇ ನಿಂತಿದ್ದೀನಿ? ನೋಡಿ ಜನ ಏನು ಹೇಳಿಕೊಳ್ತಾರೋ ಅಂತ ನನಗೆ ಬಹಳ ನಾಚಿಕೆ ಆಗ್ತಿದೆ. ನಡೀರಿ, ನಾವು ಮನೆಗೆ ಹಿಂತಿರುಗೋಣ. ಒಳ್ಳೆಯ ದಾಯ್ತು, ನೀವು ನನ್ನ ಜೊತೆಯಲ್ಲಿ ಬಂದುಬಿಟ್ಟಿದ್ದು. ಒಂಟಿಯಾಗಿ ಏನಾದರೂ ಬಂದಿದ್ದರೆ, ನನಗೆ ಬಹಳ ಅಸಹ್ಯವಾಗಿ ಕಾಣೋದು!"

ನಾವು ಹಿಂತಿರುಗುವುದಕ್ಕೇ ಇದ್ದೆವು. ಅಷ್ಟರಲ್ಲೇ ಬಂಗಲೆಯಿಂದ ನೌಕರನೊಬ್ಬ ಬಂದು ನಮಗೆ ಹೇಳಿದ, "ಒಳಗೆ ದಯಮಾಡಿಸಿ. ಸಾಹೇಬರು ನಿಮ್ಮನ್ನು ಕರೆಯುತ್ತಿದ್ದಾರೆ."

ಆಶ್ಚರ್ಯಚಕಿತರಾಗಿ ನಾವು ಒಳಹೊಕ್ಕೆವು.

ಮಹಡಿ ಮೇಲೆ ಮೇಜಿನ ಹಿಂದಿದ್ದ ಒಂದು ಕುರ್ಚಿಯ ಮೇಲೆ ಅತ್ಯಂತ ವೃದ್ಧರಾದ ಕ್ರೈಸ್ತ ಮಹಾನುಭಾವರೊಬ್ಬರು ಕುಳಿತುಕೊಂಡಿದ್ದರು. ನಾವು ಅಲ್ಲಿಗೆ ಹೋಗುತ್ತಲೇ ಕುರ್ಚಿಯಿಂದ ಏಳುವಂತೆ ಪ್ರಯತ್ನಿಸುತ್ತಾ ಅವರೆಂದರು, "ನನಗೆ ಲಖ್ವಾ (ಪಾರ್ಶ್ವವಾಯು) ಹೊಡೆದು ಬಿಟ್ಟಿದೆ. ಕ್ಷಮಿಸಿರಿ. ಏಳಲಾರೆ."

ನಾವು ಮುಂದೆ ಹೋಗಿ ಅವರೊಡನೆ ಕೈ-ಕುಲುಕಿದೆವು. ಬಹಳ ಹೊತ್ತಿನ ವರೆಗೆ ಅವರಿಬ್ಬರೂ ಪೋರ್ಚುಗೀಸ್ ಭಾಷೆಯಲ್ಲಿ ಮಾತನಾಡುತ್ತಿದ್ದರು. ನಂತರ ಗೋಂದೂ ಬಾಬ್‌ರು ತಮ್ಮ ಮಾತುಕತೆಯ ಸಾರಾಂಶ ನನಗೆ ಹೇಳಿದರು.

ಆ ಭಿಕ್ಷುಕ ಗೋಂದೂ ಬಾಬ್‌ರ ವೃತ್ತಾಂತ ವನ್ನೆಲ್ಲಾ ಆ ವೃದ್ಧರಿಗೆ ತಿಳಿಸಿದ್ದ. ವೃದ್ಧರು ಗೋಂದೂ ಬಾಬ್‌ರಿಂದ ಸಂಗತಿಯನ್ನೆಲ್ಲಾ ವಿಸ್ತಾರಪೂರ್ವಕವಾಗಿ ತಿಳಿದುಕೊಂಡರು ಮತ್ತು 'ಬಂಕು ನಛಿನಾಲ್ ಉಲಿತ್ರಾ ಮಾರಿ-ನ್' ನ ಎರಡು ಲಕ್ಷದ ಚೆಕ್ಕು ಅವರಿಗೆ ಕೊಟ್ಟು ಬಿಟ್ಟರು. ರಕಮು ಪೂರ್ತಿಯಾಗಿ ಹದಿನೈದು ದಿವಸಗಳಲ್ಲಿ ಹಿಂತಿರುಗಿಸಿಬಿಡಲಾಗುತ್ತದೆ ಎಂದು ಕೂಡ ಅವರು ಗೋಂದೂ ಬಾಬ್‌ರಿಂದ ಬರೆಸಿಕೊಂಡರು.

ನಾವು ಹೊರಗೆ ಬಂದೆವು. ಆ ಭಿಕ್ಷುಕ ಎಲ್ಲಿ-ಯೂ ಕಣ್ಣಿಗೆ ಕಂಡು ಬರುತ್ತಿರಲಿಲ್ಲ. ಗೋಂದೂ ಬಾಬ್‌ರಿಗಿಂತ ಹೆಚ್ಚಾಗಿ ನಾನು ಆಶ್ಚರ್ಯಚಕಿತನಾಗಿಬಿಟ್ಟಿದ್ದೆ! ಇಂಥ ಭಾರಿ ಶ್ರೀಮಂತನ ಮೇಲೆ ಲೆಕ್ಕಕ್ಕಿಲ್ಲದ ಭಿಕ್ಷುಕನೊಬ್ಬನ ಇಷ್ಟೊಂದು ಪ್ರಭಾವ ಹೇಗೆ? ಅಲ್ಲದೆ ನಮಗೆ ಸಹಾಯ ಮಾಡಿ ಆ ಭಿಕ್ಷುಕ ಹೊರಟು ಹೋದುದೇಕೆ, ತನ್ನ ದೊಡ್ಡಸ್ತಿಕೆಯ ದಮ್ಮು ಪ್ರದರ್ಶಿಸಿಕೊಳ್ಳಲು ಇಲ್ಲಿ ನಿಂತುಕೊಂಡಿರಲಿಲ್ಲವೇಕೆ, ಎಂಬುದರ ಬಗ್ಗೆಯೇ ಮೇಲಿಂದ ಮೇಲೆ ನಮಗೆ ಆಶ್ಚರ್ಯವಾಗುತ್ತಲಿತ್ತು. ಗೋಂದೂ ಬಾಬ್‌ರಿಗಂತೂ ಇದೊಂದು ದೈವೀಚಮತ್ಕಾರವೇ ಎಂದೆನಿಸುತ್ತಿತ್ತು!

*

ನಾವು ಮನೆಯನ್ನು ಇನ್ನೇನು ಸೇರಬೇಕು, ಅಷ್ಟರಲ್ಲಿ ಆ ಭಿಕ್ಷುಕನೂ ಸಹ ನಮ್ಮ ಮನೆಯ ಹತ್ತಿರ ಬಂದ. ನಮ್ಮನ್ನು ನೋಡುತ್ತಲೇ ಅವನು ಥಟ್ಟನೆ ಕೇಳಿದ, "ಯಾಕಯ್ಯ ಬ್ರಾಹ್ಮಣ! ಆಯ್ತಾ ನಿನ್ನ ಕೆಲಸ?"

ಗೋಂದೂ ಬಾಬ್‌ರು ಒಮ್ಮಿಂದೊಮ್ಮೆ ಅವನ ಕಾಲುಗಳನ್ನು ಹಿಡಿದುಕೊಂಡರು. ಅವರನ್ನು ಮೇಲಕ್ಕೆತ್ತಿ ಭಿಕ್ಷುಕನೆಂದ, "ಇದೆಂಥ ಹುಚ್ಚುತನವಯ್ಯಾ ಇದು? ನಿನ್ನ ಕೆಲಸ ಅಂತೂ



ಆಧುನಿಕ ಮನೆಗಳಲ್ಲಿ ಸರ್ಫ್...
'ಹೊಸ ಕ್ರಮಗಳನ್ನು ಅನುಸರಿಸಿರಿ..'
ಎಂದು ಓರ್ವ ಬಂಗಾಳಿ ಗೃಹಿಣಿ ಶ್ರೀಮತಿ ನಂದಿತಾ ರಾಯ್ ಹೇಳುತ್ತಾರೆ.
'ಉದಾಹರಣೆಗೆ ಸರ್ಫನ್ನೇ ತೆಗೆದುಕೊಳ್ಳಿರಿ. ಅದನ್ನು ನಾನು ಚೆನ್ನಾಗಿ ಉಪಯೋಗಿಸಿ ನೋಡಿದ್ದೇನೆ. ಈಗ ನಾನು ಎಲ್ಲ ಬಟ್ಟೆಗಳನ್ನು ಸರ್ಫ್‌ನಿಂದಲೆ ಒಗೆಯುತ್ತೇನೆ' ಶ್ರೀಮತಿ ರಾಯ್‌ಗೆ ಅಭಿರುಚಿ ಇರುವ ವಿಷಯಗಳು ಅನೇಕವಿವೆ. 'ಸರ್ಫ್‌ಗೆ ನಾನು ಋಣಿಯಾಗಿದ್ದೇನೆ. ಅದರಿಂದಾಗಿ ನನಗೆ ಸಮಯ ಉಳಿಯುತ್ತದೆ. ಸರ್ಫ್ ನನ್ನ ಬಟ್ಟೆಗಳಿಗೆ ಅನುಪಮ ಬಿಳುಪನ್ನು ಕೊಡುತ್ತದೆ—ಅತಿ ಸುಲಭವಾಗಿ!'
Surf
Surf
ಸರ್ಫ್ ನಿಮ್ಮ ಬಟ್ಟೆಗಳಿಗೆ
ಅನುಪಮ ಬಿಳುಪು ಬರುವಂತೆ ಒಗೆಯುತ್ತದೆ
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ
SU. 21-X29 KN

ಆಯ್ತು ತಾನೆ?"

ಗೋಂದೂ ಬಾಬ್ ಹೇಳಿದರು, "ಕೆಲಸವಂತೂ ಆಯಿತು. ಆದರೆ ಆ ಕೋಟ್ಯಧೀಶ್ವರನ ಮೇಲೆ ನಿನ್ನ ಪ್ರಭಾವ ಇಷ್ಟೊಂದು ಹೇಗೆ ಎಂಬುದನ್ನು ಹೇಳಲಿಲ್ಲವಲ್ಲ?"

ಭಿಕ್ಷುಕ ನುಡಿದ, "ಅರೇ ಹುಚ್ಚ! ಇದೇನು ಈ ರೀತಿ ಮೋಸಹೋದೆ ನೀನು? ನನ್ನನ್ನು ಸ್ವಲ್ಪ ಗಮನವಿಟ್ಟು ಪರೀಕ್ಷಿಸಿ ನೋಡು."

ನಾನೂ ಸಹ ಅವನನ್ನು ಗಮನವಿಟ್ಟು ನೋಡಲಾರಂಭಿಸಿದೆ. ಮೊದಲಿದ್ದ ಅದೇ ಹರಕಲು ದುಪ್ಪಟಿ, ಅದೇ ಹರಕಲು ಕೋಟು, ತಲೆಗೆ ಸುತ್ತಿದ್ದ ಒಂದು ಚಿಂದಿ ಬಟ್ಟೆ, ಕೈಲಿ ಜೋಳಿಗೆ! ನೋಡುತ್ತ-ನೋಡುತ್ತ ನನ್ನ ಬುದ್ಧಿಯಲ್ಲಿ ಸ್ವಚ್ಛ ಪ್ರಕಾಶ ಹೊಳೆಯಿತು!

ನಾನು ಕೇಳಿದೆ, "ಆ ವೃದ್ಧ ಕ್ರೈಸ್ತರಾಗಿದ್ದದ್ದು ನೀವಾ?"

ಭಿಕ್ಷುಕನೆಂದ, "ಹೌದು. ನಾನೇ ಆ ವೃದ್ಧ ಕ್ರೈಸ್ತನಾಗಿದ್ದೆ. ಕಪ್ಪು ಕನ್ನಡಕ ಹಾಕಿಕೊಂಡಿದ್ದೆನಾದ್ದರಿಂದ ನೀವು ನನ್ನನ್ನು ಪತ್ತೆ ಹಚ್ಚಲಾರದಾದಿರಿ."

ನಾನು ಕೇಳಿದೆ, "ಹಾಗಾದರೆ ನೀವು ಭಿಕ್ಷೆ ಯಾಕೆ ಬೇಡ್ತೀರಾ!"

ಭಿಕ್ಷುಕನೆಂದ, "ಭಿಕ್ಷೆ ಬೇಡದಿದ್ದರೆ ಇನ್ನೇನು ಮಾಡಲಿ? ಮೊದಲಿನಿಂದಲೇ ನಾನು ನನ್ನ ಪುರುಷಾರ್ಥವನ್ನವಲಂಬಿಸಿ ಮುಂದೆ ಬಂದಿದ್ದೇನೆ. ಹುಟ್ಟಿನಿಂದ ನಾನು ಬಡವನಾಗಿದ್ದೆ. ಆಫ್ರಿಕಕ್ಕೆ ಹೋಗಿ ವ್ಯಾಪಾರ ಮಾಡಿದೆ. ಬೇಕಾದಷ್ಟು ಲಾಭ ಗಳಿಕೆಯಾಯ್ತು. ಅಲ್ಲಿಂದ ಲಿಸ್ಬನ್‌ಗೆ ತೆರಳಿದೆ. ಪ್ರಪಂಚದ ಎಲ್ಲಾ ದೇಶಗಳೊಡನೆಯೂ ವ್ಯಾಪಾರ ಮಾಡಲಾರಂಭಿಸಿದೆ. ಕೋಟ್ಯಧೀಶ್ವರನಾಗಿ ಬಿಟ್ಟೆ. ನನಗೆ ಒಂಭತ್ತು ಜನ ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳಿದ್ದಾರೆ. ಎಲ್ಲರಿಗೂ ಮದುವೆ ಆಗಿದೆ. ಹುಡುಗರೆಲ್ಲರು ಕೆಲಸ-ಕಾರ್ಯ ಮಾಡಲಾರಂಭಿಸಿದ್ದಾರೆ. ಇಬ್ಬರು ಡಾಕ್ಟರ್‌ಗಳು: ಇಬ್ಬರು ಇಂಜಿನಿಯರ್‌ಗಳು ಹಿರಿಯಮಗ ನನ್ನ ಆಸ್ತಿ-ಪಾಸ್ತಿ ನೋಡಿಕೊಳ್ಳುತ್ತಾನೆ. ಮಿಕ್ಕ ಹುಡುಗರು ತಮ್ಮತಮ್ಮ ಸ್ವತಂತ್ರ ಜೀವನೋಪಾಯ ನೋಡಿಕೊಳ್ಳುತ್ತಿದ್ದಾರೆ. ನನಗೆ ಸಾಕಾಗಿ ಹೋಗಿದೆ. ನನ್ನ ಕೈಯ್ಯಾರೆ ಯಾವುದಾದರೂ ಒಂದು ಕೆಲಸ ಕಾರ್ಯ ಮಾಡುವಷ್ಟು ಚೈತನ್ಯ ಈಗ ನನ್ನಲ್ಲಿಲ್ಲ. ಸ್ವಂತ ದುಡಿದು ಸಂಪಾದಿಸಿದ ಆಹಾರವಲ್ಲದೆ ಬೇರೆ ಆಹಾರ ಮುಟ್ಟುವದಿಲ್ಲವೆಂಬುದು ನನ್ನ ದೃಢ ನಿಶ್ಚಯ. ಆದ್ದರಿಂದಲೇ ನನ್ನ ಹೊಟ್ಟೆಗಾಗುವಷ್ಟು ಆಹಾರವನ್ನು ನಾನು ಭಿಕ್ಷೆ ಬೇಡಿ ತೆಗೆದುಕೊಂಡು ಬರುತ್ತೇನೆ. ಅದನ್ನೇ ತಿನ್ನುತ್ತೇನೆ."

ಗೋಂದೂ ಬಾಬ್ ಮತ್ತೆ ಅವನ ಚರಣಗಳ ಮೇಲೆ ತಲೆಯನ್ನಿಟ್ಟರು.

*

ಭಿಕ್ಷುಕನ ಈ ವಿಲಕ್ಷಣ ಮಾತಿನ ಬಗ್ಗೆ ಈವತ್ತಿಗೂ ಕೂಡ ನಾನು ಯೋಚಿಸುತ್ತಿರುತ್ತೇನೆ. ನಾವು ಹಿಂದುಸ್ಥಾನಿಗಳು ಮಿಥ್ಯಾಭಿಮಾನದ ಕಾರಣ ಭಿಕ್ಷುಕರಾಗಿ ಉಳಿದಿದ್ದೇವೆ. ಮತ್ತು ಆ ವೃದ್ಧ ಕ್ರೈಸ್ತ......

ಹೋಗಲಿ ಬಿಡಿಯಪ್ಪಾ... ನಾವು ಮರಾಠಿಗರಿಗೆ ಇಂಥ ಮಾತುಗಳು ಹೇಯವಾಗಿ ಕಂಡು ಬರುತ್ತವೆ. ನಮ್ಮ ಪೂರ್ವಪರಂಪರೆ, ನಮ್ಮ ಪೂರ್ವಜರ ಮಹಿಮೆ, ನಮ್ಮ ಧರ್ಮ, ನಮ್ಮ ರೂಢಿಗಳು, ನಮ್ಮ ಸಂಸ್ಕಾರಗಳು, ನಮ್ಮ ಶಿವಾಜಿ ಮಹಾರಾಜರು, ನಮ್ಮ ಲೋಕಮಾನ್ಯ ತಿಲಕರು ಮುಂತಾದವರ ವಿಷಯವಾಗಿ ಮಾತನಾಡುವುದು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ......

ಅಲ್ಲಿಯವರೆಗೆ ನಾವು ಭಿಕ್ಷುಕರೇ! *

ಐತಿಹಾಸಿಕ ನಗರ ಗೋಲಕೊಂಡ

ಜಿ. ಎನ್. ಶ್ರೀಕಂಠಮೂರ್ತಿ

ಶ್ರೀರಾಮಭಕ್ತನಾದ ರಾಮದಾಸನ ಕಥೆಯಲ್ಲಿ 'ಗೋಲಕೊಂಡ' 'ತಾನೀಷಾ' ಎಂಬ ಹೆಸರುಗಳನ್ನು ನೀವು ಕೇಳಿರಬೇಕು. ಗೋಲಕೊಂಡ ಆಗಿನ ಕಾಲದಲ್ಲಿ ದೊಡ್ಡ ನಗರವಾಗಿತ್ತು; ಪ್ರಪಂಚಖ್ಯಾತವಾಗಿತ್ತು. ಆಗಿನ ಕಾಲದ ಮಹಾಕವಿಗಳು ಗೋಲ-ಕೊಂಡ ನಗರವನ್ನು 'ರತ್ನಗರ್ಭ' ಎಂದು ವರ್ಣಿಸಿದ್ದಾರೆ. ಅದು ನಿಜವೆನ್ನಲು ಈಗಲೂ ಜಗತ್‌ಪ್ರಸಿದ್ಧವಾಗಿರುವ 'ಕೋಹಿನೂರ್,' 'ಪಿಟ್,' 'ರೀಜಂಟ್' ವಜ್ರಗಳೇ ಸಾಕ್ಷಿ. ಈ ವಜ್ರಗಳು ಗೋಲಕೊಂಡ ಪ್ರದೇಶದಲ್ಲಿ ದೊರಕಿದವೆಂದು ಇತಿಹಾಸ ತಿಳಿಯಪಡಿಸುತ್ತದೆ.

ಕ್ರಿ. ಶ. ೧೭೨೬ ರಲ್ಲಿ ಪ್ರಪಂಚಕ್ಕೆಲ್ಲಾ ಗೋಲಕೊಂಡವೇ 'ವಜ್ರದ ಗಣಿ'ಯಾಗಿತ್ತೆಂದು ಸರ್ ಥಾಮಸ್ ಮನ್ರೋ ಬರೆದಿದ್ದಾನೆ. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ, ಗೋಲಕೊಂಡ ನಗರದ ಬೀದಿಗಳಲ್ಲಿ ರತ್ನ ವೈಡೂರ್ಯಗಳನ್ನು ರಾಶಿರಾಶಿಯಾಗಿ ಸುರಿದು ಮಾರುತ್ತಿದ್ದರೆಂದೂ ಶಾಹಜಹಾನ್ ಚಕ್ರವರ್ತಿ ಈ ರಾಜ್ಯದ ಮೇಲೆ ದಂಡೆತ್ತಿ ಬಂದಾಗ ಆಗಿನ ಸುಲ್ತಾನನು ೬೦೦ ಪೆಟ್ಟಿಗೆಗಳ ತುಂಬಾ ಬೆಲೆಯುಳ್ಳ ರತ್ನವೈಡೂರ್ಯಗಳನ್ನು ಕೊಟ್ಟು ಅವನೊಂದಿಗೆ ಒಪ್ಪಂದ ಮಾಡಿಕೊಂಡನೆಂದೂ ರತ್ನವೈಡೂರ್ಯಗಳ ಪರೀಕ್ಷೆಯಲ್ಲಿ ಜಾಣನಾದ ಶಾಹಜಹಾನ್ ಚಕ್ರವರ್ತಿ ಅಸೂಯಾಪರನಾಗಿ, ಗೋಲಕೊಂಡ ನಗರವನ್ನು ಕೊಳ್ಳೆ ಹೊಡೆದು, ರತ್ನವೈಡೂರ್ಯಗಳನ್ನು ಅಪಹರಿಸಿಕೊಂಡು ಹೋದನೆಂದೂ ಅವನ್ನು ಕಾಪಿಡಲು ಸರಿಯಾದ ಸ್ಥಳ ಸಿಕ್ಕದೆ ಕೊನೆಗೆ ಅವನು ರತ್ನಖಚಿತವಾದ 'ಮಯೂರ ಸಿಂಹಾಸನ'ವನ್ನು ಮಾಡಿಸಿದನೆಂದೂ ವಿದೇಶದ



ಇತಿಹಾಸಕಾರರು ಬರೆದಿದ್ದಾರೆ. ಈಗಲೂ ಹೈದರಾಬಾದ್ ನಿಜಾಮರಿಗೆ ವಂಶಪಾರಂಪರ್ಯವಾಗಿ ಲಭಿಸಿರುವ ರತ್ನವೈಡೂರ್ಯಗಳನ್ನು ಕೊಳ್ಳುವ ಶ್ರೀಮಂತನು ಪ್ರಪಂಚದಲ್ಲೇ ಇಲ್ಲವೆಂದು ಪ್ರತೀತಿ. ನಿಜಾಮರು ಈಗಲೂ 'ಪೇಪರ್ ವೈಟ್' ಗಾಗಿ ಉಪಯೋಗಿಸುವ 'ಜಾಕಬ್' ವಜ್ರದ ಬೆಲೆ ೧೫೦ ಲಕ್ಷ ರೂಪಾಯಿಗಳಂತೆ. ಆಗಿನ ಕಾಲದಲ್ಲಿ ವಜ್ರವೈಡೂರ್ಯಗಳನ್ನು ಮಾರುತ್ತಿದ್ದ ಅಂಗಡಿಗಳನ್ನು ಈಗಲೂ ಗೋಲಕೊಂಡ ಕೋಟೆಯೊಳಗೆ ನೋಡಬಹುದು. ಸುಲ್ತಾನ್ ಅಬ್ದುಲ್ಲಾ ಕುತುಬ್‌ಷಾನ ಕಾಲದಲ್ಲಿ ಖೈರತ್ ಖಾನ್ ಎಂಬ ನವಾಬನ ಆಶ್ರಯದಿಂದ ಈ ಅಂಗಡಿಗಳ ಭವನಗಳು ನಿರ್ಮಾಣಗೊಂಡವು. ವಜ್ರಗಳ ವ್ಯಾಪಾರ ಅದೆಷ್ಟು ಜೋರಾಗಿ ನಡೆಯುತ್ತಿತ್ತು ಎಂಬುದನ್ನು ಈ ಕಟ್ಟಡಗಳಿಂದಲೇ ಗ್ರಹಿಸಬಹುದು.

ಬಹಮನಿ ಸಾಮ್ರಾಜ್ಯಕ್ಕೆ ಸೇರಿದ್ದ ತೆಲಂಗಾಣಾ ಪ್ರಾಂತಕ್ಕೆ ಮಲಿಕ್ ಕೂಲಿ ಕುತುಬ್ ಉಲ್ ಮುಲ್ಕ್ ಎಂಬುವನು ನೇಮಿಸಲ್ಪಟ್ಟ. ಕಾಲಕ್ರಮೇಣ ಬಹಮನಿ ರಾಜ್ಯ ಭಿನ್ನವಾಗಿ ಐದು ಭಾಗಗಳಾಗಿ ವಿಂಗಡಣೆಯಾಯಿತು. ಅವುಗಳಲ್ಲಿ ಗೋಲಕೊಂಡ ಒಂದು.

ವಿಜಯನಗರ ಸಾಮ್ರಾಜ್ಯದ ಪತನವಾದ ನಂತರ ಗೋಲಕೊಂಡವನ್ನು ಪಾಲಿಸಿದ ಇಬ್ರಾಹಿಂ ಕೂಲಿ ಕುತುಬ್ ಷಾ ಮತ್ತು ಅವನ ಮಗ ಮಹಮ್ಮದ್ ಕೂಲಿ ಕುತುಬ್ ಷಾ ಅವರುಗಳ ಕಾಲದಲ್ಲಿ ಗೋಲಕೊಂಡ ಸಾಮ್ರಾಜ್ಯ ಮತ್ತಷ್ಟು ವಿಸ್ತರಿಸಿತಲ್ಲದೆ, ಸರ್ವತೋಮುಖವಾಗಿ ಅಭಿವೃದ್ಧಿಗೆ ಬಂದಿತು. ಈ ಮಹಮ್ಮದ್ ಕೂಲಿ ಕುತುಬ್ ಷಾನೇ ಈಗಿನ ಹೈದರಾಬಾದನ್ನು ನಿರ್ಮಿಸಿದವನು. ತನ್ನ ಪ್ರೇಯಸಿಯಾದ 'ಭಾಗ್ಯಮತಿ' ಎಂಬವಳ ಕಾರಣದಿಂದ ನಗರಕ್ಕೆ ಆತ 'ಭಾಗ್ಯನಗರ' ವೆಂದು ಹೆಸರಿಟ್ಟ. ಆದರೆ ಅವನ ತರುವಾಯ ನವಾಬನಾದ ಹೈದರನು ಭಾಗ್ಯನಗರಕ್ಕೆ ತನ್ನ ಹೆಸರಿಟ್ಟು 'ಹೈದರಾಬಾದ್' ಎಂದು ಕರೆದ.

ಗೋಲಕೊಂಡ ಸುಲ್ತಾನರಲ್ಲಿ ಹಿಂದೂ ಮತವನ್ನು ಆದರಿಸಿ, ಪ್ರೋತ್ಸಾಹಿಸಿದವನು ಅಬುಲ್ ಹಸನ್ ಕುತುಬ್ ಷಾ. ಈತನು ೧೬೭೨ ರಿಂದ ೧೬೮೭ ರ ವರೆಗೆ ರಾಜ್ಯ ಪರಿಪಾಲನೆ ಮಾಡಿದ. ಈತನೇ ರಾಮದಾಸರ ಕಥೆಯಲ್ಲಿ 'ತಾನೀಷಾ' ನಾಗಿ ಪ್ರಖ್ಯಾತಿಯಾಗಿದ್ದಾನೆ. ಈತನು ಹಿಂದೂ ಮುಸಲ್ಮಾನ್ ಮತಗಳನ್ನು ಸಮಾನವಾಗಿ ನೋಡಿಕೊಂಡಿದ್ದನಲ್ಲದೆ, ವೇದ ಪಂಡಿತೋತ್ತಮರಿಗೆ ಅಗ್ರಹಾರಗಳನ್ನಿತ್ತು, ದೇವಾಲಯಗಳನ್ನು ಕಟ್ಟಿಸಿ, ಅವುಗಳಿಗೆ ಮಾನ್ಯಗಳನ್ನು ಕೊಟ್ಟು ಹಿಂದೂಗಳಿಂದಲೂ ಮನ್ನಣೆಗಳಿಸಿದ್ದಾನೆ. ಆಗಿನ ಕವಿಗಳನ್ನು ಪೋಷಣೆ ಮಾಡಿದವನು ಈತನೊಬ್ಬನೇ ಎಂದು ಹೇಳಬಹುದು. ಕೆಲವು ತೆಲುಗು ಕಾವ್ಯಗಳಲ್ಲಿ ಈತನು 'ಇಭರಾಮ'ನಾಗಿ ಮೆರೆದಿದ್ದಾನೆ.

'ತಾನೀಷಾ'ನ ಹಿಂದೂ ಮತಸಹಿಷ್ಣುತೆಯನ್ನೂ ಆಂಧ್ರ ಮಂತ್ರಿಗಳಾಗಿದ್ದ ಅಕ್ಕನ್ನ, ಮಾದನ್ನರ ಪ್ರಭಾವದಿಂದ ಗೋಲಕೊಂಡ ಪಡೆದ ವೈಭವವನ್ನೂ ಅಲ್ಲಿನ ರತ್ನ ವೈಡೂರ್ಯಗಳನ್ನೂ ನೋಡಿ ಸಹಿಸಲಾರದೆ, ಹಿಂದೂ ಮತದ್ವೇಷಿಯಾದ ಔರಂಗ್‌ಜೇಬ್ ಗೋಲಕೊಂಡ ಕೋಟೆಯ ಮೇಲೆ ದಂಡೆತ್ತಿ ಬಂದು, ಜಯಿಸಲಾರದೆ ಎಂಟು ತಿಂಗಳುಗಳು ಕಷ್ಟನಷ್ಟಗಳನ್ನನುಭವಿಸಿ, ಕೊನೆಗೆ ಮೀರ್ ಜುಮ್ಲಾ ಎಂಬವನಿಗೆ ಲಂಚವನ್ನಿತ್ತು ಸುಲ್ತಾನ್‌ಗಿರಿಯ ಪದವಿಯ ಆಶೆ ತೋರಿಸಿ, ವಶಪಡಿಸಿಕೊಂಡನು. ಶಾಂತಮೂರ್ತಿ, ರಾಮಭಕ್ತನಾದ ತಾನೀಷಾನನ್ನು ಸೆರೆಹಿಡಿದು ಅಕ್ಕನ್ನ ಮಾದನ್ನರನ್ನು ಕೊಲೆ ಮಾಡಿಸಿ, ಗೋಲಕೊಂಡ ಕೋಟೆಯನ್ನು ಸರ್ವನಾಶ ಮಾಡಿದ. ಆ ನಗರವನ್ನು ಕೊಳ್ಳೆ ಹೊಡೆದು, ರತ್ನ ವೈಡೂರ್ಯಗಳನ್ನು ಆನೆ ಒಂಟೆಗಳ ಮೇಲೆ ಹೇರಿಕೊಂಡು ದಿಲ್ಲಿಗೆ ಹೋದ.

ಅಂಥ ಮಹಾವೈಭವದಿಂದ ರತ್ನ ವೈಡೂರ್ಯಗಳಿಂದ. ಹಿಂದೂ ಮುಸಲ್ಮಾನ್ ಬಾಂಧವ್ಯ

ದಿಂದ ನಗರವು ಪ್ರಕಾಶಿಸಿ ದಿಲ್ಲಿ ಬಾದಶಹರಿಗೂ ಅಸೂಯೆಯನ್ನು ಕಲ್ಪಿಸಿ ಜಗತ್ತನ್ನು ತನ್ನೆಡೆಗೆ ಸೆಳೆದುಕೊಂಡಿದ್ದ ಗೋಲಕೊಂಡ ಮಹಾನಗರವು ಇಂದು ಶಿಥಿಲಾವಸ್ಥೆಯಿಂದ ಕಾಂತಿವಿಹೀನವಾಗಿ ಪೂರ್ವ ವೈಭವದ ನೆರಳಾಗಿ ನಿಂತಿದೆ.

ಗೋಲಕೊಂಡ ಕೋಟೆಯ ಭಗ್ನಾವಶೇಷವನ್ನು ನೋಡಿದರೆ ಎಷ್ಟೋ ಗಂಭೀರವಾಗಿ ಕಾಣಿಸುತ್ತದೆ. ಪ್ರಪಂಚದಲ್ಲಿ ಅವಶೇಷವಾಗುಳಿದ ದುರ್ಗಗಳೆಲ್ಲಕ್ಕೂ 'ಗೋಲಕೊಂಡ' ದೊಡ್ಡದು. ಇದು ಹೈದರಾಬಾದು ನಗರಕ್ಕೆ ಆರು ಮೈಲಿ ದೂರದಲ್ಲಿ ೨೦೦೦ ಅಡಿಗಳಷ್ಟು ಎತ್ತರವಿದೆ. ಈ ಕೋಟೆಯನ್ನು ಸುಲ್ತಾನ್ ಕೂಲಿ ಕುತುಬ್ ಷಾ ನಿರ್ಮಿಸಿದ (೧೯೫೮, ಮಾರ್ಚ್ ೧೫ ನೇ ತಾರೀಖಿನಂದು ಈತನ ಸ್ಮಾರಕ ದಿನೋತ್ಸವವು ಮಂತ್ರಿ ಶ್ರೀ ಗೋಪಾಲರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.) ಈತನು ಬಹಮನಿ ಸುಲ್ತಾನರ ಕೈಕೆಳಗೆ ತೆಲಂಗಾಣಾಕ್ಕೆ ಗವರ್ನರನಾಗಿದ್ದು ನಂತರ ತೆಲಂಗಾಣಾಕ್ಕೆ ರಾಜನಾದ. ತನ್ನ ರಾಜ್ಯಕ್ಕೆ ತಕ್ಕಂತೆ ಕೋಟೆಯೊಂದನ್ನು ನಿರ್ಮಿಸಲು ಉದ್ಯುಕ್ತನಾಗಿ ಅದಕ್ಕೆ ತಕ್ಕ ಸ್ಥಳವನ್ನು ಅನ್ವೇಕ್ಷಿಸುತ್ತಿದ್ದಾಗ ಒಬ್ಬ ಗೊಲ್ಲನು ಈ ಬೆಟ್ಟವನ್ನು ಸುಲ್ತಾನನಿಗೆ ತೋರಿಸಿದನಂತೆ. ಆದ್ದರಿಂದಲೇ ಆ ನಗರಕ್ಕೆ 'ಗೊಲ್ಲಕೊಂಡ' ಎಂದೂ ಕ್ರಮವಾಗಿ 'ಗೋಲಕೊಂಡ' ಎಂದೂ ಹೆಸರು ಬಂದಿತಂತೆ.

ಗೋಲಕೊಂಡ ಆ ಕಾಲದಲ್ಲಿ ದುರ್ಗಮವಾದ ಒಂದು ದುರ್ಗವಾಗಿತ್ತಂತೆ. ಅದು ಎಲ್ಲರ ಕುತೂಹಲವನ್ನೂ ತನ್ನೆಡೆಗೆ ಸೆಳೆದುಕೊಂಡಿದ್ದಿತು. ಔರಂಗ್‌ಜೇಬನು ಗೋಲಕೊಂಡವನ್ನು ಸರ್ವನಾಶ ಮಾಡಿದ ಮೇಲೆ ಅದರ ಪ್ರಾಮುಖ್ಯ ಕಡಿಮೆಯಾಗಿ ಇಂದಿನ ಹೈದರಾಬಾದು ನಗರ ಪ್ರಾಮುಖ್ಯಕ್ಕೆ ಬಂದಿತು.

ಗೋಲಕೊಂಡ ಬೆಟ್ಟಕ್ಕೆ ಮೂರು ಶ್ರೇಣಿಗಳಿವೆ. ಹೊರಗಿನ ಕೋಟೆ ಗೋಡೆಯ ಸುತ್ತಳತೆ ನಾಲ್ಕು ಮೈಲಿಗಳಿದೆ. ಎತ್ತರ ಹೊರಗಿನ ಕಂದಕದಿಂದ ೩೫ ಅಡಿಗಳಷ್ಟಿದೆ. ಗೋಡೆಯ ಹಿಂಭಾಗದಿಂದ ಸೈನಿಕರು ನಿಂತು ಯುದ್ಧ ಮಾಡುವುದಕ್ಕೆ ಅನುಕೂಲವಾಗಿ ೩೫ ಅಡಿಗಳಿರುವ ಮಣ್ಣಿನ ಗೋಡೆಯೊಂದನ್ನು ನಿರ್ಮಿಸಿದ್ದಾರೆ. ಅದು ಕೋಟೆಯ ಗೋಡೆಗೆ ಸೇರಿಕೊಂಡಂತೆ ಇದೆ. ಕೋಟೆಯ ಗೋಡೆಯ ಸುತ್ತಲೂ ಹೊರಗೆ ಆಳವಾದ ಕಂದಕವಿದೆ. ಕೋಟೆಯ ಮೇಲ್ಗಡೆ ಅಲ್ಲಲ್ಲಿ ದೊಡ್ಡ ದೊಡ್ಡ ಫಿರಂಗಿಗಳು ಹಾಗೆಯೇ ಇವೆ.

ಕೋಟೆಯನ್ನು ಪ್ರವೇಶಿಸಲು ಎಂಟು ದೊಡ್ಡ ದ್ವಾರಗಳಿವೆ. ದ್ವಾರಗಳಿಂದ ಮಾರ್ಗಗಳು ವಕ್ರವಕ್ರವಾಗಿವೆ. ದ್ವಾರಗಳಿಗೆ ಇರುವ ದೊಡ್ಡ ದೊಡ್ಡ ಬಾಗಿಲುಗಳು ಶತ್ರುಗಳಿಗೆ ದುರ್ಭೇದ್ಯವಾಗಿವೆ. ಆನೆಗಳಿಂದಲೂ ಸಹ ಭೇದಿಸಲಾರದಂತೆ ಇರಲು ಈ ಬಾಗಿಲುಗಳಿಗೆ ಉದ್ದವಾದ ಶೂಲಗಳು ಮುಂತಾದವುಗಳನ್ನು ಹಾಕಿದ್ದಾರೆ. ಪೂರ್ವದಿಕ್ಕಿನಲ್ಲಿರುವ ಫತೆದ್ವಾರದಿಂದ ಒಳಕ್ಕೆ ಪ್ರವೇಶಿಸಿದ ಕೂಡಲೆ 'ಕುತುಬ್‌ಷಾ' ಸುಲ್ತಾನರಿಗೂ ಮೊಗಲರಿಗೂ ಸಂಬಂಧಿಸಿದ ಆಯುಧಗಳು ಕಾಣಿಸುವುವು. ಇನ್ನೂ ಮುಂದೆ ಹೋದರೆ ದಾರಿಗಿಕ್ಕೆಲದಲ್ಲಿ ಎರಡು ಕಟ್ಟಡಗಳ ಸಾಲುಗಳಿವೆ. ಇಲ್ಲಿಯೇ ಪೂರ್ವದಲ್ಲಿ ರತ್ನವೈಡೂರ್ಯಗಳನ್ನು ಪರೀಕ್ಷಿಸಿ, ಅಂಗಡಿಗಳಲ್ಲಿ ಅಲಂಕರಿಸಿ ವ್ಯಾಪಾರ ಮಾಡುತ್ತಿದ್ದರು. ವಿದೇಶದ ರತ್ನಮುತ್ತುಗಳ ವ್ಯಾಪಾರಿಗಳೆಷ್ಟೋ ಮಂದಿ ಇಲ್ಲಿ ವ್ಯಾಪಾರ ಮಾಡುತ್ತಿದ್ದರಂತೆ.

ಅಲ್ಲಿಂದ ಮಾರ್ಗವು ನೇರವಾಗಿ ಎರಡನೇ ಕೋಟೆಗೋಡೆಯ ಹತ್ತಿರಕ್ಕೆ ಹೋಗುವುದು. ಆ ಕೋಟೆಯ ಗೋಡೆಗೆ ಮೊದಲು ದೊಡ್ಡ 'ಅಬಿಸೀನಿಯಸ್' ದ್ವಾರಗಳು ಕಾಣಿಸುವುವು. ಅನಂತರ ಒಳಕ್ಕೆ ಹೋದರೆ ಬೆಟ್ಟವನ್ನು ಬಳಸಿರುವ ಎರಡನೇ ಕೋಟೆಯ ಗೋಡೆ ಕಾಣಿಸುವುದು. ಬೆಟ್ಟದ ಮೇಲಿರುವ ಮೂರನೇ ಕೋಟೆಯನ್ನು 'ಬಾಲಾಹಿಸ್ಸಾರ್' (ಎತ್ತರವಾದ ಕೋಟೆ) ಎನ್ನುತ್ತಾರೆ. ಈ 'ಬಾಲಾಹಿಸ್ಸಾರ್'ನ ಒಳಗೆ

ಬಾರಾದರಿ' ಎಂಬ ಎರಡಂತಸ್ತುಗಳ ದರ್ಬಾ-ರ್ ಭವನವಿದೆ. 'ಬಾಲಾಹಿಸ್ಸಾರ್'ಗೆ ಹೋಗುವ ದ್ವಾರದಲ್ಲಿ ಒಬ್ಬ ರಕ್ಷಕಭಟನ ಪ್ರತಿಮೆ ಇದೆ. ಪ್ರವೇಶದ್ವಾರದಿಂದ ಒಳಗಡೆಗೆ ಹೋದಕೂಡಲೆ ದೊಡ್ಡ ಮಂಟಪ (ಆರ್ಕೆಡ್) ಕಾಣಿಸುವುದು. ಅಲ್ಲಿಂದ ನಾವು ಮಾತನಾಡಿದರೆ ಮೇಲಿರುವ 'ಬಾರಾದರಿ'ಗೆ ಕೇಳಬರುವುದು.

'ಬಾಲಾಹಿಸ್ಸಾರ್'ಗೆ ಎರಡು ಮಾರ್ಗಗಳಿವೆ. ಪ್ರವೇಶದ್ವಾರದ ಸಮೀಪದಲ್ಲಿರುವ 'ಆರ್ಕೇಡ್'ಗೆ ಎಡಭಾಗದಲ್ಲಿ ರಾಣೀವಾಸ ಮಂದಿರಗಳಿಂದ ಹಾದು ಬರುವ ಒಂದು ದಾರಿ; ಮತ್ತೊಂದು ದಾರಿ 'ಆರ್ಕೇಡ್'ಗ ಉತ್ತರ ದಿಕ್ಕಿನಲ್ಲಿದೆ. ಈ ಎರಡನೇ ದಾರಿ 'ಬಾಲಾಹಿಸ್ಸಾರ್'ಗೆ ಪ್ರಧಾನ ಮಾರ್ಗವೆಂದು ಅದನ್ನು ನೋಡಿದಾಗಲೇ ಹೇಳಬಹುದು. ಆಗಿನ ಕಾಲದಲ್ಲಿ ನವಾಬರ ದರ್ಶನಕ್ಕಾಗಿ ಬರುವವರು ಈ ಮಾರ್ಗದಿಂದಲೇ ಹೋಗುತ್ತಿದ್ದರಂತೆ. ಈ ಮಾರ್ಗದಿಂದ ಬೆಟ್ಟವನ್ನು ಹತ್ತುವುದು ಬಹಳ ಸುಲಭ. ಎರಡನೇ ಮಾರ್ಗದಲ್ಲಿ ಹೊರಟರೆ ಎಡಭಾಗದಲ್ಲಿ 'ತಾನೀಷಾ' ಮಂತ್ರಿಗಳಾದ ಅಕ್ಕನ್ನ ಮಾದನ್ನರ ಕಾರ್ಯಾಲಯಗಳು, ಸಿಪಾಯಿಗಳು ವಾಸಿಸುತ್ತಿದ್ದ ಕೊಠಡಿಗಳು ಕಾಣಿಸುವವು. ಬಲಕ್ಕೆ ಆ ಕಾಲದಲ್ಲಿ ಉದ್ಯಾನವನವಿತ್ತಂತೆ. ಅದನ್ನೇ 'ನಗೀನ್ ಬಾಗ್' ಎನ್ನುತ್ತಾರೆ.

ಇನ್ನೂ ಮುಂದೆ ಹೋದರೆ ಆಯುಧಗಳನ್ನು ಇಡುತ್ತಿದ್ದ 'ಮೇಗಜಿನ್' ಕಾಣಿಸುವುದು. ಬೆಟ್ಟವನ್ನು ಏರಲು ಮೆಟ್ಟಿಲುಗಳಿವೆ. ಆ ಬೆಟ್ಟವನ್ನು ಏರುತ್ತಾ ಪರೀಕ್ಷಿಸಿದರೆ ಆ ಗೋಲಕೊಂಡ ಬೆಟ್ಟದ ನಿರ್ಮಾಣ ಪದ್ಧತಿ, ನೈಪುಣ್ಯ ನಮ್ಮನ್ನು ಆಶ್ಚರ್ಯಗೊಳಿಸುವುದು. ಮಾರ್ಗದಲ್ಲಿ ಸಿಹಿನೀರಿನ ಭಾವಿಯೊಂದಿದೆ. ಇನ್ನೂ ಮುಂದೆ ಹೋದರೆ ಭದ್ರಾಚಲ ರಾಮದಾಸರಿದ್ದ ಕಾರಾಗೃಹ, ಅಂಬರ್‌ಖಾನಾ (ಸುಲ್ತಾನರ ವಸ್ತುಗಳನ್ನಿಡುವ ಗೃಹ), ಮೂರನೆಯ ಸುಲ್ತಾನ್ 'ಇಬ್ರಾಹಿಂ'ನ ಮಸೀದಿ ಮುಂತಾದುವುಗಳು ಕಾಣಿಸುವುವು. ಇದರ ಮುಂದುಗಡೆ ಸಣ್ಣ ಹಿಂದೂ ದೇವಾಲಯವೊಂದಿದೆ. ಇದನ್ನು ನೋಡಿದರೆ ಆಗಿನ ಗೋಲಕೊಂಡ ಸುಲ್ತಾನರಿಗೆ ಹಿಂದೂ ಮತದ ಮೇಲಿದ್ದ ಗೌರವವು ಗೊತ್ತಾಗುತ್ತದೆ.

'ಬಾಲಾಹಿಸ್ಸಾರ್'ನ ಒಳಗಡೆ 'ಬಾರಾದರಿ' ಇದೆ. 'ಬಾರಾದರಿ' ಎಂದರೆ ಸುಲ್ತಾನರ 'ದರ್ಬಾರ್ ಮಂದಿರ.' ಅದಕ್ಕೆ ತಕ್ಕಂತೆಯೇ ಅದು ನಿರ್ಮಿತವಾಗಿದೆ. ಸುಲ್ತಾನರ ಮುಖ್ಯ ಸಮಾವೇಶಗಳೂ ಇಲ್ಲೇ ನಡೆಯುತ್ತಿದ್ದವಂತೆ. ಇಲ್ಲಿಂದ ನೋಡಿದರೆ ಗೋಲಕೊಂಡ ಕೋಟೆಯ ಪೂರ್ಣ ದೃಶ್ಯ ಕಾಣುವುದು. ಪಾಳುಬಿದ್ದ ಅಂತಃಪುರಗಳನ್ನು ನೋಡಿದರೆ ನಾವು ಮೂಕರಾಗುವೆವು. ಅಂತಃಪುರ ಮಂದಿರಗಳು, ಉದ್ಯಾನವನಗಳು, ಸ್ನಾನಗೃಹಗಳು, 'ಫೌಂಟೆನ್ಸ್' ಮುಂತಾದವುಗಳು ಆಗಿನ ಕಾಲದಲ್ಲಿ ನೇತ್ರಾನಂದಕರವಾಗಿದ್ದುವೆಂದು ಈಗ ನಾಮಮಾತ್ರವಾಗಿ ಗೋಚರಿಸುವ ಅವುಗಳ ಅವಶೇಷಗಳಿಂದ ಗ್ರಹಿಸಬಹುದಾಗಿದೆ. ಅಂತಃಪುರಕ್ಕೆ ಹೋಗಲು ಬೇರೊಂದು ಮಾರ್ಗವಿದೆ. ಪಶ್ಚಿಮದಿಕ್ಕಿನಲ್ಲಿ ಕಾಣುವ ಪಾಳುಬಿದ್ದ ಭವನ 'ಭಾಗ್ಯಮತಿ'ಯದು. ಕೂಲಿ ಕುತುಬ್‌ಷಾನ ಪ್ರೇಯಸಿಯಾದ ಆಕೆಯ ಜ್ಞಾಪಕಾರ್ಥವಾಗಿಯೇ ಅವನು ಈಗಿನ ಹೈದರಾಬಾದನ್ನು ನಿರ್ಮಿಸಿದನು. ಹೈದರಾಬಾದಿಗೆ ಆಗಿನ ಹೆಸರು 'ಭಾಗ್ಯನಗರ' ಎಂದು.

'ಬಾರಾದರಿ' ಮೊದಲನೇ ಅಂತಸ್ತಿನ ಒಂದು ಮೂಲೆಯಲ್ಲಿ ಸುರಂಗ ಮಾರ್ಗವೊಂದು ಕಾಣಿಸುವುದು. ಈ ಸುರಂಗದಿಂದ ಅಬುಲ್ ಹಸನ್ ತಾನೀಷಾ ನಿರ್ಮಿಸಿದ 'ಘೋಷಾಮಹಲ್'ನ (ಹೈದರಾಬಾದ್) ವರೆಗೆ ಮಾರ್ಗವಿದೆಯೆನ್ನುತ್ತಾರೆ. 'ಬಾರಾದರಿ' ಯಿಂದ ನೋಡಿದರೆ ಸುತ್ತಮುತ್ತಲ ಹಳ್ಳಿಗಳೆಲ್ಲಾ ಕಾಣಿಸುವವು. ಉತ್ತರ ದಿಕ್ಕಿನಲ್ಲಿ ದೂರದಿಂದ ಪಚ್ಚನೆಯ ಹಸಿರು ಗಿಡಗಳ ನಡುವೆ ಕುತುಬ್‌ಷಾ ಸುಲ್ತಾನರ

ಸಮಾಧಿಗಳು ಕಾಣಿಸುತ್ತವೆ. ಪಶ್ಚಿಮ ದಿಕ್ಕಿನಲ್ಲಿ 'ತಾರಾಮತಿ' 'ಪ್ರೇಮಾವತಿ' ಭವನಗಳು ಕಾಣಿಸುತ್ತವೆ. (ಇವರಿಬ್ಬರ ಬಗ್ಗೆ ಒಂದು ದೊಡ್ಡ ಕಥೆಯೇ ಇದೆ. ಅದನ್ನು ಇಲ್ಲಿ ವಿವರಿಸಲು ಸಾಧ್ಯವಿಲ್ಲ)

ಎರಡನೇ ಅಂತಸ್ತಿನಲ್ಲಿ 'ಷಾನಸೀನ್' ಎಂಬ ಕಲ್ಲಿನ ಸಿಂಹಾಸನವೊಂದಿದೆ. ಆ ಸಿಂಹಾಸನದ ಮೇಲೆ ಆಸೀನರಾಗಿ 'ಕುತುಬಷಾ' ಸುಲ್ತಾನರು ಸಾಯಂಕಾಲಗಳಲ್ಲಿ ತಂಗಾಳಿ ಸೇವಿಸುತ್ತಾ ಸುತ್ತಮುತ್ತಲಿನ ಪ್ರಕೃತಿಸೌಂದರ್ಯವನ್ನು ನೋಡಿ ಆನಂದಿಸುತ್ತಿದ್ದರಂತೆ.

ಗೋಲಕೊಂಡ ಕೋಟೆಯ ಅವಶೇಷಗಳನ್ನು ನೋಡುತ್ತಿದ್ದರೆ ಆ ಮಹಾನಗರವು ಅನುಭವಿಸಿದ ಇಂದ್ರವೈಭವ, ಅಲಕಾಪುರಿ ಐಶ್ವರ್ಯ, ರತ್ನವೈಡೂರ್ಯಗಳ ರಮಣೀಯ ಕಾಂತಿ ಒಂದು ಸಲ ನಮ್ಮ ಸ್ಮೃತಿಪಥದಲ್ಲಿ ಮಿಂಚಿನಂತೆ ಬೆಳಗಿ ಮಾಯವಾಗುವುದು. "ಎಂಥವರಿಗೆ ಎಂಥ ರಾಜ್ಯ, ಸಿರಿ, ಸಂಪತ್ತುಗಳಿದ್ದರೂ ಅಶಾಶ್ವತವೇ" ಎಂಬ ವೇದಾಂತ ಭಾವಗಳು ನಮ್ಮ ಮನದಲ್ಲಿ ಮೂಡದೆ ಇರಲಾರವು. ಮತ್ತು—

"The boast of heraldry, the
pomp of power,
And all that beauty, all that
wealth ever gave,
Await alike the inevitable hour,
The paths of glory lead, but
to the grave!"

ಎಂಬ 'ಥಾಮಸ್ ಗ್ರೇ' ಕವಿಯ ವಾಕ್ಯಗಳು ಜ್ಞಾಪಕಕ್ಕೆ ಬಾರದೆ ಇರಲಾರವು. *

ಗುಂಡೇನಹಳ್ಳಿಯ ಕಮಲಾಬಾಯಿ ಕಾಶೀಯಾತ್ರೆಗೆಂದು ಹೋದಾಗ ಕಲಕತ್ತೆಯನ್ನೂ ನೋಡಿಕೊಂಡು ಬಂದಿದ್ದಳು. ತಿರುಗಿ ಊರಿಗೆ ಬಂದ ಬಳಿಕ ಒಂದು ದಿನ ಅವಳು ನೆರೆಯವರೊಡನೆ ಮಾತಾಡುತ್ತಿದ್ದಾಗ "ಮತ್ತೆ ಏನಂದ್ರಿ, ಕಲಕತ್ತೆಯಲ್ಲಿ ಒಂದು ಹೊಸ ನಮೂನೆಯ ಟಾಂಗಾ ನೋಡಿದೆ. ಅದಕ್ಕೆ ಹೂಡುವ ಕುದುರೆಗಳು ಅಗದೀ ಮನುಷ್ಯರ ಹಾಗೆಯೆ ಕಾಣಿಸುತ್ತಿದ್ದವು. ಆ ಟಾಂಗಾಗಳಿಗೆ ರಿಕ್ಷಾನೊ ಫಿಕ್ಷಾನೊ ಏನೋ ಅನ್ನುತ್ತಾರಂತೆ" ಎಂದಳು.

ಇದುವೆ ಜೀವ, ಇದು ಜೀವನ

ನಾನು ನನ್ನ ಸ್ನೇಹಿತನೊಂದಿಗೆ ಅವನ ಆಫೀಸಿಗೆ ಆಗಾಗ್ಗೆ ಹೋಗುವ ರೂಢಿ ಇಟ್ಟುಕೊಂಡಿದ್ದೆ. ಅವನ ಆಫೀಸರರು ತಮಾಷೆಯ ಪ್ರಕೃತಿಯುವರು. ಅವರು ಹಲವು ಬಾರಿ ಆಡುತ್ತಿದ್ದ ಮಾತು, ಕೇಳುತ್ತಿದ್ದ ಪ್ರಶ್ನೆ ಖಂಡಿತವಾಗಿಯೂ ಪ್ರಕಟವಾಗಲೇ ಬೇಕು.

ಒಂದು ಸಾರಿ ಅವರ ಆಫೀಸ್ ಜವಾನನ ಹೆಂಡತಿಗೆ ಮೈಯಲ್ಲಿ ಸ್ವಸ್ಥವಿರಲಿಲ್ಲ. ರಜಾ ಕೇಳಲು ಸಾಹೇಬರ ಬಳಿ ಹೋದ. ಸಾಹೇಬರ ತಮಾಷೆ ವಿಷಯುವನ್ನು ತಿಳಿದಿದ್ದ ಜವಾನ ಗಡಿಬಿಡಿಯಿಂದ, "ಸಾರ್! ಮನೆಯಲ್ಲಿ ಜ್ವರ ಬಂದಿದೆ. ರಜಾ ಬೇಕು" ಎಂದ. ತಕ್ಷಣವೇ ಸಾಹೇಬರ ಬಾಯಿಂದ ಹೊರಟತು ನಗುವಿನ ಬಾಣ, "ಎಲಾ ಮೂರ್ಖ! ಮನೆಗೆ ಜ್ವರ ಬಂದರೆ ನಿನಗೇಕೋ ರಜಾ? ಚೆನ್ನಾಗಿ ಸುಣ್ಣ ಹೊಡೆಸು ಹೋಗು" ಎಂದರು. ಜವಾನ ಸುಸ್ತಾದ. ನಾವೆಲ್ಲಾ ನಕ್ಕೆವು.

ಇನ್ನೊಂದು ಸಾರಿ ಮನೆಯಲ್ಲಿ ಮಗನ ನಿಷೇಕ ಪ್ರಸ್ಥವನ್ನು ಇಟ್ಟುಕೊಂಡು, ಹಳ್ಳಿಯ ಗೌಡನೊಬ್ಬ ಸಾಹೇಬರ ಬಳಿ ಬಂದ. ಆಗ ಸೀಮೆ ಎಣ್ಣೆಗೆ ಕಂಟ್ರೋಲ್ ಇದ್ದ ಕಾಲ ಗೌಡ ಭಯಭಕ್ತಿಯಿಂದ ಸಾಹೇಬರಿಗೆ ಅರ್ಜಿ ಸಲ್ಲಿಸಿದ. ಸಾಹೇಬರು ಅರ್ಜಿ ಓದಿದವರೇ ಗೌಡನ ಮುಖ ನೋಡಿ ಜೋಳ್ಳನೆ ನಕ್ಕರು. ಮೇಜನ್ನು ಗುದ್ದಿ ಗುದ್ದಿ ನಕ್ಕರು. ಗೌಡ ಕಕ್ಕಾಬಿಕ್ಕಿಯಾದ. ನಂತರ ಹೇಳಿದರು ಸಾಹೇಬರು, "ಅಲ್ಲೋ ಹುಚ್ಚಪ್ಪ! ಇಂತಹ ದಿವ್ಸ ಸೀಮೆ ಎಣ್ಣೆ, ಅಥವಾ ದೀಪಗಳದ್ದೇನೋ ಕೆಲ್ಸ?" — ವೆಂಕಣ್ಣಾಚಾರ್, ಇಡುವಾಣಿ

ಮೊನ್ನೆ ನಾನು, ನನ್ನ ಹೆಂಡ್ತಿ ಸಿಟಿ ಬಸ್ಸಿನಲ್ಲಿ ಮಾರ್ಕೆಟ್ಟಿಗೆ ಹೋಗೋ ಸಂದರ್ಭ ಬಂತು. ಬಸ್ಸಿನಲ್ಲಿ ತುಂಬಾ ರಷ್ ಇತ್ತು. ನಾನು ಹಿಂದೆ ನಿಂತ್ಕೊಂಡೆ. ನನ್ಹೆಂಡ್ತೀಗೆ ಲೇಡೀಸ್ ಸೀಟಿನಲ್ಲಿ ಸ್ಥಳ ಸಿಕ್ತು. ಇಬ್ರ ಹತ್ರೂ ದುಡ್ಡು ಇದ್ದದ್ರಿಂದ ನಮ್ಮ ನಮ್ಮ ಟಿಕೆಟ್ ನಾವು ನಾವೇ ತೊಗೊಂಡ್ವಿ. ಬಸ್ ಸ್ಟ್ಯಾಂಡಿಗೆ ಬಂದು ನಿಂತ್ಕೊಂಡಾಗ ಎಲ್ಲರಿಗೂ ಒಟ್ಟಿಗೆ ಇಳಿಯೋ ಸಂಭ್ರಮ. ಈ ಗಲಾಟೇಲಿ ಮುಂದೆ ಸಾಗುತ್ತಿದ್ದ ನನ್ನ ಭುಜಗಳು ನನ್ಹೆಂಡ್ತಿ ಭುಜಕ್ಕೆ ತಾಗ್ತು. ನನ್ನನ್ನೇ ನೋಡುತ್ತಿದ್ದ ರಾಕ್ಷಸನಂತೆ ನಿಂತಿದ್ದ ಕಂಡಕ್ಟರ್ ಅಬ್ಬರಿಸಿ ನನ್ಕೇಳ್ದ, "ಏನ್ರೀ ಹೆಂಗಸ್ರು ಇಳೀತಿದಾರೇಂತ ಜ್ಞಾನ ಇಲ್ವೆ, ಅವರ್ಮೇಲೇಕೆ ಬೀಳ್ತೀದಿರಾ....." ಬಸ್ಸಿನಲ್ಲಿದ್ದ ಎಲ್ಲರ ಕಣ್ಣುಗಳು ಒಂದು ಸಲ ನನ್ನನ್ನು ನುಂಗುವಂತೆ ದಿಟ್ಟಿಸಿ ಇನ್ನೊಂದು ಸಲ, ಮುಂದೆ ಸಾಗುತ್ತಿದ್ದ ನನ್ಹೆಂಡ್ತಿಯನ್ನು ಮರುಕದಿಂದ ನೋಡಿ ಮುಂದೆ ಸಾಗಿದವು. ನನಗೆ ನಗಬೇಕೋ ಅಳಬೇಕೋ ಗೊತ್ತಾಗದೆ ಒಂದ್ಸಲ ಕಂಡಕ್ಟರನ ರುದ್ರಮುಖ ನೋಡಿ ಸುಮ್ನೆ ಬಸ್ಸಿನಿಂದಿಳ್ದು ನನ್ಹೆಂಡ್ತಿ ಜೊತೆಗೂಡಿ ಮುಂದೆ ನಡೆದೆ. ನಾಲ್ಕು ಹೆಜ್ಜೆ ಹೀಗೆ ಮುಂದೆ ನಡೆದು ನಾವಿಬ್ರು ಹಿಂತಿರುಗಿ ನೋಡಿದಾಗ ಕಂಡಕ್ಟರನ ಕಣ್ಣುಗಳು ಮೌನವಾಗಿ ನನ್ನ ಕ್ಷಮೆ ಯಾಚಿಸುತ್ತಿದ್ದವು.

— ಎಚ್. ಆರ್. ಸುಂದರೇಶನ್

ಗೋವಿಂದ ಪೈಯವರ ಮಂಜೇಶ್ವರದಿಂದ ಶಿವರಾಮ ಕಾರಂತರ ಪುತ್ತೂರಿಗೆ ಹೊರಟಿತ್ತು ಬಸ್ಸು. ಐವತ್ತೆರಡು ಮಂದಿ ಪ್ರಯಾಣಿಕರನ್ನು ತುಂಬಿಕೊಂಡು ಆಗಾಗ್ಗೆ ಬುಸುಗುಟ್ಟುತ್ತಾ ಹರಿಯುತ್ತಿತ್ತು, ಟಾಟಾ ಮರ್ಸಿಡೆಸ್ ಬೆಂಜ್. ಬಸ್ಸಿನೊಳಗೆ ಪ್ರಯಾಣಿಕರ ನೂಕುನುಗ್ಗಲು, ಹೊರಗೆ ಚಂಡಕಿರಣನ ಪ್ರಚಂಡತೆ. ನನ್ನ ಸ್ಥಿತಿ ವರ್ಣನಾತೀತ.

ಮಂಜೇಶ್ವರವನ್ನು ಬಿಟ್ಟು, ತುಸು ದೂರ ಹೋದೊಡನೆ, ಚಾಲಕನ ಹಿಂಬದಿಯ ಸೀಟಿನಲ್ಲಿದ್ದ ಮಹನೀಯರೊಬ್ಬರು ಸಿಗರೇಟು ಹೊತ್ತಿಸಿದರು. ಅವರು ಉಗುಳಿದ ಹೊಗೆ ವರ್ತುಲ ವರ್ತುಲವಾಗಿ ಸುಳಿಯಿತು. ಧೂಮಲೀಲೆಯನ್ನು ನೋಡುವುದರಲ್ಲೇ ಲೀನವಾದರು ಅವರು.

ಚಾಲಕನು ಹಿಂದಿರುಗಿ, ಸಿಗರೇಟು ಸೇದುತ್ತಿದ್ದ ಮಹಾಶಯರನ್ನು ಕಂಡು ಮುಗುಳುನಕ್ಕನು. ಅನಂತರ 'ಎಷ್ಟು ದೂರ' ವೆಂದು ಪ್ರಶ್ನಿಸಿದನು. 'ಪುತ್ತೂರಿಗೆ' ಎಂಬ ಉತ್ತರ ಬಂತು. ಅವರಿಬ್ಬರ ನಡುವೆ ಮಾತುಕತೆಗಳು ಬೆಳೆದುವು. ಚಾಲಕನು "ಯಾವ ಹುದ್ದೆಯಲ್ಲಿದ್ದೀರಿ" ಎಂದು ಪ್ರಶ್ನಿಸಿದನು. "....ಆಫೀಸಿನಲ್ಲಿ ಹೆಡ್‌ಕ್ಲಾರ್ಕ್" ಎಂದರು ಅವರು. "ಬಿ. ಎ. ಆಗಿರಬಹುದಲ್ಲವೇ"— ಎಂಬುದು ಚಾಲಕನ ಮರುಪ್ರಶ್ನೆ. "ಹೌದು" ಎಂಬುದು ಉತ್ತರ. ಅನಂತರ ಸ್ವಲ್ಪ ಹೊತ್ತು ಮೌನ. ಚಾಲಕನು ಮುಂದುವರಿಸಿದನು—"ಬಿ.ಎ-ಗಿ.ಎ. ಯ ಮಾತು ಬಿಡಿ; ನಾನು 'ಮೆಟ್ರಿಕ್ಯೂ' ಆಗಿಲ್ಲ. ಕಲಿಯುವ ಯೋಗ್ಯತೆ ನನಗಿರಲಿಲ್ಲ. ಕಲಿಸುವ 'ತಾಖತ್ತು' ತಂದೆಗೆ ಇರಲಿಲ್ಲ,... ಆದರೂ ನೋಡಿ, ಆ ಬೋರ್ಡು ಇದೆಯಲ್ಲಾ— 'ಬಸ್ಸಿನೊಳಗೆ ಬೀಡಿ ಸಿಗರೇಟು ಸೇದಬಾರದು.'— ಅದನ್ನು ಓದುವಷ್ಟು ಅಕ್ಷರಜ್ಞಾನವಿದೆ" ಎಂದನು.

ಬಿ.ಎ. ಮಹಾಶಯರ ಕೈಯಲ್ಲಿದ್ದ ಸಿಗರೇಟಿನ ತುಂಡು ಕೆಳಗೆ ಬಿತ್ತು!

—'ಚಂದ್ರಮಾ'

ನನಗೆ ಮುದ್ರಣಾಲಯದಲ್ಲಿ ಪ್ರೂಫು ಓದುವ ಕೆಲಸ. ಶ್ರೀ ದಿವಾಕರರ 'ಹರಿಭಕ್ತಿಸುಧೆ' ಯ ಕೊನೆಯ ಪುಟಗಳ ಪ್ರೂಫು ಓದುತ್ತಿದ್ದೆವು, ನಾನೂ ನನ್ನ ಮೇಲಧಿಕಾರಿಗಳೂ ಜೊತೆಯಾಗಿ. ಆದರಲ್ಲೊಂದು ವಾಕ್ಯ ಹೀಗೆ ಬಂದಿತು: ಬೆಳಗಿನಲ್ಲಿ ಎದ್ದೊಡನೆ ಮೊದಲು ಶ್ರೀಪಾದರಾಯರ (ಕನ್ನಡ ಹರಿದಾಸರು) ನಾಮ ಸ್ಮರಿಸಿದವರಿಗೆ ಅಂದು ಸುಖಾನ್ನಭೋಜನ ದೊರೆಯುವುದೆಂದು ಒಂದು ಐತಿಹ್ಯವಿದೆ-ಎಂಬುದಾಗಿ. ಈ ವಾಕ್ಯವನ್ನು ಓದುತ್ತಲೇ ನನ್ನ ಜೊತೆಯವರು ಒಳ್ಳೇ ಉತ್ಸಾಹಗೊಂಡು "ಇದೊಳ್ಳೆ ಉಪಾಯ, ದಿನವೂ ಸ್ಮರಿಸಬಹುದಲ್ಲ. ನಿತ್ಯ ಸುಖಾನ್ನಭೋಜನ. ನಾಳೆ ಪರೀಕ್ಷೆ ಮಾಡಿ ನೋಡೋಣ" ಎಂದು ನುಡಿದರು. ಅವರು ಈ ಮಾತು ಆಡಿ ಇನ್ನೂ ಒಂದು ನಿಮಿಷ ಕೂಡ ಕಳೆದಿರಲಿಲ್ಲ. ಅಷ್ಟರಲ್ಲಿ ಅವರಿಗೆ ಒಂದು ಸಂದೇಶ ಬಂದಿತು, ಮೊದಲ ಮೊಮ್ಮಗ (ಮಗನ ಮಗ) ಅದೇ ದಿನ ಬೆಳಿಗ್ಗೆ ಹುಟ್ಟಿದುದಾಗಿ. ಐವತ್ತರ ಸನಿಯದಲ್ಲಿದ್ದ ಅವರಿಗೆ ಈ ಶುಭವಾರ್ತೆಯನ್ನೂ ಮೀರಿದ ಸುಖಾನ್ನಭೋಜನವೊಂದು ಇದೆಯೆಂದು ನನಗೇನೂ ಎನಿಸದು.

—ಪ. ರಾ. ಗಲಗಲಿ

ಸರ್ಕಸ್ ಜಗತ್ತಿಗೇ ಇದೊಂದು ಅಮೂಲ್ಯ ಕೊಡುಗೆಯಾಯಿತು

ಮೃತ್ಯುಗೋಲದ ಜನಕ

ಶಿವಾಜಿ ಶಂಕರ ಕಾರ್ಲೇಕರ

ಇಂಗ್ಲೆಂಡಿನ ಕೆಂಟ್ ಪ್ರಾಂತದ ಒಂದು ಹಳ್ಳಿಯಲ್ಲಿ ೧೮೮೪ ರಲ್ಲಿ ಜಾಕ್ ಕಾರ್ಸನ್‌ನ ಜನ್ಮವಾಯಿತು. ಅವನ ತಂದೆ ಒಬ್ಬ ಬಡ ರೈತ. ಈತ ಹುಟ್ಟಿದ ಎಂಟೇ ದಿನಗಳಲ್ಲಿ ತಂದೆ ತೀರಿಕೊಂಡನು. ತಾಯಿ ಜಾಕ್‌ನೊಂದಿಗೆ ತನ್ನ ತವರುಮನೆಗೆ ಹೋದಳು.

ಮುಂದೆ ಕೆಲ ದಿನಗಳಲ್ಲೇ ಇವನ ತಾಯಿ ಪೀಟರ್ಸನ್ ಎಂಬಾತನೊಂದಿಗೆ ಪುನರ್ವಿವಾಹವಾದಳು. ಪೀಟರ್ಸನ್ ಸೈನ್ಯದಲ್ಲಿ ನೌಕರ. ಸ್ವಭಾವ ಸಿಟ್ಟಿನದು. ಜೊತೆಯಲ್ಲಿ ಸೆರೆ ಕುಡಿಯುವ ವ್ಯಸನ. ಇವನು ಜಾಕ್‌ನ ತಾಯಿಯ ದೂರದ ಸಂಬಂಧಿಕ.

ಐದಾರು ವರ್ಷದ ಬಾಲಕ ಜಾಕ್‌ನನ್ನು ಈ ಮಲತಂದೆ ಎಂದೂ ಹಚ್ಚಿಕೊಳ್ಳಲಿಲ್ಲ. ಜಾಕ್ ಈ ತಂದೆಯನ್ನು ಕಂಡು ಹೆದರುತ್ತಿದ್ದ. ತಂದೆ ಸೈನ್ಯದ ಮನುಷ್ಯನಾಗಿದ್ದರಿಂದ ಆತನಿಗೆ ಶಿಸ್ತೆಂದರೆ ಪಂಚಪ್ರಾಣ.

ಒಂದು ದಿನ ಜಾಕ್ ಬೆಳಿಗ್ಗೆ ಏಳಲು ಸ್ವಲ್ಪ ತಡಮಾಡಿದ. ಮೈ ಸುಸ್ತಾಗಿತ್ತೆಂದೇ ಮಲಗಿಕೊಂಡಿದ್ದ. ಆದರೆ ಇದು ಶಿಸ್ತುಪ್ರಿಯನಾದ ಪೀಟರ್ಸನ್‌ನಿಗೆ ಸರಿಹೋಗಲಿಲ್ಲ. ಬಂದವನೆ ಜಾಕ್‌ನನ್ನು ಬೆತ್ತದಿಂದ ಥಳಿಸಿದ. ತಾಯಿ ಮೇರಿ ಬಂದು ಮಗನನ್ನು ಬಿಡಿಸಿಕೊಂಡಳು. ಇದರಿಂದ ಜಾಕ್ ಬಹಳ ಹೆದರಿಬಿಟ್ಟ.

ಮರುದಿನವೆ ಆತ ಓಡಿ ಹೋಗಿ ತನ್ನ ಅಜ್ಜ-ಮೇರಿಯ ತಾಯಿಯ ಮನೆ ಸೇರಿದ. ಇತ್ತ ಜಾಕ್ ಓಡಿಹೋದನೆಂದು ದುಃಖಿಸಿ ತಾಯಿ ಹಾಸಿಗೆಯನ್ನೇ ಹಿಡಿದಳು. ಮುಂದೆ ಎಂಟು-ಹತ್ತು ದಿನ ಬಿಟ್ಟು ಮೇರಿಯ ತಾಯಿ ಮೊಮ್ಮಗ



ನೊಂದಿಗೆ ಮಗಳ ಮನೆಗೆ ಬಂದಳು. ಹಾಸಿಗೆ ಹಿಡಿದ ತನ್ನ ತಾಯಿಯನ್ನು ನೋಡಿದವನೆ ಜಾಕ್ ಓಡುತ್ತೋಡುತ್ತ ಅವಳ ಹತ್ತಿರ ಹೋಗಿ ಅವಳನ್ನು ಅಪ್ಪಿಕೊಂಡು ಅಳಲಾರಂಭಿಸಿದ.

ಜಾಕ್ ಮರಳಿಬಂದುದು ಪೀಟರ್ಸನ್‌ನಿಗೆ ಹಿಡಿಸಲಿಲ್ಲವಾದರೂ ಮೇರಿಯತ್ತ ನೋಡಿ ಆತ ಸುಮ್ಮನುಳಿದ. ಆದರೆ ತನ್ನ ಹಿಂದೆ ಚಿಕ್ಕ ಜಾಕ್‌ನ ಬೆಳವಣಿಗೆ ಹೇಗಾದೀತೆಂದು ಮೇರಿ ಮಾತ್ರ ಎದೆ ಒಡೆದುಕೊಂಡಳು. ಕೊನೆಯ ಗಳಿಗೆಯಲ್ಲಿ ಜಾಕ್‌ನನ್ನು ಎದೆಗವಚಿಕೊಂಡು ಪ್ರಾಣ ಬಿಟ್ಟಳು.

ತಾಯಿ ತೀರಿಕೊಂಡೊಡನೆಯೇ ಜಾಕ್ ಅಜ್ಜಿಯೊಂದಿಗೇ ಹೊರಟುಹೋದ. ಅವಳಾದರೂ ಒಬ್ಬಳೇ ಇದ್ದಳು. ಲಂಡನ್ನಿನಲ್ಲಿ ಡೇವಿಡ್ ಎಂಬ ಅವಳ ದೂರದ ಆಪ್ತನೊಬ್ಬ ಇದ್ದ. ಆತ ಒಂದು ಕಾರಖಾನೆಯಲ್ಲಿ ಟರ್ನರ್ ಹಾಗೂ ಫಿಟರ್ ಆಗಿದ್ದ. ಅವನ ಹತ್ತಿರವೆ ಇಟ್ಟು ಜಾಕ್‌ನಿಗೆ ಶಾಲೆ ಕಲಿಸಬೇಕೆಂದು ಯೋಚಿಸಿ ಅಜ್ಜಿ ಜಾಕ್‌ನೊಂದಿಗೆ ಲಂಡನ್ನಿಗೆ ಹೋದಳು.

ಡೇವಿಡ್ ಒಳ್ಳೇ ಮನುಷ್ಯ. ಜಾಕ್‌ನ ಕತೆ ಕೇಳಿ ಅವನಿಗೆ ಕೆಡುಕೆನಿಸಿತು. ಅವನ ಪತ್ನಿ ಮಾರ್ಗರೆಟ್‌ಳಾದರೂ ಸದಯಾಂತಃಕರಣಿ. ಅವರಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಜಾಕ್‌ನನ್ನು ತಮ್ಮಲ್ಲಿ ಇಟ್ಟುಕೊಳ್ಳಲು ಸಂತೋಷದಿಂದ ಒಪ್ಪಿದರು. ಜಾಕ್ ಆಮೇಲೆ ಅಂದವಾದ ಬಟ್ಟೆ ತೊಟ್ಟು ಶಾಲೆಗೆ ಹೋಗತೊಡಗಿದ.

ಜಾಕ್ ಮೂಲತಃ ಚುರುಕುಬುದ್ಧಿಯ ಹುಡುಗ. ಆಗಾಗ ಡೇವಿಡ್‌ನೊಂದಿಗೆ ಕಾರಖಾನೆಗೂ ಹೋಗುತ್ತಿದ್ದ. ಡೇವಿಡ್‌ನ ಕೆಲಸ ನೋಡಿ ಈತ ತಾನೂ ಆ ಕೆಲಸ ಕಲಿಯಬೇಕೆಂದು ಆಸೆಪಟ್ಟ. ತನ್ನ ಮನೋಗತವನ್ನು ಡೇವಿಡ್‌ನೆದುರು ಹೇಳಿದ. ಡೇವಿಡ್‌ನೂ ಕಲಿಸಲಿಕ್ಕೆ ಆರಂಭಿಸಿದ. ಇತ್ತ ಶಾಲೆಯಲ್ಲಿ ಕಲಿಯುತ್ತಿದ್ದ. ಅತ್ತ ಯಂತ್ರಗಳನ್ನು ನಡೆಸಲೂ, ಜೋಡಿಸಲೂ ಕಲಿಯುತ್ತಿದ್ದ. ಕೆಲ ದಿನಗಳಲ್ಲೆ ಜಾಕ್ ಉತ್ತಮ ಯಂತ್ರಜ್ಞನಾದ.

ಜಾಕ್‌ನ ಯಂತ್ರವಿದ್ಯೆಯನ್ನು ಮೆಚ್ಚಿ ಡೇವಿಡ್ ಅವನಿಗೊಂದು ಮೋಟಾರು ದುರಸ್ತಿ ಮಾಡುವ ಕಾರಖಾನೆ ತೆರೆದುಕೊಟ್ಟ. ಅದೇ ಹೊಸದಾಗಿ ಆಗ ಮೋಟಾರುಗಳ ಪ್ರಚಾರವಾಗಿತ್ತು. ಇನ್ನೂ ಸಾಕಷ್ಟು ಮೋಟಾರ ದುರಸ್ತಿಯ ಕಾರಖಾನೆಗಳು ನಗರದಲ್ಲಿ ಆಗಿರಲಿಲ್ಲ. ಅದರಿಂದ ಜಾಕ್‌ನ ವ್ಯವಸಾಯ ಚೆನ್ನಾಗಿ ಸಾಗಿತು.

ಜಾಕ್‌ನಿಗೆ ೧೭--೧೮ ವರ್ಷಗಳಾಗಿದ್ದವು. ಆಗ ಡೇವಿಡ್‌ನಲ್ಲಿ ೧೫--೧೬ ವರ್ಷದ ಲೂಸಿ ಎಂಬ ಒಬ್ಬ ಹುಡಿಗೆ ಬಂದಿದ್ದಳು. ಆಕೆಯೂ ಡೇವಿಡ್‌ನ ದೂರದ ಸಂಬಂಧಿಕಳು. ಅವಳೂ ಜಾಕ್‌ನಂತೆ ಅನಾಥಳಾಗಿ ಡೇವಿಡ್‌ನಲ್ಲಿ ಬಂದಿದ್ದಳು. ಗುಲಾಬಿ ಹೂವಿನಂತೆ ದುಂಡಾಗಿ, ಮುದ್ದಾಗಿತ್ತು ಅವಳ ಮುಖ. ಅವಳ ನಯನಬಾಣಗಳಿಗೆ ಗಾಯಯಾಗದ ತರುಣನೆ ಇರಲಾರ. ಮೊದಲ ದೃಷ್ಟಿಪಾತದಲ್ಲೇ ಜಾಕ್ ಅವಳಲ್ಲಿ ಅನುರಕ್ತನಾದ. ಅವರಿಬ್ಬರ ನಡುವೆ ಪ್ರೇಮ ಬೆಳೆಯುತ್ತಿದ್ದುದನ್ನು ಕಂಡು ಡೇವಿಡ್ ಅವರಿಬ್ಬರ ಲಗ್ನಮಾಡಿಬಿಟ್ಟ.

ವಿವಾಹವಾದೊಡನೆಯೆ ಜಾಕ್ ಮತ್ತು ಲೂಸಿ ಮಧುಚಂದ್ರಕ್ಕೆಂದು ಯುರೋಪಿನ ಪಯಣ ಕೈಕೊಂಡರು. ಬರ್ಲಿನ್‌ನಲ್ಲಿದ್ದಾಗ ಅವರು ಒಂದು ಸರ್ಕಸ್ ನೋಡಿದರು. ಅದರಲ್ಲಿ ಅರ್ಧವರ್ತುಲಾಕಾರದ ಪಂಜರದಲ್ಲಿ ಒಬ್ಬ ಗೋಲಾಕಾರವಾಗಿ ಸ್ಯಾಕಲ್ ನಡೆಸುತ್ತಿದ್ದ. ಇದನ್ನು ಕಂಡು ಪೂರ್ಣ ಗೋಲದಲ್ಲಿ ಮೋಟಾರ್ ಸ್ಯಾಕಲ್ ತಿರುಗಿಸಲು ಬರಲಾರದೆ? ಎಂಬ ವಿಚಾರ ಜಾಕ್‌ನ ಮನಸ್ಸಿನಲ್ಲಿ ಮೈತಾಳಿತು. ಮರಳಿ ಲಂಡನ್ನಿಗೆ ಬಂದೊಡನೆಯೆ ಆತ ಆ ಪ್ರಯತ್ನದಲ್ಲಿ ತೊಡಗಿದ.

ಒಂದು ವರ್ಷ ಶ್ರಮಪಟ್ಟು ಕಬ್ಬಿಣದ ಪಟ್ಟಿಗಳ ಪೃಥ್ವಿಯಾಕಾರದ ಒಂದು ಪಂಜರವನ್ನು ನಿರ್ಮಿಸಿದ. ಜಗತ್ತಿನಲ್ಲೆ ಮೊಟ್ಟಮೊದಲನೆಯ ಮೃತ್ಯುಗೋಲ ಇದು! ಇದನ್ನಿಂದಿಗೂ ಲಂಡನ್ನಿನ

ಅದ್ಭುತ ವಸ್ತುಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ.

ಗೋಲವು ತಯಾರಾದೊಡನೆಯೆ ಜಾಕ್ ಅದರಲ್ಲಿ ತಾನೇ ಮೋಟರ್ ಸ್ಯಾಕಲ್ ನಡಿಸುವುದಾಗಿ ನಿರ್ಣಯಿಸಿದ. ಆತ ಮೋಟರ್ ಸ್ಯಾಕಲ್ ನಡಿಸುವದರಲ್ಲಿ ಚೆನ್ನಾಗಿ ಪಳಗಿದ್ದ. ಯಾರ ಸಹಾಯವೂ ಇಲ್ಲದೆ ಮೃತ್ಯುಗೋಲದಲ್ಲಿ ಮೋಟರ್ ಸ್ಯಾಕಲ್ ನಡೆಸುವ ಅಭ್ಯಾಸ ನಡೆಸಿದ. ಮೊದಲು ತನ್ನ ನಡುವಿಗೆ ಒಂದು ಹಗ್ಗವನ್ನು ಕಟ್ಟಿಕೊಂಡು ಅದನ್ನು ಗೋಲದ ತುದಿಯಲ್ಲಿ ಒಂದು ಗಡಗಡೆಗೆ ಕಟ್ಟಿ ಅದರಲ್ಲಿ ಹಾಯಿಸಿ ಹೊರಗೆ ಗಟ್ಟಿಯಾಗಿ ಹಿಡಿದುಕೊಂಡು ನಿಲ್ಲಲು ಲೂಸಿಗೆ ಹೇಳಿದ. ಲೂಸಿ ಹೆದರಿದಳು. ಆದರೂ ಧೈರ್ಯದಿಂದ ತನ್ನ ಕೈಯೊಳಗಿನ ಹಗ್ಗದ ತುದಿಯನ್ನು ಗಟ್ಟಿಯಾಗಿ ಜಗ್ಗಿ ಹಿಡಿದಳು. ಜಾಕ್ ಮೋಟರ್ ಸ್ಯಾಕಲ್ ಸುರುಮಾಡಿದ. ವರ್ತುಲಾಕಾರ ತಿರುಗುತ್ತ ಸಾವಕಾಶ ಸುತ್ತುಗಳನ್ನು ಮೇಲೇರಿಸತೊಡಗಿದ. ಅತ್ತ ಆತ ಮೇಲೆಮೇಲೆ ಹೊರಟಂತೆ ಇತ್ತ ಲೂಸಿಯ ಎದೆ ಡವಡವನೆ ಬಡಿದುಕೊಳ್ಳಲಾರಂಭಿಸಿತು. ಸ್ಯಾಕಲ್ ಮೇಲಿರುವಾಗಲೇ ಆತ ಹಗ್ಗ ಗಟ್ಟಿಯಾಗಿ ಹಿಡಿಯೆಂದು ಹೆಂಡತಿಗೆ ಕೂಗಿದ. ಆದರೆ ಹೆದರಿದ ಲೂಸಿ ಮೂರ್ಛೆಬಂದು ಕೆಳಗುರುಳಿದಳು. ಹಗ್ಗ ಕೈಬಿಟ್ಟಿತು. ಅತ್ತ ಜಾಕ್ ಮೋಟರ್ ಸ್ಯಾಕಲ್ ಸಮೇತ ಕೆಳಗಪ್ಪಳಿಸಿದ. ಮೋಟರ್ ಸ್ಯಾಕಲ್ ಮೈ-ಮೇಲೆ ಬಿದ್ದುದರಿಂದ ತತ್‌ಕ್ಷಣ ಆತ ಮೂರ್ಛಿತನಾದ.

ಆಗ ಅಲ್ಲಿ ಹತ್ತು-ಹನ್ನೆರಡು ವರ್ಷದ ಒಬ್ಬ ಹುಡುಗನನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಆ ಹುಡುಗ ಇದನ್ನು ಕಂಡು ಓಡುತ್ತಲೇ ಡೇವಿಡ್‌ನ ಬಳಿ ಹೋಗಿ ಎಲ್ಲವನ್ನೂ ಹೇಳಿದ. ಕೇಳಿದೊಡನೆಯೆ ಡೇವಿಡ್ ಹಾಗೂ ಅವನ ಸಹವರ್ತಿಗಳು ಓಡುತ್ತಲೇ ಜಾಕನಿದ್ದೆಡೆಗೆ ಬಂದರು. ಜಾಕ್‌ನನ್ನು ಗೋಲದಿಂದ ಹೊರಗೆ ತೆಗೆದರು. ಕೂಡಲೆ ಲೂಸಿಯನ್ನೂ ಅವನನ್ನೂ ಆಸ್ಪತ್ರೆಗೆ ಸಾಗಿಸಿದರು. ಜಾಕ್‌ನ ತಲೆಗೂ ಎದೆಗೂ ಬಲವಾದ ಏಟು ಬಿದ್ದಿತ್ತು. ಲೂಸಿ ಬೇಗನೆ ಎಚ್ಚೆತ್ತಳು. ಜಾಕನ ಅವಸ್ಥೆ ಕಂಡು ಅಳಲಾರಂಭಿಸಿದಳು. ಜಾಕ್ ಏಳೆಂಟು ತಿಂಗಳವರೆಗೆ ಆಸ್ಪತ್ರೆಯಲ್ಲಿ ಉಳಿಯಬೇಕಾಯಿತು. ಗುಣಹೊಂದಿ ಮನೆಗೆ ಮರಳಿದಾಗ ಮತ್ತೆ ಇಂಥ ಪ್ರಯೋಗಕ್ಕೆ ಕೈ ಹಾಕಬೇಡೆಂದು ಡೇವಿಡ್ ಬಜಾಯಿಸಿದ. ಆದರೆ ಜಾಕ್ ಕೇಳುವವನೆ?

ಆತ ಮತ್ತೆ ಪ್ರಯೋಗ ಪ್ರಾರಂಭಿಸಿದ. ಲೂಸಿ ನಿರುಪಾಯಳಾಗಿ ಮತ್ತೆ ಗಂಡನಿಗೆ ಸಹಾಯ ನೀಡತೊಡಗಿದಳು. ಆಗ ಆಕೆ ಬಸುರಿ. ಆದರೂ ಮನಃಪೂರ್ವಕ ಸಹಾಯ ಮಾಡಿದಳು. ಎರಡುಮೂರು ವರ್ಷಗಳಲ್ಲಿ ಮೃತ್ಯುಗೋಲದಲ್ಲಿ ಮೋಟರ್ ಸ್ಯಾಕಲ್ ಬೇಕಾದ ಹಾಗೆ ನಡೆಸಲು ಜಾಕ್ ಸಮರ್ಥನಾದ. ಇದಕ್ಕಾಗಿ ಆತ ಬೇರೊಂದು ಮೋಟರ್ ಸ್ಯಾಕಲ್ ತಯಾರಿಸಿದ. ಈತ ತಯಾರಿಸಿದ ಮೋಟರ್ ಸ್ಯಾಕಲ್ಲಿಗೆ ಮಡ್‌ಗಾರ್ಡ್‌ಗಳು ಇರಲಿಲ್ಲ, ಬ್ರೇಕ್‌ಗಳೂ ಇರಲಿಲ್ಲ.

ಎಲ್ಲ ಸಿದ್ಧತೆಯಾದ ಮೇಲೆ ಆಗಿನ ಇಂಗ್ಲೆಂ-ಡಿನ ಬಾದಶಹರಾದ ಎಡ್ವರ್ಡ್‌ರ ಅಧ್ಯಕ್ಷತೆಯಲ್ಲಿ ೧೯೦೮ ರ ಡಿಸೆಂಬರ ೧೯ ರಂದು ಜಾಕ್ ಮೃತ್ಯುಗೋಲದ ಪ್ರಥಮ ಬಹಿರಂಗ ಪ್ರಯೋಗವನ್ನು ಲಂಡನ್ನಿನಲ್ಲಿ ಏರ್ಪಡಿಸಿದ. ಅಂದಿನ ಪ್ರೇಕ್ಷಕರ ಸಂಖ್ಯೆ ಐದು ಲಕ್ಷದಷ್ಟಿತ್ತು. ಎಲ್ಲರ ಅಭಿವಾದನೆ ಸ್ವೀಕರಿಸುತ್ತಾ ಜಾಕ್ ಗೋಲವನ್ನು ಹೊಕ್ಕ. ಮೊದಲು ಅಡ್ಡ ತಿರುವಿ ಆಮೇಲೆ ನೆಟ್ಟಗೆ ಕೆಳಗೆ ಮೇಲೆ ತಿರುವಿ, ಕೈಬಿಟ್ಟು, ಮೋಟರ್ ಸ್ಯಾಕಲ್ ನಡೆಸಿ, ಒಂದೇ ಸವನೆ ಅರ್ಧಗಂಟೆಯವರೆಗೂ ತನ್ನ ಅದ್ಭುತ ಪ್ರಯೋಗವನ್ನು ತೋರಿಸಿ, ಅಸಂಖ್ಯ ಚಪ್ಪಾಳೆಗಳ ಸ್ವಾಗತವನ್ನು ಹೊಂದಿ ವಿಜಯಿಯಾಗಿ ಹೊರಬಂದ.

ಸ್ವಲ್ಪಹೊತ್ತು ವಿಶ್ರಾಂತಿ ಹೊಂದಿ ಪುನಃ ಲೂಸಿಯೊಂದಿಗೆ ಒಳಹೊಕ್ಕ. ಅವಳನ್ನು ತನ್ನ ಹಿಂದೆ ಕೂಡ್ರಿಸಿಕೊಂಡು ತನ್ನ ಅಪೂರ್ವ ಪ್ರಯೋಗ ಮಾಡಿದ. ಆಗ ಸ್ವತಃ ಬಾದಶ

ಹರೂ ಆನಂದದಿಂದ ಕೈಕೈ ತಟ್ಟಿದರು.

ಕೆಳಗೆ ಬಂದೊಡನೆಯೆ ಬಾದಶಾಹರನ್ನು ನಮಸ್ಕರಿಸಿದ. ಬಾದಶಾಹ ಪ್ರೀತಿಯಿಂದ ಹಸ್ತಾಂದೋಲನ ಮಾಡಿದರು, ಮತ್ತು ೫೦ ಸಾವಿರ ಪೌಂಡಿನ ಬಕ್ಷೀಸನ್ನು ಕೊಟ್ಟರು. ಮಹಾರಾಣಿ ತನ್ನ ಕೊರಳೊಳಗಿನ ಬಹುಮೂಲ್ಯ ಮುತ್ತಿನ ಹಾರವನ್ನು ತೆಗೆದು ಲೂಸಿಯ ಕೊರಳಲ್ಲಿ ಹಾಕಿದಳು.

ಈ ಪ್ರಯೋಗ ನೋಡಲು ಅನೇಕ ದೇಶಗಳ ಸರ್ಕಸ್ ಮಾಲೀಕರು ಬಂದಿದ್ದರು. ಅವರು ಈತನ ಕೆಲಸವನ್ನು ಮೆಚ್ಚಿ ತಮ್ಮ ಸರ್ಕಸ್ಸುಗಳಲ್ಲೂ ಬಂದು ಪ್ರಯೋಗ ಮಾಡಬೇಕೆಂದು ವಿಜ್ಞಾಪಿಸಿದರು. ಹಣವನ್ನೂ ಅಮಿತವಾಗಿ ಕೊಡುವುದಾಗಿ ಹೇಳಿದರು. ಏನು ಮಾಡಬೇಕೊ ಜಾಕ್‌ನಿಗೆ ತಿಳಿಯದಂತಾಯಿತು. ಡೇವಿಡ್ ಅಲ್ಲಿಯೆ ಇದ್ದ. ಆತ ಇಂಗ್ಲಿಷ ಕಂಪನಿಯಲ್ಲೆ ಸೇರೆಂದು. ಸಲಹೆ ಇತ್ತ. ಆ ಮೇರೆಗೆ ಜಾಕ್ ಆಗ ಇಂಗ್ಲಂಡಿನಲ್ಲಿದ್ದ ಏಕಮಾತ್ರ ಕಂಪನಿ 'ಕ್ವೀನ್ ವಿಕ್ಟೋರಿಯಾ ಸರ್ಕಸ್ಸ್'ನ್ನು ಸೇರಿದ. ಅವನ ಸಂಬಳ ತಿಂಗಳಿಗೆ ಐದುಸಾವಿರ ಪೌಂಡೆಂದು ಗೊತ್ತಾಯಿತು.

ಈ ಸರ್ಕಸ್ಸಿನೊಂದಿಗೆ ಇಡೀ ಯುರೋಪನ್ನೆಲ್ಲ ಸುತ್ತಿ ಜಾಕ್ ದುಡ್ಡನ್ನೂ ಕೀರ್ತಿಯನ್ನೂ ಸಂಪಾದಿಸಿದ. ಅದೇ ಹೊತ್ತಿನಲ್ಲಿ ೧೯೧೨ ರಲ್ಲಿ ಲೂಸಿ ಹಡೆದಳು. ಗಂಡು ಮಗುವಾಯಿತು. ಮಗನಿಗೆ ಹೆಸರು ಹೆನ್ರಿ ಎಂದಿಟ್ಟರು.

ಆನಂತರ ಜಾಕ್‌ನು ಲೂಸಿಗೂ ಮೋಟರ್-ಸ್ಯಾಕಲ್ ನಡೆಸಲು ಕಲಿಸಿದ. ಇಬ್ಬರೂ ಏಕಕಾಲಕ್ಕೆ ಮೃತ್ಯುಗೋಲದಲ್ಲಿ ಪ್ರಯೋಗ ಮಾಡುತ್ತಿದ್ದರು. ಆತ ನೆಟ್ಟಗೆ ಕೆಳಗೆ ಮೇಲೆ ನಡೆಸುತ್ತಿದ್ದರೆ ಈಕೆ ಅಡ್ಡಲಾಗಿ ನಡೆಸುತ್ತಿದ್ದಳು. ಅವರ ಕೌಶಲ ಎಷ್ಟಿತ್ತೆಂದರೆ ಅವರು ಒಬ್ಬರನ್ನೊಬ್ಬರು ಎಂದೂ ಢಿಕ್ಕಿ ಹೊಡೆಯುತ್ತಿದ್ದಿಲ್ಲ.

ಯುರೋಪಿನ ಅನೇಕ ಕಂಪನಿಗಳಲ್ಲಿ ಕೆಲಸ ಮಾಡಿದ ಮೇಲೆ ಜಾಕ್ ಭಾರತಕ್ಕೆ ಬರಬಯಸಿದ. ಭಾರತೀಯರಿಗೆ ಆಗ ಇದು ಸಂಪೂರ್ಣ ಹೊಸ ವಿಷಯ. ೧೯೨೮ ರಲ್ಲಿ ಕಾರ್ಲೇಕರ ಸರ್ಕಸ್ಸಿನೊಂದಿಗೆ ತಿಂಗಳಿಗೆ ರೂ. ೫೦೦೦ ಸಂಬಳದ ಕರಾರು ಮಾಡಿ ಜಾಕ್ ಭಾರತಕ್ಕೆ ಬಂದ.

ಜಾಕ್‌ನ ಕರಾರು ಐದು ವರ್ಷದ್ದಿತ್ತು. ಈ ಅವಧಿಯಲ್ಲಿ ಕಾರ್ಲೇಕರ ಸರ್ಕಸ್ ಭಾರತದಲ್ಲಷ್ಟೇ ಅಲ್ಲದೆ ಸಿಲೋನ, ಜಾವಾ, ಸುಮಾತ್ರಾ, ಮಲಯಾ ಮುಂತಾದ ಹೊರನಾಡುಗಳಲ್ಲಿ ತಿರುಗಿತು. ಈಗ ಜಾಕ್‌ನ ಮಗ ೧೭-೧೮ ವರ್ಷದವನಿದ್ದ. ಜಾಕ್ ಆತನಿಗೂ ಮೃತ್ಯುಗೋಲದ ಪ್ರಯೋಗ ಕಲಿಸಿದ. ಮೂವರೂ ಸಮಾಂತರ ರೇಷೆಯಲ್ಲಿ ಮೋಟರ್-ಸ್ಯಾಕಲ್ ನಡೆಸಿ ಅದ್ಭುತ ಪ್ರಯೋಗ ಮಾಡುತ್ತಿದ್ದರು.

ಈಗೀಗ ಜಾಕ್ ಮದ್ಯ ಕುಡಿಯಲು ಕಲಿತಿದ್ದ. ಮದ್ಯಸೇವನೆಯ ಪ್ರಮಾಣ ಮೀರಿ ನಡೆಯುತ್ತಿತ್ತಾದ್ದರಿಂದ ಎಲ್ಲಿ ಅಪಘಾತ ಸಂಭವಿಸುವುದೊ ಎಂಬ ಭೀತಿ ಹುಟ್ಟಿತು.

ಕಾರ್ಲೇಕರ ಕಂಪನಿಯ ಕ್ಯಾಂಪು ಫಿಲಿಫಾಯಿನ್ಸದೊಳಗಿನ ಮ್ಯಾನಿಲಾ ಎಂಬ ರಾಜಧಾನಿ ನಗರದಲ್ಲಿತ್ತು. ಆ ದಿನ ಮಳೆ ವಿಪರೀತವಾಗಿತ್ತು. ಹವೆ ಆರ್ದ್ರವಾಗಿತ್ತು. ಜಾಕ್‌ನ ಮೈಯಲ್ಲೂ ನೆಟ್ಟಗಿರಲಿಲ್ಲ. ಆದ್ದರಿಂದ ಅಂದು ಜಾಕ್‌ನಿಗೆ ಕೆಲಸ ಮಾಡಬೇಡೆಂದು ಹೆಂಡತಿ-ಮಗ ಇಬ್ಬರೂ ಹೇಳಿದರು. ಆತ ಕಿವಿಗೊಡಲಿಲ್ಲ. ಮಳೆಯಲ್ಲೂ ಪ್ರೇಕ್ಷಕರು ಕಿಕ್ಕಿರಿದು ತುಂಬಿದ್ದರು. ಜಾಕ್ ಕೆಲಸ ಮಾಡಲು ನಿಶ್ಚಯಿಸಿದ.

ನಿತ್ಯದಂತೆ ಮೊದಲು ತಾನೊಬ್ಬನೆ ಮೋಟರ ನಡೆಸಿದ. ಅಂದು ಮಿತಿಮೀರಿ ಕುಡಿದಿದ್ದ. ತೂಕ ತಪ್ಪುತ್ತಿತ್ತು. ಲೂಸಿಯ ಹೃದಯ ಕೊರೆದಂತಾಗುತ್ತಿತು. ಏನೋ ಅನಾಹುತ ಕಾದಿದೆ ಎಂದುಕೊಂಡಳು. ಮೂವರೂ ಮೋಟರ್ ಸ್ಯಾಕಲ್ ನಡೆಸಿದರು. ಜಾಕ್‌ನ ತೂಕ ತಪ್ಪುತ್ತಲೆ ಇತ್ತು. ಸ್ವಲ್ಪೇ ಕೈಮೀರಿದರೂ ಅಪಘಾತ ಖಂಡಿತ. ಆಕೆ ಇನ್ನು ಮುಂದಿನ ಪ್ರಯೋಗ ಬೇಡವೆಂದಳು. ಆದರೆ ಆತ ಕೇಳಲಿಲ್ಲ.

ಕಡೆಗೆ ಜಾಕ್ ಲೂಸಿ ಇಬ್ಬರದೇ ಪ್ರಯೋಗ ಸುರುವಾಯಿತು. ಮದ್ಯದ ಅಮಲು ಏರಿದ್ದ ಜಾಕ್ ತನ್ನ ಸುತ್ತುಗಳನ್ನು ತಪ್ಪುತಪ್ಪಾಗಿ ತಿರುವತೊಡಗಿದ. ವೇಳೆ ಹೆಚ್ಚುಕಡಿಮೆಯಾಗ ತೊಡಗಿತು. ಕೊನೆಗೆ ಇಬ್ಬರ ಮೋಟರ್ ಸ್ಯಾಕಲ್‌ಗಳ ಟಕ್ಕರ್ ಆಯಿತು. ಇಬ್ಬರೂ ಕೆಳಗೆ ಬಿದ್ದರು. ಲೂಸಿ ತೀರ ಕೆಳಗೆ ಬಿದ್ದಳು. ಅವಳ ಮೈಮೇಲೆ ಎರಡು ಮೋಟರ್ ಸ್ಯಾಕಲ್-ಅವು ಗಳ ಮೇಲೆ ಜಾಕ್. ಜಾಕ್‌ನಿಗೆ ಅಪಾಯವಾಗ ಲಿಲ್ಲವಾದರೂ ಲೂಸಿ ಗತಪ್ರಾಣಳಾದಳು.

ಅವರಿಬ್ಬರನ್ನೂ ಹೊರಗೆ ತೆಗೆದರು. ಆಸ್ಪತ್ರೆಗೆ ಕಳಿಸಿದರು ಲೂಸಿ ಸತ್ತಿದ್ದಳು. ಜಾಕ್ ಕೆಲ ಹೊತ್ತಿನ ಮೇಲೆ ಎಚ್ಚತ್ತ. ಮಡದಿಯ ಮೃತ ದೇಹವನ್ನು ನೋಡಿ ಭೋರಿಟ್ಟ. ಅತ್ಯಂತ ಕಷ್ಟ ದಿಂದ ಅವರಿಬ್ಬರನ್ನೂ ಬೇರೆ ಬೇರೆ ಮಾಡಿ ಶವಕ್ಕೆ ಸಂಸ್ಕಾರ ಮಾಡಿದರು.

ಲೂಸಿಯ ಶವವನ್ನು ಸ್ಮಶಾನದಲ್ಲಿ ಹೂಳು ವಾಗ ಇನ್ನೊಂದು ದುರ್ಘಟನೆ ನಡೆಯಿತು. ಬರುವಾಗ ಜಾಕ್ ಜೇಬಿನಲ್ಲಿ ಪಿಸ್ತೂಲು ಇಟ್ಟು ಕೊಂಡು ಬಂದಿದ್ದ. ಇತ್ತ ಲೂಸಿಯ ಶವದ ಪೆಟ್ಟಿಗೆಯನ್ನು ಹೂಳಲು ಇಳಿಸಿದರು. ಅತ್ತ ಗುಂಡು ಹಾರಿತು. ತಲೆಗೆ ಗುಂಡು ಹಾರಿಸಿ ಕೊಂಡು ಜಾಕ್ ಪ್ರಿಯಪತ್ನಿಯೊಂದಿಗೆ ಪರ-ಲೋಕಯಾತ್ರೆ ಗೈದ.

ಇಬ್ಬರ ಶವಗಳನ್ನು ಒಂದೇ ಕಡೆ ಹೂಳಿ ದರು. ಗೋರಿಯನ್ನು ಕಟ್ಟಿ ಅದರ ಮೇಲೆ 'ಮೃತ್ಯುಗೋಲದ ಜನಕ ಜಾಕ್ ಕಾರ್ಸನ್ ಮತ್ತು ಅವರ ಪ್ರಿಯ ಪತ್ನಿ ಲೂಸಿ ಇವರು ಇಲ್ಲಿ ಚಿರನಿದ್ರೆ ಹೊಂದುತ್ತಿದ್ದಾರೆ.' ಎಂದು ಕೊರೆ ದರು

ತಂದೆ– ತಾಯಿ ಇಬ್ಬರೂ ಸತ್ತಿದ್ದರಿಂದ ದುಃಖಿತನಾದ ಹೆನ್ರಿಯನ್ನು ಇಂಗ್ಲಂಡಿಗೆ ಕಳಿ ಸುವ ವ್ಯವಸ್ಥೆಯನ್ನು ಪ್ರೊ. ಶಂಕರರಾಯರು ಮಾಡಿದರು. ಇಂದು ಯುರೋಪಿನ ಸರ್ಕಸ್ ಗಳಲ್ಲಿ ಹೆನ್ರಿ ಮತ್ತು ಅವನ ಮಗ ಚಾರ್ಲಸ್ ಈ ಅದ್ಭುತ ಪ್ರಯೋಗ ಮಾಡುತ್ತಿರುತ್ತಾರೆ. *

'ಸರ್ಕಶೀಚಾತ್ಯ ಜಗತ' ಪುಸ್ತಕದಿಂದ

ನೀವೆಷ್ಟು ಸಹನಶೀಲರು?

ಸಹನಶೀಲತೆ ಒಳ್ಳೆಯ ಗುಣವೆಂಬ ಮಾತು ನಮ್ಮೆಲ್ಲರಿಗೆ ಗೊತ್ತಿದ್ದರೂ ದಿನನಿತ್ಯವೂ ಎಷ್ಟೋ ಸಲ ನಮ್ಮ ಸಹನೆ ಮೀರಿ "ಸಹನೆಗೂ ಒಂದು ಮಿತಿಯಿದೆ. ಎಷ್ಟೆಂತ ಸಹಿಸಬೇಕು? ಎಲ್ಲವನ್ನೂ ಸಹನೆ ಮಾಡುವುದು ಹೇಡಿತನ" ಎಂಬರ್ಥದ ಉದ್ಗಾರಗಳು ನಮ್ಮಿಂದ ಹೊರಡುವ ಪ್ರಸಂಗಗಳು ಬರುತ್ತವೆ. ಹೀಗಿದ್ದರೂ ಇಂಥ ಪ್ರಸಂಗಗಳಲ್ಲಿ ತಾಳ್ಮೆಗೆಡದೆ ಇರುವವರೇ ಮಹಾಪುರುಷರೆನ್ನಿಸಿಕೊಳ್ಳುತ್ತಾರೆ. ಮಾತುಮಾತಿಗೂ ಸಹನೆ ತಪ್ಪಿದರೆ ಜೀವನ ಒಂದು ಸಂಕಟವಾಗಿ ಹೋದೀತು.

ನಾವು ನೀವು ಎಷ್ಟು ಸಹನಶೀಲರು ಎಂದು ಹೇಗೆ ತಿಳಿದುಕೊಳ್ಳಬೇಕು ಎಂದು ನೀವು ಕೇಳಬಹುದು. ಇಲ್ಲಿ ಕೆಳಗೆ ಕೆಲವು ಪ್ರಶ್ನೆಗಳನ್ನು ಕೊಟ್ಟಿದೆ. ಅವು ನಮ್ಮ ನಿಮ್ಮಂಥವರ ಜೀವನದಲ್ಲಿ ಸಾಮಾನ್ಯವಾಗಿ ಪ್ರತಿನಿತ್ಯ ಘಟಿಸುವ ಪ್ರಸಂಗಗಳಿಗೆ ಸಂಬಂಧಪಟ್ಟದ್ದೇ ಆಗಿವೆ. ಈ ಪ್ರಸಂಗಗಳಲ್ಲಿ ನಿಮ್ಮ ವರ್ತನೆ ಆ ಆ ಪ್ರಶ್ನೆಗಳ ಸಂಬಂಧದಲ್ಲಿ 'ಅ', 'ಆ', 'ಇ' ಈ ಮೂರರ ಪೈಕಿ ಯಾವುದರಂತೆ ಇರುತ್ತದೆ ಎಂದು ಗುರುತು ಹಾಕಿರಿ.

ಪ್ರಶ್ನೆ ೧) ನಿಮ್ಮ ಮಿತ್ರ ನಿಮ್ಮ ಉಪಹಾಸಗೈಯುತ್ತಾನೆ:

ಆಗ ನೀವು—

ಅ) ಸಿಟ್ಟಿನಿಂದ ತಿರುಗಿ ಉತ್ತರಿಸುವಿರಿ.

ಆ) ಸಿಟ್ಟಿನಿಂದ ಕೆಂಪಾಗುತ್ತೀರಿ ಮತ್ತು ಒಂದು ತುಟಿ ಎರಡು ಮಾಡುವದಿಲ್ಲ.

ಇ) ನಗುನಗುತ್ತ ಮಿತ್ರನ ವಿನೋದವನ್ನು ಸ್ವಾಗತಿಸುತ್ತೀರಿ

ಪ್ರಶ್ನೆ ೨) ಯಾವದಾದರೂ ವಸ್ತುವನ್ನು ನೀವು ಎಲ್ಲಿಯೋ ಇಟ್ಟು ಮರೆತಿರುತ್ತೀರಿ. ಮತ್ತೆ ಅದನ್ನು ಹುಡುಕಿದಾಗ ಅದು ಬೇಗ ಸಿಗುವದಿಲ್ಲ:

ಆಗ ನೀವು—

ಅ) ಸಿಟ್ಟಿನಿಂದ ಕೈಗೆ ಸಿಕ್ಕದ್ದನ್ನು ಬೀಸಾಡುವಿರಿ.

ಆ) ಸಾಕಿನ್ನು, ಇದನ್ನು ಹುಡುಕುವುದೇ ಬೇಡ ಎನ್ನುತ್ತೀರಿ.

ಇ) ತಾಳ್ಮೆಯಿಂದ ವಸ್ತುವು ಸಿಗುವ ವರೆಗೂ ಹುಡುಕುವಿರಿ.

ಪ್ರಶ್ನೆ ೩) ನಿಮ್ಮ ಒಬ್ಬ ಮಿತ್ರ ನಿಮಗೆ ನಾಟ್‌ಪೇಡ್ ಪತ್ರ ಬರೆಯುತ್ತಾನೆ. ಮತ್ತೂ ಮತ್ತೂ ಹಾಗೇ ನಾಟ್‌ಪೇಡೇ ಮಾಡುತ್ತಾನೆ.

ಆಗ ನೀವು—

ಅ) ಬುದ್ಧಿ ಕಲಿಸೋಣವೆಂದು ಸುಳ್ಳುಸುಳ್ಳೇ ನಾಟ್‌ಪೇಡ್ ಪತ್ರಗಳನ್ನು ಹಾಕುವಿರಿ.

ಆ) ಇದೆಂಥ ಹುಡುಗಾಟಿಕೆ ಎಂದು ಗಂಭೀರ ವೃತ್ತಿಯಿಂದ ಅವನ್ನು ಮರಳಿ ಕಳಿಸುತ್ತೀರಿ.

ಇ) ಮನಸ್ಸನ್ನು ಶಾಂತವಿಟ್ಟು ಅಷ್ಟೂ ಪತ್ರಗಳನ್ನು ಹಣ ತುಂಬಿ ತಕ್ಕೊಳ್ಳುವಿರಿ.

ಪ್ರಶ್ನೆ ೪) ಮೂರುನಾಲ್ಕು ಸಲ ಸಿನೇಮಾಕ್ಕೆ ಹೋಗಲೆಂದು ತಯಾರಿ ಮಾಡಿ ಥೇಟರಿಗೆ ಹೋದರೂ ನಿಮಗೆ ತಿಕೀಟು ಸಿಗುವುದಿಲ್ಲ.

ಆಗ ನೀವು—

ಅ) ಎಂಥಾ ಸಣ್ಣ ಥೇಟರ್ ಕಟ್ಟಿಸಿದ್ದಾನೆ, ಅಥವಾ ಸರಿಯಾಗಿ ಪಿಕ್ಚರ್ ನಡಿಸೋದೇ ತಿಳಿಯುವುದಿಲ್ಲ ಎಂಬಿತ್ಯಾದಿ 'ರಿಮಾರ್ಕು'ಗಳಿಂದ ಥೇಟರ್ ಮಾಲೀಕನನ್ನು ಬೈಯುತ್ತೀರಿ.

ಆ) ಇನ್ನು ಈ ಸಿನೇಮಾಕ್ಕೆ ಇಡೀ ಜೀವಮಾನದಲ್ಲೇ ಹೋಗುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತೀರಿ.

ಇ) ಸ್ವಲ್ಪ ದಟ್ಟಣೆ ಕಡಿಮೆಯಾದ ಮೇಲೆ ಹೋದರಾಯಿತು ಎಂದು ಶಾಂತ ಮನಸ್ಸಿನಿಂದ ಮರಳುತ್ತೀರಿ.

ಪ್ರಶ್ನೆ ೫) ಬಸ್ಸಿಗಾಗಿ ಕ್ಯೂದಲ್ಲಿ ನಿಂತಾಗ ನಿಮ್ಮ ಹಿಂದೆ ಬಂದ ಒಬ್ಬರು ಬಸ್ಸು ಬಿಡುವಾಗಲೇ ಗಾಡಿ ಹಿಡಿದು ಏರುತ್ತಾರೆ. ಕಂಡಕ್ಟರ್ ಅವರನ್ನು ಒಯ್ಯುತ್ತಾನೆ.

ಆಗ ನೀವು—

ಅ) ಕಂಡಕ್ಟರನೊಂದಿಗೆ ಜಗಳಾಡುತ್ತೀರಿ. ಮತ್ತು ನನ್ನನ್ನಾದರೂ ಗಾಡಿಯಲ್ಲಿ ಒಯ್ಯು ಇಲ್ಲವೆ ಅವನನ್ನಾದರೂ ಇಳಿಸು ಎನ್ನುತ್ತೀರಿ.

ಆ) ಕಂಡಕ್ಟರನಿಗೂ ಆ ಆಗಂತುಕ ಪ್ರಯಾಣಿಕನಿಗೂ ಕೂಡಿಯೇ ಮನಸ್ಸಿನಲ್ಲಿ ಬೈದು ಸುಮ್ಮನಿರುತ್ತೀರಿ.

ಇ) ಹೋಗಲಿ; ಇನ್ನೊಂದು ಬಸ್ಸಿಗೆ ಹೋದರಾಯ್ತು ಎಂದು ನಿಶ್ಚಿಂತರಾಗುಳಿಯುವಿರಿ.

ಪ್ರಶ್ನೆ ೬) ನಿಮ್ಮ ಮನಮೆಚ್ಚುವ ಲೇಖಕರ ನಿಮ್ಮ ಮನಮೆಚ್ಚಿದ ಕಾದಂಬರಿಯನ್ನು ಗುಟ್ಟಾಗಿ ಓದಿ ಒಳ್ಳೆ ರಂಗಿನಲ್ಲಿ ಆಸ್ವಾದಿಸುತ್ತಿರುವಾಗ ಮನೆಯ ಶಾಂತತೆಯನ್ನು ಹುಡುಗರು ಗಲಾಟೆ ಮಾಡಿ ಹಾಳು ಮಾಡುತ್ತಾರೆ. ಅದರಿಂದ ನಿಮ್ಮ ಚಿತ್ತ ಚಂಚಲವಾಗಿ ನಿಮ್ಮ ಓದಿನ ಸಮಾಧಿ ಭಂಗವಾಗುವುದು.

ಆಗ ನೀವು—

ಅ) ಹೋಗಿ ಆ ಹುಡುಗರನ್ನು ಹಿಡಿದು ಎರಡೆರಡು ಏಟು ಬಿಗಿಯುತ್ತೀರಿ.

ಆ) ಸಿಟ್ಟಿನಿಂದ ರುದ್ರಾವತಾರ ತಾಳಿ ಹುಡುಗರನ್ನು ಬೈದು ಸುಮ್ಮನಿರಲು ಹೇಳುತ್ತೀರಿ.

ಇ) ಹುಡುಗರು ಆಡುತ್ತಾರೆ; ಆಡಲಿ ಎಂದು ಅತ್ತ ಲಕ್ಷ್ಯವನ್ನೇ ಕೊಡದೆ ನಿಮ್ಮ ಓದಿನಲ್ಲೇ ನೀವು ಮಗ್ನರಾಗುತ್ತೀರಿ.

ಈ ಮೇಲಿನ ಆರು ಪ್ರಶ್ನೆಗಳಲ್ಲಿ ನೀವು ಗುರುತು ಹಾಕಿದ (ಅ), (ಆ), (ಇ) ಗಳನ್ನು ಎಣಿಸಿರಿ. ಪ್ರತಿಯೊಂದು (ಅ) ಕ್ಕೆ ೧, ಪ್ರತಿ ಒಂದು (ಆ) ಕ್ಕೆ ೨, ಮತ್ತು ಪ್ರತಿ ಒಂದು (ಇ) ಕ್ಕೆ ೫ ರಂತೆ ಗುಣಗಳಿವೆ. ನಿಮ್ಮ ಒಟ್ಟು ಗುಣಗಳನ್ನು ಎಣಿಸಿರಿ. ಅವು ೧೦ ಕ್ಕಿಂತ ಕಡಿಮೆ ಇದ್ದರೆ ನಿಮ್ಮಲ್ಲಿ ಸಹನಶೀಲತೆಯ ಅಭಾವವಿದೆ ಎಂದರ್ಥ. ೧೧ ರಿಂದ ೧೫ ರ ವರೆಗೆ ಇದ್ದರೆ ಸಾಮಾನ್ಯ ಸಹನಶೀಲತೆಯುಳ್ಳವರು. ೧೬ ರಿಂದ ೨೦ ಇದ್ದರೆ ಸಾಕಷ್ಟು ಸಹನಶೀಲರು. ೨೧ ರಿಂದ ೨೫ ಇದ್ದರೆ ಉತ್ತಮ ಸಹನಶೀಲತೆಯುಳ್ಳವರು. ಮತ್ತು ೨೬ ರಿಂದ ೩೦ ಗುಣಗಳು ಬಿದ್ದರೆ ನೀವು ಅತ್ಯುತ್ತಮ ಸಹನಶೀಲತೆಯ ಮಾದರಿ ಎನ್ನಬಹುದು. ಆದರೆ ಹಾಗಿರುವುದು ಬಹುಶಃ ಅಸಂಭವವೇ.

ಈಕೆ : ನಿನ್ನೆ ನೀವು ಹೇಳಿದ ರೀತಿಯಲ್ಲಿಯೇ ಸಾರು, ಪಲ್ಯ ಎಲ್ಲ ಮಾಡಿದೆ.

ಆಕೆ : ಚೆನ್ನಾಗಿತ್ತೇ?

ಈಕೆ : ಕೇಳುತ್ತೀರೇನು? ಪಲ್ಯ-ಸಾರುಗಳ ರುಚಿ ನೋಡಿದ ನನ್ನ ಯಜಮಾನರು "ಇನ್ನು ಮನೆಯಲ್ಲಿ ಅಡಿಗೆ ಮಾಡುವುದು ಸಾಕು. ಖಾನಾವಳಿಯಿಂದ ಊಟ ತರಿಸಿ ಬಿಡೋಣ" ಎಂದರು.

ವಿಜ್ಞಾನಿಗಳು ಹೇಳುತ್ತಿರುವ ಅದ್ಭುತ ಕಥೆ :

ಭೂಮಿ ಉಬ್ಬುತ್ತಿದೆ!

ಪಾವೆಂ

ಬಹಳ ಪ್ರಾಚೀನ ಕಾಲದಲ್ಲಿ, ಸುಮಾರು ೪೫೦ ಕೋಟಿ ವರ್ಷಗಳ ಹಿಂದೆ ನಾವು ವಾಸಿಸುವ ಭೂಮಿ ಕತಕತನೆ ಕುದಿಯುವ ಗೋಲವಾಗಿತ್ತು. ಅದರ ಸುತ್ತ ದಟ್ಟವಾದ ಮೋಡ ಕವಿದಿತ್ತು.

ಆಮೇಲೆ ಮೆಲ್ಲಮೆಲ್ಲಗೆ ಈ ಗೋಲದ ಹೊರಮೈ ತಣ್ಣಗಾಗತೊಡಗಿತು. ತಣ್ಣಗಾದ ಹೊರಮೈ ಗಟ್ಟಿಯಾಯಿತು. ಅದು ತಣ್ಣಗಾದಂತೆ ಮುಸುಕಿದ ಮೋಡಗಳೂ ತಂಪೇರಿ ಮಳೆಗರೆಯತೊಡಗಿದವು. ಸಾವಿರಾರು ವರ್ಷ ಎಡೆಬಿಡದೆ ಮಳೆಯಾಗಿ ಭೂಮಿಯ ಮೇಲೆಲ್ಲ ನೀರು ನಿಂತು ಇಡೀ ಭೂಮಿಯೆ ಸಾಗರದಿಂದ ಆವರಿಸಲ್ಪಟ್ಟಿತು.

ಆದರೆ ಭೂಮಿಯ ಹೊರಮೈ ತಣ್ಣಗಾಗಿದ್ದರೂ ಒಳಗೆ ಅದಿನ್ನೂ ಕುದಿಯುತ್ತಿತ್ತು. ಈ ಕುದಿತದಿಂದ ಭೂಮಿಯ ಹೊರಕವಚ ಅಲ್ಲಲ್ಲಿ ಬಿರುಕುಬಿಟ್ಟು ಒಳಗಿದ್ದ ಲಾವಾ ರಸ ಹೊರಗೆ ಹರಿಯಿತು. ಈ ಲಾವಾ ರಸ ತಣ್ಣಗಾಗಿ ಅಲ್ಲಲ್ಲಿ ಗುಡ್ಡೆಗಳಾಗಿ ಸುತ್ತುವರಿದ ನೀರಿನಿಂದ ಹೊರಗೆ ತಲೆಯೆತ್ತಿದವು. ಈ ಗುಡ್ಡೆಗಳು ಮಳೆಗಾಳಿಗಳಿಂದ ಸವೆದು ಮಣ್ಣಾಗಿ ಸುತ್ತಲೂ ಹಬ್ಬಿದವು. ಅವೇ ಇಂದಿನ ಭೂಖಂಡಗಳ ಮೂಲ.

ಭೂಮಿಯ ಉತ್ಪತ್ತಿಯ ವಿಷಯವಾಗಿ ನಮ್ಮ ಪಠ್ಯ ಪುಸ್ತಕಗಳಲ್ಲಿರುವ ಚಿತ್ರ ಇದು. ಇದರ ಪ್ರಕಾರ ಭೂಮಿ ಸಾವಕಾಶವಾಗಿ ತಣಿಯುತ್ತಿದೆ ಮತ್ತು ಆ ಕಾರಣದಿಂದ ಕುಗ್ಗುತ್ತ ಇದೆ. ಕುಗ್ಗುತ್ತಿರುವಾಗ ಮುದುಕರ ಮುಖದಲ್ಲಿ ನೆರಿಗಳು ಮೂಡುವ ಹಾಗೆ ಭೂಮಿಯ ಮೇಲೂ ಪರ್ವತಶ್ರೇಣಿಗಳು ಮೂಡಿದವು, ಇನ್ನೂ ಮೂಡುತ್ತಲೇ ಇವೆ.

ಭೂಶಾಸ್ತ್ರಜ್ಞರು ಕಟ್ಟಿದ ಈ ಕಲ್ಪನೆ ತುಂಬ ಸುಖಾವಹವಾಗಿತ್ತು. ಭೂಮಿ ಸಾವಕಾಶವಾಗಿ, ಬಹು ಸಾವಕಾಶವಾಗಿ ಕುಗ್ಗುತ್ತಿದೆಯೆಂಬುವನ್ನು ಬಿಟ್ಟರೆ ಈ ಚಿತ್ರದಲ್ಲಿ ಎಲ್ಲವೂ ಹೆಚ್ಚು ಕಡಿಮೆ ಈಗಿದ್ದಂತೆ ಮೊದಲೂ ಇದ್ದವು. ಸಾಗರಗಳಿದ್ದಲ್ಲಿ ಸಾಗರಗಳಿದ್ದವು, ಭೂಖಂಡಗಳಿದ್ದಲ್ಲಿ ಭೂಖಂಡಗಳಿದ್ದವು.

ಆದರೆ ಈ ಸುಖವಾದ ಕಲ್ಪನೆಯ ಮೇಲೆ ಇತರ ಶಾಸ್ತ್ರಗಳು ಸಂಶಯ ವ್ಯಕ್ತಪಡಿಸತೊಡಗಿದಾಗ ಎಲ್ಲವೂ ಅಸ್ತವ್ಯಸ್ತವಾಯಿತು. ಈಗಿನ ಸಾಗರಗಳೂ ಭೂಖಂಡಗಳೂ ಈಗಿದ್ದಲ್ಲೇ ಇದ್ದಿದ್ದರೆ ಆಫ್ರಿಕ, ಆಸ್ಟ್ರೇಲಿಯ, ದಕ್ಷಿಣ ಅಮೇ-

ಶಿಕೆಗಳಲ್ಲೆಲ್ಲ ಉಷ್ಟ್ರ ಪಕ್ಷಿಗಳು ಹೇಗೆ ಬಂದವು? ಅವು ಒಂದು ಖಂಡದಿಂದ ಸಾವಿರಾರು ಮೈಲು ಸಾಗರಗಳನ್ನು ಈಸುತ್ತ ಬೇರೆ ಖಂಡಗಳಿಗೆ ಹೋದವೇ, ಹಾರುತ್ತ ಹೋದವೆ? ಎರಡೂ ಸಾಧ್ಯವಿಲ್ಲ. ಮೂರೂ ಖಂಡಗಳಲ್ಲಿ ಇವು ಬೇರೆ ಬೇರೆಯಾಗಿ ವಿಕಾಸಗೊಂಡು ಒಂದೇ ಜಾತಿಯ ಪಕ್ಷಿಗಳಾದವೆ? ಅವುಗಳ ಮೈಗೆ ತಗಲುವ ಪರೋಪಜೀವಿ ಜಂತುಗಳು ಕೂಡ ಒಂದೇ ಜಾತಿಯವಾದಾವೆ? ವಿಜ್ಞಾನಿಗಳು ಇಷ್ಟೆಲ್ಲ ಕಾಕತಾಲೀಯವಾಗಿ ಕೂಡಿ ಬಂದಾವೆಂದು ನಂಬಲು ಸಿದ್ಧರಾಗಲಿಲ್ಲ.

ಹಾಗಾದರೆ ಈ ಮೂರೂ ಖಂಡಗಳು ಬಹು ಪುರಾತನದಲ್ಲಿ ಒಂದೇ ಆಗಿರಬಹುದೆ? ಆ ಮೇಲೆ ಏನಾದರೂ ಕಾರಣದಿಂದ ಅವು ಸರಿದು ದೂರ ದೂರ ಹೋಗಿರಬಹುದೆ? ಹೀಗೆನ್ನುವುದು ಶುದ್ಧ ಮೂಢತನವೆನಿಸಿದರೂ ಕೆಲ ವಿಜ್ಞಾನಿಗಳು ಆಫ್ರಿಕದ ಪಶ್ಚಿಮ ಕರಾವಳಿಗೂ ದಕ್ಷಿಣ ಅಮೇರಿಕದ ಪೂರ್ವ ಕರಾವಳಿಗೂ ಇರುವ ಸಾಮ್ಯವನ್ನು ಜೊಟ್ಟುಮಾಡಿ ತೋರಿಸಿದರು. ಎರಡನ್ನೂ ಹತ್ತಿರ ತಂದರೆ ಒಂದಕ್ಕೊಂದು ಹೊಂದಿಕೊಳ್ಳುವಂತಿವೆಯಲ್ಲ!

ಭೂಶಾಸ್ತ್ರಜ್ಞರ ಚಿಂತೆಯನ್ನು ಹೆಚ್ಚಿಸುವ ಹೊಸ ಹೊಸ ಸಂಗತಿಗಳು ಬರಬರುತ್ತ ಬೆಳಕಿಗೆ ಬಂದವು. ಇಂದು ಉಷ್ಣವಲಯದಲ್ಲಿದ್ದು ಎಂದೂ ಹಿಮವನ್ನೇ ಕಾಣದ ದಕ್ಷಿಣ ಭಾರತದಲ್ಲಿ ಬಹು ಪ್ರಾಚೀನ ಕಾಲದಲ್ಲಿ ಹಿಮ ದಟ್ಟವಾಗಿ ಹಬ್ಬಿತ್ತೆಂಬುದಕ್ಕೆ ಅಲ್ಲಗಳೆಯಲಾರದ ಪ್ರಮಾಣಗಳು ಸಿಕ್ಕಿವೆ. ಭಾರತ ಹಿಂದೆ ಈಗಿದ್ದಲ್ಲೇ ಇದ್ದಿದ್ದರೆ ಇದು ಸಾಧ್ಯವೇ ಇರಲಿಲ್ಲ.

ಇದಲ್ಲದೆ ಕಲ್ಲಿದ್ದಲಿ ಪ್ರಾಚೀನ ಕಾಲದ ಅರಣ್ಯಗಳು ನೆಲದಡಿ ಸೇರಿ ಕಲ್ಲಿದ್ದಲಿಯಾದವೆಂದು ಎಲ್ಲರಿಗೂ ಗೊತ್ತಿದೆ. ಕಲ್ಲಿದ್ದಲಿಯನ್ನು ಪರೀಕ್ಷಿಸಿ ಅದು ಉಷ್ಣವಲಯದಲ್ಲಿ ಬೆಳೆದ ಅರಣ್ಯಗಳಿಂದಾದುದೋ ಸಮಶೀತೋಷ್ಣ ವಲಯದ ಅರಣ್ಯಗಳಿಂದಾದುದೋ ಎಂದು ಹೇಳಲು ಸಾಧ್ಯವಿದೆ. ಹಾಗೇ ಇದು ಯಾವ ಯುಗದ ಸಸ್ಯಗಳಿಂದಾದ ಕಲ್ಲಿದ್ದಲೆಂದೂ ಲೆಕ್ಕ ಹಾಕಲಾಗುತ್ತದೆ. ಆದರೆ ಇಂದು ಸಮಶೀತೋಷ್ಣ ವಲಯದ ಅನೇಕ ಕಡೆ ಸಿಗುವ ಕಲ್ಲಿದ್ದಲಿಯನ್ನು ಪರೀಕ್ಷಿಸಿದಾಗ ಅದು ೨೦-೩೦ ಕೋಟಿ ವರ್ಷಗಳ ಹಿಂದೆ ಉಷ್ಣವಲಯದಲ್ಲಿದ್ದ ವೃಕ್ಷಗಳಿಂದಾದದ್ದೆಂದು ಕಂಡುಬರುತ್ತದೆ. ಇಂಥ ಕಲ್ಲಿದ್ದಲಿ ಸಿಗುವ ಪ್ರದೇಶವನ್ನು ನಕಾಶೆಯ ಮೇಲೆ ಗುರುತಿಸಿ ಅದರ ಮೇಲಿಂದ ಆಗಿನ ಭೂಮಿಯ ಶೀತ, ಸಮಶೀತೋಷ್ಣ, ಉಷ್ಣವಲಯಗಳನ್ನು ಊಹಿಸುವುದಾದರೆ ಆಗ ದಕ್ಷಿಣಧ್ರುವವು ಈಗ ದಕ್ಷಿಣ ಆಫ್ರಿಕವಿರುವ ಸ್ಥಳದಲ್ಲಿತ್ತೆಂದೂ ಉತ್ತರ ಧ್ರುವವು ಶಾಂತ ಸಾಗರದ ಉತ್ತರ ಭಾಗದಲ್ಲಿತ್ತೆಂದೂ ಹೇಳಬೇಕಾಗುತ್ತದೆ. ಅಂದರೆ ಭೂಮಿಯ ಅಕ್ಷವು ಅಂದಿನಿಂದ ಇಂದಿನವರೆಗೆ ೭೦ ಡಿಗ್ರಿಯಷ್ಟು ಚಲಿಸಿದೆಯೆನ್ನಬೇಕಾಗುವುದು. ಆದರೆ ಅಕ್ಷವು ಹೀಗೆ ಚಲಿಸಲು ಸಾಧ್ಯವೇ ಇಲ್ಲೆಂದು ಭೂ-ಭೌತ ಶಾಸ್ತ್ರಜ್ಞರು ಪ್ರತಿಜ್ಞಾಪೂರ್ವಕ ಸಾಧಿಸುತ್ತಾರೆ.

ಆದರೂ ಭೂಖಂಡಗಳೂ ಸಾಗರಗಳೂ ಈಗಿದ್ದ ಸ್ಥಾನದಲ್ಲಿ ಹಿಂದೆ ಇರಲಿಲ್ಲೆಂಬುದಕ್ಕೆ ಹೆಚ್ಚು ಹೆಚ್ಚು ಪ್ರಮಾಣಗಳು ದೊರೆಯುತ್ತಲೇ ಇವೆ. ಪ್ರಾಣಿಗಳ ಪಳೆಯುಳಿಕೆಗಳು, ಸಸ್ಯಗಳ ಪಳೆಯುಳಿಕೆಗಳು, ಗಾಳಿಯ ಪಳೆಯುಳಿಕೆಗಳು ಎಲ್ಲವೂ ಅದನ್ನೇ ಹೇಳುತ್ತವೆ.

ಸಾಗರತಳದಲ್ಲಿ ಬೆಳೆಯುವ ಹವಳದ ಜೀವಿಗಳನ್ನೇ ತೆಗೆದುಕೊಳ್ಳೋಣ. ಉಷ್ಣವಲಯದ ಹವಳದ ಬೆಳವಣಿಗೆ ಸಮಶೀತೋಷ್ಣ ವಲಯದ ಬೆಳವಣಿಗೆಗಿಂತ ಭಿನ್ನವಾಗಿರುತ್ತದೆ. ಪ್ರಾಚೀನ ಕಾಲದ ಹವಳದ ಗಡ್ಡೆಗಳನ್ನು ನೋಡಿದರೆ ಅವು ಯಾವ ವಲಯದವೆಂದು ಖಾತ್ರಿಯಾಗಿ ಹೇಳಬಹುದು. ಕೋಟ್ಯಂತರ ವರ್ಷಗಳ ಹಿಂದಿನ ಉಷ್ಣವಲಯದ ಹವಳದ ಗಡ್ಡೆಗಳ ಅವಶೇಷಗಳನ್ನು ಈಗ ನಕಾಶೆಯ ಮೇಲೆ ಗುರುತು ಹಾಕಿದರೆ ಅವು ಈಗಿನ ಉಷ್ಣವಲಯದಲ್ಲಿರದೆ ಆ

ವಲಯವನ್ನು ಅಡ್ಡಲಾಗಿ ಕತ್ತರಿಸುವುದು ತಿಳಿಯುತ್ತದೆ; ಅದೂ ಸುಮಾರು ೭೦–೮೦ ಡಿಗ್ರಿಗಳ ಕೋನವಾಗುವಂತೆ. ಇತರ ಪ್ರಾಣಿ, ಸಸ್ಯಗಳ ಪಳೆಯುಳಿಕೆಗಳಿಂದಲೂ ಇದಕ್ಕೆ ಪುಷ್ಟಿ ದೊರೆಯುತ್ತದೆ.

ಮಳಲರಾಶಿಯ ಮೇಲೆ ಗಾಳಿ ಬೀಸುವಾಗ ಅದರಲ್ಲಿ ವಿಶಿಷ್ಟವಾದ ತರದಲ್ಲಿ ದಂಡೆಗಳುತ್ಪನ್ನವಾಗುತ್ತವೆ. ಅವುಗಳ ಆಕಾರ ನೋಡಿ ಗಾಳಿ ಯಾವ ದಿಕ್ಕಿನಿಂದ ಬೀಸುತ್ತಲಿದೆಯೆಂದು ನಿರ್ಧರಿಸಬಹುದು. ಏಕೆಂದರೆ ಗಾಳಿಗುಂಟ ದಿಕ್ಕಿನಲ್ಲಿ ದಂಡಗಳು ಸಾವಕಾಶವಾಗಿ ಎತ್ತರವಾಗುತ್ತ ಹೋಗಿ ಗಾಳಿಯ ವಿರುದ್ಧ ದಿಕ್ಕಿನಲ್ಲಿ ಒಮ್ಮೆಲೆ ಇಳಿಜಾರಾಗುತ್ತವೆ. ಬಹು ಪ್ರಾಚೀನ ಕಾಲದಲ್ಲಿ ನೆಲದಡಿ ಬಿದ್ದುಹೋದ ಇಂಥ ಸಮುದ್ರ ತೀರದ ಮಳಲ ದಂಡಗಳನ್ನು ನೋಡಿದರೆ ಆ ಕಾಲದಲ್ಲಿ ವ್ಯಾಪಾರ ಗಾಳಿಗಳು ಈಗ ಬೀಸುವ ದಿಕ್ಕಿನಲ್ಲಿ ಬೀಸುತ್ತಿದ್ದಿಲ್ಲವೆಂದು ಗೊತ್ತಾಗುತ್ತದೆ. ವ್ಯಾಪಾರ ಗಾಳಿಗಳ ಬೀಸುವಿಕೆ ಸುಮಾರಾಗಿ ಅಕ್ಷಾಂಶ ರೇಖಾಂಶಗಳನ್ನನುಸರಿಸಿ ವಿಶಿಷ್ಟ ದಿಶೆಯಲ್ಲಿ ಇರುತ್ತದೆ. ಹಿಂದಿನ ಕಾಲದ ಗಾಳಿ ದಿಶೆ ಇಂದಿನಂತಿದ್ದಿಲ್ಲವೆಂದರೆ ಆಗ ಆ ಸ್ಥಾನದ ಅಕ್ಷಾಂಶ ರೇಖಾಂಶ ಬೇರೆಯೇ ಆಗಿದ್ದವೆಂದರ್ಥ. ಅಮೇರಿಕದ ವಿಸ್ಕನ್ಸಿನ್ನಿನಲ್ಲಿ ನಡಸಿದ ಗತಕಾಲದ ಮಳಲದಂಡೆಗಳ ಪರಿಶೀಲನೆಗಳಿಂದ ಆಗಿನ ಗಾಳಿಯ ದಿಕ್ಕನ್ನು ಗುರುತಿಸಿ ಅದರಿಂದ ಅಕ್ಷಾಂಶ ರೇಖಾಂಶಗಳನ್ನೂ ಧ್ರುವದ ಸ್ಥಾನವನ್ನೂ ತರ್ಕಿಸಿದಾಗ ಉತ್ತರಧ್ರುವವು ಆಗ ಶಾಂತ ಸಾಗರದ ಮಧ್ಯದಲ್ಲಿ ಭೂಮಧ್ಯರೇಖೆಯ ಹತ್ತಿರದ್ದಂತೆ ತೋರುತ್ತದೆ.

ಎಲ್ಲಕ್ಕೂ ವಿಸ್ಮಯಕರವಾದ ಪ್ರಮಾಣ ಪ್ರಾಚೀನ ಬಂಡೆಗಲ್ಲುಗಳಿಂದ ಬಂದಿದೆ. ಜ್ವಾಲಾಮುಖಿಗಳು ಲಾವಾರಸ ಕಾರುವಾಗ ಅದರೊಳಗಿದ್ದ ಕಬ್ಬಿಣದ ಕಣಗಳು ಸೂಜಿಗಲ್ಲಾಗಿ ಪರಿವರ್ತನೆ ಹೊಂದುತ್ತದೆ. ಮತ್ತು ಆಗ ಎಲ್ಲ ಸೂಜಿಗಲ್ಲುಗಳು ಮಾಡುವಂತೆ ಅವು ಉತ್ತರ ದಕ್ಷಿಣ ಅಯಸ್ಕಾಂತ ಧ್ರುವಗಳ ದಿಶೆಯಲ್ಲಿ ಒಲೆದು ನಿಲ್ಲುತ್ತವೆ. ಲಾವಾ ರಸ ತಣಿದು ಗಟ್ಟಿಯಾದಾಗ ಈ ಸೂಜಿಗಲ್ಲುಗಳು ಅದೇ ಸ್ಥಿತಿಯಲ್ಲಿ ಉಳಿದುಬಿಡುತ್ತವೆ.

ಜಗತ್ತಿನ ವಿವಿಧ ಪ್ರದೇಶಗಳ ಬಂಡೆಗಲ್ಲುಗಳ ಈ ಅಯಸ್ಕಾಂತತೆಯ ದಿಶೆಗಳನ್ನು ವಿಜ್ಞಾನಿಗಳು ಪರೀಕ್ಷಿಸಿದಾಗ ಅವರು ತುಂಬ ಸೋಜಿಗಕ್ಕೊಳಗಾದರು. ಹೆಚ್ಚುಕಡಿಮೆ ಯಾವ ಪ್ರಾಚೀನ ಬಂಡೆಯ ಅಯಸ್ಕಾಂತತೆಯೂ ಈಗಿನ ಉತ್ತರ ದಕ್ಷಿಣ ಅಯಸ್ಕಾಂತ ಧ್ರುವಗಳತ್ತ ಒಲದಿಲ್ಲ. ಮಾತ್ರವಲ್ಲ, ಅತಿ ಹಳೆಯ ಬಂಡೆಗಲ್ಲುಗಳ ಅಯಸ್ಕಾಂತತೆಯ ದಿಶೆಗಳೇ ಬೇರೆ, ನಡುಗಾಲದವುಗಳ ಅಯಸ್ಕಾಂತತೆಯ ದಿಶೆಗಳೇ ಬೇರೆ, ಮತ್ತು ಆಧುನಿಕ ಬಂಡೆಗಳ ಅಯಸ್ಕಾಂತತೆಯ ದಿಶೆಗಳೇ ಬೇರೆಯಾಗಿ ಕಾಣಿಸಿತು. ಈ ಭೂಖಂಡಗಳು ಮೆಲ್ಲಮೆಲ್ಲಗೆ ಸ್ಥಾನಪಲ್ಲಟ ಹೊಂದುತ್ತಿರದಿದ್ದರೆ ಹೀಗಾಗುವುದು ಸಾಧ್ಯವೇ ಇಲ್ಲ.

ಯುರೋಪ್, ಏಶಿಯ, ಅಮೇರಿಕಗಳ ವಿವಿಧ ಬಂಡೆಗಳ ಬೇರೆ ಬೇರೆ ಸ್ತರಗಳ ಅಯಸ್ಕಾಂತತೆಯನ್ನು ಪರೀಕ್ಷಿಸಿದಾಗ ಅವು ಯಾವ ಯಾವ ಕಾಲದಲ್ಲಿ ಎಲ್ಲಿದ್ದಿರಬಹುದೆಂದು ಊಹಿಸಲು ಸಾಧ್ಯವಾಯಿತು. ಇಂಗ್ಲೆಂಡು ೨೦ ಕೋಟಿ ವರುಷಗಳ ಹಿಂದೆ ಈಗಿಗಿಂತ ತುಂಬಾ ದಕ್ಷಿಣಕ್ಕೆ, ಭೂಮಧ್ಯರೇಖೆಗೆ ಹತ್ತಿರವಾಗಿತ್ತು. ಭಾರತವು ಈಗಿಗಿಂತ ಬಹಳ ದಕ್ಷಿಣಕ್ಕೆ, ದಕ್ಷಿಣ ಧ್ರುವಕ್ಕೆ ಹತ್ತಿರದಲ್ಲಿತ್ತು. ಗ್ರೀನ್‌ಲಂಡು ಎರಡು ಕೋಟಿ ವರ್ಷಗಳ ಹಿಂದೆ ಸುಮಾರಾಗಿ ಈಗಿದ್ದಲ್ಲೇ ಇದ್ದರೂ ಅದಕ್ಕೆ ಪೂರ್ವದಲ್ಲಿ ಬೇರೆಡೆ ಇತ್ತು.

೬೦ ಕೋಟಿ ವರ್ಷಗಳ ಹಿಂದಿನ ವರೆಗಿನ ಬಂಡೆಗಳ ಅಯಸ್ಕಾಂತತೆಯನ್ನು ಬೇರೆ ಮಟದಲ್ಲಿ ತೆಗೆದಾಗ ಒಂದು ಮಾತು ನಿಸ್ಸಂದಿಗ್ಧವಾಗಿ ತೋರಿತು. ಭೂಮಿಯ ಉತ್ತರ ಧ್ರುವವು ಮೊದಲು ಈಗಿನ ಶಾಂತಸಾಗರ ಮಧ್ಯದಲ್ಲಿದ್ದುದು ಮೆಲ್ಲಮೆಲ್ಲಗೆ ಸರಿಯುತ್ತ ಈಗಿನ ಸ್ಥಾನಕ್ಕೆ— ಅಂದರೆ ಆರ್ಕ್‌ಟಿಕ್ ಖಂಡಕ್ಕೆ ಸ್ಥಾನಾಂತರ

ಹೊಂದಿದೆ. ಆದರೆ ಧ್ರುವವು ಹೀಗೆ ಸ್ಥಾನಪಲ್ಲಟ ಹೊಂದಲು ನಿಸರ್ಗ ನಿಯಮಗಳ ಪ್ರಕಾರ ಅವಕಾಶವೇ ಇಲ್ಲದಿರುವುದರಿಂದ ನಮ್ಮ ಭೂಮಿಯ ಮೇಲ್ಪದರೇ ಮೆಲ್ಲಗೆ ಜಾರುತ್ತ ಸ್ಥಾನಪಲ್ಲಟ ಹೊಂದಿರಬೇಕು.

ಇದೆಲ್ಲ ಅರುವತ್ತು ವರ್ಷ ಹಿಂದೆ ಒಬ್ಬ ಜರ್ಮನ್ ವಿಜ್ಞಾನಿ ಮಂಡಿಸಿದ ಸಿದ್ಧಾಂತಕ್ಕೆ ಅನುಮೋದನೆಯೀಯುವಂತೆನಿಸಿತು. "ಗೊಂಡವನ ಖಂಡ ಸಿದ್ಧಾಂತ" ಎಂದು ಹೆಸರಾದ ಅವನ ಸಿದ್ಧಾಂತದ ಪ್ರಕಾರ ಈಗಿನ ನಮ್ಮ ಪಂಚ ಭೂಖಂಡವೆಲ್ಲ ಬಹು ಪುರಾತನದಲ್ಲಿ ಒಂದೇ ದೊಡ್ಡ ಖಂಡವಾಗಿದ್ದು ಅನಂತರ ಒಡೆದು ಬೇರೆ ಬೇರೆ ತುಂಡಾಗಿ ಪೃಥ್ವಿಯ ಭ್ರಮಣದಿಂದುಂಟಾದ ಶಕ್ತಿಗಳಿಂದ ತಳ್ಳಲ್ಪಟ್ಟು ಬೇರೆ ಬೇರೆ ದಿಕ್ಕುಗಳಿಗೆ ಸರಿದು ಹೋದವು. ಹಿಂದೆ ಇವೆಲ್ಲ ಖಂಡಗಳು ಒಂದಾಗಿದ್ದವೆಂಬುದಕ್ಕೆ ಅವುಗಳನ್ನೆಲ್ಲ ಹತ್ತಿರ ತಂದರೆ ಒಂದಕ್ಕೊಂದು ಹೊಂದಿಕೊಳ್ಳುವಂತೆ ಅವುಗಳ ಕರಾವಳಿಗಳಿವೆಯೆಂದು– ಅವನ ಅಭಿಮತವಾಗಿತ್ತು.

ಆದರೆ ಭೌತವಿಜ್ಞಾನಿಗಳು ಈ ಊಹೆಯನ್ನು ಉಗ್ರವಾಗಿ ಖಂಡಿಸಿದ್ದರು. ಸುಮಾರು ೩೦ ಮೈಲು ದಪ್ಪವಿರುವ ಪ್ರಚಂಡ ಭೂಖಂಡಗಳು ಒಳಗಿರುವ ಕುದಿಯುವ ಗೋಲದ ಸುತ್ತ ಸಾವಿರಾರು ಮೈಲು ಸರಿದುಹೋಗಲು ಪ್ರಚಂಡ ಒತ್ತಡ ಬೇಕಾದೀತು. ಅಂಥ ಒತ್ತಡ ಭೂಮಿಯ ಭ್ರಮಣದಿಂದ ದೊರೆಯಲಾರದೆಂದು ಅವರು ಲೆಕ್ಕಹಾಕಿ ತೋರಿಸಿದರು.

ಈ ಬಿಕ್ಕಟ್ಟಿನಲ್ಲಿ ವಿಜ್ಞಾನಿಗಳಿದ್ದಾಗ ಅತ್ಯಾಧುನಿಕ ವಿಜ್ಞಾನವಾದ ಸಾಗರಶಾಸ್ತ್ರವು ಹೊಸ ತಥ್ಯಗಳನ್ನು ಬೆಳಕಿಗೆ ತಂದು ಅವರ ವಿಚಾರಧಾರೆಗೆ ಹೊಸ ದಿಶೆಯನ್ನು ತೋರಿಸುತ್ತದೆ.

ನಮ್ಮ ಪೃಥ್ವಿಯ ಮೂರರಲ್ಲೊಂದು ಭಾಗ ಭೂಖಂಡಗಳಿಂದಲೂ ಉಳಿದೆರಡು ಭಾಗ ಸಾಗರದಿಂದಲೂ ಆವೃತವಾಗಿದೆಯೆಂದು ನಾವು ಪಠ್ಯಗಳಲ್ಲಿ ಓದಿದ್ದೇವೆ. ವಾಸ್ತವವಾಗಿ ಸಾಗರ ತಳಗಳನ್ನು ಪರೀಕ್ಷಿಸಿದರೆ ಪೃಥ್ವಿಯ ಅರ್ಧ ಭಾಗ ಆಳವಾದ ಸಾಗರ ಮತ್ತು ಉಳಿದರ್ಧ ಭಾಗವು ಭೂಖಂಡಗಳಿಂದ ಮತ್ತು ಖಂಡಗಳ ಅಂಚುಗಳಲ್ಲಿ ಸವೆದು ಸಮುದ್ರ ಪಾಲಾದದ್ದರಿಂದ ಉಂಟಾದ ಆಳವಿಲ್ಲದ ಸಾಗರಗಳಿಂದ ಕೂಡಿದೆಯೆಂದು ಗೊತ್ತಾಗುತ್ತದೆ. ನಿಜವಾದ ಸಾಗರ ಆಳವಾದ ಸಾಗರವೇ. ಈ ನಿಜ ಸಾಗರಗಳ ತಳದಲ್ಲಿರುವ ನೆಲದ ಪದಾರ್ಥವೇ ಬೇರೆ, ಭೂಖಂಡಗಳ ಮತ್ತು ಆಳವಿಲ್ಲದ ಸಾಗರಭಾಗಗಳ ತಳದ ನೆಲದ ಪದಾರ್ಥವೇ ಬೇರೆ. ಮೊದಲನೆಯದು ಭಾರ ಪದಾರ್ಥ, ಎರಡನೆಯದು ಹಗುರ. ಸಾಗರತಳದ ನೆಲ ಕೇವಲ ಆರು ಮೈಲು ದಪ್ಪವಾಗಿದ್ದರೆ ಭೂಖಂಡಗಳೂ ಅವುಗಳಿಂದ ಸವೆದು ಹೋದ ಭಾಗಗಳೂ ಸರಾಸರಿ ೩೦ ಮೈಲು ದಪ್ಪವಾಗಿವೆ. ಇದನ್ನೆಲ್ಲ ನೋಡಿದಲ್ಲಿ, ಭೂಮಿಯ ಮೇಲ್ಮೈಯ ಕವಚವು ಭೂಖಂಡ ಮತ್ತು ಸಾಗರ ಎಂಬೆರಡು ಪೂರ್ತಿ ಬೇರೆ ಬೇರೆ "ರಾಜ್ಯ"ಗಳಾಗಿವೆಯೆಂದು ಅರ್ಥವಾಗುತ್ತದೆ.

ಆಳವಾದ ಸಾಗರದಲ್ಲಿ ಮಹಾ ಪರ್ವತ ಶ್ರೇಣಿಯಿರುವುದೂ ಬೆಳಕಿಗೆ ಬಂದಿದೆ. ಈ ಶ್ರೇಣಿ ಎಲ್ಲ ಸಾಗರಗಳ ತಳಗಳಲ್ಲೂ ಹೊಕ್ಕು ಸಾಗಿದ್ದು ಒಟ್ಟು ೪೦,೦೦೦ ಮೈಲುದ್ದವಾಗಿದೆ. ಈ ಪರ್ವತ ಶ್ರೇಣಿಯನ್ನು ಉದ್ದಕ್ಕೂ ಎರಡಾಗಿ ಸೀಳಿ ೬,೦೦೦ ಅಡಿ ಆಳವಾಗಿ ಒಂದು ಕಣಿವೆ ಇದೆ. ಈ ಕಣಿವೆಯಲ್ಲೇ ಸಾಗರ ತಳದ ಅನೇಕ ಭೂಕಂಪಗಳು ಉತ್ಪನ್ನವಾಗುವಂತೆ ಕಾಣುತ್ತದೆ.

ಕಣಿವೆಯ ಎರಡೂ ಮಗ್ಗಲಿಗಿರುವ ಪರ್ವತ ಶ್ರೇಣಿಗಳನ್ನು ಪರೀಕ್ಷಿಸಿದಾಗ ಅವು ನೆಲದ ಮೇಲಿನ ಪರ್ವತಗಳ ಹಾಗೆ ನೆಲ ನಿರಿಬಿದ್ದು ಹುಟ್ಟಿದವುಗಳಲ್ಲವೆಂದು ವ್ಯಕ್ತವಾಯಿತು. ಅವು ಕಣಿವೆಯಿಂದ ಉಕ್ಕಿಬಂದ ಲಾವಾರಸದ ರಾಶಿಯಂತೆ ಕಾಣುತ್ತವೆ.

ಈ ಕಣಿವೆಯೇನಾಗಿರಬಹುದು? ವಿಜ್ಞಾನಿಗಳೀಗ ಇವು ಭೂಮಿಯ ಗಟ್ಟಿಯಾದ ಕವಚದಲ್ಲಿ ಉಂಟಾದ ಒಡಕೆಂದು ತರ್ಕಿಸಿದ್ದಾರೆ. ಈ

ಒಡಕಿನಿಂದ ಭೂಗರ್ಭದ ಕುದಿಯುವ ಲಾವಾ ರಸ ಹೊರಹೊಮ್ಮಿ ಎರಡೂ ಕಡೆ ಕೂಡಿಬಿದ್ದು ಸಾಗರಗರ್ಭದ ಪರ್ವತಶ್ರೇಣಿಗಳಾಗಿವೆ.

ಹೀಗೇಕೆ ಕಣಿವೆಯುಂಟಾಯಿತು? ಪೃಥ್ವಿ ದಿನದಿನಕ್ಕೆ ಕುಗ್ಗುತ್ತಿದ್ದರೆ ಹೀಗಾಗಲು ಕಾರಣವಿದ್ದಿಲ್ಲ.

ಆದ್ದರಿಂದ, ವಿಜ್ಞಾನಿಗಳು ಪೃಥ್ವಿಯ ಇತಿಹಾಸದ ಬಗ್ಗೆ ಪುಟ್ಟಪೂರಾ ಹೊಸ ಕಲ್ಪನೆಯನ್ನು ಕಟ್ಟುತ್ತಿದ್ದಾರೆ. ಇದರ ಪ್ರಕಾರ ಪೃಥ್ವಿ ಕುಗ್ಗುತ್ತಿಲ್ಲ, ಉಬ್ಬುತ್ತಿದೆ. ಆದಿಕಾಲದಲ್ಲಿ ಪೃಥ್ವಿಯ ಮೇಲೆಲ್ಲ ಸಾಗರ ವ್ಯಾಪಿಸಿರಲಿಲ್ಲ. ಗಟ್ಟಿಯಾದ ಗ್ರೇನೈಟ್ ಶಿಲೆಯ ಚಿಪ್ಪಿನಿಂದ ಅದು ಆವರಿಸಲ್ಪಟ್ಟಿತ್ತು. ಆದರೆ ಪೃಥ್ವಿಯ ಒಳ ತಿರುಳು ಸಾವಕಾಶವಾಗಿ ಉಬ್ಬತೊಡಗಿತು. ಈ ಉಬ್ಬುವಿಕೆ ಸಾಕಷ್ಟು ಪ್ರಬಲವಾದಾಗ ಹೊರಕವಚ ಉದ್ದಕ್ಕೂ ಒಡೆದು ಹೋಳುಗಳಾದವು. ಭೂಗರ್ಭದಲ್ಲಿ ಹುದುಗಿದ್ದ ನೀರು ಆವಿಯಾಗಿ ಮೇಲೇರಿ ಮಳೆಯಾಗಿ ಸುರಿದು ಕೊರಕಲುಗಳಲ್ಲಿ ತುಂಬಿಕೊಂಡಿತು. ಇದೇ ಸಾಗರದ ಮೂಲ.

ಆದರೆ ಪೃಥ್ವಿ ಉಬ್ಬುತ್ತಲೇ ಹೋದದ್ದರಿಂದ ಈ ಒಡಕು ವಿಸ್ತಾರ ಹೊಂದುತ್ತಲೇ ಹೋಯಿತು. ಕೊರಕಲು ವಿಸ್ತಾರಗೊಂಡಂತೆ ಮೇಲಿನ ಒಡೆದ ಕವಚದ ತುಣುಕುಗಳು ತಳ್ಳಲ್ಪಟ್ಟು ಒಂದಕ್ಕೊಂದು ದೂರವಾಗುತ್ತ ಹೋಗುವುದು ಸಹಜ. ಅದೇ ಈಗ ಆಗಿರುವುದು ಕೂಡ. ಪೃಥ್ವಿಯ ಆದಿಮ ಹೊರಕವಚದ ತುಣುಕುಗಳೇ ಇಂದಿನ ಖಂಡಗಳು, ಬೆಳೆಯುತ್ತಿರುವ ಕೊರಕಲೇ ಸಾಗರಗಳು.

ಈ ಹೊಸ ಚಿತ್ರದ ಪ್ರಕಾರ ಪೃಥ್ವಿಯಮೇಲಿನ ನೆಲಭಾಗದ ವಿಸ್ತಾರ ಸುಮಾರಾಗಿ ಮೊದಲಿದ್ದಷ್ಟೇ ಇದೆ. ಆದರೆ ಸಾಗರಭಾಗ ವಿಸ್ತರಿಸುತ್ತ ಹೋಗಿದೆ. ಪೃಥ್ವಿಯ ಮೂಲ ಕವಚ ಸುಮಾರು ೩೦ ಮೈಲು ದಪ್ಪವಾಗಿದ್ದು ಅದು ಅತ್ತಿತ್ತ ಸರಿದುಹೋಗಿ ಆದ ಆಳವಾದ ಅವಕಾಶದಲ್ಲಿ ಸಾವಕಾಶವಾಗಿ ಒಳಗಿನ ಕುದಿಯುವ ಲಾವಾ ರಸ ಹಬ್ಬಿತು. ಆದ್ದರಿಂದ ಅದು ಸಾಗರತಳದ ತೆಳ್ಳಗಾದ ನೆಲವಾಗಿದೆ. ಒಳಗಿನ ಲಾವಾರಸ ಮೇಲಿನ ಕವಚದ ಪದಾರ್ಥಕ್ಕಿಂತ ಭಾರವಾಗಿರುವುದರಿಂದ ಸಾಗರತಳದ ಪದಾರ್ಥ ಭೂಖಂಡದ ಪದಾರ್ಥಕ್ಕಿಂತ ಭಾರವಾಗಿದೆ.

ಪೃಥ್ವಿ ಇನ್ನೂ ಉಬ್ಬುತ್ತಲೇ ಇದೆ. ಆದ್ದರಿಂದ ಭೂಖಂಡಗಳು ಇನ್ನೂ ದೂರ ದೂರವಾಗುತ್ತ ಹೋಗಲಿವೆ. ವಿಜ್ಞಾನಿಗಳ ಅಂದಾಜಿನಂತೆ ಸದ್ಯಕ್ಕೆ ಭೂಮಿಯ ವ್ಯಾಸ ವರ್ಷಕ್ಕೆ ಎರಡು ಮಿಲಿಮೀಟರಿನಷ್ಟು ಬೆಳೆಯುತ್ತಿದೆ. ಇದು ಅಲ್ಪವಾಗಿ ಕಂಡರೂ ಕೋಟಿಗಟ್ಟಳೆ ವರ್ಷಗಳಲ್ಲಿ ಶೇಖರಗೊಂಡ ಬೆಳವಣಿಗೆ ಮತ್ತು ಖಂಡಗಳ ದೂರ ಸಾವಿರಗಟ್ಟಳೆ ಮೈಲಾಗಬಲ್ಲದು. ಪೃಥ್ವಿ ಏಕೆ ಉಬ್ಬುತ್ತಿದೆಯೆಂದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಇಡೀ ವಿಶ್ವವೇ ಉಬ್ಬುತ್ತಿದೆಯೆಂದು ಖಗೋಲ ಶಾಸ್ತ್ರಿಗಳು ಹೇಳುತ್ತಿದ್ದಾರೆ. ಅದರಂತೆ ಭೂಮಿಯೂ ಉಬ್ಬುತ್ತಿರಬಹುದು. ಅಮೇರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಪ್ರೊ. ರಾಬರ್ಟ್ ಡಿಕಿಯವರ ಅಭಿಮತದಲ್ಲಿ ಗುರುತ್ವಾಕರ್ಷಣ ಶಕ್ತಿ ದುರ್ಬಲಗೊಳ್ಳುತ್ತಿರುವುದೇ ಇದಕ್ಕೆ ಕಾರಣ. ೪೫೦ ಕೋಟಿ ವರ್ಷಗಳ ಹಿಂದೆ ಪೃಥ್ವಿ ಹುಟ್ಟಿವಂದಿನಿಂದ ಈ ವರೆಗೆ ಗುರುತ್ವಾಕರ್ಷಣ ೧೩% ರಷ್ಟು ದುರ್ಬಲವಾಗಿದೆ. ಅದರಿಂದಾಗಿ ಪದಾರ್ಥದ ಕಣಗಳು ಒಂದರಿಂದೊಂದು ದೂರ ಸಿಡಿದುಹೋಗುತ್ತಿವೆ. ಅರ್ಥಾತ್ ಪದಾರ್ಥಗಳು ಉಬ್ಬುತ್ತಿವೆ.

ಕಾರಣವೇನೇ ಇರಲಿ, ಭೂಮಿ ಉಬ್ಬುತ್ತಿದೆ ಮತ್ತು ಭೂಖಂಡಗಳು ದೂರ ದೂರ ಸರಿಯುತ್ತಿವೆ, ಅರ್ಥಾತ್ ಸ್ಥಾನಾಂತರ ಹೊಂದುತ್ತಿವೆ. ಇನ್ನೂ ಇದು ಸಾಗಲಿದೆ. ಈಗಿನ ಶೀತ ಪ್ರದೇಶದಲ್ಲಿರುವ ಖಂಡಗಳು ಸಮಶೀತೋಷ್ಣ ಪ್ರದೇಶ ಸೇರಬಹುದು, ಉಷ್ಣವಲಯದಲ್ಲಿದ್ದವು ಶೀತ ಪ್ರದೇಶವನ್ನು ತಲುಪಬಹುದು. *

ಒಂದು ಸತ್ಯ ಕಥೆ

ಮತ್ತೆ ಮಾನವನಾದ ಈ ಅಪರಾಧಿ

"ರಾಕಾ, ನನ್ನ ಗುಡಿಸಲು ತಯಾರಾಗಿದೆ. ನನ್ನ ಹೆಂಡತಿ ಬಂದಿದ್ದಾಳೆ. ಒಂದು ದಿನ ನಮ್ಮಲ್ಲಿಗೆ ಚಹ ಕುಡಿಯಲು ಬರುತ್ತೀರಷ್ಟೆ? ನಾನೀಗ ಸಮಾಜದಲ್ಲಿ ಒಬ್ಬನಾದೆ. ನನ್ನ ಒಳಿ ಹುಡುಗರು ಬರುತ್ತಾರೆ, ಮಾತಾಡುತ್ತಾರೆ, ಆಡುತ್ತಾರೆ..." ಇಷ್ಟನ್ನುತ್ತಿದ್ದಾಗ ಮಾಣಿಕನ ಕಣ್ಣಲ್ಲಿ ಆನಂದದ ಹನಿ ಮಿನುಗತೊಡಗಿತ್ತು.

ಅದಕ್ಕೆ ಸಬಲ ಕಾರಣವೂ ಇತ್ತು. ಮಾಣಿಕ ಕೊಲೆಯ ಅಪರಾಧಕ್ಕಾಗಿ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆ ಹೊಂದಿದವ. ಜೇಲಿನಿಂದ ಬಂದವನೆಂದು ಅವನನ್ನು ಯಾರೂ ಸಮೀಪಕ್ಕೆ ಬರಗೊಡುತ್ತಿರಲಿಲ್ಲ. ಒಮ್ಮೆ ಅಪರಾಧಗೈದವನು ಯಾವಾಗಲೂ ಅಪರಾಧಿಯೆ ಎಂದು ಸಮಾಜ ತಿಳಿಯುವುದರಿಂದ ಅಪರಾಧಿಗೆ ಸುಧಾರಿಸುವ ಅವಕಾಶವೇ ದೊರೆಯದಂತಾಗಿ ಆತ ನಿರುಪಾಯವಾಗಿ ಮತ್ತೆ ಅಪರಾಧಕ್ಕೆ ಪ್ರವೃತ್ತನಾಗುತ್ತಾನೆ. ಇಂಥ ಪರಿಸ್ಥಿತಿಯೊದಗಿದ್ದರೂ ಮಾಣಿಕ ಸುದೈವದಿಂದ ಮತ್ತೆ ಸಮಾಜದಲ್ಲಿ ಒಬ್ಬನಾಗುವಂತಾಗಿತ್ತು. ಸಮಾಜ ಅವನನ್ನು ತನ್ನವನೆಂದು ಸ್ವೀಕರಿಸಿತ್ತು.

ಮಾಣಿಕ ಜೇಲಿನಿಂದ ಹೊರಬಿದ್ದು ಆದೇ ಮೂರು ನಾಲ್ಕು ತಿಂಗಳಾಗಿತ್ತು. ಯರವಡಾ ಜೇಲಿಗೆ ವಾರದಲ್ಲಿ ನಾಲ್ಕು ದಿನ ಹೋಗಿ ಅಲ್ಲಿಯ ಕೈದಿಗಳ ಯೋಗಕ್ಷೇಮವನ್ನು ನಮ್ಮ ಸಂಸ್ಥೆಯ ವತಿಯಿಂದ ನೋಡಿಕೊಳ್ಳುವ ಕಾರ್ಯ ನನ್ನದಾಗಿತ್ತು. ಕೈದಿಗಳ ಕುಟುಂಬದವರಿಗೆ ಏನಾದರೂ ತೊಂದರೆಯಾಗುತ್ತಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅದನ್ನು ತಿಳಿಸಿ ತೊಂದರೆ ನಿವಾರಣೆ ಮಾಡುವದೂ ಬಿಡುಗಡೆಹೊಂದಿದ ಕೈದಿಗಳಿಗೆ ಅವರು ಗೌರವಯುತ ಜೀವನ ನಡೆಸಲು ಸಹಾಯ ನೀಡುವದೂ ನಮ್ಮ ಸಂಸ್ಥೆಯ ಕಾರ್ಯ.

ಅಂದು ನಾನು ಜೇಲಿನ ಬಾಗಿಲ ಬಳಿ ನಿಂತು ಸಾಲುಸಾಲಾಗಿ ಹೊರಗೆ ಬಿಡಲ್ಪಡುತ್ತಿದ್ದ ಕೈದಿಗಳನ್ನು ನೋಡುತ್ತ ನಿಂತಿದ್ದೆ. ಅಷ್ಟರಲ್ಲಿ "ರಾಯರೆ ನಿಮ್ಮ ಹತ್ತರ ಸ್ವಲ್ಪ ಮಾತಾಡಬೇಕಲ್ಲ!" ಎಂಬ ಧ್ವನಿ ಕೇಳಿಸಿ ತಿರುಗಿ ನೋಡಿದೆ. ಮಾಣಿಕ ಮಾತಾಡುತ್ತಿದ್ದ. "ಏನು ಮಾಣಿಕ, ಎಲ್ಲ ಸರಿಯಾಗಿ ನಡೆದಿದೆ ತಾನೇ? ಪ್ರೆಸ್ಸಿನಲ್ಲಿಯ ಕೆಲಸ ಹೇಗನಿಸುತ್ತದೆ?" ಎಂದು ನಾನು ಕೇಳಿದೆ.

ನನ್ನೊಡನೆ ಸ್ಪಷ್ಟವಾಗಿ ಮಾತಾಡಲು ಆತನಿಗೆ ಸಂಕೋಚವಾದಂತಿತ್ತು. ನಾನವನ ಬೆನ್ನ ಮೇಲೆ ಕೈಯಾಡಿಸಿ "ಸಂಕೋಚ ಪಡಬೇಡ, ಹೇಳು. ಏನು ಹೇಳಬೇಕೊ ಹೇಳು" ಎಂದೆ.

ಕಣ್ಣೀರನ್ನು ತಡೆಯಲು ಯತ್ನಿಸುತ್ತ ಮಾಣಿಕ ಹೇಳಿದ. "ರಾಯರೇ, ನನಗೆ ಬಹಳ ಕಷ್ಟವಾಗುತ್ತಿದೆ. ನನಗೆ ಕೆಲಸ ಸಿಕ್ಕಿತು. ಹೆಂಡತಿಯನ್ನು ಕರೆಸಿಕೊಂಡಿದ್ದೆ. ಆದರೆ ಈಗ

ಜೇಲಿನಿಂದ ಬಿಡುಗಡೆಯಾಗಿ ಬಂದವರಿಗೆ ಅವರು ಪುನಃ ಮನುಷ್ಯರಾಗಿ ಬಾಳಲು ಸಹಾಯ ಮಾಡಲೆಂದು ಪುಣೆಯಲ್ಲಿ "ನವಜೀವನ ಮಂಡಳ" ಎಂಬ ಸಂಸ್ಥೆ ದುಡಿಯುತ್ತಿದೆ. ಶ್ರೀ ಅಚ್ಯುತರಾವ ರಾನಡೆಯವರು ಈ ಮಂಡಲದ ಸದಸ್ಯರಲ್ಲೊಬ್ಬರು. ಅವರಿಗೆ ಈ ಕಾರ್ಯದಲ್ಲಿ ಬಂದ ಅನುಭವಗಳನ್ನು ಕುರಿತು ಅವರು ಹಲವು ಲೇಖಗಳನ್ನು ಬರೆದಿದ್ದಾರೆ. ಆ ಸತ್ಯ ಅನುಭವ ಕಥನಗಳಲ್ಲಿ ಇದೂ ಒಂದು.

ಎರಡು ತಿಂಗಳಲ್ಲಿ ನಾಲ್ಕು ಕಡೆ ಕೆಲಸಕ್ಕೆ ಸೇರಿಕೊಳ್ಳಬೇಕಾಯಿತು. ನಾನು ಜೇಲಿನಿಂದ ಬಂದವ ಎಂದು ತಿಳಿದೊಡನೆ ಪ್ರತಿಯೊಂದು ಕಡೆಯಲ್ಲಿಯೂ ಏನಾದರೊಂದು ನೆಪ ತೆಗೆದು ನನ್ನನ್ನು ಕೆಲಸದಿಂದ ಕಿತ್ತಿಹಾಕಿದರು. ನನ್ನ ಹೆಂಡತಿಗಾಗುತ್ತಿದ್ದ ಕಷ್ಟವನ್ನು ನೋಡಲಾರದೆ ಅವಳನ್ನು ನನ್ನ ತಂದೆಯ ಬಳಿ ಕಳಿಸಿಕೊಟ್ಟೆ. ಕೆಲಸ ಮುಗಿದ ಬಳಿಕ ನಾನೇ ಹೇಗಾದರೂ ಅಡಿಗೆ ಮಾಡಿಕೊಂಡು ಉಂಡು ಬಳಿಕ ಎಲ್ಲಿಯಾದರೂ ಮಲಗಿಕೊಳ್ಳುತ್ತೇನೆ. ರಾಯರೇ, ನನಗೊಂದು ಸ್ಥಳಕೊಡಿಸಿ, ನನ್ನನ್ನೂ ಮನುಷ್ಯನನ್ನಾಗಿ ಮಾಡಿರಿ."

ವಡ್ಡರ ಜಾತಿಯವನಾತ. ಮಾವನನ್ನು ಹಾರೆಯಿಂದ ಹೊಡೆದು ಕೊಂದದ್ದಕ್ಕಾಗಿ ಶಿಕ್ಷೆಯಾಗಿತ್ತವನಿಗೆ. ಅವನಿಗೆ ತಂದೆ-ತಾಯಿ ಅಣ್ಣ ತಮ್ಮಂದಿರಿದ್ದರು. ಲಗ್ನವಾಗಿ ಎರಡು ವರ್ಷಗಳಾಗಿದ್ದವು. ಅವರ ಜಾತಿಯಲ್ಲಿ ಹೆಂಗಸರು ಮಕ್ಕಳು ಕೂಡ ಕೆಲಸಮಾಡುತ್ತಾರೆ. ಒಂದು ಮನೆಯ ಪಾಯಾ ಅಗೆಯುವ ಗುತ್ತಿಗೆಯನ್ನು ಮಾಣಿಕ ಸಂಪಾದಿಸಿದ್ದ. ಕೆಲಸ ಸಿಗುವದು ತುಂಬ ಕಠಿಣವಾಗಿದ್ದರಿಂದ ಈ ಗುತ್ತಿಗೆಯ ವಿಚಾರವನ್ನು ಆತ ಗೌಪ್ಯವಾಗಿಯೆ ಇಟ್ಟಿದ್ದ. ಕೆಲಸ ಶುರು ಮಾಡಿ ಒಂದೆರಡು ದಿನಗಳ ನಂತರ ಮನೆಯ ಮಾಲಕ ಏನೋ ಜಗಳ ತೆಗೆದು ಮಾಣಿಕನನ್ನು ಕೆಲಸದಿಂದ ಬಿಡಿಸಿದ. ಮಾಣಿಕನಿಗೆ ಬೇರೆ ಕಡೆ ಕೆಲಸವೂ ಸಿಗಲಿಲ್ಲ. ಅವನಿಗೆ ತನ್ನಿಂದ ಕಸಿದುಕೊಳ್ಳಲ್ಪಟ್ಟ ಕೆಲಸ ತನ್ನ ಮಾವನಿಗೆ ಸಿಕ್ಕಿದೆ ಎಂದು ತಿಳಿಯಿತು.

ಇದರಲ್ಲೇನೊ ಮೋಸವಿದೆ ಎಂದೆಣಿಸಿದ ಮಾಣಿಕ ಹೆಂಡತಿಯನ್ನು ಗದರಿಸಿ ಕೇಳಿದಾಗ ಗುತ್ತಿಗೆಯ ಕೆಲಸದ ವಿಚಾರವನ್ನು ಅವಳು ತನ್ನ ತಂದೆಗೆ ಹೇಳಿದ್ದು ತಿಳಿಯಿತು. ದರವನ್ನಿಳಿಸಿ ಮಾವ ಆ ಕೆಲಸ ಎತ್ತಿಹಾಕಿದ್ದ. ಮಾವನ ನೀಚತನವನ್ನು ಕಂಡು ರೊಚ್ಚಿಗೆದ್ದು ಮಾಣಿಕ ಕೆಲಸ ನಡೆದಲ್ಲಿಗೆ ಹೋದ. ಮಾವ ಎಷ್ಟಾದರೂ ಹಿರಿಯ ಮನುಷ್ಯ ಎಂದು ಅವನೊಡನೆ ಶಾಂತ ರೀತಿಯಲ್ಲಿಯೇ ಮಾಣಿಕ ಮಾತಾಡಿದ "ನಿನ್ನ ಮಗಳ ಬಾಯ ತುತ್ತನ್ನೇ ನೀನು ಕಸಿದುಕೊಂಡೆ" ಎಂದು ಸೌಮ್ಯವಾಗಿ ಹಂಗಿಸಿದ.

ಮೊದಮೊದಲು ಮಾವ ಅಳಿಯನ ಮಾತುಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಅಳಿಯನ ಬಡಬಡಿಕೆ ಹೆಚ್ಚಾಗಲು ಆತ ಅವನನ್ನು ಹೋಗೆಂದು ಹೇಳಿದ. ಮಾಣಿಕ ಹೋಗದಿರಲು ಅವನನ್ನು ಹೊಡೆದು ಬಯ್ಯತೊಡಗಿದ.

ಮಾಣಿಕನಿಗೆ ಸಿಟ್ಟು ತಡೆಯದಾಯಿತು. ಅವನ ವಿವೇಕ ತಪ್ಪಿ ಅವನು ಕೈಲಿದ್ದ ಹಾರೆಯಿಂದ ಮಾವನ ತಲೆಗೆ ಹೊಡೆದ. ಮೂರು ನಾಲ್ಕು ದಿನಗಳ ನಂತರ ಮಾವ ಆಸ್ಪತ್ರೆಯಲ್ಲಿ ಸತ್ತ. ಮಾಣಿಕನಿಗೆ ನಾಲ್ಕು ವರ್ಷ ಕಠಿಣ ಶಿಕ್ಷೆಯಾಯಿತು. ಅವನ ಹೆಂಡತಿ ಅವನನ್ನು ಬಿಡಲಿಲ್ಲ. ಅವಳು ಅವನ ತಂದೆ ತಾಯಿಗಳೊಡನೆ ಇರುವೆನೆಂದಳು. ಮಾಣಿಕನಿಗೆ ಜೇಲಿನಲ್ಲಿ ಪ್ರೆಸ್ಸಿನಲ್ಲಿ ಕೆಲಸ ಸಿಕ್ಕಿತು. ಓದು ಬರೆಯಲು ಬಾರದ ಮಾಣಿಕ ಅಲ್ಲಿ ಪತ್ರಿಕೆಗಳನ್ನು ಓದುವಮಟ್ಟಿಗೆ ವಿದ್ಯಾವಂತನಾದ.

ಜೇಲಿನಲ್ಲಿದ್ದಾಗ ನಾನು ಮಾಣಿಕನನ್ನು ಅನೇಕ ಸಲ ಭೆಟ್ಟಿಯಾಗಿದ್ದೆ. ಅವನಲ್ಲಿನ್ನೂ ಮನುಷ್ಯತ್ವ ಅಳಿದಿರಲಿಲ್ಲ. ಏನೊ ಕೋಪದ ಭರದಲ್ಲಿ ಅಚಾತುರ್ಯವೆಸಗಿದ್ದನೇ ವಿನಾ ಅವನು ಸ್ವಭಾವತಃ ಸಭ್ಯನಾಗಿದ್ದ. ಜೇಲಿನಿಂದ ಹೊರಬಿದ್ದಬಳಿಕ ತನ್ನ ಸಮಾಜದಲ್ಲಿ ತನಗೆ ಸ್ಥಾನದೊರೆಯದೆಂದೂ ತನಗೆಲ್ಲಿಯಾದರೂ ಪ್ರೆಸ್ಸಿನಲ್ಲಿ ಕೆಲಸ ಕೊಡಿಸಿದರೆ ತಾನು ಪ್ರತ್ಯೇಕ ಸಂಸಾರ ಹೂಡಿಕೊಳ್ಳುವೆನೆಂದೂ ಊರಿಗೆ ಮರುಳುವ ಇಚ್ಛೆಯಿಲ್ಲವೆಂದೂ ಹೇಳಿದ್ದ.

ಸರಕಾರೀ ಪ್ರೆಸ್ಸಿನ ಮ್ಯಾನೇಜರರು ಮಾಣಿಕನಿಗೆ ಒಳ್ಳೆಯ ಸರ್ಟಿಫಿಕೆಟ್ ಕೊಟ್ಟಿದ್ದರು. ಆದರೆ ಜನರು ಅವನನ್ನು ಬಿಡುಗಡೆಯಾದ ಕೈದಿ ಎಂದು ನೋಡುತ್ತಿದ್ದುದರಿಂದ ಅವನ ಬಾಳು ಅಸಹ್ಯವಾಗತೊಡಗಿತ್ತು. ಸರಕಾರೀ ಪ್ರೆಸ್ಸಿನಲ್ಲಿಯೆ ಅವನಿಗೆ ಕೆಲಸ ಕೊಡಿಸಿದೆ.

ಆದರೆ ಎರಡು ಮೂರು ತಿಂಗಳ ನಂತರ ಅವನು ಭೆಟ್ಟಿಯಾದಾಗ ಸಮಾಜದ ತಿರಸ್ಕಾರದಿಂದ ಬೇಸತ್ತ ಆತ "ನನ್ನನ್ನೂ ಮನುಷ್ಯನನ್ನಾಗಿ ಮಾಡಿರಿ" ಎಂದು ನನ್ನಲ್ಲಿ ಬೇಡಿಕೊಳ್ಳತೊಡಗಿದ್ದ.

ನಾನವನಿಗೆ ಧೈರ್ಯ ಹೇಳಿದೆ. ಸ್ವಂತ ಗುಡಿಸಲು ಕಟ್ಟಿಕೊಳ್ಳಲು ೫೦ ರೂಪಾಯಿಗಳನ್ನೂ ಕೊಡುವುದಾಗಿ ಹೇಳಿದೆ.

ಮಾಣಿಕ ಹೇಳಿದ. "ರಾಯರೇ, ಏನಾಶ್ಚರ್ಯ ನೋಡಿ. ನಾನು ಕೈದಿಯಾಗಿದ್ದಾಗ ಕೆಲಸ ಮಾಡುತ್ತಿದ್ದ. ಸ್ಥಳದಲ್ಲಿಯೇ ಈಗಲೂ ಕೆಲಸ ಮಾಡುತ್ತೇನೆ. ನಾನು ಕೈದಿಯಾಗಿದ್ದಾಗ ಇತರರು ನನ್ನೊಡನೆ ಬಹಳ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ನಾನು ಜೇಲಿನಲ್ಲಿದ್ದಾಗ ಯಾರು ನನಗಾಗಿ ತಮ್ಮ ಪ್ರಾಣವನ್ನೂ ಕೊಟ್ಟಾರು ಎಂದು ತಿಳಿದಿದ್ದೆನೊ ಅವರೇ ಇಂದು ನನ್ನನ್ನು ದ್ವೇಷಿಸುತ್ತಾರೆ, ತಿರಸ್ಕರಿಸುತ್ತಾರೆ. ಹೀಗೇಕೆನ್ನುವುದೇ ನನಗೆ ತಿಳಿಯದಂತಾಗಿದೆ. ಅವರ ಪಾಲಿಗೆ ನಾನು ಒಬ್ಬ ಮಹಾರೋಗಿಯಂತಾಗಿದ್ದೇನೆ. ನಮ್ಮದೊಂದು ಸಹಕಾರಿ ಸಂಘವಿದ್ದು ನಾನದರ ಸದಸ್ಯನಿದ್ದೇನೆ. ಸಂಘದ ಕಟ್ಟಡದಲ್ಲಿ ಕೆಲವು ದಿನ ಮಲಗಲು ಅವಕಾಶ ಕೊಡಬೇಕೆಂದು ನಾನು ಅಧಿಕಾರಿಗಳನ್ನು ಕೇಳಿದೆ. ಅಪ್ಪಣೆ ಕೊಡುವ ಮನಸ್ಸಿದ್ದರೂ ಇತರರು ತಕರಾರು ಮಾಡಿದ್ದರಿಂದ ಅವರು ಅಪ್ಪಣೆ ನಿರಾಕರಿಸಿದರು. ನಾನು ಜೇಲಿನಿಂದ ಬಿಡುಗಡೆಯಾದವ. ಕದ್ದೇನು, ಮತ್ತೇನಾದರೂ ಭಾನಗಡಿ ಮಾಡೇನು ಎಂದು ಉಳಿದವರು ತಕರಾರು ಮಾಡಿದರು."

ಆಗ ಚೌತಿ ಹಬ್ಬದ ಸಮಯ. ಪ್ರೆಸ್ಸಿನ ಸಾರ್ವಜನಿಕ ಗಣಪತಿಯ ಮಂಟಪದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳನ್ನು ಕೇಳುತ್ತಿರುವಿಯಾ ಎಂದು ಕೇಳಲು ಮಾಣಿಕ ಹೇಳಿದ. "ಹೌದು. ಆ ಗಿಡದ ಬುಡದಲ್ಲಿ ಕುಳಿತು ಕೇಳುತ್ತೇನೆ. ನಾನು ಮಹಾರೋಗಿಯಲ್ಲವೆ? ನನಗೆ ಕಾರ್ಯಕ್ರಮದ ಪಾಸು ಕೂಡ ಕೊಡುವವಿಲ್ಲ. ಎಲ್ಲ ಕಾರ್ಯಕ್ರಮಗಳಿಂದಲೂ ನನ್ನನ್ನು ಹೊರಗಿಡುತ್ತಾರೆ. ಈ ಬಟ್ಟೆಗಳನ್ನು ಹಾಕಿಕೊಳ್ಳತೊಡಗಿದಂದಿನಿಂದ ನಾನು ಜೇಲಿನಲ್ಲಿಯೂ ಇಲ್ಲ, ಸಮಾಜದಲ್ಲಿಯೂ ಇಲ್ಲದಂತಾಗಿದ್ದೇನೆ. ಸಿಟ್ಟಾಗಬಾರದು ನಿರಾಶನಾಗಬಾರದು ಎಂದೆಷ್ಟುಯೋಚಿಸಿದರೂ ನಾನು ಮನುಷ್ಯನೇ ಅಲ್ಲವೆ? ಸಿಟ್ಟು ಬರುತ್ತದೆ. ಸಂಗಡಲೇ ಸಿಟ್ಟಿನ ಭರದಲ್ಲಿ ಮಾವನನ್ನು ಹೊಡೆದು ಮೈಮೇಲೆ ತಂದುಕೊಂಡ ಸಂಕಟಪರಂಪರೆಯ ನೆನಪಾಗುತ್ತದೆ. ರಾಯರೇ, ದೇವರು ಎನ್ನುತ್ತಾರಲ್ಲ, ಆತ ಇದ್ದಾನೆಯೆ? ನನಗೆ ದೇವರ ಮೇಲಿನ ನಂಬಿಗೆ ಕಳೆದುಹೋಗತೊಡಗಿದೆ."

ಆತನ ಪೀಡಿತ ಹೃದಯದಿಂದ ಹೊರಟ ಮಾತಾಗಿತ್ತು ಅದು. ನಾನೇನೂ ದೇವರು ದಿಂಡರು ಎಂದು ನಂಬಿಗೆಯಿಟ್ಟುಕೊಂಡವನಲ್ಲ. ಆದರೆ ಆತನ ನಂಬಿಗೆಯನ್ನುಹಾಳುಮಾಡುವ ಅಧಿಕಾರ ನನಗೆಲ್ಲಿದೆ? ದೇವರ ಅಸ್ತಿತ್ವವೇ ಅವನ ಜೀವನದ ಆಧಾರ. ಆ ಆಧಾರವನ್ನು ಕಸಿದುಕೊಳ್ಳುವುದು ನನಗೆ ಸಾಧ್ಯವಿದ್ದರೂ ಬೇರೆ ಯಾವ ಆಧಾರವನ್ನೂ ನಾನವನಿಗ ಒದಗಿಸಲಾರದವನಾಗಿದ್ದೆ. ಅಂತೆಯೆ "ದೇವರಿದ್ದಾನೆ. ನಿನಗೆ ಸಹಾಯ ಮಾಡುವ ಬುದ್ಧಿಯನ್ನು ನನಗೆ ಯಾರೊ ಕೊಡುತ್ತಿದ್ದರಲ್ಲವೆ? ನನಗೆ ಈ ಪ್ರೇರಣೆಯನ್ನುಂಟು ಮಾಡುವ ಶಕ್ತಿಯೇ ದೇವರು. ಆ ದೇವರೇ ನಿನ್ನ ಸತ್ವಪರೀಕ್ಷೆ ಮಾಡುತ್ತಿದ್ದಾನೆಂದು ನಂಬಿ ಧೈರ್ಯ ತಾಳು" ಎಂದೆ.

ನನ್ನ ಮಿತ್ರರೊಬ್ಬರ ಸಲಹೆಯಂತೆ ವಡ್ಡರ ಒಂದು ಸಹಕಾರಿ ಸಂಘಕ್ಕೆ ಮಾಣಿಕನನ್ನು ಕರೆದೊಯ್ದೆ. ಅಲ್ಲಿ ಎಲ್ಲರ ಮುಂದೆ ಮಾಣಿಕನನ್ನು ನಿಲ್ಲಿಸಿ ಅವನ ಕಥೆಯೆಲ್ಲವನ್ನೂ ನಿವೇದಿಸಿದೆ.

ಅಲ್ಲಿದ್ದವರಲ್ಲಿ ಒಬ್ಬ ಮುದುಕ ಎದ್ದು ಬಂದು ಮಾಣಿಕನ ಕೈಹಿಡಿದು ಕರೆದೊಯ್ದು ತನ್ನ ಬಳಿ ಕೂಡ್ರಿಸಿಕೊಂಡ. ನಾನು ೫೦ ರೂಪಾಯಿಗಳನ್ನು ಕೊಟ್ಟೆ. ಆ ಮುದುಕ ಗುಡಿಸಲು ಕಟ್ಟಲು ಒಂದು ಸ್ಥಳವನ್ನು ತೋರಿಸಿದ. "ರಾಯರೇ ನೀವಿನ್ನು ಕಾಳಜಿ ಮಾಡಬೇಡಿರಿ. ಮಾಣಿಕ ನಮ್ಮವನಾದ ಅವನ ಸುಖದುಃಖಗಳು ನಮ್ಮವು" ಎಂದು ಆ ಮುದುಕ ಆಶ್ವಾಸನೆಯಿತ್ತ.

ಮುಂದೆ ಒಂದು ತಿಂಗಳ ನಂತರ ಮಾಣಿಕ ನನಗೆ ಭೆಟ್ಟಿಯಾದಾಗಲೇ ಈ ಲೇಖದಲ್ಲಿ ಮೊದಲಿಗೆ ಹೇಳಿದ ಮಾತುಗಳು ಅವನ ಬಾಯಿಂದ ಬಂದವು.

*

ರೋಮಾಂಚಕಾರಿಯಾದ ಐತಿಹಾಸಿಕ ಕಥೆ

ರಾಣಾ ಕುಂಭನ ಖಡ್ಗ

ಆಚಾರ್ಯ ಚತುರಸೇನ



ಅಜೇಯವಾದ ಚಿತ್ತೂರ ದುರ್ಗ ಪತನವಾಗಿ ಹೋಗಿತ್ತು. ಮಹಾರಾಣಾ ಉದಯಸಿಂಹ ರೆಲ್ಲಿದ್ದಾರೆಂದು ತಿಳಿದಿರಲಿಲ್ಲ. ವೀರ ಜಯಮಲ್ಲ ಪತ್ತಾ ತನ್ನ ಪ್ರಾಣದ ಆಹುತಿಯನ್ನಿತ್ತಿದ್ದ. ಚಿತ್ತೂರ ದುರ್ಗವನ್ನು ವಶಪಡಿಸಿಕೊಂಡ ಸಮ್ರಾಟ ಅಕಬರನು ಅದನ್ನು ತನ್ನೊಬ್ಬ ಅಧಿಕಾರಿಗೆ ಒಪ್ಪಿಸಿ ಆಗ್ರಾಕ್ಕೆ ಮರಳಿ ಹೋಗಿದ್ದ. ಸುತ್ತಮುತ್ತಲಿನ ಎಲ್ಲ ಕೋಟೆಗಳನ್ನೂ ಜಯಿಸಿಕೊಂಡು ಅವುಗಳ ಅಧಿಪತಿಯಾದ ಮಹಾರಾಣಾ ಉದಯಸಿಂಹನ ಸರದಾರರನ್ನೆಲ್ಲ ವಶಪಡಿಸಿಕೊಳ್ಳಬೇಕು ಅಥವಾ ಯುದ್ಧದಲ್ಲಿ ಸೋಲಿಸಿ ಓಡಿಸಬೇಕು ಎಂದು ಅಕಬರ ತನ್ನ ಈ ಅಧಿಕಾರಿಗೆ ಆಜ್ಞಾಪಿಸಿದ್ದ. ಈ ಕಾರ್ಯಸಾಧನೆಗಾಗಿ ಅವನು ಅಧಿಕಾರಿಯ ವಶಕ್ಕೆ ದೊಡ್ಡದೊಂದು ಸೈನ್ಯವನ್ನೂ ಬಿಟ್ಟುಹೋಗಿದ್ದ.

ರಣಥಂಬೋರ ದುರ್ಗ ಅತ್ಯಂತ ಅಜೇಯವಾಗಿತ್ತು. ಅದೊಂದು ದುರ್ಗಮವಾದ ಪರ್ವತದ ಮೇಲೆ ನಿರ್ಭಯದಿಂದ ತಲೆಯೆತ್ತಿ ನಿಂತಿತ್ತು. ಮೈಲುಗಟ್ಟಲೆ ಆಸುಪಾಸಿನ ನೆಲದಲ್ಲಿ ಒಂದೆಡೆಯೂ ಅನುಕೂಲ ಸ್ಥಳವಿರಲಿಲ್ಲ. ಒಂದೇ ಒಂದು ಡೊಂಕು ಡೊಂಕಾಗಿ ಹರಿದು ಹೋಗಿದ್ದ ಒಂದು ಕಾಲುವೆಯ ಮೂಲಕ ಒಂದು ಭಯಾನಕ ರಸ್ತೆ ದುರ್ಗದ ವರೆಗೆ

ಹೋಗಿತ್ತು. ಆ ಕಾಲುವೆಯ ನಾಲ್ಕೂ ದಿಕ್ಕುಗಳಲ್ಲಿ ದುರ್ಗಮ ಅರಾವಲಿ ಪರ್ವತದ ಶಿಖರಗಳ ಶ್ರೇಣಿಗೆ ಶ್ರೇಣಿಯೆ ಇದ್ದಿತು.

ರಣಥಂಬೋರ ದುರ್ಗವನ್ನು ರಾವ ಸುರ್ಜನ ಹಾಡಾನ ವಿಧವಾ ಪತ್ನಿ ರಕ್ಷಿಸುತ್ತಿದ್ದಳು. ಅಕಬರನೊಡನಾದ ಯುದ್ಧದಲ್ಲಿ ಹಾಡಾ ಪುತ್ರ ಸಹಿತ ವೀರ ಸ್ವರ್ಗವನ್ನು ಸೇರಿದ್ದನು. ಕೋಟೆಯನ್ನು ಶತ್ರುಗಳು ಮುತ್ತಿದ್ದರು. ಸಿಂಹಿಣಿಯಂತೆ ಕೆರಳಿ ಕ್ರೋಧ ಸಂತಪ್ತಳಾದ ರಾಣಿ ಪತಿಪುತ್ರರ ಮರಣದ ಶೋಕವನ್ನು ನುಂಗಿಕೊಂಡು ದುರ್ಗವನ್ನು ರಕ್ಷಿಸುವ ಕಾರ್ಯದಲ್ಲಿ ಮಗ್ನಳಾಗಿದ್ದಳು. ಈ ಕಾಲದಲ್ಲಿ ಮೇವಾಡದಲ್ಲಿ ಎಲ್ಲಿ ನೋಡಿದಲ್ಲಿ ಮೊಗಲ ಸೈನಿಕರು ತುಂಬಿ ಹೋಗಿದ್ದರು. ಮಾಲವಶಾಹ ವಿಜಯದಲ್ಲಿ ಮಹಾರಾಣಾ ಕುಂಭನಿಗೆ ಕಾಣಿಕೆಯಾಗಿ ಸಿಕ್ಕಿದ್ದ ರತ್ನಖಚಿತ ಖಡ್ಗವನ್ನು ಈ ಕೋಟೆಯಲ್ಲಿ ಒಂದು ಪವಿತ್ರ ವಸ್ತುವೆಂಬಂತೆ ಇಟ್ಟಿದ್ದರು. ಸಿಂಹ ವಿಕ್ರಮಿಗಳಾದ ಸುರ್ಜನ ಹಾಡಾನ ಪೂರ್ವಜರು ನೂರಾರು ಸಲ ತಮ್ಮ ಪ್ರಾಣ ತೆತ್ತು ಈ ಖಡ್ಗವನ್ನು ರಕ್ಷಿಸಿಕೊಂಡಿದ್ದರು.

ಶತ್ರುಗಳ ಆಕ್ರಮಣ ಪುನಃ ಪುನಃ ನಡೆಯುತ್ತಲಿತ್ತು. ದುರ್ಗದ ಪರಿಸ್ಥಿತಿ ಗಂಭೀರವಾಗುತ್ತ ನಡೆದಿತ್ತು. ದುರ್ಗದೊಳಗಿನ ಆಹಾರ ಸಾಮಗ್ರಿ ಮತ್ತು ಯುದ್ಧ ಸಾಮಗ್ರಿ ಕಡಿಮೆಯಾಗುತ್ತಲಿತ್ತು. ಶತ್ರುಗಳು ಮುತ್ತಿಗೆಯೆಬ್ಬಿಸುವ ಲಕ್ಷಣವೇನೂ ಇರಲಿಲ್ಲ. ಕೋಟೆಯನ್ನು ಒಪ್ಪಿಸಲು ಮೊಗಲ ಸೇನಾಪತಿ ಕೇಳಿದ್ದ. ರಾಣಿ ನಿರಾಕರಿಸಿದ್ದಳು. ಯಾರ ಸಹಾಯ-ಆಧಾರಗಳಿಲ್ಲದೆ ಈ ಶೋಕವಿಹ್ವಲ ಅಸಹಾಯ ವೀರ ಬಾಲೆ ಪ್ರಬಲ ಪ್ರತಾಪಿ ಅಕಬರನನ್ನು ಎದುರಿಸಿ ನಿಲ್ಲಬೇಕಾಗಿತ್ತು.

ರಾಣಿ ದುರ್ಗದ ಪೂರ್ವದಿಕ್ಕಿನ ಬುರುಜಿನ ಕಿಡಕಿಯ ಬಳಿ ಮಲಿನವಸ್ತ್ರಧಾರಿಣಿಯಾಗಿ ಕುಳಿತು ಮೊಗಲರ ಮುಂದಲವನ್ನು ನೋಡುತ್ತಿದ್ದಳು. ಸೈನಿಕರ ಘೋಷಗಳ ಕೋಲಾಹಲ, ಕುದುರೆಗಳ ಹೇಷಾರವ, ಅಲ್ಲಲ್ಲಿ ಡೇರೆಗಳನ್ನು ಹಾಕುವ ಗದ್ದಲ ಇಷ್ಟು ದೂರ ಬಂದು ಅವಳ ಕಿವಿಗೆ ಬೀಳುತ್ತಿತ್ತು. ರಾಣಿಯ ಬಳಿ ಅವಳ ಮಗಳು ಕುಳಿತು ಯಾವನೊ ರಜಪೂತ ಯೋಧನ ಹರಿದ ಅಂಗಿಯನ್ನು ಹೊಲಿಯುತ್ತಿದ್ದಳು.

ರಾಣಿ ಮಗಳಿಗೆ ಹೇಳಿದಳು: "ಮಗಳೆ, ಇನ್ನು ಸಾಧ್ಯವಿಲ್ಲ. ನಾನಿನ್ನು ಒಂದು ಕ್ಷಣವೂ ಸಹಿಸಲಾರೆ. ನನಗೆ ನನ್ನ, ನಿನ್ನ ಅಥವಾ ಯಾವ ವೀರ ಪುರುಷ ಇಲ್ಲವೆ ಸ್ತ್ರೀಯ ಪರಿವೆಯಿಲ್ಲ. ನಾವೆಲ್ಲ ನಿಜ ರಜಪೂತರಂತೆ ಹಸಿವೆ, ಮೃತ್ಯುಗಳನ್ನು ಎದುರಿಸಬಲ್ಲೆವು. ಆದರೆ ನಮ್ಮೆಲ್ಲರ ಅಭಿಮಾನ ಧನವಾದ ಆ ಪವಿತ್ರ ಖಡ್ಗದ ಗತಿಯೇನಾದೀತು? ಅದನ್ನು ಹೇಗೆ ರಕ್ಷಿಸಬೇಕು? ವಿಜಯಿ ಮಹಾರಾಣಾ ಕುಂಭನ ಖಡ್ಗ, ಯಾವುದನ್ನು ಅವನು ಮಾಲವದ ಪ್ರತಾಪಿ ಸುಲ್ತಾನ ಮಹಮ್ಮೂದ ಶಾಹ ಖಿಲಜಯಿಂದ ಬಲಾತ್ಕಾರವಾಗಿ ಕಸಿದುಕೊಂಡಿದ್ದನೊ ಆ ಖಡ್ಗವನ್ನು ಹೇಗೆ ರಕ್ಷಣೆ ಮಾಡಿಕೊಳ್ಳಬೇಕು?" ರಾಣಿ ಮುಖವೆತ್ತಿ ದುರ್ಗದ ಒಂದು ಬುರುಜನ್ನು ದಿಟ್ಟಿಸಿ ನೋಡತೊಡಗಿದಳು. ಅವಳು ಅತ್ಯಂತ ಗಂಭೀರವಾದ ಮತ್ತು ಶೋಕಪೂರ್ಣವಾದ ವಿಚಾರದಲ್ಲಿ ಮುಳುಗಿ ಹೋದಳು.

ಹೊಲಿಯುವುದನ್ನು ನಿಲ್ಲಿಸಿ ಹುಡುಗಿ ಎದ್ದು ಬಂದು ತಾಯಿಯ ಮುಖಕ್ಕೆ ತನ್ನ ಮುಖವನ್ನಾನಿಸಿದಳು. ಬಾಲಿಕೆಯ ಮುಖ ಅತ್ಯಂತ ಸುಂದರವಾಗಿತ್ತು. ಆದರೆ ಹಸಿವು ವೇದನೆಗಳಿಂದ ಅದು ಬಾಡಿದ ಗುಲಾಬಿ ಹೂವಿನ ಎಸಳಂತೆ ಕಾಂತಿಹೀನವಾಗಿತ್ತು. ಕಣ್ಣುಗಳ ಹೊಳಪೆಲ್ಲ ಕರಗಿ ಹೋಗಿತ್ತು. ಅವಳು ಕರುಣ ಕಂಪಿತ ಸ್ವರದಲ್ಲಿ "ಅಮ್ಮಾ, ನಾವು ನಲವತ್ತು ಮಂದಿಯೂ ಇಲ್ಲ. ಮತ್ತೆ ಹಸಿವೆಯಿಂದ ಅರ್ಧಜೀವವಾಗಿ ಹೋಗಿದ್ದೇವೆ. ಅಯ್ಯೋ! ನಮಗಿಂದು ಒಂದು ರೊಟ್ಟಿಯ ತುಣುಕೂ ದುರ್ಲಭವಾಗಿದೆ" ಎಂದಳು.

ಹುಡುಗಿ ಒಮ್ಮೆ ಬಿಕ್ಕಿ ಅಳು ನುಂಗಿ ತಾಯಿಗೆ

ತೆಕ್ಕೆ ಬಿದ್ದಳು. ರಾಣಿ ಗಂಭೀರ ಸ್ವರದಲ್ಲಿ ಹೇಳಿದಳು: "ಮಗು, ಧೈರ್ಯ ಹಿಡಿ, ಇದು ಹಸಿವು ಮೃತ್ಯುಗಳ ವಿಚಾರವನ್ನು ಚರ್ಚಿಸುವ ಸಮಯವಲ್ಲ. ನಮ್ಮ ಕುಲದ ಪ್ರತಿಷ್ಠೆಯ ಪ್ರತೀಕವಾಗಿರುವ ಖಡ್ಗದ ರಕ್ಷಣೆಯ ವಿಚಾರವನ್ನು ನಾವೀಗ ಮಾಡಬೇಕಾಗಿದೆ."

ಬಾಲಿಕೆಯ ತಲೆಯಲ್ಲಿ ಒಮ್ಮಿಂದೊಮ್ಮೆ ಯಾವುದೊ ವಿಚಾರ ಹೊಳೆಯಿತು. ಅವಳು ತನ್ನೆರಡು ಕೈಗಳಿಂದ ತಾಯಿಯ ಮುಖವನ್ನು ಹಿಡಿದು ತನ್ನತ್ತ ತಿರುಗಿಸಿಕೊಂಡಳು. ಕ್ಷಣಕಾಲ ತಾಯಿ ಮಗಳ ಕಣ್ಣುಗಳು ಪರಸ್ಪರ ದಿಟ್ಟಿಸಿ ನೋಡಿದವು. ಮಗಳ ಅರ್ಥಪೂರ್ಣ ದೃಷ್ಟಿ ಹಾಗೂ ಕಂಪಿಸುವ ತುಟಿಗಳನ್ನು ಕಂಡು ರಾಣಿ ಕೇಳಿದಳು: "ಏನು ಯೋಚಿಸುತ್ತಿರುವೆ ಮಗು ?"

"ಅಮ್ಮಾ, ಖಡ್ಗವನ್ನು ರಕ್ಷಿಸುವ ಉಪಾಯವನ್ನು ಕಂಡು ಹಿಡಿದಿದ್ದೇನೆ. ನನಗೆ ಈ ಸಾಹಸ ಮಾಡಲು ಅವಕಾಶ ಕೊಡು" ಎಂದವಳು ಬಾಗಿ ತಾಯಿಯ ಕಿವಿಯಲ್ಲಿ ಏನೊ ಉಸುರಿದಳು. ರಾಣಿ ಒಪ್ಪಲಿಲ್ಲ ಆದರೆ ಕೊನೆಗೆ ಮಗಳ ಹಟಕ್ಕೆ ತಲೆವಾಗಿ 'ಹೂಂ' ಎಂದಳು.

ಭೀಕರ ರಾತ್ರಿ. ಆಕಾಶದಲ್ಲಿ ಮೋಡಗಳು ಮುಸುಕಿದ್ದವು. ಕೋಟೆಯ ಮುಂಭಾಗದ ಬುರುಜಿನ ಮೇಲೆ ನಾಲ್ವರು ಒಬ್ಬರಿಗೊಬ್ಬರು ಹತ್ತಿಕೊಂಡು ನಿಂತಿದ್ದರು.

"ಮಗೂ, ನಾವಿನ್ನು ಪುನಃ ಭೆಟ್ಟಿಯಾಗುವುದಿಲ್ಲ." ರಾಣಿ ಹೇಳಿದಳು.

ಅದಕ್ಕೆ ಮಗಳು "ಇಲ್ಲ ಅಮ್ಮಾ, ನಾವು ಪುನಃ ಸುಖ ಮತ್ತು ಆನಂದಗಳ ಅಕ್ಷಯ ಸ್ಥಾನವಾದ ಸ್ವರ್ಗದಲ್ಲಿ ಬೇಗನೆ ಭೆಟ್ಟಿಯಾಗುವೆವು" ಎಂದುತ್ತರವಿತ್ತು ದುರ್ಗದ ಕೆಳಗಿಳಿಯಲು ಸಹಾಯಕವಾಗಲೆಂದು ಕಟ್ಟಿದ ಹಗ್ಗವನ್ನು ತನ್ನ ಕೋಮಲ ಕರಗಳಲ್ಲಿ ಹಿಡಿದುಕೊಂಡಳು. ಒಬ್ಬ ವೃದ್ಧ ಯೋಧ "ಪ್ರಣಾಮಗಳು ರಾಜಕುಮಾರಿ ಕುಲದ ಪ್ರತಿಷ್ಠೆ ನಿನ್ನ ಕೈಯಲ್ಲಿದೆ" ಎಂದು ಕಂಪಿತ ಸ್ವರದಲ್ಲಿ ನುಡಿದ. ಬಾಲಿಕೆ ಸಾಹಸದಿಂದ ಹಗ್ಗದಿಂದ ಕೆಳಗೆ ಜಾರತೊಡಗಿ ಅಂಧಕಾರದಲ್ಲಿ ಲೀನವಾಗಿ ಹೋದಳು.

ಮರುದಿನ ಪ್ರಾತಃಕಾಲದಲ್ಲಿ ಧೂಳು ಕೆಸರಿನಿಂದ ಮೆತ್ತಿಹೋದ, ಹರಕು ವಸ್ತ್ರ ಧರಿಸಿದ ಬಾಲಕನೊಬ್ಬ ತಲೆಯ ಮೇಲೆ ದೊಡ್ಡದೊಂದು ಹುಲ್ಲಿನ ಹೊರೆ ಹೊತ್ತುಕೊಂಡು ನಡುಗುವ ಹೆಜ್ಜೆಗಳಿಂದ ಮೊಗಲರ ಶಿಬಿರವನ್ನು ಪ್ರವೇಶಿಸಿದನು. ಪ್ರಹರಿಯೊಬ್ಬ "ಯಾರವರು ಕಾಫರ, ಎಲ್ಲಿ ಹೋಗುವಿ?" ಎಂದು ಗುಡುಗಿದ.

"ಸರದಾರ ಮುಹಮ್ಮದ ಇಬ್ರಾಹಿಮರ ನೌಕರ ನಾನು. ಅವರ ಕುದುರೆಗಾಗಿ ಹುಲ್ಲನ್ನು ಒಯ್ಯುತ್ತಿದ್ದೇನೆ." ಹುಡುಗ ಹೇಳಿದ.

ಆ ಅನಂತ ಸೇನೆಯ ಲಕ್ಷಗಟ್ಟಲೆ ಜನರಲ್ಲಿ ಈ ಇಬ್ರಾಹಿಮ ಯಾರೊ ಆ ಕಾವಲುಗಾರನೇನು ಬಲ್ಲ? ಆತ "ಹೋಗು ಹಾಳಾಗು" ಎಂದ.

ಯವನ ಸೈನ್ಯ ಮಲಗಿ ನಿದ್ರಿಸುತ್ತಿತ್ತು. ತೀರ ಸ್ವಲ್ಪ ಜನ ಮಾತ್ರ ಎಚ್ಚತ್ತಿದ್ದರು. ಬಾಲಕನನ್ನು ಕಾವಲುಗಾರರು ಇನ್ನೂ ಒಂದೆರಡು ಕಡೆ ತಡೆದರು. ಅಲ್ಲಿ ಕೂಡ ಆತ ಅದೇ ಉತ್ತರ ಹೇಳಿ ಪಾರಾಗಿ ಮೊಗಲ ಸೈನ್ಯದ ನಡುವೆ ದಾರಿ ಮಾಡಿಕೊಂಡು ನಡೆದ. ಒಂದು ಚೌಕಿಯಲ್ಲಿ ಸೈನಿಕನೊಬ್ಬ ಅವನನ್ನು ಬೆದರಿಸಿ "ಏ, ಹುಲ್ಲು ಇಲ್ಲಿ ತೆಗೆದುಕೊಂಡು ಬಾ" ಎಂದ.

"ತರುತ್ತೇನೆ ಸರಕಾರ"

"ರೊಕ್ಕ ಎಷ್ಟು?"

"ಬಹಳ ಬಡವ ನಾನು. ನಿಮಗೆ ತಿಳಿದಷ್ಟು ಕೊಡಿ" ಎಂದು ಹುಡುಗ ಸೈನಿಕನೆದುರು ಹುಲ್ಲಿನ ಹೊರೆ ಚೆಲ್ಲಿದ. ಅದರ ಹಗ್ಗ ಬಿಚ್ಚಿದ. ಕತ್ತಿ ಮತ್ತು ಹಗ್ಗವನ್ನು ಸುತ್ತಿ ಕೈಲಿ ಹಿಡಿದುಕೊಂಡ. ಆ ಮೇಲೆ ತೀರ ದಣಿದವನಂತೆ ಅಲ್ಲಿಯೆ ಕುಳಿತ. ಸೈನಿಕ ಒಂದಿಷ್ಟು ಮೆತ್ತಗಾಗಿ "ಮನೆಯಿಂದ ಇಷ್ಟು ಬೇಗ ಏಕೆ ಬಂದೆ?" ಎಂದು ಕೇಳಿದ.

"ಹಸಿದು ಕಂಗಾಲಾಗಿದ್ದೇನೆ. ಹೊಟ್ಟೆ ಎಲ್ಲವನ್ನೂ ಮಾಡಿಸುತ್ತದೆ ಸರಕಾರ್."

"ನೌಕರಿ ಮಾಡುತ್ತೀಯಾ?"

"ಮಾಡುತ್ತೇನೆ. ಆದರೆ ನನ್ನ ಮುದಿತಾಯಿ ಮೂರು ದಿನಗಳಿಂದ ಹಸಿವಿನ ಬೇನೆಯಿಂದ ಮಲಗಿದ್ದಾಳೆ. ಅವಳಿಗೆ ಒಂದಿಷ್ಟು ಊಟ..."

"ತಗೊ" ಸೈನಿಕ ಒಂದಿಷ್ಟು ರೊಕ್ಕ ಅವನತ್ತ ಎಸೆದು "ನನ್ನ ಹೆಸರು ತಾಜರಖಾನ್ ಎಂದು. ನೌಕರಿ ಮಾಡುವದಿದ್ದರೆ ಇಲ್ಲಿಗೆ ಬಾ" ಎಂದ.

"ಒಳ್ಳೇದು ಸರಕಾರ್. ಆದರೆ ಯಾರಾದರೂ ನನ್ನನ್ನು ತಡೆದರೆ..."

ಸೈನಿಕ ಒಂದು ಆಜ್ಞಾಪತ್ರ ಬರೆದು ಅವನ ಕೈಗೆ ಕೊಟ್ಟು "ಯಾರಾದರೂ ತಡೆದರೆ ಇದನ್ನು ತೋರಿಸು" ಎಂದ.

ಬಾಲಕ ಅವನಿಗೆ ಸಲಾಮು ಮಾಡಿ ಮುಂದೆ ನಡೆದ. ಶಿಬಿರ ಕೊನೆಗೊಳ್ಳುವಲ್ಲಿ ಕಾವಲುಗಾರ ಅವನನ್ನು ತಡೆದ. ಆದರೆ ಆಜ್ಞಾಪತ್ರವನ್ನು ಕಂಡಾಗ ಅವನನ್ನು ಬಿಟ್ಟ.

ಬಾಲಕ ನಿರ್ವಿಘ್ನವಾಗಿ ಯವನ ಶಿಬಿರದಿಂದಾಚೆ ನಡೆದ. ಆತ ಬಹುದೂರ ನಡೆದ. ಆ ಮೇಲೆ ಎತ್ತರವಾದ ಪರ್ವತವನ್ನೇರಿ ಅಲ್ಲಿ ಒಣಗಿದ ಕಟ್ಟಿಗೆ ತುಂಡುಗಳನ್ನು ರಾಶಿ ಹಾಕಿ ಬೆಂಕಿ ಹಚ್ಚಿದ.

ದುರ್ಗದಲ್ಲಿ ಆ ಉರಿಯನ್ನು ಕಂಡ ರಾಣಿ "ಮಗಳು ಸುರಕ್ಷಿತವಾಗಿ ಯವನ ಶಿಬಿರವನ್ನು ದಾಟಿ ಹೋಗಿದ್ದಾಳೆ. ಇನ್ನು ವಿಲಂಬ ಮಾಡಿ ಪ್ರಯೋಜನವಿಲ್ಲ. ಠಾಕೂರ್, ನೀವೆಷ್ಟು ಜನ ಇದ್ದೀರಿ?" ಎಂದಳು.

"ಒಟ್ಟು ಮುವತ್ತಾರು ಜನ ಮಹಾರಾಣಿ."

"ಎಲ್ಲರನ್ನೂ ನೌಕರಿಯಿಂದ ಮುಕ್ತ ಮಾಡಿದ್ದೇನೆ. ಹಾಗೆ ಬಯಸುವವರು ಹೋಗಿ ಮೊಗಲ ಸೇನಾಪತಿಗೆ ಶರಣಾಗತರಾಗಬಹುದು."

"ಮಾತೆ, ಕೇಸರಿ ಬಟ್ಟೆಗಳನ್ನು ತೊಟ್ಟು ನಾವು ಆತ್ಮಾರ್ಪಣೆ ಮಾಡುವೆವು."

"ಪ್ರಾಣವಿರುವ ವರೆಗೂ ಮರ್ಯಾದೆಯ ರಕ್ಷಣೆಯಾಗಬೇಕು ಠಾಕೂರ್."

"ಹಾಗೇ ಆಗಲಿ ಮಹಾರಾಣಿ."

ಕೇಸರಿ ಬಣ್ಣದ ದೊಡ್ಡ ಕಡಾಯಿ ಸಿದ್ಧವಾಗಿತ್ತು. ಪ್ರತಿಯೊಬ್ಬ ಯೋದ್ಧನೂ ಅದರಲ್ಲಿ ತನ್ನ ಬಟ್ಟೆಗಳನ್ನು ಅದ್ದಿ ತೊಟ್ಟುಕೊಂಡ.

"ನೀವೆಲ್ಲ ಸಿದ್ಧರಾಗಿರುವಿರಿ ತಾನೆ?" ರಾಣಿ ಕೇಳಿದಳು.

"ಹೌದು ತಾಯಿ."

"ನಾವು ನಮ್ಮ ಕಾರ್ಯವನ್ನು ಮುಗಿಸಿದೊಡನೆ ನೀವು ದುರ್ಗದ ಬಾಗಿಲು ತೆರೆದು ಶತ್ರುಗಳ ಮೇಲೆ ಮುಗಿ ಬೀಳಬೇಕು."

"ಮಹದಾಜ್ಞೆ"

"ನಿಮ್ಮ ದೇಹದಲ್ಲಿ ಜೀವವಿರುವವರೆಗೂ ಶತ್ರುಗಳು ದುರ್ಗದ ಬಾಗಿಲನ್ನು ಮುಟ್ಟಲೂ ಬಿಡಕೂಡದು."

"ಮಹದಾಜ್ಞೆ."

"ನೀವೆಷ್ಟು ಜನ ಇದ್ದೀರಿ."

"ಮುವತ್ತಾರು ಮಹಾರಾಣಿ."

"ಮುವತ್ತಾರಲ್ಲ, ಮುವತ್ತಾರು ಸಹಸ್ರ ಜನರಿದ್ದೀರಿ ನೀವು." ಎಂದಂದು ಮಹಾರಾಣಿ ಅರಮನೆಗೆ ತೆರಳಿದಳು.

"ಜಯ ರಾಣಿ ಮಾತೆಗೆ ಜಯ" ಮುವತ್ತಾರು ಕಂಠಗಳು ಒಮ್ಮೆಲೆ ಗರ್ಜಿಸಿದವು.

ಪ್ರತಿಯೊಬ್ಬ ವೀರನೂ ಹಿರಿದ ಖಡ್ಗವನ್ನು ಹಿಡಿದು ದೃಢನಿಶ್ಚಯದಿಂದ ನಿಂತಿದ್ದ. ಅಂತಃಪುರದಲ್ಲಿ ಒಮ್ಮೆಗೆ ಭೀಕರ ಸಪ್ಪಳವಾಗಿ ಬೆಂಕಿಯ ಜ್ವಾಲೆ ಆಕಾಶದತ್ತ ನೆಗೆಯತೊಡಗಿತು. ಯವನ ಶಿಬಿರದಲ್ಲಿ ಕೋಲಾಹಲವೆದ್ದಿತು. ಖಡ್ಗಧಾರಿಗಳಾದ ಆ ಮುವತ್ತಾರು ವೀರರು ಮುನ್ನಡೆದು ದುರ್ಗದ ಬಾಗಿಲನ್ನು ತೆರೆದರು. ಅವರೆಲ್ಲ ಹಸಿವಿನಿಂದ ಮರಣದಅಂಚಿನಲ್ಲಿದ್ದರು. ಅವರ ಕಣ್ಣುಗಳು ಗುಳಿ ಬಿದ್ದಿದ್ದವು. ಆದರೂ ಅವರೆಲ್ಲ ಉಕ್ಕಿನ ಪುರುಷರಂತೆ ದೃಢರಾಗಿ ನಿಂತಿದ್ದರು. ಅವರ ಕರ್ತವ್ಯ ಈಡೇರಿತ್ತು. ನೋಡನೋಡುವಷ್ಟರಲ್ಲಿ ಅವರು ಶತ್ರುಖಡ್ಗಗಳಿ

ಗಾಹುತಿಯಾದರು.

ಹುಡುಗನ ಕಾಲು ರಕ್ತಮಯವಾಗಿದ್ದವು. ಆತ ಬೀಳುತ್ತೇಳುತ್ತ ನಡೆದಿದ್ದ. ಭೂಮಿ ಕಾದ ಹಂಚಿನಂತೆ ಸುಡುತ್ತಿತ್ತು. ಆತ ಹಸಿವು-ನೀರಡಿಕೆಗಳಿಂದ ಅರ್ಧಮೃತನಂತಾಗಿದ್ದ. ಅವನ ವಸ್ತ್ರಗಳೆಲ್ಲ ಚಿಂದಿಯಾಗಿಬಿಟ್ಟಿದ್ದವು. ಅವುಗಳಲ್ಲಿ ಮುಳ್ಳುಗಳು ನಟ್ಟಿದ್ದವು. ಹುಡುಗ ಅಮಾನುಷ ಸಾಹಸದಿಂದ ದುರ್ಗಮವಾದ ಗುಡ್ಡದ ಹಾದಿಯನ್ನು ಕ್ರಮಿಸುತ್ತಿದ್ದ. ಎದುರಿನ ಗುಡ್ಡದ ಮೇಲೆ ಕಾಣುತ್ತಿದ್ದ ದಿನ್ನೆಯತ್ತ ಅವನ ಗಮನವಿತ್ತು.

ಆ ಗುಡ್ಡದ ಮೇಲೆ ಧನುರ್ಧಾರಿಯಾಗಿ ನಿಂತಿದ್ದ ಭಿಲ್ಲನೊಬ್ಬ ಇತ್ತ ಕಡೆಗೇ ನೋಡುತ್ತಿದ್ದ. ಆತ ಕೂಗಿದ "ಅಲ್ಲೆ ನಿಲ್ಲು. ಇಲ್ಲಿ ಬರಬೇಕಾದ ಕೆಲಸವೇನಿದೆ?" ಆತ ಬಿಲ್ಲಿಗೆ ಬಾಣ ಹೂಡಿದ. ಹುಡುಗ ಕೈ ಸನ್ನೆಯಿಂದ ಅವನನ್ನು ತಡೆದು ತನ್ನೆಲ್ಲ ಶಕ್ತಿಯನ್ನು ಕೂಡಿಸಿಕೊಂಡು "ರಾಣಾಜಿ" ಎಂದು ಕೂಗಿ ನಿಂತಲ್ಲಿಯೆ ಮೂರ್ಛೆ ಬಂದು ಬಿದ್ದು ಬಿಟ್ಟ.

ಮರುಕ್ಷಣದಲ್ಲಿ ಗುಡಿಸಲೊಂದರಿಂದ ಒಬ್ಬ ಬಲಿಷ್ಠಪುರುಷ ಹೊರಬಿದ್ದು ಬಂದ. ಅವನು ಖಡ್ಗಧಾರಿಯಾಗಿದ್ದ. ಆತ ಮತ್ತು ಆ ಭಿಲ್ಲ ಇಬ್ಬರೂ ಕೆಳಗಿಳಿದು ಬಂದು ಬಾಲಕನನ್ನೆತ್ತಿದರು. ಹುಡುಗ ನೀರು ಬೇಕೆಂದು ಸಂಜ್ಞೆ ಮಾಡಿದ. ರಾಣಾ ಅವನ ಅಂಗೈಯನ್ನೆತ್ತಿ ನೋಡಿದಾಗ ಆತ ಹುಡುಗನಲ್ಲ, ಹುಡುಗಿ ಎಂದು ತಿಳಿಯಿತು. ಅವಳ ಎದೆಯ ಬಳಿ ಮಹಾರಾಣಾ ಕುಂಭನ ಖಡ್ಗ ತೂಗುತ್ತಿತ್ತು.

ಹುಡುಗಿ ಭಗ್ನ ಸ್ವರದಲ್ಲಿ ಹೇಳಿದಳು: "ಮಹಾರಾಣಾರಿಗೆ ಜಯವಾಗಲಿ. ನಾನು ರಣಥಂಬೋರ ದುರ್ಗದ ಅಧಿಪತಿ ಸುರ್ಜನ ಹಾಡಾನ ಮಗಳು. ಚಿತ್ತೂರಿನ ಪತನದ ನಂತರ ನಮ್ಮ ಕೋಟೆಗೂ ಮುತ್ತಿಗೆ ಬಿತ್ತು. ಅಪ್ಪ ಮತ್ತು ಅಣ್ಣ ಯುದ್ಧದಲ್ಲಿ ಮಡಿದರು. ನಾವೇನೊ ಕಲಿತನದಿಂದ ಕಾದಿದರೂ ಅನ್ನಾಭಾವದಿಂದ ಸಾಯತೊಡಗಿದೆವು. ಕೊನೆಗೂ ನಮ್ಮ ಪ್ರಿಯ ರಣ ಥಂಬೋರ..." ಹುಡುಗಿಯ ಮಾತುಗಳು ನಿಂತು ಹೋದವು. ಅವಳ ತುಟಿ ಕಂಪಿಸಿ ತೆರೆದು ನಿಂತಿತು. ಅವಳ ಪ್ರಾಣ ಹಾರಿ ಹೋಯಿತು. ರಾಣಾನ ಕೈಲಿನ ಖಡ್ಗ ಕಳಚಿ ಬಿತ್ತು.

ಬಾಲಿಕೆಯ ನಿರ್ಜೀವ ದೇಹವನ್ನೆತ್ತಿ ಎದೆಗವಚಿಕೊಂಡು ರಾಣಾ ಮಕ್ಕಳಂತೆ ಅಳತೊಡಗಿದರು. *

ದೊಡ್ಡವರ ಬರವಣಿಗೆಯಲ್ಲಿ ವೈವಿಧ್ಯ

ಅಲೆಕ್ಸಾಂಡರ್ ಡ್ಯೂಮಾ ಅವರು ಕಾದಂಬರಿಯನ್ನು ನೀಲಿ ಬಣ್ಣದ ಕಾಗದದ ಹಾಳೆಗಳಲ್ಲೂ ಕವಿತೆಗಳನ್ನು ಹಳದಿ ಬಣ್ಣದ ಕಾಗದದ ಮೇಲೂ ಇತರ ಬೇರೆ ರಚನೆಗಳನ್ನು ಗುಲಾಬಿಬಣ್ಣದ ಕಾಗದದಲ್ಲೂ ಬರೆಯುತ್ತಿದ್ದರು.

*

ಸೀಟವೇಲರಿಗೆ ಬಿಳಿ ಕಾಗದದ ಹಾಳೆಗಳೆಂದರೆ ಆಗುತ್ತಿರಲಿಲ್ಲ. ಅವರು ಕೇವಲ ನೀಲಿ ಬಣ್ಣದ ಕಾಗದದಲ್ಲಿ ಬರೆಯುತ್ತಿದ್ದರು.

*

ಜಿ. ಕೆ. ಚೆಸ್ಟರ್‌ಟನರು ಪೋಸ್ಟ್‌ಕಾರ್ಡಿನ ಆಕಾರದ ಕಾಗದದಲ್ಲಿ ಮಾತ್ರ ಬರೆಯುತ್ತಿದ್ದರು. ದೊಡ್ಡ ಕಾಗದದಲ್ಲಿ ಬರೆಯಲು ಅವರಿಗೇನೋ ಒಂದು ರೀತಿಯ ಭಯವಾಗುತ್ತಿತ್ತು.

—ಸಂಗ್ರಹ: ನಾಗೇಶರಾವ, ಉಡುಪಿ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಅನುಜೀವಿ
(ಅ) ತಂಗಿ (ಆ) ಆಶ್ರಿತ (ಇ) ಚಿಕ್ಕ ಪ್ರಾಣಿ (ಈ) ಕಣ

೨. ಅನುಪೂರ್ವಿ
(ಅ) ಪೂರ್ವದಿಕ್ಕು (ಆ) ಬೆಂಬಲ (ಇ) ವರಸೆ (ಈ) ಕಾಲಿಗಿಡುವ ಆಭರಣ

೩. ಅನುಪಪನ್ನ
(ಅ) ಅಸಂಬದ್ಧ (ಆ) ಕಾಣಿಸದ (ಇ) ಸರಿಯಾದ (ಈ) ಅಪರೂಪ

೪. ಅನುಲೋಮ
(ಅ) ಸಹಜ ವರಸೆ (ಆ) ಸಿಂಗರಿಸಿದ (ಇ) ಯಜ್ಞ (ಈ) ತೀಡುವಿಕೆ

೫. ಪ್ರತಿಲೋಮ
(ಅ) ನೆರಳು (ಆ) ಪ್ರತಿಬಿಂಬ (ಇ) ಎಣಿಕೆ (ಈ) ವಿರುದ್ಧ ವರಸೆ

೬. ವಿಕಿರಣ
(ಅ) ಬೆಳಕು (ಆ) ಕತ್ತಲೆ (ಇ) ಚದರುವಿಕೆ (ಈ) ಅಸಹ್ಯ

೭. ಕಿಸುರು
(ಅ) ಕೋಪ (ಆ) ಅಸಹ್ಯಸ್ಥಿತಿ (ಇ) ಕುದುರೆಯ ಕೂಗು (ಈ) ಕೆರೆಯುವಿಕೆ

೮. ಭೂಯಿಷ್ಠ
(ಅ) ಹುಗಿದ (ಆ) ತಲೆತಪ್ಪಿಸಿಕೊಂಡ (ಇ) ಬಹಳ ಹೆಚ್ಚು (ಈ) ಒಳ್ಳೇ ನೆಲ

೯. ಶಲ್ಯ
(ಅ) ಅಕ್ಕಿ (ಆ) ಗೂಟ (ಇ) ಶಾಲೆಗೆ ಹೋಗುವ (ಈ) ಜೇಡ

೧೦. ಪ್ರೇಯಸ್ಸು
(ಅ) ವಯಸ್ಸು (ಆ) ಪೂಜೆ (ಇ) ಕಳಿಸಲ್ಪಟ್ಟವ (ಈ) ಇಷ್ಟವಾದುದು

೧೧. ಸಂಕಲಿತ
(ಅ) ಕಳೆದ (ಆ) ಜಾರಿದ (ಇ) ದುಃಖಿತ (ಈ) ಕೂಡಿಸಿದ

೧೨. ಓಜಸ್ಸು
(ಅ) ಸತ್ವ (ಆ) ಗುರುಸೇವೆ (ಇ) ಕುದುರೆ (ಈ) ಸ್ವಾರಸ್ಯ



‘ ಶಬ್ದಭಾಂಡಾರ ’ ದ ಸರಿಯಾದ ಅರ್ಥಗಳು

೧. ಅನುಜೀವಿ (ಆ) ಆಶ್ರಿತ, ಇನ್ನೊಬ್ಬರನ್ನು ಅವಲಂಬಿಸಿ ಬದುಕುವವ, ಹೊಂದಿದವ, ಹಿಂಬಾಲಕ. [ಸಂ. ಅನು = ಅನುಸರಿಸಿ, ಜೀವಿ = ಬದುಕುವವ]

೨. ಆನುಪೂರ್ವಿ (ಇ) ವರಸೆ, ಕ್ರಮ, ಒಂದರ ನಂತರ ಒಂದು ಬರುವ ವ್ಯವಸ್ಥೆ. ಉದಾ— ಒಂದು ಆನುಪೂರ್ವಿಗನುಸಾರವಾಗಿ ಯೋಜನೆಗಳನ್ನು ಕೈಕೊಳ್ಳಬೇಕು. ಅಂದರೆ ಮೊದಲಾಗಬೇಕಾದ್ದು ಮೊದಲು ಅನಂತರದ್ದು ಅನಂತರ ಹೀಗೆ ಕೈಕೊಳ್ಳಬೇಕು. [ಸಂ ಅನು=ಹೊಂದಿ, ಪೂರ್ವಿ = ಮೊದಲಿನದು]

೩. ಅನುಪಪನ್ನ (ಅ) ಅಸಂಬದ್ಧ, ಅಯೋಗ್ಯ, ಅನುಚಿತ, ಪ್ರಸಂಗಕ್ಕೆ ಹೊಂದಿಕೆಯಾಗದ, ಅಸಂಪೂರ್ಣ, ಅಸಾಧ್ಯ. [ಸಂ ಅನ್ = ಅಲ್ಲ, ಉಪಪನ್ನ = ಹತ್ತಿರಬಂದ.]

೪. ಅನುಲೋಮ (ಅ) ಸಹಜವರಸೆ, (ಕೂದಲುಗಳ ಹಾಗೆ ಮೇಲಿಂದ ಕೆಳಗೆ ಸಾಗುವ ವರಸೆ. ಉದಾ— ಅನುಲೋಮವಿವಾಹ ಅಂದರೆ ಮೇಲ್ಜಾತಿಯುವನು ಕೆಳ ಜಾತಿಯುವಳನ್ನು ಮದುವೆಯಾಗುವುದು. [ಸಂ. ಅನು = ಅನುಸರಿಸಿ, ಲೋಮ = ಕೂದಲು]

೫. ಪ್ರತಿಲೋಮ (ಈ) ವಿರುದ್ಧವರಸೆ, ಹಿಂದಿನಿಂದ ಎಣಿಸಿಕೊಂಡು ಬರುವಿಕೆ. ಕೆಳಗಿಂದ ಮೇಲೆ ಸಾಗುವ ವರಸೆ. ಉದಾ— ಪ್ರತಿಲೋಮ ವಿವಾಹ ಅಂದರೆ ಕೆಳಜಾತಿಯುವನು ಮೇಲ್ಜಾತಿಯುವಳನ್ನು ಮದುವೆಯಾಗುವುದು. [ಸಂ. ಪ್ರತಿ = ವಿರುದ್ಧ, ಲೋಮ= ಕೂದಲು]

೬. ವಿಕಿರಣ (ಇ) ಚದುರುವಿಕೆ, ಚೆಲ್ಲುವಿಕೆ, ಚಲ್ಲಾಪಲ್ಲಿಯಾಗುವುದು. ಪರಮಾಣು ವಿಕಿರಣ ಅಂದರೆ ಪರಮಾಣುವಿನ ಕಣಗಳು ಚದರುವುದು. [ಸಂ. ವಿ=ವಿಶೇಷವಾಗಿ, ಕಿರಣ = ಚದರುವುದು.]

೭. ಕಿಸುರು (ಆ) ಅಸಹ್ಯ ಸ್ಥಿತಿ, ಅಸಹ್ಯಭಾವನೆ, ಜುಗುಪ್ಸೆ; ಜಗಳ, ವಿರೋಧ; ಕೇಡು ದೃಷ್ಟಿ. [ಕನ್ನಡ]

೮. ಭೂಯಿಷ್ಠ (ಇ) ಬಹಳ ಹೆಚ್ಚು, ಅತಿಶಯ, ಶ್ರೇಷ್ಠತಮ; ಹೆಚ್ಚಾಗಿರುವ. ಉದಾ— ಸಜ್ಜನ ಭೂಯಿಷ್ಠವಾದ ಸಭೆ ಎಂದರೆ ಸಭೆಯಲ್ಲಿ ಸಜ್ಜನರೇ ಹೆಚ್ಚಾಗಿದ್ದರು. [ಸಂ.]

೯. ಶಲ್ಯ (ಆ) ಗೂಟ, ಸಲಾಕೆ, ಸರಳು, ಸೂಜಿ, ಮುಳ್ಳು, (ತುದಿ ಚೂಪಾಗಿದ್ದು ನಡಲು ಬರುವ ವಸ್ತು) ಉದಾ- ಅದು ಶಲ್ಯದಂತೆ ಎದೆಯಲ್ಲಿ ನಟ್ಟಿತು. [ಸಂ.]

೧೦. ಶ್ರೇಯಸ್ಸು (ಈ) ಇಷ್ಟವಾದದು, ಇಷ್ಟಾರ್ಥಪ್ರಿಯವಾದದ್ದು ವಿಶೇಷವಾಗಿ ಇಹಲೋಕದಲ್ಲಿ ಹಿತ ಮಾಡುವಂಥದು. [ಸಂ.]

೧೧. ಸಂಕಲಿತ (ಈ) ಕೂಡಿಸಿದ, ಕಲೆಹಾಕಿದ, ಶೇಖರಿಸಿದ. [ಸಂ.]

೧೨. ಓಜಸ್ಸು (ಅ) ಸತ್ವ, ಬಲ, ಶಕ್ತಿ; ಉತ್ತೇಜನೆ; ಪ್ರಭೆ; ಉದಾ— ಅವನ ಶೈಲಿಯಲ್ಲಿ ಓಜಸ್ಸು ಇದೆ ಅಂದರೆ ಅದರಲ್ಲಿ ಸತ್ವವುಂಟು. [ಸಂ. ಓಜಸ್]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	....	ಸಾಧಾರಣ
೯—೧೦	,,	....	ಉತ್ತಮ
೧೧—೧೨	,,	...	ಅತ್ಯುತ್ತಮ

ಜೀವಂತ ಪ್ರಾಣಿಗಳನ್ನು ಮಾರುವ ಈ ಅಂಗಡಿಯಲ್ಲಿ

ಬೇಕಾದ ಪ್ರಾಣಿ ಸಿಗುತ್ತದೆ!

ಎಂ. ವಿ. ನಾಗರಾಜ್

ಲಂಡನ್ನಿನಲ್ಲಿ ಜನಪ್ರಿಯವಾದ ಅಪೂರ್ವ ವರ್ಗದ ಅಂಗಡಿಯೊಂದಿದೆ. ಅದರಲ್ಲಿ ವಿವಿಧ ದೇಶಗಳ ವಿಭಿನ್ನ ವರ್ಗದ ಸರಕುಗಳಿವೆ. ಅದರ ಹೆಸರು 'ಪಾಮರ್ ಸ್ಟೋರ್ಸ್'. ಅದನ್ನುವಾಣಿಜ್ಯ ಮೃಗಾಲಯವೆಂದು ಸಂದೇಹವಿಲ್ಲದೆ ಕರೆಯಬಹುದು. ಆ ಅಂಗಡಿಯ ಒಡೆಯನಾದ ಜಾರ್ಜ್ ಪಾಮರ್ ಎಲ್ಲ ವಿಧದ ಪ್ರಾಣಿಗಳನ್ನೂ ಕೊಂಡು ಮಾರಿದ್ದಾನೆ. ವಿಚಿತ್ರ ಸಾಕು ಪ್ರಾಣಿಗಳನ್ನು ಅಪೇಕ್ಷಿಸುವ ಗಿರಾಕಿಗಳ ಬೇಡಿಕೆಗಳನ್ನು ಪೂರೈಸಿಕೊಡುವ ಹೆಗ್ಗಳಿಕೆ ಜಾರ್ಜ್ ಪಾಮರನಿಗಿದೆ.

ಪಾಮರನ ಅಂಗಡಿಯಲ್ಲಿ ಸೊಳ್ಳೆ-ಚಿಗಟ (Fleas) ಗಳಂತಹ ಕೀಟಗಳಿಂದ ಹದಿನಾರು ಅಡಿ ಉದ್ದದ ಹೆಬ್ಬಾವುಗಳು ಸಿಗುತ್ತವೆ. ಇವೆರಡಕ್ಕೂ ವಿಶೇಷ ಬೇಡಿಕೆಯಿದೆ. ಸೊಳ್ಳೆ-ಚಿಗಟಗಳು ಸರ್ಕಸ್ ಕಂಪನಿಯಲ್ಲಿ ಪ್ರದರ್ಶಿಸುವುದಕ್ಕಾಗಿಯೂ ವೈಜ್ಞಾನಿಕ ಸಂಶೋಧನಾ ಕೇಂದ್ರದವರ ಸಂಶೋಧನಾ ಕಾರ್ಯಕ್ಕಾಗಿಯೂ ಪಾಮರನ ಅಂಗಡಿಯಿಂದ ಕೊಂಡೊಯ್ಯಲ್ಪಟ್ಟಿವೆ. ಈ ಅಂಗಡಿಯಲ್ಲಿ ಹೆಬ್ಬಾವುಗಳು ಯಾವಾಗಲೂ ಸಿಗುತ್ತವೆ. ಬಹುಮಂದಿಯ ಭಾವನೆಗಿಂತಲೂ ಮಿಗಿಲಾಗಿ ಈ ಹೆಬ್ಬಾವುಗಳಿಗೆ ತೀವ್ರ ಬೇಡಿಕೆಯಿದೆ! ಈ ಅಂಗಡಿಯಿಂದ ಮಾರಾಟವಾಗಿರುವ ಹೆಬ್ಬಾವುಗಳಲ್ಲಿ ೩೪ ಅಡಿ ಉದ್ದದ ಹೆಬ್ಬಾವು ಇಂದಿಗೂ ವಿಶೇಷ ದಾಖಲೆಯೆನಿಸಿದೆ! ಮೆಟ್ರೊ ಗೋಲ್ಡ್‌ವಿನ್ ಮೇಯರ್ (ಎಂ. ಜಿ. ಎಂ) ಚಿತ್ರ ಸಂಸ್ಥೆಯವರು ತಯಾರಿಸುತ್ತಿದ್ದ ಅರಣ್ಯಜೀವನದ ಚಿತ್ರವೊಂದಕ್ಕಾಗಿ ಬೇಕಾಗಿದ್ದ ಎಂಬತ್ತಾರು ಹೆಬ್ಬಾವುಗಳಿಗೆ 'ಪಾಮರ್ ಸ್ಟೋರ್ಸ್' ಆಶ್ರಯ ನೀಡಿತು. ಅನೇಕ ಹೆಬ್ಬಾವುಗಳು, ಮೃಗಾಲಯಗಳು ಮತ್ತು ಸರ್ಕಸ್ ಕಂಪೆನಿಗಳಿಗೆ ಮಾರಲ್ಪಟ್ಟರೂ ಅನೇಕರು ಈ ಪ್ರಾಣಿಯನ್ನು ಸಾಕಲೆಂದು ಕೊಳ್ಳುವುದು ವಿಶೇಷ ಮಹತ್ವ ಪಡೆದಿದೆ. ಬ್ರಿಟಿಷ್ ಟೆಲಿವಿಜನ್ ಸಂಸ್ಥೆಯ ಜಾರ್ಜ್ ಕಾನ್ಸ್‌ಡೇಲ್‌ರವರು ಹೆಬ್ಬಾವುಗಳನ್ನು ಕೊಳ್ಳುವ ಜನಪ್ರಿಯ ಗಿರಾಕಿಯಾಗಿದ್ದಾರೆ. ಈ ಹೆಬ್ಬಾವುಗಳನ್ನು ಅವರು 'ಪ್ರಾಣಿಜೀವನ ಕಾರ್ಯಕ್ರಮ'ದಲ್ಲಿ ಪ್ರದರ್ಶಿಸುತ್ತಾರೆ.

ಇಷ್ಟೊಂದು ವಿವಿಧ ವರ್ಗದ ಪ್ರಾಣಿಗಳ ಕೇಂದ್ರದಲ್ಲಿ ಅನೇಕ ಹಾಸ್ಯಮಯ, ನಾಟಕೀಯ ಘಟನೆಗಳು ಸಂಭವಿಸುತ್ತಿರುತ್ತವೆ. ಈ ಅಂಗಡಿಯಲ್ಲಿರುವ ಹತ್ತು ಮಂದಿ ಕೆಲಸಗಾರರು ಅನಿಶ್ಚಯದ ಸಮಸ್ಯೆಗಳನ್ನೆದುರಿಸಲು ಅಹಿರ್ನಿಶಿ ಜಾಗರೂಕರಾಗಿ ದುಡಿಯುತ್ತಾರೆ. ಒಮ್ಮೆ ಒಬ್ಬ ಪೋಲೀಸ್ ರಾತ್ರಿಯ ಗಸ್ತಿನಲ್ಲಿದ್ದಾಗ ಆತನಿಗೊಂದು ಅಪೂರ್ವ ದೃಶ್ಯ ಕಾಣಿಸಿತು. ಆ ಅಂಗಡಿಯಲ್ಲಿದ್ದ ಮೊಸಳೆಯೊಂದು ಹೇಗೊ ಬಂಧಮುಕ್ತವಾಗಿ ಮೊಲಗಳು ಮತ್ತಿತರ ಪ್ರಾಣಿಗಳ ಪಂಜರವನ್ನು ನಾಶಪಡಿಸಲು ಪ್ರಯ

ಆಧಾರದಿಂದ

ತ್ತಿಸುತ್ತಿತ್ತು. ಆ ಪೋಲೀಸ್ ಅಧಿಕಾರಿಯು ಅಂಗಡಿಯ ನೌಕರರನ್ನು ಎಚ್ಚರಗೊಳಿಸಿ ಮೊಸಳೆಯನ್ನು ಬಂಧಿಸಲು ವಿಶೇಷ ಸಹಾಯ ನೀಡಿದ. ಆದರೂ ಆ ಮೊಸಳೆಯು ಒಂದು ಸಹಸ್ರ ಭಾರೀ ಮೀನುಗಳನ್ನು ಕಬಳಿಸಿ ಜಾರ್ಜ್ ಪಾಮರನಿಗೆ ೨೦೦ ಪೌಂಡ್ ನಷ್ಟ ತಂದಿತು.

ಕಾಡು ಪಾಪಗಳನ್ನು ಸಾಕುವ ವಿಚಿತ್ರ ಹುಚ್ಚಿನಿಂದಾಗಿ, ಪಾಮರನ ಅಂಗಡಿಯಲ್ಲಿ ಇವುಗಳ ಮಾರಾಟ ವಿಶೇಷವಾಗಿದೆ. ಈ ಪ್ರಾಣಿಯ ಮಾಂಸ ರುಚಿಕರವಾಗಿರುವದೆಂದು ಜಿಪ್ಸಿಗಳು ಭಾವಿಸಿದ್ದಾರೆ. ಲಂಡನ್ನಿನಲ್ಲಿ ವಿಶೇಷ ಪರಿಷೆ ನಡೆವಾಗ ಜಿಪ್ಸಿ ಮಹಿಳೆಯರು ಪಾಮರನ ಅಂಗಡಿಗೆ ದಾಳಿಯಿಡುತ್ತಾರೆ, ಬಹುಷಃ ಪಾಮರನ ವಾಣಿಜ್ಯ ಮೃಗಾಲಯವನ್ನು ಮಾಂಸದ ಅಂಗಡಿಯೆಂದು ಕಲ್ಪಿಸಿಕೊಳ್ಳುವರೇನೋ! ಬ್ರಿಟನ್ನಿನಲ್ಲಿ ವಾಸವಾಗಿರುವ ಮಹಿಳೆಯೊಬ್ಬಳಿಗೆ ವಾರಕ್ಕೆ ಮೂರು ಕಾಡು ಪಾಪಗಳನ್ನು ಈ ಅಂಗಡಿಯವರು ಸರಬರಾಜು ಮಾಡಿದರು! ಈ ಪ್ರಾಣಿಯ ಮಾಂಸದ ಸೇವನೆ ಆರೋಗ್ಯದಾಯಕವೆಂದು ವೈದ್ಯರು ಆಕೆಗೆ ಸಲಹೆ ನೀಡಿದ್ದರಂತೆ!

ಪಾಮರನ ಅಂಗಡಿಗೆ ಮಕ್ಕಳು ದಾಳಿಯಿಡುತ್ತಾರೆ. ಅಸಂಖ್ಯಾತ ಪಂಜರಗಳಲ್ಲಿಟ್ಟಿರುವ ಸಣ್ಣ ಪ್ರಾಣಿಗಳ ಸಾನ್ನಿಧ್ಯ, ಭೂಸ್ವರ್ಗವಿದ್ದಂತೆ! ಈ ಪ್ರಾಣಿಗಳನ್ನು ಕೊಳ್ಳಲು ಆಗದಿದ್ದರೂ ಅನೇಕ ಮಕ್ಕಳು ಈ ಅಂಗಡಿಗೆ ದಿನವೂ ತಪ್ಪದೆ ಭೇಟಿಕೊಡುತ್ತಾರೆ. ಒಬ್ಬ ಬಾಲಕನು ತನ್ನ ಬಳಿಯಲ್ಲಿದ್ದ ಐದು ಪೌಂಡು ಹಣವನ್ನು ವೆಚ್ಚ ಮಾಡಿ "ಕತ್ತೆಕಿರುಬ" (hyena) ವೊಂದನ್ನು ಕೊಳ್ಳಲು ಆಶಿಸಿದುದು ಮಾಲೀಕನಿಗೆ ವಿಸ್ಮಯ ತಂದಿತು. ಆ ಪ್ರಾಣಿಯನ್ನು ಮನೆಯಲ್ಲಿ ಸಾಕಲು ಆಗುವುದಿಲ್ಲವೆಂದು ಆ ಬಾಲಕನಿಗೆ ತಿಳಿಸಲಾಯಿತು. ಆದರೂ ಆ ಬಾಲಕ ಚಿಂಪಾಂಜಿಯನ್ನು ಕೊಳ್ಳಲು ಆಸೆ ವ್ಯಕ್ತಪಡಿಸಿದಾಗ, ಅದರ ಬೆಲೆ ೨೦೦ ಪೌಂಡು ಆಗುತ್ತದೆಂದು ತಿಳಿಸಬೇಕಾಯಿತು. ಈ ಎರಡು ನಿರಾಶೆಗಳಿಂದಲೂ ಹತಾಶನಾಗದೆ ಮೊಸಳೆ ಮರಿಯನ್ನು ಆ ಹುಡುಗ ಕೊಳ್ಳಲು ವಿಪರೀತ ಕಾತುರತೆ ವ್ಯಕ್ತಪಡಿಸಿದ!

ಚಿಂಪಾಂಜಿಗಳು ವಿಪರೀತ ಮಾರಾಟವಾಗುತ್ತವೆ. ಅಧಿಕ ಬೆಲೆಯಿದ್ದರೂ ಈ ಪ್ರಾಣಿಗೆ ವಿಶೇಷ ಬೇಡಿಕೆಯಿದೆ. ಇವುಗಳನ್ನು ಸಂಗ್ರಹಿಸಲೆಂದು ಕಾರ್ಯಕರ್ತರನ್ನು ವಿಶ್ವದ ಎಲ್ಲ ಕೇಂದ್ರಗಳಿಗೂ ಪಾಮರ್ ಕಳುಹಿಸಿಕೊಡುತ್ತಾನೆ. ಈ ಅಂಗಡಿಯಲ್ಲಿ ಮೊಸಳೆಗಳನ್ನು ತೂಕಮಾಡಿ ಬೆಲೆ ನಿರ್ಧರಿಸುತ್ತಾರೆ, ಹೆಬ್ಬಾವುಗಳಿಗೆ ಗಜದ ಲೆಕ್ಕದಲ್ಲಿ ಬೆಲೆ ಕಟ್ಟಲಾಗುತ್ತದೆ. ಇಲ್ಲಿ ಕರಡಿಯನ್ನೂ ಮಾರಾಟಮಾಡುತ್ತಾರೆ. ಬಕಿಂಗ್‌ಹ್ಯಾಮ್‌ಶಾಯರಿನ ಒಬ್ಬ ಗೃಹಸ್ಥನು ಹಿಮಾಲಯದ ಕರಡಿಗಳೆರಡನ್ನು ಕೊಂಡರೂ ಅವುಗಳಿಗೆ ಏನು ಆಹಾರ ನೀಡಬೇಕೆಂಬ ಸಮಸ್ಯೆಯಲ್ಲಿ ಜರ್ಜರಿತನಾದ!

ಸಿಂಹ, ಚಿರತೆ, ಕರಡಿಮರಿಗಳು ಈ ಅಂಗಡಿಯಲ್ಲಿ ಕ್ಷಣಮಾತ್ರದಲ್ಲಿ ಮಾರಾಟವಾಗುತ್ತವೆ. ಗ್ರೀಸ್ ದೇಶದ ಸಣ್ಣ ಆಮೆಗಳು ಸಹಸ್ರಾರು ಸಂಖ್ಯೆಯಲ್ಲಿ ಈ ಅಂಗಡಿಗೆ ಬರುತ್ತವೆ; ಅಷ್ಟೇ ಶೀಘ್ರವಾಗಿ ಗಿರಾಕಿಗಳೂ ದೊರಕುತ್ತಾರೆ. ಕೋತಿ, ಮೊಲ, ಕೋಳಿ, ಗಿಣಿ, ಕ್ಯಾನರಿ ಪಕ್ಷಿ, ಹಲ್ಲಿ, ನೂರಾರು ವರ್ಗದ ಮೀನು ಇವುಗಳು ಪಾಮರನ ಅಂಗಡಿಯಲ್ಲಿ ಯಾವಾಗಲೂ ದೊರಕುತ್ತವೆ. ಆನೆಗಳನ್ನೂ ಪಾಮರನು ಕೊಂಡು ಮಾರಿದ್ದಾನೆ. ಇಂತಹ ವೈವಿಧ್ಯಮಯ ಪ್ರಾಣಿ ಸಂಗ್ರಹದಲ್ಲಿ ನಾಯಿಮರಿ, ಬೆಕ್ಕಿನ ಮರಿಗಳೂ ಸಿಗುವುದು ಮೋಜಿನ ಅಂಶವಾಗಿದೆ. ಈ ಅಂಗಡಿಯಲ್ಲಿ ಕೊಳ್ಳಲಾಗದ ಒಂದೇ ವಸ್ತುವೆಂದರೆ--ಗುಲಾಬಿವರ್ಣದ ಆನೆ! ಇದು ಪಾಮರನ ಅಂಗಡಿಯ ಉಜ್ವಲ ರಮ್ಯ ಇತಿಹಾಸದಲ್ಲಿ ವಿಶೇಷ ದಾಖಲೆಯಾಗಿದೆ! *

ಅದ್ಭುತವಾದ ಮೋಟಾರ್ ಶರ್ಯತ್ತು

ಪೇಕಿಂಗ್‌ನಿಂದ ಪ್ಯಾರಿಸ್ಸಿಗೆ

ಅರುಣ ನಿಗುಡಕರ

೨೦ನೆಯ ಶತಮಾನದ ಪ್ರಾರಂಭದಲ್ಲಿ ಮೋಟಾರ್ ಹುಟ್ಟಿತು. ಆ ಕಾಲದಲ್ಲಿ ಮೋಟಾರಿನ ಕಾರ್ಯಕ್ಷಮತೆಯ ಬಗ್ಗೆ ಜನರಲ್ಲಿ ನಂಬಿಕೆ ಇರಲಿಲ್ಲ. ಆಗ ಮೋಟಾರು ಮತ್ತು ಕುದುರೆ ಗಾಡಿಗಳ ಶರ್ಯತ್ತು ಇಟ್ಟರೆ ಕುದುರೆ ಗಾಡಿಗಳೇ ಮುಂದೆ ಹೋಗುತ್ತಿದ್ದುವಂತೆ. ಆದ್ದರಿಂದ ಮೋಟಾರಿನ ಬಗ್ಗೆ ಜನರಲ್ಲಿ ಆಸ್ಥೆ ಹುಟ್ಟಿಸಲೆಂದು ಅದರ ಹೆಚ್ಚುಗಾರಿಕೆ ಸಿದ್ಧಮಾಡಲೆಂದು ಕಾರಖಾನೆ ಮಾಲಕರು ಮತ್ತು ಶ್ರೀಮಂತರು ಸೇರಿ ಯೋಚನೆ ಮಾಡಿ ಪೇಕಿಂಗಿನಿಂದ ಪ್ಯಾರೀಸಿನ ವರೆಗೆ ಶರ್ಯತ್ತನ್ನು ಏರ್ಪಡಿಸಿದರು.

ಈ ಶರ್ಯತ್ತನ್ನು ಫ್ರಾನ್ಸಿನೊಳಗಿನ ಲೆಮಾಟೇನ್ ಎಂಬ ವೃತ್ತಪತ್ರವು ಏರ್ಪಡಿಸಿತು. ಇದರಲ್ಲಿ ಎರಡು ಫ್ರೆಂಚ್, ಒಂದು ಡಚ್ ಒಂದು ಇಟಾಲಿಯನ್ ಮತ್ತು ಆರು ಅಶ್ವಶಕ್ತಿಯುಳ್ಳ ಮೂರು ಗಾಲಿಯ ಗಾಡಿ ಸೇರಿ ಒಟ್ಟು ಐದು ಮೋಟಾರುಗಳು ಭಾಗವಹಿಸಿದ್ದವು. ಫ್ರೆಂಚ್ ಮೋಟಾರುಗಳಲ್ಲಿ ಆ ಕಂಪನಿಗಳ ಪ್ರತಿನಿಧಿಗಳು, ಡಚ್‌ರ ವತಿಯಿಂದ ಜೀನ್ ಗೋಡಾರ್ಡ್ ಮತ್ತು ಇಟಾಲಿಯನ್ ಕಂಪನಿಯ ಪರವಾಗಿ ಸಿಪಿಓನ್ ಬೋರಘೇಸಿ ಮತ್ತು ಅವನೊಡನೆ ಅವನ ಡ್ರೈವರ್ ಗುಯಿಝಾರ್ಡಿ ಮತ್ತು ಒಬ್ಬ ವೃತ್ತಪತ್ರಕಾರ ಲುಯಿಗಿ ಬಾರಝಿನೀ ಈ ಜನರಿದ್ದರು. ಮೂರುಗಾಲಿಯ ಗಾಡಿಯೊಂದಿಗೆ ಅದರ ಒಡೆಯ ಆಗಸ್ಟ್ ಪೋನ್ಸ್ ಎಂಬ ತರುಣನಿದ್ದ.

ಪ್ರಿನ್ಸ್ ಬೋರಘೇಸಿಯು ಈ ಶರ್ಯತ್ತಿಗಾಗಿ ಸಾವಿರಾರು ಪೌಂಡು ಹಾಳುಮಾಡಿದ. ಮೊದಲು ಆತ ಪೇಕಿಂಗಿನ ಹತ್ತಿರದ ಶರ್ಯತ್ತಿನ ಮಾರ್ಗದ ೩೦೦ ಮೈಲುದ್ದದ ಗುಡ್ಡಗಾಡು ಪ್ರದೇಶವನ್ನು ಸೂಕ್ಷ್ಮವಾಗಿ ಅಡ್ಡಾಡಿ ನೋಡಿದ. ದಾರಿಯಲ್ಲಿ ಪೆಟ್ರೋಲ್ ಮತ್ತು ದುರಸ್ತಿಯ ವ್ಯವಸ್ಥೆಯಾಗುವಂತೆ ಏರ್ಪಾಟು ಮಾಡಿದ.

ಪೆಟ್ರೊಲ್, ಟಾಯರುಗಳು ಮತ್ತು ಮೋಟಾರಿನ ಇತರ ಬಿಡಿ ಭಾಗಗಳನ್ನು ಒಂಟೆಗಳ ಮೇಲೆ ಹೇರಿ ಸೈಬೇರಿಯಾದ ಸೀಮೆಯವರೆಗೆ ಯೋಜಿಸಿಟ್ಟ ಸ್ಥಳಗಳಲ್ಲಿ ಮೊದಲೆ ಕಳಿಸಿದ. ಟ್ರಾನ್ಸ್ ಸೈಬೇರಿಯನ್ ರೇಲ್ವೆಯನ್ನು ಈ ಕೆಲಸಕ್ಕೆ ಉಪಯೋಗಿಸಿಕೊಂಡ. ಬೋರಘೇಸಿಯು ಈ ಶರ್ಯತ್ತಿಗಾಗಿ 'ಇಟಾಲಿಯಾ' ಎಂಬ ತನ್ನ ಸ್ವಂತ ಗಾಡಿಯನ್ನು ನಿರ್ಮಿಸಿಕೊಂಡ.

ಸರ್ವಸಿದ್ಧತೆಗಳೊಂದಿಗೆ ಪೇಕಿಂಗ್‌ನ ಫ್ರೆಂಚ್ ಸೈನ್ಯದಳದ ಮುಖ್ಯ ಕಚೇರಿಯಿಂದ ಶರ್ಯತ್ತು ಪ್ರಾರಂಭವಾಯಿತು. ಮುಂದೆ ಫ್ರೆಂಚ್ ಬ್ಯಾಂಡ್ ಪಥಕ ಮತ್ತು ಹಿಂದೆ ಪ್ರಚಂಡ ಜನಸಮುದಾಯ- ಈ ರೀತಿ ಮೆರೆಯುತ್ತ ಮೋಟಾರುಗಳು ಶರ್ಯತ್ತಿನ ಸ್ಥಳ ತಲುಪಿದವು.

ಪ್ರಾರಂಭಕ್ಕೇ ಅಡೆತಡೆಗಳಾಗತೊಡಗಿದವು. ಪೇಕಿಂಗ್ ಬಿಟ್ಟು ಸ್ವಲ್ಪ ದೂರ ಹೋಗಿರುವಷ್ಟರಲ್ಲಿ ದೊಡ್ಡ ಮಳೆ ಪ್ರಾರಂಭವಾಯಿತು. ಮೋಟಾರಿನೊಳಗಿನ ಸಾಮಾನುಗಳು ತೊಯ್ದು

'ವಾಙ್ಮಯ ಶೋಭಾ' ದಿಂದ

ಹೋದವು. ದೊಡ್ಡ ಮಳೆಯಿಂದ ರಸ್ತೆಯಲ್ಲಿ ಅಲ್ಲಲ್ಲಿ ತಗ್ಗುಗಳಾದವು. ಕೆಸರು ಕೂಡಿತು. ಇದರಿಂದ ತಗ್ಗಿನಲ್ಲಿ ಮೋಟಾರಿಗೆ ಧಕ್ಕೆತಗಲಿ ಒಳಗಿನ ಸಾಮಾನು ಹೊರಗೆ ಪುಟಿಯಲಾರಂಭಿಸಿದವು. ಪೋನ್ಸನ ಮೂರುಗಾಲಿಯ ಗಾಡಿಯಂತೂ ಹೆದರಿದ ಇಲಿಯಂತೆ ಹಾರಾಡತೊಡಗಿತು. ಅದರ ಗಾಲಿಗಳು ರಾಡಿಯನ್ನು ದಾಟಿ ಹೋಗದಂತಾದಾಗ ತಾನು ಮರಳುವ ವಿಚಾರ ಮಾಡಿದ ಪೋನ್ಸ್. ಶರ್ಯತ್ತಿನ ಮೊದಲನೆ ಹಂತವಾದ ನಾನಕಿಂಗಿನ ವರೆಗೆ ತನ್ನ ಮೋಟಾರನ್ನು ರೈಲಿನಿಂದ ಒಯ್ಯಲು ಆತ ಅನಿವಾರ್ಯವಾಗಿ ಒಪ್ಪಬೇಕಾಯಿತು.

ಈ ರೀತಿ ಮೋಟಾರಿನ ಈ ತಂಡ ಚೀನದ ಉತ್ತರ ಸೀಮೆಯನ್ನು ಕಂಡಿತು. ಇಲ್ಲಿಂದಲೇ ನಿಜವಾದ ಸಂಕಟಗಳು ಪ್ರಾರಂಭವಾದವೆನ್ನಬೇಕು. ಚೀನದ ಉತ್ತರ ಸೀಮೆ ಮತ್ತು ಮಂಗೋಲಿಯಾದ ಬಯಲುಪ್ರದೇಶಗಳ ನಡುವೆ ದುರ್ಗಮ ಗುಡ್ಡಗಳಿದ್ದವು. ಇವುಗಳನ್ನು ದಾಟಲು ಮಾಡಿದ್ದ ರಸ್ತೆಗಳು ತೀರ ಸಣ್ಣವಾಗಿದ್ದವು. ಅಂಕಡೊಂಕಾಗಿದ್ದವು. ಒಂದೇ ವಾಹನ ಹೋಗಬಹುದಾದಷ್ಟು ಅಗಲವಾಗಿದ್ದವವು. ಅಲ್ಲಲ್ಲಿ ಮೇಲಿನಿಂದ ಉರುಳಿಬಿದ್ದ ಕಲ್ಲುರಾಸಿಗಳಿದ್ದವು. ಇವು ಹಾದಿ ಕಟ್ಟಿದ್ದರಿಂದ ಇವನ್ನು ಸರಿಸಿಯೇ ಮೋಟಾರಿಗೆ ದಾರಿ ಮಾಡಿಕೊಡಬೇಕಾಗಿತ್ತು. ಒಮ್ಮೊಮ್ಮೆ ಅಕಸ್ಮಾತ್ ಬಂಡೆಗಳು ಉರುಳಿ ಗಾಡಿಯ ಮುಂದೇ ಬಿದ್ದುಬಿಡುತ್ತಿದ್ದವು. ಅವನ್ನು ಹೇಗೆ ಸರಿಸಬೇಕೆಂದು ಯೋಚಿಸುತ್ತ ಈ ಜನರು ಮೋಟಾರು ತಡೆದು ನಿಲ್ಲಿಸಿಕೊಡುತ್ತಿದ್ದರು. ಆಗ ಮಂಗೋಲಿಯಾಕ್ಕೆ ನಡೆದ ಚೀನೀ ವ್ಯಾಪಾರಿಗಳು ಒಂಟೆಗಳನ್ನೇರಿ ಬರುತ್ತಿದ್ದರು. ಅವರು ಇವರ ಕಷ್ಟ ನೋಡಿ ನಕ್ಕು ಮುಂದೆ ಸಾಗುತ್ತಿದ್ದರು. ಎಂಥ ಹುಚ್ಚುತನವಿದು ಎನ್ನುತ್ತಿತ್ತು ಅವರ ನಗೆ! ಈ ಕಲ್ಲುಗಳನ್ನು ಸರಿಸಿ ಹಾದಿ ಮಾಡಿಕೊಳ್ಳಬೇಕಾದರೆ ಕೆಲ ಸಲ ಹಮಾಲರು, ಕುದುರೆಗಳು ಮತ್ತು ಕತ್ತೆಗಳನ್ನು ಉಪಯೋಗಿಸಲಾಗುತ್ತಿತ್ತು. ಇವೆಲ್ಲವುಗಳಿಂದ ಶರ್ಯತ್ತಿನಲ್ಲಿ ಭಾಗವಹಿಸಿದವರು ಮೋಟಾರಿಗೆ ಮುಂದೆ ಭವಿಷ್ಯ ಚೆನ್ನಾಗಿಲ್ಲವೆಂದು ಭಯಗೊಂಡರು.

ಮೋಟಾರು ನಿಜವಾಗಿ ಉಪಯುಕ್ತ ವಾಹನವೆ? ಅದು ಗಟ್ಟಿಮುಟ್ಟಾಗಿದ್ದು ವೇಗವಾಗಿ ಸಾಗುವದೆ? ಬರುವ ಆತಂಕಗಳನ್ನು ಜಯಿಸಿ ನಾವಿದನ್ನು ಸಿದ್ಧಮಾಡಬೇಕಾಗಿದೆ. ನಾವು ಸಿದ್ಧಪಾಡಬಹುದೆ? ಎಂದು ಚಿಂತೆಗೊಳಗಾದರು ಅವರು.

ಗುಡ್ಡ ಏರುವುದಕ್ಕಿಂತ ಇಳಿಯುವುದು ಇನ್ನೂ ಕಠಿಣವಾಗಿತ್ತು. ಘಟ್ಟದ ರಸ್ತೆಗಳು ಕಚ್ಚಾ ರಸ್ತೆಗಳು. ಅಲ್ಲಲ್ಲಿ ಸುತ್ತುಗಳು ಬೇರೆ. ಕೆಲವೆಡೆ ನೆಟ್ಟಗೆ ಇಳಿಜಾರಾಗಿ ಹೋಗುವ ಹಾದಿ. ಮತ್ತೆ ಕೆಲವೆಡೆ ಬಿಕ್ಕಟ್ಟಾದ ಸುತ್ತು ಹಾಕಿಕೊಂಡು ದಾರಿ ಹೊರಳಿ ಸಾಗುತ್ತಿತ್ತು. ಆದ್ದರಿಂದ ಗಾಡಿ ಇಳಿಜಾರಿಗೆ ಬಂದಾಗ ಅದರ ಹಿಂದೆ ಹಗ್ಗ ಕಟ್ಟಿ ಅದನ್ನು ಹಮಾಲರು ಹಿಡಿದುಕೊಂಡು ನಿಲ್ಲುತ್ತಿದ್ದರು. ಇಷ್ಟಾಗಿಯೂ ಬೋರಘೇಸಿಯ ಗಾಡಿ ಒಮ್ಮೆ ಹಾದಿ ಬಿಟ್ಟು ಜಾರಿತು. ಕಿವಿಯಲ್ಲಿ ಗಾಳಿ ಹೊಕ್ಕ ಕರುವಿನಂತೆ ಕೆಳಗೆ ಓಡತೊಡಗಿತು. ರಸ್ತೆ ಚಿಕ್ಕದು. ಅಲ್ಲಲ್ಲಿ ಮುರಿವು ಉಳ್ಳದ್ದು. ಎದುರಿಗೇ ಬಾಯ್ದೆರೆದು ನಿಂತ ಕಂದರ. ಗುಯಿಝಾರ್ಡ್ ಗಾಡಿ ನಡೆಸುತ್ತಿದ್ದ. ಎಲ್ಲರೂ ಹೌಹಾರಿದರು. ಇಳುಕಲಿನಲ್ಲಿ ಮಿತಿಮೀರಿ ವೇಗದಿಂದ ಓಡುತ್ತಿದ್ದ ಈ ಗಾಡಿಯನ್ನು ಸುತ್ತುಗಳು ಬಂದಾಗ ಬಲವಾಗಿ ಸ್ಟೀರಿಂಗ್ ತಿರುಗಿಸಿ ಹೇಗೋ ಪುನಃ ಹಾದಿಗೆ ತರುತ್ತಿದ್ದ ಗುಯಿಝಾರ್ಡ. ಆದರೆ ಹಾದಿಗೆ ಗಾಡಿ ಬಂತು ಎನ್ನುವದರಲ್ಲಿ ಪುನಃ ಇಳುಕಲು. ಅಂತೂ ಇಂತೂ ಜಿಗಿಯುತ್ತ ಪುಟಿಯುತ್ತ ಗಾಡಿ ಬೇಗನೆ ಇಳುಕಲನ್ನು ದಾಟಿತು. ಒಳಗಿದ್ದವರಿಗೆ ಹಾಯೆನಿಸಿತು.

ಐದನೇ ದಿನ ಬೋರಘೇಸಿ ಉಳಿದ ಸ್ಪರ್ಧಕರಿಗಿಂತ ೧೫೦ ಮೈಲು ಮುಂದಿದ್ದ. ಈ ವೇಗವನ್ನೆ ಕಾಯಂ ಇಟ್ಟರೂ ಪ್ಯಾರಿಸ್ ಮುಟ್ಟಲು

ಒಂದು ವರ್ಷ ಬೇಕಾಗುತ್ತಿತ್ತು. ಮುಂದೆ ಗೋಬಿಯ ಮರುಭೂಮಿ ಕಾದಿದೆ. ಅನಂತದ ವರೆಗೆ ವ್ಯಾಪಿಸಿ ನಿಂತ ಗೋಬಿಯನ್ನು ನೋಡಿ ಇದನ್ನು ತಾನು ದಾಟಲಾರನೆಂದು ಮನವರಿಕೆಯಾಗಿ ಸಾಕೆಂದು ಪೋನ್ಸ್ ಹಿಂದೆ ತಿರುಗಿದ. ಉಳಿದ ನಾಲ್ಕು ಗಾಡಿಗಳು ಗೋಬಿಯನ್ನು ದಾಟಲು ಅಣಿಯಾದವು.

ಬೋರಘೇಸಿಯ ಗಾಡಿ ಎಲ್ಲಕ್ಕೂ ಮುಂದಿತ್ತು. ೩೮೦° ಉಷ್ಣತಾಮಾನದಲ್ಲಿ ಗಾಡಿಯ ಇಂಜೀನು ಕಾಯತೊಡಗಿತು. ಕುಡಿಯಲಿಕ್ಕೆಂದು ತಂದಿದ್ದ ನೀರನ್ನು ಇಂಜಿನ್ನಿನ ಕಾವು ಇಳಿಸಲೆಂದು ಬಳಸಬೇಕಾಯಿತು. ಮಳಲುಗಾವಲಿನಲ್ಲಿ ವಿಪರೀತ ನೀರಡಿಕೆ. ಆದರೆ ಸಾಕಷ್ಟು ನೀರೇ ಇಲ್ಲ. ಬಾಯಾರಿಕೆ ಅಸಹ್ಯವಾದಾಗಷ್ಟೇ ಕೇವಲ ಗಂಟಲು ಹಸಿ ಮಾಡಲು ಸಾಲುವಷ್ಟು ನೀರನ್ನು ಬಾಯಿಗೆ ಬಿಟ್ಟುಕೊಂಡು ಮುಂದೆ ಸಾಗತೊಡಗಿದರು. ಅಂತೂ ಇಂತೂ ಬೋರಘೇಸಿಯ ಗಾಡಿ ಗೋಬಿಯ ಮಧ್ಯದಲ್ಲಿರುವ ಪಾನ್ ಹಾಂಗ್ ಎಂಬ ಓಯಾಸಿಸ್ಸಿಗೆ ಬಂದಿತು. ಅಲ್ಲೊಂದು ಬಾವಿ ಇತ್ತು. ಒಂಟೆಯ ಮೇಲೆ ಹೇರಿ ತಂದ ಪೆಟ್ರೋಲು ಗಾಡಿಯ ದಾರಿ ಕಾಯುತ್ತಿತ್ತು. ಅಲ್ಲಿ ವಿಶ್ರಾಂತಿಗೆ ಸ್ವಲ್ಪ ಅವಕಾಶ ದೊರೆಯಿತು. ಬೋರಘೇಸಿ ಪತ್ರಕರ್ತರನ್ನು ಇಲ್ಲಿ ಭೆಟ್ಟಿಯಾದ. ಮೋಟಾರು ಕುದುರೆ ಗಾಡಿ ಹಾಗೂ ಒಂಟೆಗಳಿಗಿಂತ ಹೆಚ್ಚು ಕಾರ್ಯಕ್ಷಮವಾಗಿದೆ ಎಂಬುದರ ಅರಿವಾದದ್ದು ಮೊದಲ ಬಾರಿ ಇಲ್ಲಿ. ಬೋರಘೇಸಿ ನಾಲ್ಕು ದಿನಗಳಲ್ಲಿ ಕ್ರಮಿಸಿ ಬಂದ ಮರಭೂಮಿ ದಾಟಲು ಒಂಟೆಗಳಿಗೆ ೧೪ ದಿನ ಬೇಕಾಗುತ್ತಿದ್ದವು.

ಉರ್ಗಾ ನಗರವನ್ನು ಬೋರಘೇಸಿ ಬಿಟ್ಟಾಗ ಫ್ರೆಂಚ್ ಗಾಡಿಗಳು ಅಲ್ಲಿ ಅದೇ ಬಂದು ತಲುಪಿದವು. ಡಚ್ ಗಾಡಿಯಿನ್ನೂ ಮಧ್ಯಗೋಬಿಯಲ್ಲೇ ಇತ್ತು.

ಎರಡು ದಿನ ಕಷ್ಟನಷ್ಟ ಸಹಿಸಿ ಬೋರಘೇಸಿಯ ಗಾಡಿ ರಶಿಯನ್ ಸೀಮೆಯ ಮೇಲಿನ ಕಿಯಾಖತಾ ನಗರವನ್ನು ತಲುಪಿತು. ಬೋರಘೇಸಿ ನಕಾಶೆ ತೆರೆದು ನೋಡಿದ. ಮಾಸ್ಕೋವರೆಗೆ ದಾರಿ ಸರಿಯಾಗಿದೆ ಎಂದು ಅದರಲ್ಲಿತ್ತು. ಆದರೆ ಗಾಡಿ ಮುಂದೆ ಹೊರಟಾಗ ನಕಾಶೆಯ ರಸ್ತೆಯ ಸುಳಿವೇ ಸಿಗದಂತಾಯಿತು. ಸೈನ್ಯಖಾತೆ ಕಟ್ಟಿದ ಒಂದು ರಸ್ತೆಯು ನಕಾಶೆಯಲ್ಲಿ ಇತ್ತು. ಆದರೆ ಟ್ರಾನ್ಸ್ ಸೈಬೇರಿಯನ್ ರೇಲ್ವೆಯ ಕೆಲಸ ಸುರುವಾದಮೇಲೆ ಅದನ್ನು ಉಪಯೋಗಿಸುತ್ತಿರಲಿಲ್ಲ. ಅಂದಿನಿಂದ ಆ ಹಾದಿಯಲ್ಲಿ ಕಾಡು ಬೆಳೆದಿತ್ತು. ಸೈಬೇರಿಯಾದ ೧೦೦೦ ಮೈಲಿನ ಪರಿಸರದಲ್ಲಿ ಪ್ರಚಂಡ ಮಳೆಗರೆದು ಕೆಸರಾಗಿತ್ತು. ಅದನ್ನು ದಾಟುವ ವರೆಗೆ ಬೋರಘೇಸಿಗೆ ಸಾಕು ಬೇಕಾಯಿತು.

ದಾರಿಯೊಳಗಿನ ಕೆಲ ಪೂಲುಗಳು ಎಷ್ಟು ಹಳೆಯವಾಗಿದ್ದವೆಂದರೆ ಯಾವಾಗ ಮುರಿದು ಬೀಳುವವೊ ತಿಳಿಯದಂತಾಗಿತ್ತು. ಆಗ ಬೋರಘೇಸಿ ಪೂಲು ಮುರಿಯುವ ಮೊದಲೇ ತಾನು ದಾಟಿರಬೇಕೆಂದು ಗಾಡಿಯನ್ನು ಭರದಿಂದ ಓಡಿಸುತ್ತಿದ್ದ. ಒಮ್ಮೊಮ್ಮೆ ಹೊಳೆಯ ಉಸುಕಿನಲ್ಲಿ ಗಾಡಿ ಸಿಕ್ಕಿಕೊಳ್ಳುತ್ತಿತ್ತು. ಆಗ ಆ ಚೆದಂಡೆಯಿಂದ ಕುದುರೆ ಅಥವಾ ಎತ್ತುಗಳನ್ನು ತಂದು ಗಾಡಿಯನ್ನು ಎಳೆದು ಮುಂದೆ ಒಯ್ಯಬೇಕಾಗುತ್ತಿತ್ತು. ಒಮ್ಮೊಮ್ಮೆ ಕಂದರ ದಾಟಲು ಟ್ರಾನ್ಸ್ ಸೈಬೇರಿಯನ್ ರೇಲ್ವೆ ಮಾರ್ಗವನ್ನೇ ಉಪಯೋಗಿಸಬೇಕಾಗುತ್ತಿತ್ತು. ರೇಲ್ವೆ ಹಳಿಗಳ ಮೇಲೆ ಮೋಟಾರು ಓಡಿಸುವುದೆಂದರೆ ಒಂದು ದಿವ್ಯವೇ ಸೈ. ಆದ್ದರಿಂದ ಒಂದು ಹಳಿ ಗಾಡಿಯ ಗಾಲಿಗಳ ನಡುವೆ ಬರುವಂತೆ ಗಾಡಿ ಹೊಡೆಯಬೇಕಾಗುತ್ತಿತ್ತು. ಆದರೂ ನಡುನಡುವೆ ಗಾಲಿಗಳು ಹಳಿಗಳನ್ನೇರಿ ಉರುಳಿ ಒಳಗಿದ್ದವರನ್ನು ನುಗ್ಗು ಮಾಡುತ್ತಿದ್ದವು. ಆದ್ದರಿಂದ ಎಲ್ಲಿ ಗಾಡಿ ಉರುಳಿ ಪೂಲಿನಿಂದ ಹೊರಗೆ ಬೀಳುವುದೋ ಎಂದು ಭಯವೆನಿಸುತ್ತಿತ್ತು. ಹೀಗೆ ಸಾಗಿರುವಾಗಲೇ ಹಿಂದಿನಿಂದ ಇಲ್ಲವೆ ಮುಂದಿನಿಂದ ರೇಲುಗಾಡಿಯ ಶಿಳ್ಳು ಕೇಳಿಸುತ್ತಿತ್ತು. ಗಾಡಿಯನ್ನು ಲಗು

ಬಗೆಯಿಂದ ಬದಿಗೆ ಒಯ್ಯಬೇಕಾಗುತ್ತಿತ್ತು. ಒಮ್ಮೆ ಒಂದು ಪೂಲಿನ ಮೇಲೆ ಮೋಟಾರು ಬರುವಾಗಲೇ ಮುಂದೆ ರೇಲುಗಾಡಿ ಕಾಣಿಸಿತು. ಬೋರಘೇಸಿ ಪೇಚಿಗೆ ಬಿದ್ದ. ಆದರೂ ಗಾಡಿ ಬದಿಗೆ ಒಯ್ದು ಬಂದ ಸಂಕಟದಿಂದ ಹೇಗೋ ಪಾರಾದ. ಮತ್ತೊಮ್ಮೆ ಗಾಡಿಯ ಒಂದು ಟಾಯರೇ ಒಡೆಯಿತು. ಅಲ್ಲಿ ಸುಮಾರು ಸಾವಿರ ಮೈಲಿನ ಪರಿಸರದಲ್ಲಿ ಮತ್ತೊಂದು ಟಾಯರು ಸಿಗುವಂತಿರಲಿಲ್ಲ. ಶರ್ಯತ್ತನ್ನ ಅರ್ಧಕ್ಕೇ ಬಿಡುವ ಹೊತ್ತು ಬಂದಿತು. ಆಗ ಒಬ್ಬ ಸಮಗಾರನಿಂದ ಟಾಯರನ್ನು ಹೊಲಿಸಿಕೊಂಡು ಮುಂದೆ ಸಾಗಿದ.

ಅಲ್ಲಿಂದ ಮುಂದಿನ ದಾರಿ ಚೆನ್ನಾಗಿತ್ತು. ಈ ರೀತಿ ಸಾಗುತ್ತ ೧೦ ಅಗಸ್ಟ ೧೯೦೭ ರಂದು ಸಾಯಂಕಾಲ ನಾಲ್ಕು ಗಂಟೆಗೆ ಬೋರಘೇಸಿ ಪ್ಯಾರೀಸ್ ತಲುಪಿದ.

ಇತ್ತ ಪ್ಯಾರೀಸ್‌ನಲ್ಲಿ ಇವನ ಸತ್ಕಾರ ನಡೆದಿದ್ದಾಗ, ಅತ್ತ ಉಳಿದ ಗಾಡಿಗಳಿನ್ನೂ ಪ್ಯಾರೀಸಿನ ದಾರಿಯಲ್ಲೇ ಇದ್ದವು. ಡಚ್ ಗಾಡಿಯ ಡ್ರೈವರ್ ಜೀನ್ ಗೋಡಾರ್ಡ್ ಬರ್ಲಿನ್ ತಲುಪಿದಾಗ ಬೇನೆಬಿದ್ದ. ವಿಜಯ ಕೈನಿಲುಕಿರುವಾಗಲೆ ಆತನಿಗೆ ತನ್ನ ಪ್ರಯಾಣ ನಿಲ್ಲಿಸಬೇಕಾಯಿತು. ಉಳಿದೆರಡು ಫ್ರೆಂಚ್ ಗಾಡಿಗಳು ೩೦ ಅಗಸ್ಟಕ್ಕೆ ಪ್ಯಾರೀಸ್ ತಲುಪಿದವು.

ಈ ರೀತಿ ಮೋಟಾರಿನ ಶ್ರೇಷ್ಠತೆ ಸಿದ್ಧ ಮಾಡುವ ಶರ್ಯತ್ತು ನಡೆದು ಅದನ್ನು ಬೋರಘೇಸಿ ಗೆದ್ದ. ಇಂದಿಗೂ ಅಂಥ ಇನ್ನೊಂದು ಶರ್ಯತ್ತು ನಡೆದಿಲ್ಲ *

ಅತ್ಯಂತ ಹೃದಯಸ್ಪರ್ಶಿಯಾದ ನೆನಹು



ಕಮಲ ಇನ್ನಿಲ್ಲ

ಜವಾಹರಲಾಲ ನೆಹರೂ

ಅನು: ಸಂ. ವಾ. ಕೃಷ್ಣಮೂರ್ತಿರಾವ್

ನನ್ನ ಹೆಂಡತಿಗೆ ಕಾಯಿಲೆ ವಿಷಮಿಸಿದೆ ಎಂದು ವರ್ತಮಾನ ಬಂದಕಾರಣ ೧೯೩೫ ನೇ ಸೆಪ್ಟೆಂಬರ ನಾಲ್ಕನೆಯ ದಿನ ಆಲ್ಮೋರ ಬೆಟ್ಟದ ಬಂದಿಖಾನೆಯಿಂದ ನನಗೆ ಆಕಸ್ಮಿಕ ಬಿಡುಗಡೆ ಆಯಿತು. ಆಕೆ ಜರ್ಮನಿಯ ಬ್ಲಾಕ್ ಫಾರೆಸ್ಟಿನ ಬೇಡನ್ ವೀಲರ್‌ನಲ್ಲಿ ಒಂದು ವಿಶ್ರಾಂತಿಗೃಹದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಳು. ಮೋಟಾರಿನಲ್ಲಿ ಹೊರಟು ರೈಲಿನಲ್ಲಿ ಪ್ರಯಾಣಮಾಡಿ ಮೂರನೆ ದಿನವೇ ಅಲಹಾಬಾದ್ ಸೇರಿ ಅದೇ ಮಧ್ಯಾಹ್ನವೇ ವಿಮಾನದಲ್ಲಿ ಯುರೋಪಿಗೆ ಹೊರಟೆ. ಕರಾಚಿ ಬಗ್ದಾದ್ ಮೂಲಕ ಕೈರೋ ಪಟ್ಟಣವನ್ನು ಸೇರಿ ಸಮುದ್ರ ವಿಮಾನದಲ್ಲಿ ಅಲೆಕ್ಸಾಂಡ್ರಿಯದಿಂದ ಬ್ರಿಂಡಿಸಿಗೆ ತಲ್ಪಿದೆ. ಬ್ರಿಂಡಿಸಿಯಿಂದ ರೈಲಿನಲ್ಲಿ ಸ್ವಿಜರ್ಲೆಂಡಿನ ಬಾಸ್ಲೆ ಪಟ್ಟಣಕ್ಕೆ ಹೋದೆ. ಆಲ್ಮೋರ ಜೈಲಿನಿಂದ ಹೊರಟ ಐದು ದಿನಗಳ ನಂತರ ಅಲಹಾಬಾದ್‌ನಿಂದ ನಾಲ್ಕು ದಿನಗಳ ನಂತರ ಸೆಪ್ಟೆಂಬರ್ ಒಂಬತ್ತನೆ ಸಂಜೆ ಬೇಡನ್ ವೀಲರ್ ಮುಟ್ಟಿದೆ. ಕಮಲಳನ್ನು ನಾನು ಕಂಡಾಗ ಆಕೆಯ ಮುಖದಲ್ಲಿ ಅದೇ ಹಳೆಯ ಧೈರ್ಯದ ಮುಗುಳ್ನಗೆ; ಆದರೆ ಬಹಳ ನಿಶ್ಯಕ್ತಳಾಗಿದ್ದಳು. ಹೆಚ್ಚು ಮಾತಾಡಲು ಬಹಳ ಸಂಕಟಪಡುತ್ತಿದ್ದಳು. ಪ್ರಾಯಶಃ ನಾನು ಬಂದದ್ದರಿಂದ ಸ್ವಲ್ಪ ಉತ್ತಮ ಪರಿಣಾಮವಾಯಿತು. ಏನೋ? ಮಾರನೇ ದಿನ ಮತ್ತು ಅನಂತರವೂ ಆಕೆಯ ಸ್ಥಿತಿ ಸ್ವಲ್ಪ ಉತ್ತಮಗೊಂಡಿತು. ಆದರೆ ವಿಷಮತೆ ಇನ್ನೂ ಇದ್ದು ನಿದಾನವಾಗಿ ಆಕೆಯ ಜೀವವನ್ನೇ ಹೀರಿತು. ಅವಳ ಸಾವು ಸಮೀಪಿಸಿದೆ ಎಂದು ಯೋಚಿಸದೇ ಗುಣ ಹೊಂದುತ್ತಿದ್ದಾಳೆ, ಈ ವಿಷಗಳಿಗೆಯನ್ನು ಕಳೆದರೆ ಸರಿಹೋಗುತ್ತಾಳೆ ಎಂದು ಭಾವಿಸಿದೆ.

'ಭಾರತ ದರ್ಶನ' ದಿಂದ

ಡಾಕ್ಟರುಗಳು— ಅವರ ಸ್ವಭಾವವೇ ಹಾಗೆ —ಭಯವಿಲ್ಲ ಎಂದು ಭರವಸೆ ಹೇಳುತ್ತಲೆ ಇದ್ದರು. ಸದ್ಯದ ಗಂಡಾಂತರವೇನೋ ಕಳೆದಂತೆ ಕಂಡಿತು; ಆಕೆಯೂ ಜಗ್ಗಲಿಲ್ಲ. ಮಿತವಾಗಿ ಮಾತಾಡುತ್ತಿದ್ದೆವು, ಸ್ವಲ್ಪ ಆಯಾಸ ಕಂಡೊಡನೆ ನಾನೇ ಮಾತು ನಿಲ್ಲಿಸುತ್ತಿದ್ದೆ. ಪರ್ಲ ಬಕ್‌ಳ 'ದಿ ಗುಡ್ ಅರ್ತ್' ಎಂಬ ಕಾದಂಬರಿಯನ್ನು ಓದುತ್ತಿದ್ದಂತೆ ಜ್ಞಾಪಕ. ಇದರಿಂದ ಅವಳಿಗೆ ಸಂತೋಷವಾಗುತ್ತಿತ್ತು. ಆದರೂ ಓದು ಮಾತ್ರ ಮುಂದೆ ಸಾಗುತ್ತಿರಲಿಲ್ಲ. ಬೆಳಿಗ್ಗೆ ಮಧ್ಯಾಹ್ನ ಊರೊಳಗಿನ ನನ್ನ ಹೋಟಲಿನಿಂದ ಆ ವಿಶ್ರಾಂತಿ ಗೃಹಕ್ಕೆ ನಡೆದುಕೊಂಡು ಹೋಗಿ ಅವಳೊಡನೆ ಕೆಲವು ಗಂಟೆ ಕಾಲಕಳೆಯುತ್ತಿದ್ದೆ. ಆಕೆಗೆ ಹೇಳಬೇಕೆಂಬ ವಿಷಯಗಳು ಅನೇಕವಿದ್ದವು, ಆದರೂ ನಾನೇ ಬಾಯಿ ಬಿಗಿ ಹಿಡಿಯುತ್ತಿದ್ದೆ. ಸ್ವಲ್ಪ ಹೊತ್ತು ಹಳೆಯ ದಿನಗಳು, ಹಿಂದಿನ ನೆನಪುಗಳು, ನಮ್ಮಿರ್ವರ ಆಪ್ತರು, ಕೆಲವು ಸಾರಿ ವಿಚಾರಮಗ್ನರಾಗಿ ನಮ್ಮ ಭವಿಷ್ಯ, ನಾವು ಮಾಡಬೇಕೆಂದಿರುವ ಕೆಲಸ, ಇವುಗಳ ವಿಷಯ ಮಾತನಾಡುತ್ತಿದ್ದೆವು. ಅವಳು ವಿಷಮ ಸ್ಥಿತಿಯಲ್ಲಿ ಇದ್ದಾಗ್ಯೂ ಭವಿಷ್ಯಕ್ಕೆ ಅಂಟಿಕೊಂಡೇ ಇದ್ದಳು. ಆಗಾಗ ಬರುತ್ತಿದ್ದ ಸ್ನೇಹಿತರು ಆಕೆಯ ಸ್ಥಿತಿಯು ತಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಉತ್ತಮಗೊಳ್ಳುತ್ತಿದೆ ಎಂದು ಆಶ್ಚರ್ಯಪಡುತ್ತಿದ್ದರು. ಆ ಜಾಜ್ವಲ್ಯಮಾನವಾದ ಕಣ್ಣುಗಳಿಂದ ಮತ್ತು ಮುಗುಳ್ನಗೆಯಿಂದ ಮೋಸಹೋದರು.

ಮಾಗಿಯಕಾಲದ ದೀರ್ಘ ಸಂಧ್ಯಾಕಾಲದಲ್ಲಿ ನಾನು ಉಳಿದಿದ್ದ ಭೋಜನಾಲಯದ ಕೊಠಡಿಯಲ್ಲಿ ಏಕಾಂಗಿಯಾಗಿ ಕುಳಿತು ಕಾಲಕಳೆಯುತ್ತಿದ್ದೆ ಅಥವಾ ಹೊಲಗಳ ಮಧ್ಯೆ ಅಥವಾ ಕಾಡಿನೊಳಗೆ ತಿರುಗಾಡುತ್ತಿದ್ದೆ. ಆಗ ಕಮಲಳ ನೂರಾರು ಚಿತ್ರಗಳು ಆಕೆಯ ಅಗಾಧ ಆತ್ಮಶ್ರೀಯ ನೂರಾರು ರೂಪಗಳು ಒಂದರ ಮೇಲೊಂದು ನನ್ನ ಮನಸ್ಸಿನ ಸ್ಮೃತಿಪಥದಲ್ಲಿ ಸುಳಿದು ಹೋಗುತ್ತಿದ್ದವು. ನಮ್ಮ ಮದುವೆಯಾಗಿ ಸುಮಾರು ೨೦ ವರ್ಷಗಳಾಗಿದ್ದವು. ಆದರೂ ಎಷ್ಟೋ ಸಲ ಆಕೆಯ ಮಾನಸಿಕ ಆಧ್ಯಾತ್ಮಿಕ ಚಿರನೂತನ ದೃಷ್ಟಿಯು ನನ್ನನ್ನು ವಿಸ್ಮಯಗೊಳಿಸುತ್ತಿತ್ತು. ಎಷ್ಟೋ ವಿವಿಧರೀತಿಗಳಲ್ಲಿ ಆಕೆಯನ್ನು ಅರಿತಿದ್ದೆ. ಈಚೆಗೆ ಆಕೆಯನ್ನು ಅರ್ಥಮಾಡಿಕೊಳ್ಳಲು ಬಹಳ ಪ್ರಯತ್ನಪಟ್ಟೆ. ಅರ್ಥಮಾಡಿಕೊಳ್ಳಲು ಸಾಧ್ಯವಿರಲಿಲ್ಲವೆಂದಲ್ಲ. ಅನೇಕ ವೇಳೆ ಅವಳನ್ನು ಅರಿತಿದ್ದೇನೆಯೇ, ಅರ್ಥಮಾಡಿಕೊಂಡಿದ್ದೇನೆಯೇ ಎಂದು ನಾನೇ ಆಶ್ಚರ್ಯಪಡುತ್ತಿದ್ದೆ. ನಿಜವಾಗಿಯೂ ಅಸ್ತಿತ್ವವೇ ಇಲ್ಲದ, ಗ್ರಹಿಸಲು ಸಹ ಅತಿ ಕಷ್ಟವಾದ ಮೋಹಿನಿಯಂತೆ ಕಂಡೂ ಕಾಣದ ಯಾವದೋ ಮೋಹಕ ಶಕ್ತಿ ಅವಳಲ್ಲಿತ್ತು. ಒಂದೊಂದು ವೇಳೆ ನೆಟ್ಟನೋಟದಿಂದ ಆಕೆಯ ಕಣ್ಣುಗಳನ್ನು ದೃಷ್ಟಿಸಿದರೆ ಯಾವದೋ ಹೊಸ ವ್ಯಕ್ತಿ ನನ್ನನ್ನು ನೋಡುತ್ತಿದ್ದಂತೆ ಭಾಸವಾಗುತ್ತಿತ್ತು.

ಎಲ್ಲೋ ಸ್ವಲ್ಪ ದಿನ ಶಾಲೆಗೆ ಹೋಗಿದ್ದಳೇ ಹೊರತು, ಸರಿಯಾದ ವಿದ್ಯಾಭ್ಯಾಸ ಯಾವದೂ ಅವಳಿಗಿರಲಿಲ್ಲ. ಆಕೆಯ ಮನಸ್ಸು ಶಿಕ್ಷಣ ವಿಧಾನದ ಪಡಿಯಚ್ಚಿನ ಎರಕವಾಗಿರಲಿಲ್ಲ. ಈಗ ಸರ್ವಸಾಮಾನ್ಯವಾಗಿರುವ ಭಾವನೆಗಳಾವವೂ ಇಲ್ಲದ ಸರಳ ಸ್ವಭಾವದ ಹುಡಿಗೆಯಾಗಿ ನಮ್ಮ ಮನೆಗೆ ಬಂದಳು. ಆ ಹುಡುಗ ದೃಷ್ಟಿ ಕೊನೆಯವರೆಗೂ ಇತ್ತು. ಆದರೆ ಹೆಂಗಸಾಗುತ್ತ ಬಂದಂತೆ ಪ್ರಚಂಡ ಬಿರುಗಾಳಿಗೆ ಮುಂಚೆ ಕಾಣುವ ನಿರ್ಮಲ ಗಂಭೀರ ಜಲದಂತೆ ಆಕೆಯ ಕಣ್ಣುಗಳ ಆಳವೂ ಮತ್ತು ಪ್ರಕಾಶವೂ ಹೆಚ್ಚಿದವು. ಸಮತೂಕವಿಲ್ಲದ ಈಗಿನ ಕಾಲದ ಹುಡುಗಿಯರ ಅಭ್ಯಾಸಗಳಾವುವೂ ಇರಲಿಲ್ಲ. ಆಧುನಿಕ ಪದ್ಧತಿಗಳಿಗೇನೊ ಸುಲಭವಾಗಿ ಹೊಂದಿಕೊಂಡಳು. ಆದರೂ ಆಕೆ ಭಾರತ ಮಹಿಳೆಯೇ, ಮುಖ್ಯವಾಗಿ ಕಾಶ್ಮೀರದ ಹೆಣ್ಣುಮಗಳೇ; ಸೂಕ್ಷ್ಮಳಾದರೂ ಬಹು ಗಂಭೀರ. ವಯಸ್ಸಾಗಿದ್ದರೂ ಎಳೆಯ ಮಗುವಿನಂತೆ

ಕೋಮಲ. ಹುಚ್ಚುಹುಚ್ಚಾಗಿ ನಡೆದರೂ ಬುದ್ಧಿವಂತೆ. ಗೊತ್ತಿಲ್ಲದವರೊಂದಿಗೆ ಅಥವಾ ಬೇಡವಾದವರೊಂದಿಗೆ ಮಾತೇ ಇಲ್ಲ. ಆದರೆ ತನ್ನ ಪರಿಚಯಸ್ಥರು ಮತ್ತು ಆಪ್ತೇಷ್ಟರ ಮಧ್ಯೆ ತುಳುಕುವ ನಗೆ. ಸರಿಯೋ ತಪ್ಪೋ ಬಹುಬೇಗ ಒಂದು ಅಭಿಪ್ರಾಯಕ್ಕೆ ಬಂದುಬಿಡುವ ಸ್ವಭಾವ. ಆದರೆ ಒಪ್ಪೊ ನೆಪ್ಪೊ ಮನಸ್ಸು ಮಾಡಿದ ಮೇಲೆ ಕಗ್ಗಲ್ಲು. ಆಕೆಯಲ್ಲಿ ಕಪಟ ಇರಲೇ ಇಲ್ಲ. ಯಾರನ್ನಾದರೂ ಕಂಡರಾಗದಿದ್ದರೆ ಮುಚ್ಚುಮರೆ ಇಲ್ಲವೇ ಇಲ್ಲ. ಮರೆಮಾಚಲು ಯತ್ನಪಟ್ಟರೂ ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ತನ್ನ ಪ್ರಾಮಾಣಿಕತೆಯಿಂದ ಆಕೆಯಂತೆ ನನ್ನ ಮೇಲೆ ಪರಿಣಾಮ ಮಾಡಿದವರು ಬಹಳಿಲ್ಲ.

ನಮ್ಮ ಮದುವೆಯಾದ ಮೊದಲ ದಿನಗಳನ್ನು ಜ್ಞಾಪಿಸಿಕೊಂಡೆ. ಅನೇಕ ವಿಧದಲ್ಲಿ ಆಕೆಯ ಸಹಧರ್ಮಿಯಾಗಿರಬೇಕಾದುದು ನನ್ನ ಕರ್ತವ್ಯವಾಗಿದ್ದರೂ ಆ ಸಹವಾಸವನ್ನು ಆಕೆಗೆ ನಾನು ಕೊಡಲಿಲ್ಲ. ಆಕೆಯನ್ನು ಕಂಡರೆ ನನಗೆ ಅಪಾರವಾದ ಪ್ರೀತಿಯಿದ್ದರೂ ಅವಳನ್ನು ಮರೆತು ಸಹ ಬಿಟ್ಟಿದ್ದೆ. ಏಕೆಂದರೆ ನಾನು ಆಗ ಒಬ್ಬ ಮಂತ್ರಮುಗ್ಧನಂತೆ ಹಿಡಿದ ಕಾರ್ಯದಲ್ಲಿ ಸದಾ ಮಗ್ನನಾಗಿದ್ದೆ; ನನ್ನ ಸುತ್ತಮುತ್ತಲಿನ ಜನರೆಲ್ಲ ನಿಸ್ಸತ್ವ ಪ್ರೇತಗಳು ಎಂದು ನನ್ನದೇ ಒಂದು ಕನಸಿನ ಲೋಕದಲ್ಲಿ ಇದ್ದೆ. ನನ್ನ ಶಕ್ತಿಮೀರಿ ಕೆಲಸ ಮಾಡುತ್ತಿದ್ದೆ; ಕೈಗೊಂಡ ಕೆಲಸದ ವಿಷಯವೊಂದೇ ಮನಸ್ಸಿನಲ್ಲಿ ತುಂಬಿತುಳುಕುತ್ತಿತ್ತು. ನನ್ನ ಸಮಯವೆಲ್ಲ ಆ ಒಂದು ಕೆಲಸಕ್ಕೆ; ಬೇರೆ ಯಾವುದಕ್ಕೂ ಎಡೆಯಿಲ್ಲ.

ಆದರೂ ಆಕೆಯನ್ನು ಮರೆಯಲು ಸಾಧ್ಯವೇ ಇರಲಿಲ್ಲ. ಲಂಗರಿಗೆ ಬರುವ ನಾವೆಯಂತೆ ಪದೇ ಪದೇ ಆಕೆಯ ಬಳಿ ಬರುತ್ತಿದ್ದೆ. ಮನೆ ಬಿಟ್ಟು ಬಹಳ ದಿನಗಳಾದರೆ, ಆಕೆಯ ಯೋಚನೆಯಿಂದ ತಲೆ ಸ್ವಲ್ಪ ತಂಪಾಗುತ್ತಿತ್ತು. ಬೇಗ ಮನೆಗೆ ಹಿಂದಿರುಗುವ ಕುತೂಹಲ ಹೆಚ್ಚುತ್ತಿತ್ತು. ನನ್ನ ಮನಸ್ಸಿಗೆ ಸಮಾಧಾನ ಕೊಟ್ಟು ನನಗೆ ಶಕ್ತಿದಾಯಕಳಾಗಿ ನನ್ನ ಮನಸ್ಸು ಮತ್ತು ದೇಹಕ್ಕೆ ಹೊಸ ಜೀವಕಳೆಯನ್ನು ಕೊಡಲು ಆಕೆ ಇಲ್ಲದಿದ್ದರೆ ನಾನು ಏನು ತಾನೆ ಮಾಡಲು ಸಾಧ್ಯವಿತ್ತು?

ಆಕೆ ಕೊಟ್ಟುದನ್ನೆಲ್ಲ ನಾನು ಸ್ವೀಕರಿಸಿದ್ದೇನೆ. ಅದಕ್ಕೆ ಪ್ರತಿಯಾಗಿ ಈ ಆರಂಭದ ದಿನಗಳಲ್ಲಿ ನಾನು ಕೊಟ್ಟುದೇನು? ಕರ್ತವ್ಯಭ್ರಷ್ಟನಾದೆನೆಂದು ಎದ್ದು ತೋರುತ್ತದೆ. ಪ್ರಾಯಶಃ ಆ ದಿನಗಳ ಸ್ಮರಣೆಯು ಆಕೆಯ ಮನಸ್ಸಿನಲ್ಲಿ ಬೇರೂರಿತು. ತನ್ನ ಸ್ವಭಾವಸಹಜ ಆತ್ಮಗೌರವ ಮತ್ತು ತೀಕ್ಷ್ಣ ಬುದ್ಧಿಯಿಂದ ನನ್ನ ಸಹಾಯವನ್ನು ಆಕೆಯು ಬಯಸಲಿಲ್ಲ. ಆ ಸಹಾಯ ಕೊಡಲು ಉಳಿದವರಿಗಿಂತ ನಾನೇ ಶಕ್ತನಾಗಿದ್ದರೂ ಆಕೆ ಮಾತ್ರ ಕೇಳಲಿಲ್ಲ. ರಾಷ್ಟ್ರೀಯ ಹೋರಾಟದಲ್ಲಿ ತನ್ನದೇ ಆದ ಒಂದು ವಿಶಿಷ್ಟ ಪಾತ್ರ ವಹಿಸಬೇಕೆಂದು ಆಕೆಯ ಇಚ್ಛೆ ಇತ್ತು; ಆದರೆ ತನ್ನ ಗಂಡನ ಛಾಯೆಯಾಗಿ, ಹಿಂಬಾಲಕಳಾಗಿ ಅಲ್ಲ, ತನ್ನ ಆತ್ಮಕ್ಕೆ ಮತ್ತು ಪ್ರಪಂಚಕ್ಕೆ ತನ್ನ ಸಾರ್ಥಕತೆ ತೋರಲೆಂದು. ಪ್ರಪಂಚದಲ್ಲಿ ಇದಕ್ಕಿಂತ ಹೆಚ್ಚು ಇಷ್ಟವಾದದ್ದು ನನಗೆ ಬೇರೆ ಯಾವದೂ ಇರಲಿಲ್ಲ.

ಆದರೆ ಆಕೆಯ ಅಂತರಂಗವನ್ನು ಅರಿತುಕೊಳ್ಳಲು ನನಗೆ ಬಿಡುವೇ ಇರಲಿಲ್ಲ. ಆಕೆಯ ಉತ್ಕಟೇಚ್ಛೆಗೆ, ಅನ್ವೇಷಣೆಗೆ ನಾನು ಕುರುಡನಾದೆ. ಸೆರೆಮನೆಯಲ್ಲಿ ಕಳೆದ ದಿನಗಳೇ ಹೆಚ್ಚು. ನಾನು ಆಕೆಯಿಂದ ದೂರನಾಗುತ್ತಿದ್ದೆ. ಇಲ್ಲವಾದರೆ ಆಕೆ ಕಾಹಿಲೆ ಬೀಳುತ್ತಿದ್ದಳು. ರವೀಂದ್ರರ ನಾಟಕದಲ್ಲಿನ ಚಿತ್ರಾಳಂತೆ 'ನಾನು ಚಿತ್ರಾ. ಪೂಜಿಸಲು ದೇವತೆಯಲ್ಲ. ಅಸಡ್ಡೆಯಿಂದ ಹುಳುವಿನಂತೆ ತಳ್ಳಿ ಹಾಕಲು ದಯಾಭಿಕ್ಷೆ ಬೇಡುವ ವ್ಯಕ್ತಿಯೂ ಅಲ್ಲ. ನಿನ್ನಸಾಹಸದ ಅಪಾರ ಕಾರ್ಯಗಳ ಜೊತೆಯಲ್ಲಿರಲು ನನಗೂ ಅವಕಾಶ ಕೊಟ್ಟರೆ, ನಿನ್ನ ಜೀವನದ ಮಹತ್ಕಾರ್ಯಗಳಲ್ಲಿ ಸಮಭಾಗಿಯಾಗಲು ಅವಕಾಶ

ಕೊಟ್ಟರೆ ಆಗ ನೀನು ನನ್ನನ್ನು ಅರ್ಥ ಮಾಡಿಕೊಳ್ಳುತ್ತಿ, ಎಂದು ಹೇಳುವಂತೆ ಇತ್ತು ಆಕೆಯ ಅಂತರಂಗ. ಬಾಯಿಂದ ಹೇಳಿಕೊಳ್ಳಲಿಲ್ಲ. ಆದರೆ ಕ್ರಮೇಣ ಈ ಸಂದೇಶವನ್ನು ಅವಳ ಕಣ್ಣುಗಳಲ್ಲಿ ಕಂಡೆ.

೧೯೩೦ ರ ಆದಿಭಾಗದಲ್ಲಿ ಆಕೆಯ ಈ ಇಚ್ಛೆಯನ್ನು ಗ್ರಹಿಸಿದೆ. ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡಿದೆವು. ಆ ಅನುಭವದಲ್ಲಿ ಒಂದು ಹೊಸ ಆನಂದವಿತ್ತು. ಸ್ವಲ್ಪಕಾಲ ಮಾತ್ರ ಜೀವನದ ಆನಂದ ಶಿಖರವನ್ನೇರಿದ್ದಂತೆ ಇತ್ತು. ಮುಂಬರುವ ರಾಷ್ಟ್ರೀಯ ಆಂದೋಳನದ ಗುಡುಗು ಕೇಳಿ ಬರುತ್ತಿತ್ತು. ಕಾರ್ಮೋಡಗಳು ಕವಿಯಹತ್ತಿದ್ದವು. ಆ ಸುಖದ ದಿನಗಳು ಬೇಗ ಕೊನೆಗಂಡವು. ಎಪ್ರಿಲ್ ಆರಂಭದಲ್ಲೇ ಶಾಸನಭಂಗ ಚಳವಳಿಯು ಆರಂಭವಾಗಿ ಸರಕಾರದ ದಬ್ಬಾಳಿಕೆಯು ಉಗ್ರರೂಪ ತಾಳಿತ್ತು. ನಾನು ಸೆರೆಮನೆಯನ್ನೂ ಸೇರಿದೆ.

ಗಂಡಸರೆಲ್ಲರೂ ಸೆರೆಮನೆ ಸೇರಿದ್ದೆವು. ಆಗ ಒಂದು ವಿಚಿತ್ರ ಸಂಗತಿ ನಡೆಯಿತು, ನಮ್ಮ ಮಹಿಳೆಯರು ಮುನ್ನುಗ್ಗಿ ಹೋರಾಟ ನಡೆಸಲು ನಿಂತರು. ಮಹಿಳೆಯರೇನೋ ಹೋರಾಟದಲ್ಲಿ ಹಿಂದೆ ಭಾಗವಹಿಸಿ ಇದ್ದರು. ಆದರೆ ಈಗ ತಂಡೋಪತಂಡವಾಗಿ ಕಾರ್ಯರಂಗಕ್ಕಿಳಿಯುವದು ನೋಡಿ, ಬ್ರಿಟಿಶ ಸರಕಾರಕ್ಕೆ ಹಾಗಿರಲಿ, ಅವರ ಗಂಡಂದಿರಿಗೂ ಆಶ್ಚರ್ಯವಾಯಿತು. ಶ್ರೀಮಂತ ಮತ್ತು ಮಧ್ಯಮವರ್ಗದ ಸುಖಜೀವನದ ತಂಪಿನಲ್ಲಿ ಕೋಮಲವಾಗಿ ಬೆಳೆದ ಕುಲೀನ ಮಹಿಳೆಯರು, ರೈತಮಹಿಳೆಯರು ಕೂಲಿಕಾರ ಸ್ತ್ರೀಯರು, ಬಡವರು ಬಲ್ಲಿದರು ದಶಸಹಸ್ರಗಟ್ಟಲೆ ಸರಕಾರದ ಆಜ್ಞೆಯನ್ನು ಭಂಗಮಾಡುತ್ತ ಲಾಠಿ ಏಟಿಗೆ ತಲೆ ಒಡ್ಡಿದರು. ಈ ಧೈರ್ಯ ಮತ್ತು ಸಾಹಸದ ದೃಶ್ಯ ಹಾಗಿರಲಿ, ಅವರು ತೋರಿಸಿದ ಸಂಘಟನಾ ಶಕ್ತಿ ಸಹ ವಿಸ್ಮಯಕಾರಕವಾಗಿ ಇತ್ತು.

ಈ ವಾರ್ತೆಯು ನೈನಿ ಸೆರೆಮನೆಯಲ್ಲಿ ನಮಗೆ ತಿಳಿದಾಗ ನಮಗಾದ ಆನಂದವನ್ನು, ಭಾರತದ ಮಹಿಳೆಯರ ವಿಷಯದಲ್ಲುಂಟಾದ ಅದ್ಭುತ ಗೌರವವನ್ನು ನಾನೆಂದಿಗೂ ಮರೆಯಲಾರೆ. ನಮ್ಮ ಎದೆಯುಬ್ಬಿ, ಕಣ್ಣುಗಳು ಆನಂದ ಬಾಷ್ಪದಲ್ಲಿ ಮುಸುಕುಗೊಂಡದ್ದರಿಂದ ಪರಸ್ಪರ ಮಾತನಾಡಲು ಸಹ ಶಕ್ತರಾಗಲಿಲ್ಲ.

ಇಷ್ಟು ಹೊತ್ತಿಗೆ ನನ್ನ ತಂದೆಯವರು ನೈನಿ ಸೆರೆಮನೆಗೆ ಬಂದು ಸೇರಿದ್ದರು. ನಮಗೆ ಗೊತ್ತಿಲ್ಲದ ಎಷ್ಟೋ ವಿಷಯಗಳನ್ನು ಅವರು ತಿಳಿಸಿದರು. ಹೊರಗಡೆ ಶಾಸನಭಂಗ ಚಳಿವಳಿಯ ನಾಯಕರಾಗಿದ್ದರು. ದೇಶಾದ್ಯಂತ ನಡೆಯುತ್ತಿದ್ದ.ಈ ಮಹಿಳಾ ಜಾಗೃತಿಗೆ ಅವರು ಬೆಂಬಲ ಕೊಟ್ಟಿದ್ದಿಲ್ಲ. ಪಿತೃಧರ್ಮದ, ಹಳೆಯ ಸಂಪ್ರದಾಯದ ಮನೋಧರ್ಮದಿಂದ ಅವರಿಗೆ ಯುವತಿಯರು ಮತ್ತು ವಯಸ್ಕ ಮಹಿಳೆಯರು ಉರಿಯುವ ಬಿಸಿಲಿನಲ್ಲಿ ಬೀದಿಯಲ್ಲಿ ಅಲೆದಾಡುವದೂ ಪೋಲಿಸಿನವರೊಂದಿಗೆ ವ್ಯಾಜ್ಯ ಮಾಡುವದೂ ಸರಿ ಬೀಳಲಿಲ್ಲ. ಆದರೆ ಜನರ ಮನಸ್ಸಿನ ಕಾವನ್ನು ಅವರು ಅರಿತಿದ್ದರು ! ಆದ್ದರಿಂದ ತಮ್ಮ ಹೆಂಡತಿ, ಹೆಣ್ಣುಮಕ್ಕಳು, ಸೊಸೆಯರು, ಯಾರಿಗೂ ನಿರಾಶೆಗೊಳಿಸಲಿಲ್ಲ. ದೇಶಾದ್ಯಂತ ಮಹಿಳೆಯರು ತೋರಿದ ಅದ್ಭುತ ಶಕ್ತಿ, ಧೈರ್ಯ, ಕಾರ್ಯದಕ್ಷತೆಯನ್ನು ಕಂಡು ಅವರೇ ಬೆರಗಾಗಿದ್ದರು. ತಮ್ಮ ಮನೆಯ ಹೆಣ್ಣುಮಕ್ಕಳ ವಿಷಯದಲ್ಲಂತೂ ಪ್ರೇಮಪೂರಿತ ಹೆಮ್ಮೆಯಿಂದ ಮಾತನಾಡುತ್ತಿದ್ದರು.

ಭಾರತೀಯ ಸ್ವಾತಂತ್ರ್ಯ ದಿನಾಚರಣೆಯ ಹುಟ್ಟುಹಬ್ಬವಾದ ೧೯೩೧ ನೆ ಜನವರಿ ೨೬ ನೆಯ ದಿನ ನಮ್ಮ ತಂದೆಯವರ ಸಲಹೆಯಂತೆ ಇಂಡಿಯಾ ದೇಶದ ಸಹಸ್ರಾರು ಬಹಿರಂಗ ಸಭೆಗಳಲ್ಲಿ ಒಂದು 'ಜ್ಞಾಪಕಾರ್ಥ ನಿರ್ಣಯ'ವು ಅಂಗೀಕರಿಸಲ್ಪಟ್ಟಿತು. ಪೋಲೀಸಿನವರು ಈ ಸಭೆಗಳನ್ನು ನಿಷೇಧಿಸಿ ಅನೇಕ ಸಭೆಗಳನ್ನು ಬಲಾತ್ಕಾರವಾಗಿ ಚದುರಿಸಿದರು. ನಮ್ಮ ತಂದೆ

ಯವರು ಕಾಹಿಲೆಯಲ್ಲಿ. ತಮ್ಮ ಹಾಸಿಗೆಯಿಂದಲೇ ಈ ಸಭೆಗಳನ್ನು ಏರ್ಪಡಿಸಿದರು. ಅವರ ಸಂಘಟನಶಕ್ತಿಗೆ ಅದೊಂದು ಕಿರೀಟಪ್ರಾಯವಾಗಿತ್ತು. ಏಕೆಂದರೆ ಆ ದಿನ ನಮಗೆ ವರ್ತಮಾನಪತ್ರಿಕೆ, ಅಂಚೆ, ತಂತಿ, ಟೆಲಿಫೋನ ಮುದ್ರಣಮಂದಿರ ಯಾವದೂ ಇರಲಿಲ್ಲ. ಆದರೂ ಹಿಮಾಚಲದಿಂದ ಕನ್ಯಾಕುಮಾರಿಯ ವರೆಗೆ ದೂರದ ಮೂಲೆಯ ಹಳ್ಳಿಗಳಲ್ಲಿ ಸಹ ಅದೇ ದಿನ ಅದೇ ಸಮಯಕ್ಕೆ ಅದೇ ನಿರ್ಣಯವನ್ನು ಜನ ತಮ್ಮ ತಮ್ಮ ಪ್ರಾಂತ್ಯಭಾಷೆಗಳಲ್ಲಿ ಅಂಗೀಕರಿಸಿದರು. ನಿರ್ಣಯವಾದ ಹತ್ತುದಿನಗಳಲ್ಲೇ ನಮ್ಮ ತಂದೆಯವರು ತೀರಿಕೊಂಡರು.

ನಿರ್ಣಯ ದೊಡ್ಡದಿತ್ತು; ಅದರಲ್ಲಿ ಒಂದುಭಾಗ ಮಹಿಳೆಯರಿಗೆ ಸಂಬಂಧಿಸಿದ್ದು, "ಮಾತೃಭೂಮಿಯ ಕಷ್ಟಸಮಯದಲ್ಲಿ ತಮ್ಮ ಮನೆ-ಮಠಗಳನ್ನು ತೊರೆದು ಅಪ್ರತಿಹತವಾದ ಧೈರ್ಯ ಮತ್ತು ಸಹನಶಕ್ತಿಯಿಂದ ಗಂಡಸರೊಂದಿಗೆ ಭುಜಕ್ಕೆ ಭುಜ ಕೊಟ್ಟು ಭಾರತೀಯ ರಾಷ್ಟ್ರಯೋಧರ ಮೊದಲ ಹೋರಾಟದಲ್ಲಿ ಮುನ್ನುಗ್ಗಿ ಹೋರಾಟದ ಜಯಾಪಜಯಗಳಲ್ಲಿ ಭಾಗಿಗಳಾದ ಮಹಿಳೆಯರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಮತ್ತು ಗೌರವವನ್ನು ಅರ್ಪಿಸುತ್ತೇವೆ" ಎಂದು ಇತ್ತು.

ಈ ಉತ್ಕ್ರಾಂತಿ ಸಮಯದಲ್ಲಿ ಕಮಲ ಒಳ್ಳೆಯ ಧೈರ್ಯದಿಂದ ಪ್ರಮುಖ ಪಾತ್ರವನ್ನು ವಹಿಸಿದ್ದಳು. ನಗರದ ಎಲ್ಲ ಬಲ್ಲ ಕೆಲಸಗಾರರೂ ಸೆರೆಮನೆಯಲ್ಲಿದ್ದಾಗ ಅಲಹಾಬಾದಿನ ಎಲ್ಲ ಕೆಲಸಗಳ ಸಂಘಟನಕಾರ್ಯದ ಹೊರೆಯು ಅನುಭವವಿಲ್ಲದ ಆಕೆಯ ಹೆಗಲ ಮೇಲೆ ಬಿದ್ದಿತು. ತನ್ನ ಕೆಚ್ಚಿನಿಂದ, ಕಾರ್ಯಶಕ್ತಿಯಿಂದ ಅನುಭವದ ಕೊರತೆಯನ್ನು ನಿವಾರಿಸಿ ಅಲಹಾಬಾದಿನ ಕಣ್ಮಣಿಯಾದಳು.

ನಮ್ಮ ತಂದೆಯ ಕಾಹಿಲೆ ಮತ್ತು ಸಾವಿನ ಸಮಯದಲ್ಲಿ ಪುನಃ ನಾವು ಒಂದುಗೂಡಿದೆವು. ಈಗ ಸಹೋದ್ಯೋಗಿಗಳಾಗಿ, ಪರಸ್ಪರ ಪೂರ್ಣ ಸಹಧರ್ಮಿಗಳಾಗಿ ಒಂದು ಹೊಸ ನಿಲುವಿನಲ್ಲಿ ನಮ್ಮ ಪುನರ್ಮಿಲನವಾಯಿತು. ಕೆಲವು ತಿಂಗಳ ನಂತರ ನಮ್ಮ ಮಗಳೊಂದಿಗೆ ಸಿಂಹಳಕ್ಕೆ ಸ್ವಲ್ಪ ವಿಶ್ರಾಂತಿಗಾಗಿ— ಅದೇ ನಮ್ಮ ಕೊನೆಯ ವಿಶ್ರಾಂತಿಯಾಯಿತು— ಹೊರಟಾಗ ನಮಗೆ ಪರಸ್ಪರ ಪುನರ್ದರ್ಶನವಾದಂತೆ ತೋರಿತು. ಹಿಂದೆ ನಾವು ಒಟ್ಟಿಗೆ ಕಳೆದ ವರ್ಷಗಳೆಲ್ಲ ಈ ಹೊಸ ಆತ್ಮೀಯ ಬಾಂಧವ್ಯಕ್ಕೆ ಸಿದ್ಧತೆಯಂತೆ ಕಂಡಿತು. ನಾವು ಬಹು ಬೇಗ ಹಿಂದಿರುಗಿದೆವು. ಕೆಲಸ ಕಾದಿತ್ತು; ಸೆರೆಮನೆ ಕರೆಯುತ್ತಿತ್ತು. ವಿಶ್ರಾಂತಿಯೆಂಬುದು ಇನ್ನಿಲ್ಲ. ಕಲೆತು ಕೆಲಸ ಮಾಡುವ ಅವಕಾಶವೂ ಇಲ್ಲ. ಎರಡೆರಡು ವರ್ಷಗಳ ಎರಡು ಸೆರೆಮನೆವಾಸಗಳ ಮಧ್ಯೆ ಕೆಲವು ದಿನಗಳ ಹೊರತು ಒಟ್ಟಿಗೆ ಇರುವ ಸಂಭವವೂ ಇರಲಿಲ್ಲ. ಈ ಎರಡನೆಯ ಸೆರೆಮನೆಯ ವಾಸ ಮುಗಿಯುವ ಮುಂಚೆಯೇ ಕಮಲ ಮರಣೋನ್ಮುಖಳಾದಳು.

೧೯೩೪ನೆಯ ಫೆಬ್ರುವರಿ ತಿಂಗಳಲ್ಲಿ ಕಲಕತ್ತದಿಂದ ಹೊರಟ ವಾರಂಟಿನಿಂದ ನನ್ನ ಬಂಧನವಾದಾಗ ನನಗೆ ಕೆಲವು ಬಟ್ಟೆಗಳನ್ನು ತರಲು ಕಮಲ ನಮ್ಮ ಕೊಠಡಿಗೆ ಹೋದಳು. ಆಕೆಯಿಂದ ಬೀಳ್ಕೊಳ್ಳಲು ಹಿಂದೆಯೇ ಹೋದೆ. ಇದ್ದಕ್ಕಿದ್ದ ಹಾಗೆ ನನ್ನನ್ನು ಬಿಗಿದಪ್ಪಿ ಪ್ರಜ್ಞೆ ತಪ್ಪಿ ಮೂರ್ಛೆಹೋದಳು. ಆಕೆ ಈ ರೀತಿ ಎಂದೂ ಮಾಡಿರಲಿಲ್ಲ. ಸೆರೆಮನೆಗೆ ಹೋಗುವುದು ನಮಗೆ ಆಟವಾಗಿ ಹೋಗಿತ್ತು. ಎಲ್ಲರೂ ಯಾವ ಗೊಂದಲವನ್ನು ಎಬ್ಬಿಸದೆ ಸಂತೋಷದಿಂದ ಕಳುಹಿಸಿಕೊಡುತ್ತಿದ್ದರು. ಆದರೆ ಅದೇ ನಮ್ಮ ಕೊನೆಯ ಸಂದರ್ಶನ ಎಂದು ಆಕೆಗೆ ಏನಾದರೂ ಮುಂಬರಿವು ಇತ್ತೆ?

ಪರಸ್ಪರ ಅವಶ್ಯಕತೆ ಅತ್ಯಧಿಕವಿದ್ದಾಗ, ಆಗ ತಾನೇ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದಾಗ, ಎರಡೆರಡು ವರುಷಗಳ ಎರಡು ಸೆರೆಮನೆವಾಸಗಳು ನಮ್ಮ ನಡುವೆ ಬಂದವು. ದೀರ್ಘ

ಸೆರೆಮನೆ ವಾಸದಲ್ಲಿ ಇದೇ ನನ್ನ ಯೋಚನೆಯಾಗಿತ್ತು. ಆದರೂ ನಮ್ಮಿಬ್ಬರ ಪುನರ್ಮಿಲನ ಬಂದೇ ಬರುತ್ತದೆ ಎಂದು ಆಶಿಸಿದ್ದೆ. ಈ ವರ್ಷಗಳನ್ನು ಆಕೆ ಹೇಗೆ ಕಳೆದಳು ? ಊಹೆ ಮಾಡಬಲ್ಲೆನಾದರೂ ತಿಳಿಯದು. ನಮ್ಮ ಸೆರೆಮನೆಯ ಭೇಟಿಗಳಲ್ಲಿ ಅಥವಾ ಹೊರಗೆ ಬಂದ ಸ್ವಲ್ಪ ಕಾಲದಲ್ಲಿ ಸ್ವಾಭಾವಿಕತೆಯೇ ಇರುತ್ತಿರಲಿಲ್ಲ. ನಮ್ಮ ಸಂಕಟವನ್ನು ಇನ್ನೊಬ್ಬರಿಗೆ ತೋರಿಸಿ ಮನಸ್ಸಿಗೆ ನೋವು ಮಾಡಬಾರದೆಂದು ಯಾವಾಗಲೂ ಹಸನ್ಮುಖರಾಗಿಯೇ ಕಾಣಿಸಿಕೊಳ್ಳುತ್ತಿದ್ದೆವು. ಆದರೂ ಅನೇಕ ವಿಷಯಗಳಲ್ಲಿ ಆಕೆಯ ಮನಸ್ಸಿಗೆ ಶಾಂತಿಯಿಲ್ಲ ಎಂಬುದು ಎದ್ದು ಕಾಣುತ್ತಿತ್ತು. ನಾನು ಹೊರಗಿದ್ದರೆ ಪ್ರಾಯಶಃ ಸ್ವಲ್ಪ ಸಹಾಯವಾಗುತ್ತಿದ್ದೆನೋ ಏನೋ ? ಆದರೆ ಸೆರೆಮನೆಯಿಂದ ಅದು ಸಾಧ್ಯವಿರಲಿಲ್ಲ.

ಬೇಡನ್ ವೀಲರ್‌ನಲ್ಲಿ ನಾನೊಬ್ಬನೇ ಏಕಾಂಗಿಯಾಗಿ ಕಾಲ ಕಳೆಯುತ್ತಾ ಇದ್ದಾಗ ಈ ಎಲ್ಲ ಮತ್ತು ಇನ್ನೂ ಅನೇಕ ಯೋಚನೆಗಳು ಹೊಳೆಯಲಾರಂಭಿಸಿದವು. ಸೆರೆಮನೆಯ ಕಾಲವನ್ನು ನಾನು ಸುಲಭವಾಗಿ ಕಳೆಯಲಿಲ್ಲ. ಅದು ಅಭ್ಯಾಸವಾಗಿ ಹೋಗಿತ್ತು. ಆದರೆ ಈ ಹೊಸ ಸನ್ನಿವೇಶ ಅದಕ್ಕಿಂತ ಉತ್ತಮವೇನೂ ಇರಲಿಲ್ಲ. ನಾನು ನಾಜಿ ರಾಜ್ಯದಲ್ಲಿ ಇದ್ದೆ. ಅದರ ವಿಚಿತ್ರ ವೈಪರೀತ್ಯಗಳು ನನಗೆ ಸರಿ ಬೀಳುತ್ತಿರಲಿಲ್ಲ. ಆದರೂ ನಾಜಿಸಂ ನನಗೆ ಯಾವ ಅಡ್ಡಿಯನ್ನು ಮಾಡಲಿಲ್ಲ. ಬ್ಲಾಕ್ ಫಾರೆಸ್ಟಿನ ಮೂಲೆಯಲ್ಲಿನ ಆ ಹಳ್ಳಿಯಲ್ಲಿ ಅದರ ಪ್ರಭಾವ ಎದ್ದು ಕಾಣುತ್ತಿರಲಿಲ್ಲ.

ಪ್ರಾಯಶಃ ನನ್ನ ಮನಸ್ಸೆಲ್ಲ ಇತರ ವಿಷಯಗಳ ಮೇಲೆ ಇತ್ತು. ನನ್ನ ಹಿಂದಿನ ಜೀವನ ಚಿತ್ರಪಟವೆಲ್ಲ ಕಣ್ಣೆದುರಿಗೆ ಸುಳಿದುಹೋಗುತ್ತಿತ್ತು. ಪಕ್ಕದಲ್ಲಿ ಸದಾ ಕಮಲಳ ಚಿತ್ರ. ಆಕೆ ಭಾರತ ಮಹಿಳೆಯ—ಏಕೆ ಸ್ತ್ರೀ ಜಾತಿಯ—ಸಂಕೇತವಾದಳು. ಒಂದೊಂದು ವೇಳೆ ಆಕೆ—ತನ್ನ ಎಲ್ಲ ದೋಷ-ದೌರ್ಬಲ್ಯಗಳಿಂದಲೂ ಪ್ರಿಯತಮವಾದ ಮನಸ್ಸಿಗೆ ಎಟುಕದ ರಹಸ್ಯಗಳಿಂದ ಕೂಡಿದ ನಮ್ಮ ಮಾತೃಭೂಮಿಯಾದ ಭಾರತದ ಭಾವನೆಗಳೊಂದಿಗೆ ಹೇಗೋ ಆಶ್ಚರ್ಯ ರೀತಿಯಲ್ಲಿ ಮಿಳಿತವಾಗುತ್ತಿದ್ದಳು. ಕಮಲೆ ಯಾರು ? ಅವಳು ನನಗೆ ಪರಿಚಿತಳೆ ? ಅವಳ ನೈಜ ಆತ್ಮವನ್ನು ನಾನು ಬಲ್ಲೆನೆ ? ಅವಳು ನನ್ನನ್ನು ಅರಿತು ಅರ್ಥಮಾಡಿಕೊಂಡಿರುವಳೆ ? ಏಕೆಂದರೆ ನಾನೂ ಸಹ ನನ್ನ ಆಳವನ್ನು ನಾನೇ ಅರಿಯದ ಅಸಾಧಾರಣ ವ್ಯಕ್ತಿಯಾಗಿದ್ದೆ. ನನ್ನೊಳಗೆ ಅಡಗಿರುವ ರಹಸ್ಯ, ಅದರ ಎಟುಕದ ಆಳ ನನಗೇ ಅರ್ಥವಾಗುತ್ತಿರಲಿಲ್ಲ. ಇದರಿಂದಲೇ ಒಂದೊಂದು ವೇಳೆ ನನ್ನನ್ನು ಕಂಡರೆ ಕಮಲ ಹೆದರುತ್ತಿದ್ದಳೆಂದು ಕಾಣುತ್ತದೆ. ಮದುವೆಯಾಗಲು ನಾನು ಎಂದಿಗೂ ಸಮರ್ಪಕವಾದ ವರನಲ್ಲ. ಕೆಲವು ವಿಷಯಗಳಲ್ಲಿ ನಾನೂ ಕಮಲಳೂ ಉತ್ತರ–ದಕ್ಷಿಣ ಧ್ರುವಗಳಂತೆ. ಇನ್ನು ಕೆಲ ವಿಷಯಗಳಲ್ಲಿ ಅತೀ ಸಮೀಪ. ಆದರೆ ಒಬ್ಬರಿಗೊಬ್ಬರು ಪರಿಪೋಷಕರಲ್ಲ. ನಮ್ಮ ಶಕ್ತಿಯೇ ನಮ್ಮ ಪರಸ್ಪರ ಬಾಂಧವ್ಯದಲ್ಲಿ ನಿರ್ಬಲವಾಯಿತು. ಪರಸ್ಪರ ಪೂರ್ಣಗ್ರಹಿಕೆ, ಮನಸ್ಸುಗಳ ಮಿಳಿತ ಅಥವಾ ಕಷ್ಟ ಇವು ನಮ್ಮಲ್ಲಿ ಸಾಧ್ಯ. ಬಂದಂತೆ ಅನುಭವಿಸಿ ಸಾಮಾನ್ಯ ಸಂಸಾರಜೀವನ ನಡೆಸುವಂಥ ವ್ಯಕ್ತಿಗಳಾಗಿರಲಿಲ್ಲ ನಾವಿಬ್ಬರೂ.

ಇಂಡಿಯಾ ದೇಶದ ಅಂಗಡಿಗಳಲ್ಲಿ ಮಾರುತ್ತಿದ್ದ ಅನೇಕ ಪಟಗಳಲ್ಲಿ ನನ್ನ ಮತ್ತು ಕಮಲಳ ಬೇರೆ ಬೇರೆ ಚಿತ್ರಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಅಂಟಿಸಿ ಮೇಲೆ "ಆದರ್ಶ ಜೋಡಿ" ಎಂದು ಬರೆದ ಒಂದು ಚಿತ್ರವಿತ್ತು. ಅನೇಕರು ನಮ್ಮನ್ನು ಅದೇ ರೀತಿ ಭಾವಿಸಿದ್ದರು. ಆದರೆ ಆದರ್ಶವನ್ನು ಮುಟ್ಟಲು ಅಥವಾ ಧರಿಸಲು ಬಹಳ ಕಷ್ಟವಿದೆ. ನಮ್ಮ ಕಷ್ಟ ಭೇದಗಳು ಏನೇ ಇರಲಿ, ಜೀವನ ನಮ್ಮಲ್ಲಿ ಎಷ್ಟೇ ಕಣ್ಣುಮುಚ್ಚಾಲೆಯಾಟವನ್ನು ಆಡಿರಲಿ, ನಾವು ತುಂಬ


ಅದೃಷ್ಟಶಾಲಿಗಳು ಎಂದು ಸಿಂಹಳದಲ್ಲಿವಿಶ್ರಾಂತಿ ಪಡೆಯುತ್ತಿದ್ದಾಗ ಕಮಲಳಿಗೆ ನಾನು ಹೇಳಿದ್ದು ಇನ್ನೂ ಜ್ಞಾಪಕದಲ್ಲಿದೆ. ಮದುವೆಯೂ ಒಂದು ವಿಲಕ್ಷಣ ವ್ಯಾಪಾರ. ಸಾವಿರಾರು ವರ್ಷಗಳ ಅನುಭವವಿದ್ದರೂ ಅದು ಹಾಗೆಯೆ ಉಳಿದಿದೆ. ವಿವಾಹಿತ ಜೀವನದ ಅನೇಕ ಭಗ್ನಜೀವಿಗಳನ್ನು ನಾವು ಸುತ್ತಲೂ ನೋಡುತ್ತಿದ್ದೇವೆ. ಅಥವಾ ಎಲ್ಲಕ್ಕೂ ಮಿಗಿಲಾಗಿ ಯಾವುದು ಜಾಜ್ವಲ್ಯಮಾನವಾದ ಸ್ವರ್ಣಮಂದಿರವಾಗಿರಬೇಕೋ ಅದು ಇಂದು ತುಕ್ಕು ಹಿಡಿದು ಮಲಿನವಾಗಿದೆ. ನಾವು ಎಷ್ಟು ಅದೃಷ್ಟಶಾಲಿಗಳು ಎಂದು ಹೇಳಿದಾಗ ಆಕೆ ಒಪ್ಪಿದಳು. ನಾವು ಅನೇಕ ಬಾರಿ ವ್ಯಾಜ್ಯಮಾಡಿ ಒಬ್ಬರ ಮೇಲೊಬ್ಬರು ಸಿಟ್ಟಾಗಿದ್ದರೂ ನಮ್ಮ ಜೀವನಜ್ಯೋತಿ ಪ್ರಕಾಶವಾಗಿಯೇ ಇತ್ತು. ನಾವಿಬ್ಬರೂ ಜೀವನದಲ್ಲಿ ಹೊಸ ಸಾಹಸಗಳನ್ನು ಕಾಣುತ್ತ ಪರಸ್ಪರ ಆಳವನ್ನರಿತುಕೊಳ್ಳಲು ಯತ್ನಿಸುತ್ತಿದ್ದೆವು.

ಕಮಲಳ ಸ್ಥಿತಿ ಉತ್ತಮವಾಗುವಂತೆ ಕಂಡಿತು. ಅಷ್ಟೇನೂ ಉತ್ತಮ ಕಾಣದಿದ್ದರೂ ಹಿಂದಿನ ಕೆಲ ವಾರಗಳ ಸ್ಥಿತಿಯನ್ನು ಹೋಲಿಸಿದರೆ ಎಷ್ಟೋ ಹಗುರ ಕಂಡಿತು. ಗಂಡಾಂತರವನ್ನು ದಾಟಿ ದೇಹಸ್ಥಿತಿ ಸ್ತಿಮಿತಕ್ಕೆ ಬಂದಿತ್ತು. ಅದೇ ಒಂದು ದೊಡ್ಡ ಲಾಭವಾಗಿತ್ತು. ಈ ರೀತಿ ಇನ್ನೊಂದು ತಿಂಗಳು ಕಳೆದಳು. ಇದೇ ಸಮಯದಲ್ಲಿ ನನ್ನ ಮಗಳು ಇಂದಿರಳೊಂದಿಗೆ ಸ್ವಲ್ಪ ಕಾಲ ಮಾತ್ರ ಇಂಗ್ಲೆಂಡಿಗೆ ಹೋದೆ. ಅಲ್ಲಿಗೆ ಹೋಗಿ ಎಂಟು ವರ್ಷಗಳಾಗಿದ್ದವು. ಸ್ನೇಹಿತರು ಬರಲೇಬೇಕೆಂದು ಒತ್ತಾಯ ಮಾಡುತ್ತಿದ್ದರು.

ಬೇಡನ್ ವೀಲರ್‌ಗೆ ಹಿಂದಿರುಗಿ ಪುನಃ ನನ್ನ ದಿನಚರಿಯನ್ನು ಆರಂಭಿಸಿದೆ. ಚಳಿಗಾಲ ಆರಂಭವಾಗಿ ಹಿಮಗಡ್ಡೆ ಭೂಮಿಯನ್ನೆಲ್ಲ ಮುಸುಕಿತ್ತು. ಕ್ರಿಸ್‌ಮಸ್ ಹತ್ತಿರ ಬಂದಂತೆ ಕಮಲಳ ದೇಹಸ್ಥಿತಿ ವಿಷಮಿಸುತ್ತಿರುವಂತೆ ಕಂಡಿತು. ಇನ್ನೊಂದು ಗಂಡಾಂತರ ಆರಂಭ

ಸರ್ವತ್ರ ಸುಂದರ ಸ್ತ್ರೀಯರ ಪರಂಪರಾಗತ

ಸೌಂದರ್ಯ-ಸಾಧನ...



ಪಿಯರ್ಸ್

ಅನುಪಮ ಶುದ್ಧತೆ ಹಾಗೂ ಸೌಮ್ಯತೆ!

ಪ್ರಾತಃಕಾಲದಲ್ಲಿ—ಹಿಮಕಣ ತೊಳೆದ ಕುಸುಮದಳದಂತೆ ಶುದ್ಧ ಹಾಗೂ ಸೌಮ್ಯವಾದ, ಸರ್ವತ್ರ ಸುಂದರಿಯರ ಪರಂಪರಾಗತ ಸೌಂದರ್ಯ ಸಾಧನವಾದ, ಪಿಯರ್ಸ್‌ನ ಸಮಾಗಮ. ಮೊದಲು ಸೌಮ್ಯ ಪಿಯರ್ಸ್ ಸೋಪಿನಿಂದ,— ಗ್ಲಿಸರಿನ್ ಇರುವ, ಪಾರದರ್ಶಕವಾದ, ಮಕ್ಕಳ ಕೋಮಲ ಚರ್ಮಕ್ಕೂ ಒಳ್ಳೆಯದಾದ ಸೋಪಿನಿಂದ—ಸ್ನಾನ! ಸ್ನಾನಾನಂತರ ಸುಗಂಧಮಯವಾದ, ಕೋಮಲವಾದ ಪಿಯರ್ಸ್ ಟಾಲ್ಕಮ್ ಪೌಡರಿನ ಮೃದು ಸ್ಪರ್ಶ...ಇದರಿಂದ ನಿಮ್ಮಲ್ಲಿ ಮುಂಜಾನೆಯ ನವೋಲ್ಲಾಸ ದಿನಪೂರ್ತಿ ಉಳಿಯುತ್ತದೆ.



PTP. 5-50 KN

ಹಿಂದುಸ್ತಾನ್ ಲೀವರ್ ಲಿಮಿಟೆಡ್ ಅವರಿಂದ ಎ. ಅಂಡ್ ಎಫ್. ಪಿಯರ್ಸ್ ಲಿಮಿಟೆಡ್, ಲಂಡನ್, ಅವರಿಗಾಗಿ ಭಾರತದಲ್ಲಿ ತಯಾರಿಸಲ್ಪಟ್ಟಿದೆ

ವಾಗಿತ್ತು. ಅವಳ ಬದುಕು ಸೂಕ್ಷ್ಮವಾಗುತ್ತ ಬಂದು ಆ ೧೯೩೫ ನೇ ಇಸವಿಯ ಕೊನೆಯ ದಿನಗಳಲ್ಲಿ, ಅವಳು ಇನ್ನು ಬದುಕಿರುವುದು ಎಷ್ಟು ದಿನಗಳು ಗಂಟೆಗಳು ಎಂಬುದನ್ನರಿಯದೆ ಕಡು ಕಷ್ಟಗಳಲ್ಲಿ ಹಾದು ಹೋಗುತ್ತಿದ್ದೆ. ಮಂಜು ಮುಚ್ಚಿದ ಆ ಮಾಗಿಯ ಪ್ರಶಾಂತ ದೃಶ್ಯವು ಕೊರೆಯುವ ಮರಣ ಮೌನದಂತೆ ಇತ್ತು. ನನ್ನ ಹಿಂದಿನ ಆಶಾಕಿರಣಗಳೆಲ್ಲ ನಂದಿ ಹೋದವು.

ಆದರೂ ಕಮಲ ಈ ಗಂಡಾಂತರದಲ್ಲಿ ಹೋರಾಡಿ ಅತ್ಯಾಶ್ಚರ್ಯ ಶಕ್ತಿ ತೋರಿ ಅದರಿಂದಲೂ ಪಾರಾದಳು. ಸ್ವಲ್ಪ ಉತ್ತಮಗೊಂಡು ಗೆಲುವಾದಳು. ಬೇಡನ್ ವೀಲರ್ ಬೇಸರವಾಗಿತ್ತು. ಬೇರೆ ಕಡೆಗೆ ಹೋಗೋಣವೆಂದಳು. ಅದಕ್ಕೆ ಇನ್ನೊಂದು ಕಾರಣವೆಂದರೆ ಆ ವಿಶ್ರಾಂತಿಗೃಹದಲ್ಲಿ ಆದ ಇನ್ನೊಬ್ಬ ರೋಗಿಯ ಮರಣ. ಆತನು ಆಗಾಗ ಕಮಲಳಿಗೆ ಹೂಗಳನ್ನು ಕಳಿಸುತ್ತಿದ್ದ. ಮತ್ತು ಅವಳನ್ನು ಎರಡು ಮೂರು ಬಾರಿ ಬಂದು ನೋಡಿಕೊಂಡು ಹೋಗಿದ್ದ. ಆತ ಒಬ್ಬ ಐರಿಷ್ ಹುಡುಗ ಕಮಲಳಿಗಿಂತ ಆತನ ಆರೋಗ್ಯ ಉತ್ತಮವಾಗಿತ್ತು. ಆಗಾಗ್ಗೆ ತಿರುಗಾಡಲು ಸಹ ಹೋಗುತ್ತಿದ್ದ. ಅವನ ಸಾವಿನ ಸುದ್ದಿಯನ್ನು ಕಮಲ ತಿಳಿಯದಿರಲೆಂದು ಪ್ರಯತ್ನಪಟ್ಟೆವು. ಸಾಧ್ಯವಾಗಲಿಲ್ಲ. ಕಾಯಿಲೆಯಲ್ಲಿರುವವರಿಗೆ ಅದರಲ್ಲೂ ಆಸ್ಪತ್ರೆಗಳಲ್ಲಿರುವವರಿಗೆ, ದುರದೃಷ್ಟಶಾಲಿಗಳಿಗೆ ತಿಳಿಯಬಾರದ ವಿಷಯವನ್ನು ಹೇಗೋ ತಿಳಿದುಕೊಳ್ಳುವ ಆರನೆಯದೊಂದು ಇಂದ್ರಿಯಶಕ್ತಿ ಇರುತ್ತದೆ.

ಜನವರಿ ತಿಂಗಳಲ್ಲಿ ಕೆಲವು ದಿವಸ ಪ್ಯಾರಿಸ್ ನಗರಕ್ಕೆ ಹೋಗಿ ಹಾಗೆ ಪುನಃ ಅಲ್ಪಕಾಲ ಮಾತ್ರ ಲಂಡನ್ನಿಗೆ ಹೋದೆ. ಪ್ರಪಂಚವು ಪುನಃ ನನ್ನನ್ನು ಸೆಳೆಯುತ್ತಿತ್ತು. ಎಪ್ರಿಲ್‌ನಲ್ಲಿ ನೆರೆವ ಅಖಿಲ ಭಾರತ ರಾಷ್ಟ್ರ ಮಹಾಸಭೆಯ ಅಧ್ಯಕ್ಷತೆಗೆ ಎರಡನೆಯ ಬಾರಿ ನನ್ನನ್ನು ಆರಿಸಿದ್ದಾರೆ ಎಂಬ ಸುದ್ದಿ ಲಂಡನ್ನಿನಲ್ಲಿ ಇದ್ದಾಗಲೇ ಮುಟ್ಟಿತು. ಅನೇಕ ಸ್ನೇಹಿತರು ಮೊದಲೇ ಎಚ್ಚರಿಸಿದ್ದರಿಂದ ನಾನೂ ಅದನ್ನು ನಿರೀಕ್ಷಿಸಿದ್ದೆ. ಕಮಲಳ ಜೊತೆಗೆ ಚರ್ಚೆ ಸಹ ಮಾಡಿದ್ದೆ. ಈಗ ನನಗೊಂದು ಸಮಸ್ಯೆಯಾಯಿತು. ಈ ಸ್ಥಿತಿಯಲ್ಲಿ ಕಮಲಳನ್ನು ಬಿಟ್ಟು ಹೊರಡುವದೇ ಅಥವಾ ಅಧ್ಯಕ್ಷಪದವಿಗೆ ರಾಜೀನಾಮೆ ಕೊಡುವದೆ? ರಾಜೀನಾಮೆ ಆಕೆಗೆ ಇಷ್ಟವಿರಲಿಲ್ಲ. ಆಕೆಯೂ ಸ್ವಲ್ಪ ಗುಣಹೊಂದಿದ್ದಳು. ಪುನಃ ಸ್ವಲ್ಪ ದಿವಸಗಳ ನಂತರ ಆಕೆಯ ಬಳಿ ಬರಬಹುದೆಂದು ಯೋಚಿಸಿದೆವು. ೧೯೩೬ ನೆಯ ಇಸವಿಯ ಕೊನೆಯಲ್ಲಿ ಬೇಡನ್ ವೀಲರ್ ಬಿಟ್ಟು ಸ್ವಿಜರ್ಲೆಂಡಿನ ಲಾಸೆನ್ ಬಳಿ ಒಂದು ವಿಶ್ರಾಂತಿಮಂದಿರಕ್ಕೆ ಕಮಲಳನ್ನು ಕರೆದುಕೊಂಡು ಬಂದೆ.

ಕಮಲಳಿಗೂ ಮತ್ತು ನನಗೂ ಸ್ವಿಜರ್ಲೆಂಡ್ ಚೆನ್ನಾಗಿತ್ತು. ಆಕೆಗೆ ಹೆಚ್ಚು ಸಂತೋಷವಾಯಿತು. ಸ್ವಿಜರ್ಲೆಂಡಿನ ಈ ಪ್ರಾಂತ್ಯ ನನಗೆ ಸ್ವಲ್ಪ ಪರಿಚಯವಿದ್ದುದರಿಂದ ನನಗೂ ಸುಖವಾಗಿತ್ತು. ಆಕೆಯ ದೇಹಸ್ಥಿತಿಯಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ. ಆದ್ದರಿಂದ ಯಾವ ಭಯವೂ ತೋರಲಿಲ್ಲ. ನಿಧಾನವಾಗಿ ಚೇತರಿಸಿಕೊಳ್ಳುತ್ತ ಇನ್ನೂ ಕೆಲವು ಕಾಲ ಅದೇ ಸ್ಥಿತಿಯಲ್ಲಿರುವಂತೆ ತೋರಿತು.

ಈ ಮಧ್ಯೆ ಇಂಡಿಯಾದಿಂದ ಮೇಲಿಂದಮೇಲೆ ಕರೆ ಬರಲಾರಂಭಿಸಿತು. ಅಲ್ಲಿ ನನ್ನ ಸ್ನೇಹಿತರು ಹಿಂದಿರುಗಬೇಕೆಂದು ಒತ್ತಾಯ ಮಾಡುತ್ತಿದ್ದರು. ಸದಾ ನನ್ನ ದೇಶದ ಸಮಸ್ಯೆಗಳ ಆಲೋಚನೆಯಲ್ಲಿ ಮನಸ್ಸು ಕುದಿಯತೊಡಗಿತು ಸೆರೆಮನೆಯ ವಾಸದಿಂದಲೋ ಇತರ ಕಾರಣಗಳಿಂದಲೋ ಸಾರ್ವಜನಿಕ ಪ್ರಶ್ನೆಗಳಲ್ಲಿ ಪ್ರತ್ಯಕ್ಷ ಭಾಗವಹಿಸಲು ನನಗೆ ಸಾಧ್ಯವಾಗಲಿಲ್ಲ. ಮೂಗುದಾರ ಕಿತ್ತುಹಾಕಿ ಮುನ್ನುಗ್ಗಲು ಹಾತೊರೆಯುತ್ತಿದ್ದೆ. ಪ್ಯಾರಿಸ್ ಮತ್ತು ಲಂಡನ್ ನಗರಗಳ

ನನ್ನ ಭೇಟಿಯಿಂದ ಮತ್ತು ಇಂಡಿಯಾದಿಂದ ಬಂದ ವಾರ್ತೆಯಿಂದ ಪೊರೆ ಬಿಟ್ಟ ಹಾವಿನಂತಾಗಿದ್ದೆ. ಹಿಂದೇಟು ಹಾಕಲು ಸಾಧ್ಯವೇ ಇರಲಿಲ್ಲ.

ಕಮಲಳ ಸಂಗಡ ಚರ್ಚೆಮಾಡಿ ವೈದ್ಯರ ಸಲಹೆ ಪಡೆದೆ. ಇಂಡಿಯಾಕ್ಕೆ ಹಿಂತಿರುಗಬೇಕೆಂದು ಇಬ್ಬರೂ ಒಪ್ಪಿದರು. ಫೆಬ್ರುವರಿ ೨೮ನೆ ದಿನ ನಾನು ಲಾಸೆನ್‌ನಿಂದ ಹೊರಡಬೇಕಾಗಿತ್ತು. ಇಷ್ಟೆಲ್ಲ ಆದಮೇಲೆ ನಾನು ಅವಳಿಂದ ಅಗಲಿ ಹೊರಡಲು ಕಮಲಳಿಗೆ ಮನಸ್ಸಿಲ್ಲವೆಂದು ಭಾಸವಾಯಿತು. ಆದರೂ ನನ್ನ ಕಾರ್ಯಕ್ರಮವನ್ನು ಬದಲಾಯಿಸಬೇಕೆಂದು ಆಕೆ ಹೇಳಲಿಲ್ಲ. ಇಂಡಿಯಾದಲ್ಲಿ ಬಹಳ ದಿನ ಇರುವದಿಲ್ಲ, ಎರಡು ತಿಂಗಳಲ್ಲಿ ಹಿಂದಿರುಗುತ್ತೇನೆ ಎಂದು ಹೇಳಿದೆ. ಆಕೆಗೆ ಬೇಕೆಂದರೆ ಇನ್ನೂ ಮುಂಚೆಯೆ ಬರುತ್ತೇನೆ. ಕೇಬಲ್ ಕೊಟ್ಟರೆ ವಿಮಾನ ಮೂಲಕ ಒಂದು ವಾರದಲ್ಲಿ ಬರುತ್ತೇನೆ ಎಂದೆ.

ನಾನು ಹೊರಡಲು ನಾಲ್ಕೈದು ದಿನಗಳು ಮಾತ್ರ ಇದ್ದವು. ಇಂದಿರ ಹತ್ತಿರದಲ್ಲೇ ಬೆಕ್ಸನಲ್ಲಿ ಓದುತ್ತಿದ್ದಳು. ನಮ್ಮೊಟ್ಟಿಗೆ ಆ ಕೊನೆಯ ದಿನಗಳನ್ನು ಕಳೆಯಲು ಬರುವವಳಿದ್ದಳು. ವೈದ್ಯನು ಬಂದು ನನ್ನ ಪ್ರಯಾಣವನ್ನು ಒಂದು ವಾರ ಅಥವಾ ಹತ್ತು ದಿವಸ ಮುಂದುವರಿಸಲು ಹೇಳಿದ. ಇನ್ನೇನೂ ಹೇಳಲಿಲ್ಲ. ಒಡನೆ ಒಪ್ಪಿ, ಆ ಮುಂದಿನ ಕೆ. ಎಲ್. ಎಂ. ವಿಮಾನದಲ್ಲಿ ಸ್ಥಳವಿಡಲು ತಿಳಿಸಿದೆ.

ಆ ಕೊನೆಯ ದಿನಗಳು ಕಳೆಯುತ್ತ ಬಂದಂತೆ ಕಮಲಳಲ್ಲಿ ಒಂದು ಅತಿ ಸೂಕ್ಷ್ಮ ಅಸಾಧ್ಯ ವ್ಯತ್ಯಾಸ ಕಂಡಿತು. ನನಗೆ ತೋರುವ ಮಟ್ಟಿಗೆ ದೇಹಸ್ಥಿತಿ ಒಂದೇ ಸಮನಿತ್ತು. ಆದರೆ ಆಕೆಯ ಮನಸ್ಸು ಬಾಹ್ಯಪ್ರಪಂಚದಿಂದ ದೂರ ದೂರವಾಗುವಂತೆ ಕಾಣುತ್ತಲಿತ್ತು. "ಯಾರೋ ತನ್ನನ್ನು ಕರೆಯುತ್ತಿದ್ದಾರೆ. ನಾನು ಯಾರನ್ನೂ ಕಾಣದಿದ್ದರೂ ಯಾರೋ ಕೊಠಡಿಯೊಳಗೆ ಬಂದರು. ಯಾವದೋ ಆಕೃತಿ ಕಾಣಿಸುತ್ತಿದೆ" ಎಂದು ಹೇಳುತ್ತಿದ್ದಳು.

ಫೆಬ್ರುವರಿ ೨೮ನೆ ದಿನ ಬೆಳಗಿನ ಜಾವ ಅವಳ ಉಸಿರು ಅಡಗಿತು. ಇಂದಿರ ಅಲ್ಲಿಯೇ ಇದ್ದಳು ಮತ್ತು ಈ ಕೊನೆಯ ದಿನಗಳಲ್ಲಿ ಸದಾ ನಮ್ಮ ಆಪ್ತಸ್ನೇಹಿತ ಡಾಕ್ಟರ್ ಅತಲ್ ಸಹ ನಮ್ಮೊಂದಿಗೆ ಇದ್ದರು.

ಸ್ವಿಜರ್ಲಂಡಿನ ಹತ್ತಿರದ ಪಟ್ಟಣಗಳ ಸ್ನೇಹಿತರುಗಳು ಬಂದರು. ಲಾಸೆನ್ನಿನ ಸ್ಮಶಾನಕ್ಕೆ ಅವಳನ್ನು ಒಪ್ಪಿಸಿದೆವು. ಅಷ್ಟುಬಾರಿ ಅಷ್ಟು ಚೆನ್ನಾಗಿ ನಗುತ್ತಿದ್ದ ಆ ಮುದ್ದು ಮುಖ, ಸುಂದರ ದೇಹ

ನಾಲ್ಕೇ ನಿಮಿಷಗಳಲ್ಲಿ ಸುಟ್ಟು ಬೂದಿಯಾಯಿತು. ಆ ಪ್ರತಿಭಾವಂತ, ಉಜ್ವಲ ಜೀವಂತ ವ್ಯಕ್ತಿಯ ಮೃತ ಉಳಿಕೆ ಒಂದು ಸಣ್ಣ ಮಡಿಕೆಯಲ್ಲಿ.

ಲಾಸೆನ್ ಮತ್ತು ಯುರೋಪಿನಲ್ಲಿ ನನ್ನನ್ನು ಬಂಧಿಸಿದ್ದ ಕಟ್ಟು ಕಡಿದುಹೋಯಿತು. ಅಲ್ಲಿ ಇರಬೇಕಾದ ಅಗತ್ಯವೂ ಇರಲಿಲ್ಲ. ನಿಜವಾಗಿ ನೋಡಿದರೆ ನನ್ನ ಜೀವನದ ಇನ್ನೂ ಏನೋ ಒಂದು ಕಟ್ಟು ಕಡಿದು ಹೋಯಿತು. ಅದರ ಅರಿವು ನನಗೆ ಈಚೀಚೆಗೆ ಕ್ರಮೇಣ ಆಗಿದೆ. ಆ ದುರ್ದಿನಗಳಲ್ಲಿ ನನ್ನ ಮನಸ್ಸೇ ಸರಿಯಿರಲಿಲ್ಲ.

ಮರುಪ್ರಯಾಣದಲ್ಲಿ ಕೈರೋ ಬಿಟ್ಟನಂತರ ಗಂಟೆಗಂಟೆಗೂ ಮರುಭೂಮಿಯ ಮೇಲೆ ಹಾರಿ ಹೋಗುವಾಗ ಒಂದು ಭಯಂಕರ ವಿವಿಕ್ತತೆಯನ್ನು, ಶೂನ್ಯತೆಯನ್ನು ಅಸಾರ್ಥಕತೆಯನ್ನು ಅನುಭವಿಸಿದೆ. ನನ್ನ ಮನೆಗೆ ಒಬ್ಬನೇ ಏಕಾಂಗಿಯಾಗಿ ಹೋಗುತ್ತಿದ್ದೇನೆ. ಇನ್ನು ಅದು ನನಗೆ ಮನೆಯೇ ಅಲ್ಲ. ನನ್ನ ಪಕ್ಕದಲ್ಲಿ ಒಂದು ಬುಟ್ಟಿ. ಆ ಬುಟ್ಟಿಯಲ್ಲಿ ಒಂದು ಸಣ್ಣ ಮಡಕೆ. ಕಮಲಳ ಉಳಿಕೆಯೆಲ್ಲ ಅಷ್ಟೇ. ನಮ್ಮ ಉಜ್ವಲ ಕನಸುಗಳೆಲ್ಲ ಒಡೆದು ನುಚ್ಚುನೂರಾಗಿ ಬೂದಿಯಾಗಿದ್ದವು. ಅವಳು ಇನ್ನಿಲ್ಲ. ಕಮಲ ಇನ್ನಿಲ್ಲ. ಇದೇ ನನ್ನ ಮನಸ್ಸಿನ ಪಲ್ಲವಿಯಾಯ್ತು.

ಭೊವಾಲಿ ವಿಶ್ರಾಂತಿ ಮಂದಿರದಲ್ಲಿ ಆಕೆ ಕಾಹಿಲೆ ಮಲಗಿದ್ದಾಗ ಆಕೆಯೊಂದಿಗೆ ನಾನು ಚರ್ಚೆಮಾಡಿ ಬರೆದ ನನ್ನ ಜೀವನ ಚರಿತ್ರೆ— "ನನ್ನ ಆತ್ಮಕಥೆ" ಯನ್ನು ಜ್ಞಾಪಿಸಿಕೊಂಡೆ. ಅದನ್ನು ಬರೆಯುತ್ತಿದ್ದಾಗ ಆಗಾದ ಒಂದೆರಡು ಭಾಗಗಳನ್ನು ತೆಗೆದುಕೊಂಡು ಆಕೆಗೆ ಓದುತ್ತಿದ್ದೆ. ಅಲ್ಲಲ್ಲಿ ಕಂಡು ಕೇಳಿದ್ದಳು, ಅಷ್ಟೇ. ಇನ್ನು ಉಳಿದುದನ್ನು ಆಕೆ ನೋಡುವದೆಲ್ಲಿ? ನಾವಿಬ್ಬರೂ ಸೇರಿ ನಮ್ಮ ಜೀವನ ಪುಸ್ತಕದ ಭಾಗಗಳನ್ನು ಬರೆಯುವುದು ಮುಗಿಯಿತು.

ಬಾಗ್ದಾದ್ ನಗರ ಸೇರಿದೊಡನೆ 'ಕಣ್ಮರೆಯಾದ ಕಮಲಳಿಗೆ' ಎಂದು ಅರ್ಪಣೆಯಿಂದ ಗ್ರಂಥಾರಂಭ ಮಾಡಿ ಎಂದು ನನ್ನ ಆತ್ಮಕಥೆಯನ್ನು ಪ್ರಕಟಿಸುವ ಮುದ್ರಣಕಾರರಿಗೆ ಕೇಬಲ್ ಕಳಿಸಿದೆ.

ಕರಾಚಿಗೆ ಬಂದೆ. ಜನಜಂಗುಳಿ. ಅನೇಕ ಪರಿಚಿತ ಮುಖಗಳು. ಅನಂತರ ಅಲಹಾಬಾದ. ಅಲ್ಲಿ ವೇಗವಾಹಿನಿ ಗಂಗಾಮಾತೆಯ ಮಡಿಲೊಳಗೆ ಮಡಕೆಯಲ್ಲಿದ್ದ ಬೂದಿಯನ್ನು ಚೆಲ್ಲಿದೆವು. ನಮ್ಮ ಪೂರ್ವಜರೆಷ್ಟು ಜನರನ್ನು ಈ ರೀತಿ ಕೊಂಡೊಯ್ದು ಸಮುದ್ರಕ್ಕೆ ಸೇರಿಸಿದ್ದಳೋ. ಆಕೆಯ ತೋಳ್ತೆಕ್ಕೆಯಲ್ಲಿ ನಾವು ಎಷ್ಟು ಜನ ಹಿಂಬಾಲಿಸಬೇಕೋ. *

ನಿಮಗೂ ಗೊತ್ತಿರಲಿ

ಹಾಲಿನಲ್ಲಿ ಮೂರು ತೊಟ್ಟು ನೈಟ್ರಿಕ್ ಆಸಿಡ್ ಹಾಕಿದರೆ ಹಾಲು ನೀರು ಬೇರೆಬೇರೆಯಾಗುವುದು. ಇದರಿಂದ ಉತ್ತಮ ಹಾಲನ್ನು ಗೊತ್ತುಹಚ್ಚಬಹುದು.

* * * *

ಕಾಯಿಪಲ್ಲೆಗಳನ್ನು ಬೇಯಿಸುವಾಗ ಅದರಲ್ಲಿ ಒಂದು ಚಮಚೆ ಸಕ್ಕರೆ ಸೇರಿಸಿದರೆ ಕಾಯಿಪಲ್ಲೆಯ ಬಣ್ಣ ಹಸುರಾಗಿಯೇ ಉಳಿಯುವುದು. ಅಲ್ಲದೆ ರುಚಿಯು ಹೆಚ್ಚಾಗುವುದು.

* * * *

ನಿಂಬೇ ಹಣ್ಣನ್ನು ತುಂಡು ಮಾಡುವ ಮೊದಲು ಸ್ವಲ್ಪ ಸಮಯದವರೆಗೆ ಬಿಸಿನೀರಿನಲ್ಲಿಟ್ಟಲ್ಲಿ ಅದರಿಂದ ಹೆಚ್ಚು ರಸ ದೊರೆಯುವುದು. —ಜಿ. ಎಸ್. ಉಬರಡ್ಕ


ಒಂದು
ಚಮಚತುಂಬ
'ಆರೋಗ್ಯ'ವನ್ನು
ತೆಗೆದುಕೊಳ್ಳಿರಿ
Kruschen S
containing the Active Principles of the
DIRECTIONS FOR USE
ACTIVE INGREDIENTS
NICHOLAS OF INDIA LTD
KRUSCHEN SALTS Trade Mark
ಕ್ರುಶನ್ ಸಾಲ್ಟ್ಸ್ ಸೇವಿಸಿರಿ
ಅದರಲ್ಲಿ ಶರೀರಕ್ಕೆ ಅತ್ಯಾವಶ್ಯಕವಾದ ಖನಿಜ ವಸ್ತುಗಳು
ಮತ್ತು ಲವಣಗಳು ಸರಿಯಾದ ಪ್ರಮಾಣದಲ್ಲಿ ಇವೆ

ನಗೆಮಲ್ಲಿಗೆ

ಒಂದು ವಾರ ರಜೆಯ ಮೇಲೆ ಹೋಗಿದ್ದ ಮ್ಯಾನೇಜರರು ಕೆಲಸಕ್ಕೆ ಹಾಜರಾದೊಡನೆ ಕಾರಕೂನನೊಬ್ಬ, "ಸ್ವಾಮಿ, ತುಸು ವಿಶ್ರಾಂತಿ ಬೇಕಾಗಿದೆ. ಎರಡು ದಿನ ರಜೆ ಕೊಡಿ" ಎಂದ.

ಮ್ಯಾನೇಜರ: ಏನು? ರಜೆ! ನಾನು ಒಂದು ವಾರ ರಜೆಯ ಮೇಲಿದ್ದೆನಲ್ಲ! ಆಗ ನಿಮಗೆ ಬೇಕಷ್ಟು ವಿಶ್ರಾಂತಿ ಸಿಕ್ಕಿರಬೇಕು.

*

ನ್ಯಾಯಾಧೀಶ: ಹೆದರಬೇಡ. ಸತ್ಯವನ್ನು ಹೇಳು. ಇಲ್ಲಿ ಯಾವಾಗಲೂ ನ್ಯಾಯವೇ ಸಿಗುತ್ತದೆ.

ಆರೋಪಿ: ಆದರೆ ಸ್ವಾಮಿ, ನನಗೆ ಜೇಲಿಗೆ ಹೋಗುವ ಮನಸ್ಸಿಲ್ಲ.

*

"ಎಂಥ ಚಳಿಯೆ ಇರಲಿ, ನಾನು ನಸುಕಿನಲ್ಲಿ ತಣ್ಣೀರು ಸ್ನಾನ ಮಾಡುತ್ತೇನೆ."

"ಇರಬಹುದು. ಆದರೆ ಬಡಾಯಿ ಕೊಚ್ಚಿಕೊಳ್ಳುವುದು ಯಾಕೆ?"

"ಮತ್ತೆ! ಬಡಾಯಿ ಕೊಚ್ಚಿಕೊಳ್ಳಬೇಕೆಂದೇ ನಾನು ತಣ್ಣೀರು ಸ್ನಾನ ಮಾಡುತ್ತಿದ್ದೇನೆ. ಇಲ್ಲವಾದರೆ ಆ ಕಷ್ಟವನ್ನು ಯಾವ ಮಗ ಸಹಿಸಿಕೊಂಡಾನು?"

*

ಆಕೆ: ಡಾಕ್ಟರರೇ, ಮಗುವಿನ ಔಷಧಿ ಕೊಡಿರಿ.

ಡಾಕ್ಟರ: ಅಂ! ನಿನ್ನೆ ಎರಡು ದಿನಗಳ ಔಷಧಿ ಕೊಟ್ಟಿದ್ದೆನಲ್ಲ! ಒಂದೇ ದಿನದಲ್ಲಿ ಮುಗಿಸಿಬಿಟ್ಟಿರೇನು? ಪ್ರಮಾಣಕ್ಕಿಂತ ಹೆಚ್ಚು..

ಆಕೆ: ಇಲ್ಲ, ಡಾಕ್ಟರರೇ, ಆದರೆ ಆತನಿಗೆ ಕುಡಿಸುವ ಮೊದಲು ನಾನು ಮತ್ತು ಅವರು (ಗಂಡ) ಒಂದೊಂದು ಚಮಚೆ ಕುಡಿಯಬೇಕಾಯಿತು.

*

"ನಾನು ಮೂರ್ಖ ಅಂತ ನಿಮ್ಮ ಅಭಿಪ್ರಾಯವೇನು?"

"ಛೇ! ಛೇ! ಖಂಡಿತ ಇಲ್ಲ. ಆದರೆ ಸಾವಿರಾರು ಜನರ ಅಭಿಪ್ರಾಯದ ಎದುರು ನನ್ನ ಅಭಿಪ್ರಾಯಕ್ಕೆ ಏನು ಬೆಲೆ ಬಂದೀತು ಹೇಳಿ."

*

ಈತ: ಅಹಾ! ನಾಲ್ಕಾಣೆಗೆ ಒಂದು ಸೇರು ಬೆಣ್ಣೆ ಸಿಗುತ್ತಿದ್ದ ಆ ದಿನಗಳನ್ನು ನೆನೆದರೆ ಹೊಟ್ಟೆ ಚುರ್ರೆನ್ನುತ್ತದೆ.

ಆತ: ಆಗ ನೀವು ಬಹಳ ಬೆಣ್ಣೆ ತಿನ್ನುತ್ತಿದ್ದಿರೇನು?

ಈತ: ಇಲ್ಲ. ಆ ಕಾಲದಲ್ಲಿ ನಾಲ್ಕಾಣೆಯೆಂದರೆ ಈಗಿನ ರೂಪಾಯಿಗಿಂತಲೂ ಹೆಚ್ಚು ಎನಿಸುತ್ತಿತ್ತು.

*

ಆತ: ಕಳೆದ ವಾರವಿಡೀ ನನ್ನ ಹೆಂಡತಿ ಮನೆಯಲ್ಲಿ ಭಾಷಣ ಬಿಗಿದೇ ಬಿಗಿದಳು.

ಈತ: ನೀವು ಸಿಟ್ಟಿಗೆದ್ದು ಎರಡೇಟು ಬಿಗಿದಿರೇನು?

ಆತ: ಇಲ್ಲ. ಅವಳು ಬಯಸಿದ ಜರಿಪತ್ತಲ ಕೊಂಡುಕೊಟ್ಟೆ.

*

ಆಧುನಿಕ ಮಹಿಳಾ ಮಂಡಳದ ಸದಸ್ಯೆಯರೀರ್ವರು ದಿನದ ಸಾಮಾಜಿಕ ಕಾರ್ಯವನ್ನು ಮುಗಿಸಿಕೊಂಡು ಶ್ರಮಪರಿಹಾರಕ್ಕಾಗಿ ನಗರೋದ್ಯಾನದಲ್ಲಿ ಶತಪಥ ಹಾಕುತ್ತಿದ್ದರು. ಅಷ್ಟರಲ್ಲಿ ಒಂದು ಮಗುವನ್ನೆತ್ತಿ-

ಕೊಂಡು ಒಬ್ಬ ಕೆಲಸದಾಕೆ ಬಂದಳು. ಆಗ ಆ ಸದಸ್ಯೆಯರಲ್ಲೊಬ್ಬಳು "ಆಹಾ! ಎಷ್ಟು ಮುದ್ದಾದ ಕೂಸು!" ಎಂದಳು.

"ಹೌದಲ್ಲ!" ಎರಡನೆಯವಳೆಂದಳು.

ಅಷ್ಟರಲ್ಲಿ ಕೆಲಸದಾಕೆ ಸಮೀಪಕ್ಕೆ ಬರಲು ಮೊದಲನೆಯವಳು "ನೋಡಿದೆಯಾ ಎಂಥ ಚಮತ್ಕಾರ! ಈ ಸುಂದರ ಕೂಸು ನನ್ನದೇ." ಎಂದಳು.

"ಹೌದೇನು? ಖಂಡಿತವೇನು?" ಎರಡನೆಯವಳು ಆಶ್ಚರ್ಯದಿಂದ ಕೇಳಿದಳು.

"ಸಂಶಯಕ್ಕೆ ಕಾರಣವೇ ಇಲ್ಲ. ನೋಡಿದ ಕೂಡಲೆ ನಮ್ಮ ಕೆಲಸದಾಕೆಯ ಪರಿಚಯ ನನಗೆ ಹತ್ತಿತು." ಎಂದಳು ಮೊದಲನೆಯವಳು.

*

ಒಬ್ಬ ಸಾಕ್ಷಿದಾರ ತನ್ನ ಮೊದಲಿನ ಹೇಳಿಕೆಗೆ ವಿರುದ್ಧವಾದ ಹೇಳಿಕೆಯನ್ನು ನಂತರ ಕೊಟ್ಟ ಮಾತ್ರಕ್ಕೆ ಆತ ಸುಳ್ಳು ಹೇಳುವವನೆಂದೇನೂ ತಿಳಿಯುವ ಕಾರಣವಿಲ್ಲ ಎಂದು ನ್ಯಾಯಾಧೀಶರು ಜ್ಯೂರಿಗಳೆದುರು ಹೇಳುತ್ತ "ಉದಾಹರಣೆಗೆ, ನಾನು ಇಂದು ಇಲ್ಲಿಗೆ ಬಂದಾಗ ನನ್ನ ಕಿಸೆಯಲ್ಲಿ ಗಡಿಯಾರವಿದೆ ಎಂದು ಆಣೆ ಕೂಡ ಮಾಡುತ್ತಿದ್ದೆ ಬೇಕಾದರೆ. ಆದರೆ ಆಮೇಲೆ ನಾನು ಅದನ್ನು ಮನೆಯಲ್ಲಿ ಬಚ್ಚಲಮನೆಯಲ್ಲಿ ಬಿಟ್ಟು ಬಂದಿರುವದು ನೆನಪಾಯಿತು" ಎಂದರು.

ಅಂದು ರಾತ್ರಿ ನ್ಯಾಯಾಧೀಶರು ಮನೆಗೆ ಹೋದಾಗ ಅವರ ಹೆಂಡತಿ ಕೇಳಿದಳು "ಇಂದು ನಿಮ್ಮ ಗಡಿಯಾರದ ಬಗ್ಗೆ ಅಷ್ಟೇಕೆ ತರಾತುರಿ ನಡೆಸಿದ್ದಿರಿ? ಅದನ್ನು ತರಲು ನಾಲ್ಕು ಜನರನ್ನು ಕಳಿಸಿದ್ದೇಕೆ?"

"ಎಲಾ! ನಾನು ಯಾರನ್ನೂ ಕಳಿಸಲಿಲ್ಲ. ನೀನು ಆ ಜನರಿಗೆ ಏನು ಹೇಳಿದಿ?"

"ಗಡಿಯಾರ ಕೇಳಲು ಬಂದಿದ್ದ ಮೊದಲನೆಯವನ ಹತ್ತಿರ ಕೊಟ್ಟುಬಿಟ್ಟೆ. ಅವನಿಗೆ ಅದಿದ್ದ ಸ್ಥಳವನ್ನು ಕೂಡ ನೀವು ಸರಿಯಾಗಿ ಹೇಳಿ ಕಳಿಸಿದ್ದಿರಿ."

*

ಪಥನಿರ್ದೇಶಕ: ಗೃಹಸ್ಥರೇ, ವಸು. ಸಂಗ್ರಹಾಲಯದಲ್ಲಿರುವ ಎಲ್ಲ ವಸ್ತುಗಳನ್ನು ನಿಮಗೆ ತೋರಿಸಿದಂತಾಯಿತು. ಮತ್ತೇನಾದರೂ ಕೇಳುವುದಿದ್ದರೆ ಕೇಳಬಹುದು.

ಒಬ್ಬ: ಈ ಕಪಾಟುಗಳೆಲ್ಲ ಇಂದೇ ತಯಾರಾಗಿ ಬಂದಿರುವಂತೆ ಲಕಲಕ ಹೊಳೆಯುತ್ತವೆ. ಅದಕ್ಕೆ ಯಾವ ಬಣ್ಣ ಹಚ್ಚಿದ್ದಾರೆ ಎಂದು ಹೇಳಬಲ್ಲಿರೇನು?

*

'ಏನಾಗಿದೆ! ಯಾಕಿಷ್ಟು ಜನ ಕೂಡಿದ್ದಾರೆ ಇಲ್ಲಿ'

'ಯಾರೋ ಒಬ್ಬ ಕುತ್ತಿಗೆ ಮುರಿದು ಸತ್ತು ಬಿದ್ದಿದ್ದಾನೆ.'

'ಪಾಪ! ಎಷ್ಟನೆಯ ಮಾಳಿಗೆಯಿಂದ ಕೆಳಗೆ ಬಿದ್ದ ಆತ?'

'ಮೇಲಿಂದ ಬೀಳಲಿಲ್ಲ. ಎದುರಿನ ಮುಗಿಲೆತ್ತರದ ಕಟ್ಟಡದ ಕೊನೆಯ ಮಾಳಿಗೆ ನೋಡಲೆಂದು ಕುತ್ತಿಗೆ ಎತ್ತಿದನಂತೆ!'

*

ಶಿಕ್ಷಕ: ರಾಮು, ತಾಜಮಹಲನ್ನು ಕಟ್ಟಿಸಿದವರಾರು?

ರಾಮು: ಶಾಸ್ತ್ರಿಗಳು ಸಾರ್.

ಶಿಕ್ಷಕ: ಹ್ಞಂ! ಶಾಸ್ತ್ರಿಗಳು! ಯಾವ ಕಾರಣಕ್ಕಾಗಿ ಕಟ್ಟಿಸಿದರು, ಅದೂ ಗೊತ್ತೋ ನಿನಗೆ

ರಾಮು: ಹೌದು ಸಾರ್. ಹೊಟೆಲಿಗೋಸ್ಕರ ಬಾಡಿಗೆಗೆ ಕೊಡಲು ಕಟ್ಟಿಸಿದರು.

— ಎಂ. ಪುಟ್ಟೇಗೌಡ.

Pratibha-62- 2 Kan.



ರಾವಳ್‌ಗಾವ್
ಲೆಮನ್ ಮತ್ತು ರಾಸ್ಪ್‌ಬೆರಿ
ಸಾಫ್ಟ್ ಸೆಂಟರ್

ಮೋಹಕ ಆನಂದ...



ರಾವಳ್‌ಗಾಂವ್‌ರವರ ಲೆಮನ್ ಮತ್ತು ರಾಸ್ಪ್‌ಬೆರಿ 'ಸಾಫ್ಟ್ ಸೆಂಟರ್' ಮಿಠಾಯಿಗಳು ಕೊಡುವ ಆನಂದದ ತರವೇ ಬೇರೆ! ರಾವಳ್‌ಗಾಂವ್ ಲ್ಯಾಕೋ ಬೊನ್ ಬೊನ್ ಫ್ಯಾಮಿಲಿ'ಯ ಮಿಠಾಯಿಗಳನ್ನೆ ಕೊಳ್ಳಿರಿ.

ಮಾರಾಟದ ಏಜಂಟರು:
ಮೆಸರ್ಸ್ ಮೋತೀಲಾಲ್ ಗಿರ್ಧಾರಿಲಾಲ್ ಅಫಾರ್‌ಕರ್,
ಮಾಲೆಗಾಂವ್, ಜಿಲ್ಲಾ ನಾಸಿಕ್.

ಮಕ್ಕಳ ಭೀಕರ ವ್ಯಾಧಿ— ಪ್ರೋಲಿಯೊ

ಎಷ್ಟೋ ಸಲ ಅಸಾಧ್ಯ ರೋಗಪೀಡಿತರನ್ನು ಕಂಡಾಗ, ಇವರು ಈ ಸ್ಥಿತಿಯಲ್ಲಿರುವುದಕ್ಕಿಂತ ಮರಣ ಹೊಂದಿದ್ದರೇ ಲೇಸಾಗಿತ್ತು ಎನಿಸುತ್ತದೆ. ಅಂಥವರು ತಮಗೂ ಹೊರೆಯಾಗಿ ಇತರರಿಗೂ ಹೊರೆಯಾಗಿ ತೀರ ದೈನ್ಯದ, ಅಸಹಾಯ ಜೀವನವನ್ನು ಸಾಗಿಸಬೇಕಾಗುತ್ತದೆ.

ಅಸಾಧ್ಯ ರೋಗಗಳಲ್ಲಿ ಮಕ್ಕಳಿಗಾಗುವ ಪೋಲಿಯೊ ರೋಗವೂ ಒಂದು. ಈ ರೋಗವಾದ ಮಕ್ಕಳು ಎದ್ದು ನಿಲ್ಲಲಾರದೆ, ನಡೆಯಲಾರದೆ ಬಿದ್ದಲ್ಲಿಯೆ ಬಿದ್ದುಕೊಂಡು ಅತ್ಯಂತ ದಾರುಣವಾದ ಮಾನಸಿಕ ಯಾತನೆಯನ್ನು ಅನುಭವಿಸುತ್ತಾರೆ. ತಮ್ಮ ವಯಸ್ಸಿನ ಇತರ ಮಕ್ಕಳು ಕುಣಿಯುವುದನ್ನು ಜಿಗಿಯುವುದನ್ನು ಕಂಡಾಗ ತಾವು ಆ ರೀತಿ ಮಾಡಲಾರೆವಲ್ಲ ಎಂದು ಈ ಮಕ್ಕಳ ಜೀವ ಚಡಪಡಿಸುತ್ತದೆ. ಜೀವಮಾನವೆಲ್ಲ ನಿರ್ಗತಿಕರಂತೆ ಇರಬೇಕಾದ ಇಂಥ ಮಕ್ಕಳ ಅವಸ್ಥೆ ಎಷ್ಟು ಕರುಣಾಜನಕವಾಗಿರಬೇಡ! ಅವರ ತಾಯಿ-ತಂದೆಗಳ ಸ್ಥಿತಿ ಎಷ್ಟು ಶೋಚನೀಯವಾಗಿರಬೇಡ !

ಪೋಲಿಯೊ ರೋಗವಾದ ಮಕ್ಕಳ ಎರಡೂ ಕಾಲುಗಳು (ಕಾಲುಗಳು ಊನವಾಗುವದೇ ಹೆಚ್ಚು, ಕೈಗೆ ಕೂಡ ಪೋಲಿಯೊ ತಗಲುವುದುಂಟು.) ಒಣಗಿ ಕಡ್ಡಿಯಾಗಿ ಹೋಗುತ್ತವೆ. ಒಂದು ಬಗೆಯ ವಾತ ವಿಕಾರವೇ ಆಗಿರುವ ಈ ಪೋಲಿಯೊ ರೋಗವನ್ನು ಮಕ್ಕಳಿಗೆ ಅಂಟಿಸುವ ಜಂತುಗಳು ಎಷ್ಟು ಸೂಕ್ಷ್ಮವಾಗಿರುತ್ತವೆಂದರೆ ಒಂದು ಗುಂಡುಸೂಜಿಯ ಮೊನೆಯ ಮೇಲೆ ಇಂಥ ಕೋಟ್ಯವಧಿ ಜಂತುಗಳ ವಸಾಹತು ಇರಬಲ್ಲದು. ಈ ಜಂತುಗಳು ಮಿದುಳು ಮತ್ತು ಮಜ್ಜಾತಂತುಗಳ ನರಗಳಲ್ಲಿಯೆ ಬದುಕಬಲ್ಲವು. ಹಾಗಿರುವುದರಿಂದ ಶರೀರದ ವಿವಿಧ ಚಲನವಲನಗಳನ್ನು ಮಾಡುವ ಸ್ನಾಯುಗಳ ಮೇಲೆ ಯಾವ ನರಗಳ ಮೂಲಕ ಮಿದುಳು ಅಥವಾ ಮಜ್ಜಾತಂತುಗಳು ನಿಯಂತ್ರಣವಿಟ್ಟುಕೊಳ್ಳುವವೊ ಆ ನರಮಂಡಲವೇ ಪೋಲಿಯೊ ಜಂತುಗಳ ವಾಸಸ್ಥಾನವಾಗುವದರಿಂದ ಅವೆಲ್ಲ ಸ್ನಾಯುಗಳು ಅನಿಯಂತ್ರಿತವಾಗಿ ಬಿಡುತ್ತವೆ. ಇದರಿಂದ ಕೈಕಾಲು ನಿರ್ಜೀವವಾಗುವವು ಅಥವಾ ಪಕ್ಷಾಘಾತವಾಗುವುದು.



ಆಧಾರದಿಂದ

ಪೋಲಿಯೊ ಜಂತುಗಳು ಹವೆಯಲ್ಲಿ ತೇಲುವ ಅತಿ ಸೂಕ್ಷ್ಮ ದ್ರವಕಣಗಳಲ್ಲಿ ಒಂದು ನಿರೋಗಿ ದೇಹದ ಶ್ವಾಸೋಚ್ಛ್ವಾಸದ ಮಾರ್ಗ

ವಾಗಿ ಅವರ ಶರೀರದಲ್ಲಿ ಪ್ರವೇಶಿಸುವವು. ಎಲ್ಲ ಸ್ಥಳಗಳಲ್ಲಿಯೂ ಮುಕ್ತದ್ವಾರವಿರುವ ನೊಣಗಳು ಕೂಡ ಹಾಲು, ನೀರು ಮತ್ತು ಇತರ ತಿನ್ನುವ ಪದಾರ್ಥಗಳ ಮೇಲೆ ಈ ಜಂತುಗಳನ್ನು ಒಯ್ದು ಚಲ್ಲುವವು. ಪೋಲಿಯೊ ಸಾಮಾನ್ಯವಾಗಿ ಮಕ್ಕಳ ರೋಗ. ಅದರಲ್ಲಿಯೂ ೨ ರಿಂದ ೫ ವರ್ಷದೊಳಗಿನ ಮಕ್ಕಳಿಗೇ ಇದಾಗುವುದು ಹೆಚ್ಚು. ಮತ್ತೆ ಹುಡುಗಿಯರಿಗಿಂತ ಹುಡುಗರಿಗೇ ಹೆಚ್ಚಾಗಿ ತಗಲುವುದು ಕಂಡುಬಂದಿದೆ. ಬೇಸಿಗೆಯ ಕೊನೆಯ ದಿನಗಳು ಮತ್ತು ಮಳೆಗಾಲದ ಆರಂಭದ ದಿನಗಳು ಪೋಲಿಯೋ ಹಬ್ಬುವ ದಿನಗಳೆಂದು ಎಣಿಸಲ್ಪಟ್ಟಿವೆ.

ಪೋಲಿಯೊ ಜಂತುಗಳು ಮೂಗು ಅಥವಾ ಬಾಯಿಯ ಮೂಲಕ ಶರೀರವನ್ನು ಹೊಕ್ಕಮೇಲೆ ಆ ಭಾಗದಲ್ಲಿರುವ ಸೂಕ್ಷ್ಮ ಮಜ್ಜಾತಂತುಗಳ ಮೇಲೆ ತಮ್ಮ ವಸಾಹತನ್ನು ಸ್ಥಾಪಿಸುವವು. ಅಲ್ಲಿ ಬೇರೂರಿಕೊಂಡ ಮೇಲೆ ಅಲ್ಲಿಂದ ಬೆನ್ನುಹುರಿ (spinal cord) ಮತ್ತು ಮಿದುಳಿನ ವರೆಗೆ ತಲುಪಿ ಅಲ್ಲಿ ತಮ್ಮ ಕೊನೆಯ ವಸಾಹತನ್ನು ನಿರ್ಮಿಸಿಕೊಳ್ಳುತ್ತವೆ. ವಿಚಿತ್ರದ ಮಾತೆಂದರೆ ಉಳಿದೆಲ್ಲ ಬಗೆಯ ರೋಗಜಂತುಗಳು ರಕ್ತವಾಹಿನಿಗಳ ಮೂಲಕ ಶರೀರದ ಬೇರೆ ಬೇರೆ ಭಾಗಗಳಿಗೆ ಹೋಗುವುವಾದರೆ ಪೋಲಿಯೊ ಜಂತುಗಳು ಮಾತ್ರ ಮಜ್ಜಾತಂತುವನ್ನೆ ಹಗ್ಗದಂತೆ ಹಿಡಿದುಕೊಂಡು ಮಾರ್ಗಕ್ರಮಣ ಮಾಡುತ್ತವೆ.

ಜಂತು ಶರೀರದಲ್ಲಿ ಪ್ರವೇಶಿಸಿದ ನಂತರದಲ್ಲಿ ೭ ರಿಂದ ೨೧ ದಿವಸಗಳೊಳಗೆ ರೋಗದ ಲಕ್ಷಣಗಳು ಕಾಣಿಸತೊಡಗುತ್ತವೆ. ಮೊದಲಿಗೆ ಮಗುವಿಗ ನೆಗಡಿಯಾದಂತೆ ಕಂಡುಬರುವುದು. ಮೈನೋವು, ಜ್ವರ, ವಾಂತಿ ಅಥವಾ ಹೊರಕಡೆ ಮುಂತಾದ ಇತರ ವ್ಯಾಧಿಗಳ ಲಕ್ಷಣಗಳಿಂದಲೆ ಪೋಲಿಯೊ ಆರಂಭವಾಗುತ್ತದೆ. ಆದ್ದರಿಂದಲೇ ಇದು ಪೋಲಿಯೊ ಎಂದು ತಟ್ಟನೆ ಕಂಡುಹಿಡಿಯಲಾರದೆ ಇದರ ಬಗ್ಗೆ ದುರ್ಲಕ್ಷ್ಯವಾಗುವ ಸಂಭವವೇ ಹೆಚ್ಚಾಗಿರುತ್ತದೆ.

ಒಂದೆರಡು ದಿನಗಳ ನಂತರ ಜ್ವರ ಏರತೊಡಗುವುದು. ೧೦೨° ಅಥವಾ ೧೦೩° ಜ್ವರ ಬಂದು ಮಗುವಿನ ತಲೆ ವಿಪರೀತ ನೋಯಹತ್ತುವುದು. ಇಷ್ಟರೊಳಗಾಗಿ ಪೋಲಿಯೊ ಜಂತುಗಳು ಮಿದುಳು ಅಥವಾ ಬೆನ್ನುಹುರಿಯಲ್ಲಿ ತಮ್ಮ ಸ್ಥಳವನ್ನು ಭದ್ರಮಾಡಿಕೊಂಡಿರುತ್ತವೆ. ಅಲ್ಲಿಯ ನರಗಳು ನಿಷ್ಕ್ರಿಯವಾಗಿ ಅವುಗಳ ಮೂಲಕ ಸಂದೇಶಗಳು ಸ್ನಾಯುಗಳಿಗೆ ಹೋಗುವುದು ನಿಂತುಬಿಡುತ್ತದೆ. ಇದರಿಂದ ಸ್ನಾಯುಗಳು ಮನಬಂದಂತೆ ಆಕುಂಚನಹೊಂದತೊಡಗುವುದರಿಂದ ಮಗು ನಿಷ್ಕಾರಣವಾಗಿ ಕೈಕಾಲುಗಳನ್ನು ಝಾಡಿಸತೊಡಗುತ್ತದೆ. ಕೈಕಾಲುಗಳ ಸ್ನಾಯುಗಳ ಚಲನವಲನದ ಮೇಲೆ ನಿಯಂತ್ರಣವನ್ನಿಡಲು ಅದಕ್ಕೆ ಸಾಧ್ಯವಾಗುವದಿಲ್ಲ. ಕೈಕಾಲುಗಳಲ್ಲಿ ಶಕ್ತಿಯೆ ಉಡುಗಿಹೋಗುತ್ತದೆ. ಸ್ನಾಯುಗಳು ನಿರೋಗಿಯಾಗಿರಬೇಕಾದರೆ ಅವುಗಳ ಚಲನವಲನವಾಗಬೇಕಷ್ಟೆ. ಹಾಗಾಗುವುದು ನಿಲ್ಲುವದರಿಂದ ಅವು ಚಿಕ್ಕದಾಗತೊಡಗುತ್ತವೆ. ಮಗುವಿನ ಕೈಕಾಲು ಒಣಗಿ ಹೋಗಿ ಎಲುಬಿಗೆ ಚರ್ಮವನ್ನು ಅಂಟಿಸಿದಂತೆ ಕಾಣಲಾರಂಭಿಸುವದು.

ಪೋಲಿಯೊ ಜಂತುಗಳು ಕೇವಲ ಬೆನ್ನುಹುರಿಯಲ್ಲಷ್ಟೆ ಠಾಣ್ಯಹೂಡಿದಾಗ ಆಗುವ ಪೋಲಿಯೊ ಈ ಬಗೆಯದಿರುತ್ತದೆ. ಈ ಬಗೆಯಲ್ಲಿ, ಮಗುವಿನ ಜ್ವರ ಸಾವಕಾಶವಾಗಿ ಕಡಿಮೆಯಾಗುತ್ತ ಪೂರ್ಣ ನಿಲ್ಲುತ್ತದೆ. ಉಳಿದ ರೋಗಲಕ್ಷಣಗಳೂ ಸಾವಕಾಶವಾಗಿ ಕಡಿಮೆಯಾಗಿ ಕ್ರಮೇಣ ಕೈಕಾಲು ಕಡ್ಡಿಯಾದದ್ದಷ್ಟೇ ಕಾಣುತ್ತದೆ. ಆದರೆ ಪೋಲಿಯೊ ಜಂತುಗಳು ಮಿದುಳಿನ ಮೇಲೆ ಹೆಚ್ಚು ಪ್ರಭಾವ ಬೀರಿದವಾದರೆ ಉಂಟಾಗುವ ರೋಗಕ್ಕೆ "ಬಲ್ಬರ್ ಪೋಲಿಯೊ ಮಾಯೆಲಾಯಟಿಸ್" ಎನ್ನುತ್ತಾರೆ. ಇದು ಹೆಚ್ಚು ಘಾತಕವಾದದ್ದು. ಇದರಿಂದ ಶ್ವಾಸೋಚ್ಛ್ವಾಸ ಕ್ರಿಯೆಗೆ ಬೇಕಾಗುವ ಎದೆ ಮತ್ತು ಹೊಟ್ಟೆಯ ಚಲನವಲನಗಳನ್ನು ಮಾಡಿಸುವ ಸ್ನಾಯುಗಳೆ ನಿಷ್ಕ್ರಿಯವಾಗುವದರಿಂದ ಮಗು ಪ್ರಾಣಕ್ಕೆರವಾಗಬೇಕಾಗುತ್ತದೆ. ಕೃತ್ರಿಮ ಶ್ವಾಸೋಚ್ಛ್ವಾಸ ಮಾಡಿಸುವ ಪುಪ್ಪುಸಗಳು (Iron Lungs) ಇದ್ದರೆ ಮಾತ್ರ ಇಂಥ ಮಗುವನ್ನು ಬದುಕಿಸಿಕೊಳ್ಳಬಹುದು. ಇಲ್ಲವಾದರೆ ಮೃತ್ಯು ಕಟ್ಟಿಟ್ಟದ್ದೆ.

ಸಾವು ಬರದಿದ್ದರೂ ಸಾವೇ ನೆಟ್ಟಗಿತ್ತು ಎಂದು ಅನಿಸುವಂತೆ ಮಾಡುವ ಈ ಭೀಕರವಾದ



PHILLIPS ಫಿಲಿಪ್ಸ್ ಸೈಕಲ್‌ಗಳು

ನಿಮಗಾಗಿಯೇ ತಯಾರಿಸಲ್ಪಟ್ಟವೆ

ನಾಜೋಕಾಗಿ ಕಾಣುವ ಫಿಲಿಪ್ಸ್ ಸೈಕಲ್ ಇಂದಿನ ನಿಮ್ಮಂತಹ ಉತ್ಸಾಹೀ ತರುಣರ ಆವಶ್ಯಕತೆಗಾಗಿ ತಯಾರಿಸಲ್ಪಟ್ಟವೆ. ಹದವಾದ ಉಕ್ಕಿನಿಂದ ತಯಾರಿಸಲ್ಪಟ್ಟಿದ್ದು, ಅತ್ಯಂತ ಒರಟಾದ ಉಪಯೋಗಕ್ಕೂ ಹೊಂದಿಕೊಳ್ಳುವ ಶಕ್ತಿಯನ್ನೂ, ನಯವನ್ನೂ ಹೊಂದಿವೆ. ಸುಮಾರು 70 ವರ್ಷಗಳಿಂದ ವಿಶ್ವದಲ್ಲೆಲ್ಲಾ ಪ್ರಸಿದ್ಧವಾಗಿದೆ. ಟಿ. ಐ. ಸೈಕಲ್ಸ್‌ನ ಅತ್ಯಾಧುನಿಕ ಫ್ಯಾಕ್ಟರಿಯಲ್ಲಿ ತಯಾರಾದ ಈ ಸೈಕಲ್‌ಗಳು ನಿಷ್ಕೃಷ್ಟ ತಯಾರಿಕೆಯಾಗಿವೆ.

ಟಿ. ಐ. ಸೈಕಲ್ಸ್ ಆಫ್ ಇಂಡಿಯಾ, ಅಂಬತ್ತೂರು, ಮದರಾಸು

RENOWNED THE WORLD OVER
MADE IN INDIA
PHILLIPS
MADRAS

JWT/TIC/PH/1604/a

ಪೋಲಿಯೊ ರೋಗವನ್ನು ಪ್ರತಿಬಂಧಿಸಲು ಕೆಲ ಉಪಾಯಗಳಿವೆ. ಮೊದಲನೆಯದಾಗಿ ಪೋಲಿಯೊ ಜಂತುಗಳು ಹವೆಯ ಮತ್ತು ಅನ್ನನೀರುಗಳ ಮೂಲಕ ಶರೀರದಲ್ಲಿ ಪ್ರವೇಶಿಸುವದರಿಂದ ಜಂತುನಾಶಕ ದ್ರವದಿಂದ ಬಾಯಿಮುಕ್ಕಳಿಸುವ ಪರಿಪಾಠವಿಟ್ಟುಕೊಂಡಲ್ಲಿ ಈ ಜಂತುಗಳ ನಿಗ್ರಹವನ್ನು ಬಹುಮಟ್ಟಿಗೆ ಮಾಡಬಹುದು. ಇದಕ್ಕಾಗಿ ಅತಿ ಅಗ್ಗವೂ ತುಂಬ ಪ್ರಭಾವಿಯೂ ಆದ ಪೊಟ್ಯಾಸಿಯಂ ಪರಮಾಂಗನೇಟ್ ಬಲು ಉಪಯುಕ್ತವಾಗಿದೆ. ಮಕ್ಕಳಿಗೆ ಇದನ್ನು ಹಾಕಿದ ನೀರಿನಿಂದ ಬಾಯಿ ಮುಕ್ಕಳಿಸುವದನ್ನು ರೂಢಿ ಮಾಡಿದರೆ ಪೋಲಿಯೋದ ಜೊತೆ ಇನ್ನೂ ಅನೇಕ ರೋಗಗಳನ್ನು ನಿವಾರಿಸಿಕೊಳ್ಳಬಹುದಾಗಿದೆ. ನೊಣಗಳಿಂದ ಈ ರೋಗ ಬರುವದಾದ್ದರಿಂದ ಅವುಗಳನ್ನು ನಾಶಪಡಿಸುವದರ ಜೊತೆಗೆ ಮನೆಯನ್ನು ಸ್ವಚ್ಛವಾಗಿಟ್ಟು ಅವುಗಳ ಉತ್ಪತ್ತಿಯಾಗದಂತೆ ನೋಡಿಕೊಳ್ಳಬೇಕು. ರಸ್ತೆಗಳಲ್ಲಿ ಮಾರುವ ಹೊಲಸು ಪದಾರ್ಥಗಳನ್ನು ಮಕ್ಕಳು ತಿನ್ನದಂತೆ ಎಚ್ಚರಿಕೆ ವಹಿಸಬೇಕು.

ಪೋಲಿಯೊ ಆದ ಮಕ್ಕಳ ಸಂಪರ್ಕದಲ್ಲಿ ಪ್ರಾರಂಭಕಾಲದಲ್ಲಿ ರೋಗ ಇನ್ನೊಬ್ಬರಿಗೆ ತಗಲುವ ಸ್ಥಿತಿಯಿರುವಾಗ ನಿರೋಗಿ ಮಕ್ಕಳನ್ನು ಬಿಡಬಾರದು. ಮನೆಯಲ್ಲಿ ಗಾಳಿ, ಬೆಳಕು ಚನ್ನಾಗಿರುವಂತೆ ನೋಡಿಕೊಳ್ಳಬೇಕು. ಮಕ್ಕಳು ಬಯಲು ಹವೆಯಲ್ಲಿ ಸಾಕಷ್ಟು ಓಡಾಡಿ ಆಡಿಕೊಂಡಿರಲು ಬಿಡಬೇಕು. ದುರ್ದೈವದಿಂದ ಮಗುವಿಗೆ ಪೋಲಿಯೊ ಆದಲ್ಲಿ ಆತನನ್ನು ಮೂರು ವಾರಗಳ ವರೆಗಾದರೂ ಇತರರಿಂದ ಬೇರ್ಪಡಿಸಿಟ್ಟು ಸಾಂಸರ್ಗಿಕ ರೋಗಗಳ ಆಸ್ಪತ್ರೆಗೆ ಸೇರಿಸಬೇಕು.

ಪೋಲಿಯೊ ಚಿಕಿತ್ಸೆಯಲ್ಲಿ ಪ್ರಾಮುಖ್ಯವಾಗಿ ಎರಡು ಘಟ್ಟಗಳಿವೆ. ಮೊದಲನೆಯದು ಪೋಲಿಯೊ ಜಡ್ಡಾದಾಗ ಮಾಡುವ ಉಪಚಾರ, ಎರಡನೆಯದು ಮಗು ಬೇನೆಯಿಂದೆದ್ದ ಬಳಿಕ ಶಕ್ತಿಹೀನವಾದ ಅವನ ಸ್ನಾಯುಗಳ ಮೇಲೆ ಮಾಡುವ ಉಪಚಾರ. ಬೇನೆ ಇರುವಾಗ ಮಾಡುವ ಚಿಕಿತ್ಸೆಯನ್ನು ಸ್ವತಃ ಡಾಕ್ಟರರೇ ನಡೆಸುವದರಿಂದ ಆಗ ತಂದೆ-ತಾಯಿಗಳು ಮಾಡಬೇಕಾದ್ದೇನೂ ವಿಶೇಷವಾಗಿರುವದಿಲ್ಲ. ಆದರೆ ನಂತರ ಶಕ್ತಿಹೀನವಾದ ಸ್ನಾಯುಗಳ ಮೇಲೆ ಮುಂದೆ ಮಾಡಬೇಕಾದ ಉಪಚಾರವನ್ನು ಎಷ್ಟೋ ತಿಂಗಳವರೆಗೆ ಕೆಲ ಸಲ ವರ್ಷಗಟ್ಟಲೆ ಕೂಡ ನಡೆಸಬೇಕಾಗುವದರಿಂದ ಅದರ ಹೊಣೆ ತಂದೆತಾಯಿಗಳಮೇಲೆ ಬೀಳುತ್ತದೆ

ಪೋಲಿಯೊ ರೋಗದಲ್ಲಿ ಸ್ನಾಯುಗಳ ಚಲನವಲನ ಅನಿಯಂತ್ರಿತವಾಗಿ ಅವು ನಿಷ್ಕ್ರಿಯವಾಗುತ್ತವೆ. ಆದರೆ ಏಕಕಾಲಕ್ಕೆ ಕೈ ಅಥವಾ ಕಾಲುಗಳ ಎಲ್ಲ ಸ್ನಾಯುಗಳು ಪೀಡಿತವಾಗುವದಿಲ್ಲ. ಆದ್ದರಿಂದ ಬಲಯುತವಾದ ಸ್ನಾಯುಗಳು ಕ್ಷೀಣಸ್ನಾಯುಗಳನ್ನು ಎಳೆಯುತ್ತಿರುವದರಿಂದ ಅವು ಪ್ರಮಾಣ ಮೀರಿ ಎಳೆಯಲ್ಪಟ್ಟು ಹಾಗೆಯೆ ,ಉಳಿದುಕೊಂಡುಬಿಡುತ್ತವೆ ಈ ಜಗ್ಗಾಟದಿಂದ ಕೈಕಾಲುಗಳಿಗೆ ಅಂಕಡೊಂಕು ಆಕಾರ ಪ್ರಾಪ್ತವಾಗಿ ಅವು ಜನ್ಮವಿಡೀ ಹಾಗೆಯೆ ಇರುತ್ತವೆ. ಇದನ್ನು ನಿವಾರಿಸಿಕೊಳ್ಳಲು ಸಾಧ್ಯವಿದೆ. ಪೋಲಿಯೊ ಎಂದು ನಿರ್ಧಾರವಾದೊಡನೆ ಡಾಕ್ಟರರಿಂದ ಯಾವ ಯಾವ ಸ್ನಾಯುಗಳು ಬಲಹೀನವಾಗಿವೆ ಎಂದು ನಿರ್ಣಯಿಸಿಕೊಂಡು ಅವುಗಳ ಮೇಲೆ ಅನಿಷ್ಟ ಎಳೆತ ಬೀಳದಂತೆ ಕೈಕಾಲುಗಳನ್ನು ಕೃತ್ರಿಮ ಬಂಧನಗಳಿಂದ ಸದಾ ಒಂದು ವಿಶಿಷ್ಟ ಸ್ಥಿತಿಯಲ್ಲಿರುವಂತೆ ಬಿಗಿದಿಡಬೇಕು. ಪೋಲಿಯೊದಿಂದ ಬಲಹೀನವಾದ ಸ್ನಾಯುಗಳಿಗೆ ಆಧಾರವೀಯಲೆಂದು ತಯಾರಿಸಿದ ವಿಶಿಷ್ಟ ಆಕಾರದ ಬೂಟುಗಳು, ಜಾಕೀಟುಗಳು, ಕೈಚೀಲಗಳು, ಸ್ಪ್ಲಿಂಟ್ಸ್, ಗರ್ಡಲ್ಸ್ ಮುಂತಾದವು ಸಿಗುತ್ತವೆ. ಇವುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿದರೆ ಮಗುವಿನ ಕೈ-ಕಾಲಿನ ವಿಕೃತಿಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಿದೆ.

ಬಲಹೀನ ಸ್ನಾಯುಗಳಿಗೆ ಕೆಲವೊಂದು ತೈಲಗಳಿಂದ ತಿಕ್ಕಿ ಬಲ ತರಿಸಬಹುದು. ನೀಲಗಿರಿ, ಕರ್ಪೂರ, ಟರಪೆಂಟಾಯಿನ್, ಥಾಯಮಾಲ್, ಕೆಥರಿಡೀನ್ ಮುಂತಾದವುಗಳ ಮಿಶ್ರಣದಿಂದ ತಯಾರಿಸಿದ ತೈಲಗಳಲ್ಲಿ ಸ್ನಾಯುಗಳಲ್ಲಿಯ ರಕ್ತಾಭಿಸರಣವನ್ನು ಹೆಚ್ಚಿಸುವ ಗುಣಧರ್ಮವಿದೆ. ತಿಕ್ಕುವಾಗ ಕೃತ್ರಿಮ ರೀತಿಯಲ್ಲಿ ಆ

ಸ್ನಾಯುಗಳ ಆಕುಂಚನ—ಪ್ರಸರಣಗಳನ್ನೂ ಮಾಡಿಸಬೇಕಾಗುತ್ತದೆ. ಹೀಗೆ ತಿಕ್ಕುವದೂ ಒಂದು ವಿದ್ಯೆ. ಅದನ್ನು ಸರಿಯಾಗಿ ಹೇಳಿಸಿಕೊಂಡರೆಯಾರಾದರೂ ಅದನ್ನು ಮಾಡಬಹುದು. ದೀರ್ಘಕಾಲದ ವರೆಗೆ ನಿಯಮಿತತನದಿಂದ ತಿಕ್ಕುವದರಿಂದ ತುಂಬ ಉಪಯೋಗವಾಗುವದು.

ವಿದ್ಯುತ್ ಪ್ರವಾಹದ ಮೂಲಕ ಬಲಹೀನ ಸ್ನಾಯುಗಳ ಆಕುಂಚನ ಪ್ರಸರಣಗಳನ್ನು ಮಾಡಿಸುವದು ಇನ್ನೊಂದು ರೀತಿ. ಆದರೆ ಈ ಚಿಕಿತ್ಸೆಯನ್ನು ಆಸ್ಪತ್ರೆಗಳಲ್ಲಿ ತಜ್ಞ ಡಾಕ್ಟರರು ಮಾತ್ರವೇ ಮಾಡಬಲ್ಲರು. ಇದರಿಂದಲೂ ಉಪಯೋಗವಾಗುವದು.

ಪೋಲಿಯೊ ಪ್ರತಿಬಂಧಕ ಚುಚ್ಚುಮದ್ದು ಈಗ ಲಭ್ಯವಿದೆ. ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯವರು ತೀರ ಬಡಮಕ್ಕಳಿಗೆ ಈ ಔಷಧವನ್ನು ಪುಕ್ಕಟೆಯಾಗಿ ಚುಚ್ಚುವ ವ್ಯವಸ್ಥೆ ಮಾಡಿದ್ದಾರೆ.

ಯಾವ ಉಪಚಾರದಿಂದಲೂ ನೆಟ್ಟಗಾಗದ ದುರ್ದೈವಿ ಮಕ್ಕಳಿಗೆ ಅವರು ತಮ್ಮ ಜೀವನವನ್ನು ಆದಷ್ಟು ಸಾರ್ಥಕತೆಯಿಂದ ನಡೆಸುವ ಶಿಕ್ಷಣವನ್ನು ಕೊಡುವ ಸಂಸ್ಥೆಗಳೂ ಇವೆ. ಮುಂಬಯಿಯ ಕೆ. ಇ. ಎಂ ಆಸ್ಪತ್ರೆಯಲ್ಲಿ ಈ ಬಗೆಯ ಶಿಕ್ಷಣದ ವ್ಯವಸ್ಥೆ ಇದೆ. ಶ್ರೀಮತಿ ಫಾತಿಮಾ ಇಸ್ಮಾಯಿಲ್ (ಕಸ್ತೂರಿ, ಏಪ್ರಿಲ್ ಸಂಚಿಕೆ) ಎಂಬವರು ಕೂಡ ಇಂಥದೊಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಪೋಲಿಯೊ ಆದ ಮಕ್ಕಳಿಗೆ ಅವರು ಗುಣವಾಗಲು ಯೋಗ್ಯ ಚಿಕಿತ್ಸೆ ಮಾಡಬೇಕಾದ್ದು ತಂದೆ-ತಾಯಿಗಳ ಕರ್ತವ್ಯವಾಗಿರುವಂತೆ, ಒಂದುವೇಳೆ ಮಕ್ಕಳಿಗೆ ಗುಣವಾಗದೆ ಹೋದಲ್ಲಿ ದುರುದೃಷ್ಟ ಎಂದು ತಲೆಯಮೇಲೆ ಕೈಹೊತ್ತುಕೂಡ್ರದೆ ಆ ದುರ್ದೈವಿ ಮಕ್ಕಳಿಗೆ ಅನುಕೂಲವಾದ ಶಿಕ್ಷಣವನ್ನುಕೊಡಿಸಿ ಅವರ ಜೀವನ ಸಫಲವಾಗುವಂತೆ ಮಾಡುವದೂ ಅವರ ಕರ್ತವ್ಯವಾಗಿದೆ. *

ಸಮುದ್ರಪ್ರಾಣಿಗಳಲ್ಲಿ ಇದನ್ನೆದುರಿಸುವ ಬಂಟರಿಲ್ಲ

ಹತ್ಯಾಕಾರಿ ತಿಮಿಂಗಿಲ

ಹತ್ಯಾಕಾರಿ ತಿಮಿಂಗಿಲ! ಅದರ ನೆನಪಿನ ಮಾತ್ರದಿಂದಲೇ ಜಲಚರ ಪ್ರಾಣಿಗಳು ಅರ್ಧ ಮೃತವಾಗುತ್ತವೆ. ಸಮುದ್ರವಾಸಿಗಳಾದ ಎಲ್ಲ ಪ್ರಾಣಿಗಳಿಗೂ ಅಂತಕಸ್ವರೂಪವಾಗಿದೆ ಈ ಇಪ್ಪತ್ತರಿಂದ ಮೂವತ್ತು ಅಡಿಗಳ ವರೆಗೆ ಉದ್ದ ವಿರುವ ತಿಮಿಂಗಿಲ. ತನಗಿಂತಲೂ ಗಾತ್ರದಲ್ಲಿ ಇಮ್ಮಡಿ ಮುಮ್ಮಡಿಯಾಗಿರುವ, ಆದರೆ ಶಾಂತ ಸ್ವಭಾವದ, ತನ್ನ ಬಳಗದ್ದೇ ಆದ ತಿಮಿಂಗಿಲ ಗಳನ್ನು ಕೂಡ ಈ ಹತ್ಯಾಕಾರಿ ತಿಮಿಂಗಿಲಗಳು ಬೇಟೆಯಾಡಿ ಭಕ್ಷಿಸುತ್ತವೆ. ದೊಡ್ಡ ತಿಮಿಂಗಿಲದ ಬೆನ್ನಮೇಲೆ ಜಿಗಿದು ಕಚ್ಚಿ ಅದನ್ನು ಗೋಳಾ ಡಿಸಿ ಮೆತ್ತಗೆ ಮಾಡಿ ಅದು ಉಸಿರುಗಟ್ಟಿದಂ ತಾಗಿ ಬಾಯಿ ತೆರೆದಾಗ ಅದರ ನಾಲಗೆಯನ್ನೆ ಹರಿದು ಕೊಂದು ಈ ತಿಮಿಂಗಿಲ ತನ್ನ ಹಸಿ ವನ್ನು ಹಿಂಗಿಸಿಕೊಳ್ಳುತ್ತದೆ.

ಸಮುದ್ರಜಗತ್ತಿನಲ್ಲಿ ಹತ್ಯಾಕಾರಿ ತಿಮಿಂಗಿ ಲವೇ ಅನಭಿಷಿಕ್ತ ರಾಜ. ಅದರ ಸಾಮರ್ಥ್ಯ ವನ್ನು ಪ್ರಶ್ನಿಸುವವರು, ಇದಿರಿಸುವವರು ಯಾರೂ ಇಲ್ಲ. ಕ್ರೂರತನದ ಮೂರ್ತಿಮಂತ ಸ್ವರೂಪವಾದ ಈ ಪ್ರಾಣಿಯ ಹೊಟ್ಟೆ ಬೆಳ್ಳಗಾ ಗಿದ್ದು ಬೆನ್ನು ಮತ್ತು ಪಕ್ಕಗಳು ಕರ್‍ರಗಾಗಿರು ತ್ತವೆ.

ಇದರ ವೇಗ ಮತ್ತು ಆಕ್ರಮಣ ಎಷ್ಟು ರಭಸದ್ದೋ ಅಷ್ಟೇ ಇದರ ಹಸಿವು ಕೂಡ ಭಯಂಕರವಾದದ್ದು. ಒಂದು ಹತ್ಯಾಕಾರಿ ತಿಮಿಂಗಿಲವನ್ನು ಕೊಂದು ಸೀಳಿ ನೋಡಿದಾಗ ಅದರ ಹೊಟ್ಟೆಯಲ್ಲಿ ೧೩ ಸೀಲ್ ಪ್ರಾಣಿಗಳೂ ೧೪ ಕಡಲ ಹಂದಿಗಳೂ ದೊರೆತ ಉದಾಹರಣೆ ಇದೆ. ಹತ್ಯಾಕಾರಿ ತಿಮಿಂಗಿಲವನ್ನು ಕಂಡ ಯಾವನೂ ಅದರ ಭೀಕರ ಆಕಾರವನ್ನು ಮರೆ ಯಲಾರ. ಧ್ರುವಪ್ರದೇಶಗಳಲ್ಲಿ ಈ ತಿಮಿಂಗಿಲ ಗಳಿಗೆ ಅಂಜಿ ಕಂಗೆಟ್ಟ ಸೀಲ್‌ಗಳು ಹುಚ್ಚರಂತೆ ದಂಡೆಗೆ ಧಾವಿಸುವುವಲ್ಲದೆ ಅಲ್ಲಿರುವ ಎಸ್ಕಿಮೊ ಜನರ ಹಳ್ಳಿಗಳಲ್ಲಿ ನುಗ್ಗುವವು. ಹತ್ಯಾಕಾರಿ ತಿಮಿಂಗಿಲ ತಾಸಿಗೆ ೨೫-೩೦ ಮೈಲು ವೇಗದಲ್ಲಿ ಈಸಬಲ್ಲದು.

ಹತ್ಯಾಕಾರಿ ತಿಮಿಂಗಿಲ ಕೂಡ ಸಸ್ತನಿ ಪ್ರಾಣಿ. ಬದುಕಲು ಇದಕ್ಕೆ ಶುದ್ಧ ಗಾಳಿ ಬೇಕಾಗುತ್ತದೆ. ಮರಿ ಹುಟ್ಟಿದೊಡನೆ ಅದಕ್ಕೆ ಅವಶ್ಯವಾದ ಗಾಳಿಯನ್ನುಣಿಸಲೆಂದು ತಾಯಿ ಅದರ ಮೂಗು ನೀರಿನ ಮೇಲಕ್ಕೆ ಬರುವಂತೆ ಅದನ್ನು ಮೇಲಕ್ಕೆ ಒತ್ತಿಕೊಂಡು ಬರುತ್ತದೆ. ಇದರ ಮರಿ ಹುಟ್ಟುವುದನ್ನು ಯಾರೂ ನೋಡಿ ಲ್ಲವಾದರೂ ಇದರ ಬಗ್ಗೆ ನಡೆಸಿರುವ ಅಭ್ಯಾಸ ದಿಂದ ಇದು ಒಂದು ಸಲಕ್ಕೆ ಒಂದೇ ಮರಿ ಹಾಕುತ್ತದೆಂದು ಗೊತ್ತಾಗಿದೆ. ಗರ್ಭಧಾರ ಣೆಯ ಅವಧಿ ಸುಮಾರು ಒಂದು ವರ್ಷ. ಹತ್ಯಾ ಕಾರಿ ತಿಮಿಂಗಿಲದ ಆಯುಷ್ಯ ೩೦-೪೦ ವರ್ಷ ಗಳು.

ಹೊಸತಾಗಿ ಹುಟ್ಟಿದ ಮರಿ ತನ್ನ ತಾಯಿಯ ಅರ್ಧದಷ್ಟು ಉದ್ದವಿರುತ್ತದೆ. ಹುಟ್ಟಿದಾಗಲೇ ಇದು ೩೦೦ ಪೌಂಡು ಭಾರದ್ದಿರುತ್ತದೆ. ಅದರ

ಮೊದಲನೆಯ ಆಹಾರ ತಾಯಿಯ ಮೊಲೆಯ
ಹಾಲು. ಹತ್ಯಾಕಾರಿ ತಿಮಿಂಗಿಲಗಳು ಗುಂಪಾಗಿ
ಅಲೆದಾಡುವುದರಿಂದ ಏಳು ಅಡಿ ಉದ್ದದ ಈ
ಮರಿ ತನ್ನ ತಾಯಿಯ ಹಿಂದೆ ಆ ಗುಂಪಿನೊಡನೆ
ವೇಗದಿಂದ ಸಂಚಾರಮಾಡುತ್ತಲೇ ತನ್ನ ಬಾಲ್ಯ
ವನ್ನು ಕಳೆಯಬೇಕಾಗುವುದು. ಸಮುದ್ರದ
ಯಾವ ಪ್ರಾಣಿಗೂ ಹತ್ಯಾಕಾರಿ ತಿಮಿಂಗಿಲದ
ಎದುರು ಸಡ್ಡು ಹೊಡೆಯುವ ಧೈರ್ಯವಿರುವುದಿಲ್ಲ
ವಾದ್ದರಿಂದ ಈ ಮರಿಯ ಬಾಲ್ಯಜೀವನಕ್ಕೆ
ಯಾವ ಗಂಡಾಂತರವೂ ಇರುವುದಿಲ್ಲ. ಜಗತ್ತಿನ
ಲ್ಲಿಯ ಯಾವ ಪ್ರಾಣಿಯ ಮರಿಗೂ ಇದರಷ್ಟು
ಸುರಕ್ಷಿತತೆ ಇಲ್ಲ.

ಹತ್ಯಾಕಾರಿ ತಿಮಿಂಗಿಲ ಶುದ್ಧ ಗಾಳಿಯ
ಸೇವನೆಗಾಗಿ ನೀರ ಮೇಲೆ ಮುಖವೆತ್ತಿದಾಗ
ಅದರ ಕರಿ ಕುತ್ತಿಗೆ ಮತ್ತು ಬಿಳಿ ಕಣ್ಣುಗಳೂ
ಬೆನ್ನಿನ ಈಜುರೆಕ್ಕೆಯೂ ಕಾಣಿಸುವವು. ಗಂಡು
ತಿಮಿಂಗಿಲದ ಈ ರೆಕ್ಕೆಯೆ ಮನುಷ್ಯನಷ್ಟು ಎತ್ತರ
ವಾಗಿರುವುದು. ಗಾಳಿ ಸೇವಿಸಿ ಮುಳುಗಿದ
ತಿಮಿಂಗಿಲ ಭರದಿಂದ ಈಸಿ ಮತ್ತೆ ಸುಮಾರು
ನೂರು ಗಜ ಅಂತರದಲ್ಲಿ ಮೇಲಕ್ಕೇಳುವುದು.

ಈ ಹತ್ಯಾಕಾರಿ ತಿಮಿಂಗಿಲಕ್ಕೆ ಇರುವ ಪ್ರಬಲ
ಶತ್ರುವೆಂದರೆ ಅದರ ಬೃಹದಾಕಾರವೇ ಆಗಿದೆ.
ಅದರ ದೇಹಕ್ಕೆ ಸಾಕಷ್ಟು ಆಳವಿರದ ನೀರಿಗೆ
ಬಂದು ಅದು ಸಿಕ್ಕಿಕೊಂಡರೆ ಅದಕ್ಕೆ ಅದರ ದೇಹ
ದ ತೂಕವೇ ಉಸಿರಾಡಿಸುವುದನ್ನು ಕಷ್ಟದ್ದನ್ನಾಗಿ
ಮಾಡುವುದು. ವಿಶಾಲವಾದ ಸಮುದ್ರವೇ ತನ್ನ
ರಾಜ್ಯವಾಗಿದ್ದರೂ ಸೀಲುಗಳ ಅಥವಾ ಇನ್ನಾವು
ವಾದರೂ ಪ್ರಾಣಿಯನ್ನು ಕಬಳಿಸುವ ಹೆಬ್ಬಾಸೆಗೆ
ಸಿಲುಕಿದ ಹತ್ಯಾಕಾರಿ ತಿಮಿಂಗಿಲವು ದಂಡೆಗೆ
ಸಮೀಪ ನುಗ್ಗಿ ಬಂದು ಅಲ್ಲಿ ಸಿಕ್ಕಿಬೀಳುವುದು.
ಭರತಿಯ ನೀರೇನಾದರೂ ಸಹಾಯಕ್ಕೆ ಬಂದು
ಅದನ್ನುಳಿಸಿದರೆ ಸರಿ. ಇಲ್ಲವಾದರೆ ಉಸಿರಾಡಿಸ
ಲಾರದೆ ಹೋಗಿ ತಿಮಿಂಗಿಲವು ತನ್ನ ಅತ್ಯಾಸೆಗ
ಬಲಿಯಾಗಿ ಬೇಗನೆ ಪ್ರಾಣಕಳೆದುಕೊಳ್ಳುವದು.

ಕಡಲ್ಗುದುರೆಯ ಮರಿಯನ್ನು ಹತ್ಯಾಕಾರಿ
ತಿಮಿಂಗಿಲ ಬೆನ್ನಟ್ಟಿದಾಗ ಆ ಮರಿ ಕಂಗಾಲಾಗಿ
ತನ್ನ ತಾಯಿಯ ಬೆನ್ನೇರುವದು. ಆಗ ಅದನ್ನು
ತಿಮಿಂಗಲ ಬೇಟೆಯಾಡುವ ರೀತಿ ಚಮತ್ಕಾರಿಕ
ವಾಗಿದೆ. ಮರಿ ತಾಯ ಬೆನ್ನೇರಿದ್ದು ಕಂಡೊಡನೆ
ತಿಮಿಂಗಿಲ ನೀರಲ್ಲಿ ಮುಳುಗಿ ಸರಿಯಾಗಿ ಕಡ-
ಲ್ಗುದುರೆಯ ಅಡಿಯಲ್ಲಿ ಭರದಿಂದ ಮೇಲಕ್ಕೇಳು
ವದು. ಈ ರಾಕ್ಷಸ ಪ್ರಾಣಿಯು ಮೇಲೇಳುವ
ವೇಗದ ರಭಸಕ್ಕೆ ಕಡಲ್ಗುದುರೆಯನ್ನು ಎತ್ತಿ
ಮೇಲಕ್ಕೆಸೆದಂತಾಗುವದು. ಈ ಆಘಾತಕ್ಕೆ
ತಾಯ ಬೆನ್ನಮೇಲಿದ್ದ ಮರಿ ಮೇಲಕ್ಕೆ ಚಿಮ್ಮಿ
ಸಮುದ್ರದಲ್ಲಿ ಬೀಳುವದು. ಹತ್ಯಾಕಾರಿ ತಿಮಿಂ
ಗಿಲು ಬಳಿಕ ಅದನ್ನು ನುಂಗುವದು.

ಎಸ್ಕಿಮೊ ಜನರು ಈ ತಿಮಿಂಗಲನ್ನು "ಸಮು
ದ್ರದ ತೋಳ" ಎಂದು ಕರೆಯುತ್ತಾರೆ. ನೆಲದ
ಮೇಲಿನಂತೆ ಸಮುದ್ರದಲ್ಲಿಯೂ ಜೀವಿಸಬಲ್ಲ
ಧ್ರುವ ಪ್ರದೇಶದ ತೋಳಗಳೇ ಇವು ಎಂದು
ಅವರ ನಂಬಿಗೆ ಇದೆ.

ಇದಕ್ಕೆ ಕಣ್ಣಿಗೆ ಕಾಣಿಸುವಂತೆ ಕಿವಿಗಳಿಲ್ಲ
ವಾದರೂ ಇದು ಸಮುದ್ರಡಿಯಲ್ಲಿಯ ವಿವಿಧ
ಸಪ್ಪಳಗಳನ್ನು ಕೇಳಬಲ್ಲದು.

ಇದರ ಬಾಯಲ್ಲಿ ೪೦ ಹಲ್ಲುಗಳಿವೆ. ಅವು
ಹುಲಿಯ ಹಲ್ಲಿಗಿಂತಲೂ ದೊಡ್ಡವಾಗಿರುವವು.
ದೊಡ್ಡ ಮೀನಗಳು, ಹಕ್ಕಿಗಳೇ ಮುಂತಾದವು
ಗಳನ್ನು ಇಡಿಯಾಗಿ ನುಂಗಲು ಸಾಧ್ಯವಾಗು
ವಷ್ಟು ದೊಡ್ಡ ಗಂಟಲಿವೆ ಈ ಕ್ರೂರ ಪ್ರಾಣಿಗೆ.


ನಾಯಿ ಮತ್ತು ಕುದುರೆಯಷ್ಟೇ ಬುದ್ಧಿಶಾಲಿ
ಯಾದ ಪ್ರಾಣಿ ತಿಮಿಂಗಿಲ ಎನ್ನುತ್ತಾರೆ ತಜ್ಞರು.
ಇವುಗಳನ್ನು ಸಾಕಿ ಸಾದು ಮಾಡುವದು ಕಠಿಣ.

ಸ್ಪರ್ಮ್ ತಿಮಿಂಗಿಲು ಹತ್ಯಾಕಾರಿ ತಿಮಿಂಗಲಿ
ಗಿಂತ ಮೂವತ್ತು ಅಡಿ ಉದ್ದವಾಗಿ ಬೆಳೆಯುವ
ವಾದರೂ ಅದು ಶಾಂತ ಸ್ವಭಾವದ ಪ್ರಾಣಿ.
ಶಾರ್ಕ್ ಮೀನುಗಳು ಸಹ ಕ್ರೂರತನಕ್ಕೆ ಹೆಸ
ರಾಗಿವೆ. ಆದರೆ ಕ್ರೌರ್ಯ, ಗತ್ತು, ಶಕ್ತಿ ಇವುಗಳ
ಮಾನದಿಂದ ಸಮುದ್ರದ ಯಾವ ಪ್ರಾಣಿಯೂ
ಹತ್ಯಾಕಾರಿ ತಿಮಿಂಗಿಲಕ್ಕೆ ಸಾಟಿಯಲ್ಲ. *



ಮೂವರು ಗಂಡಸರು, ಇಬ್ಬರು ಹೆಂಗಸರು

ಅದ್ಭುತವಾದ ಸತ್ಯಕಥೆ (ವಿವಿಧ ಆಧಾರಗಳಿಂದ)



ಮೂವರು ಗಂಡಸರು, ಇಬ್ಬರು ಹೆಂಗಸರು

ಪೋರ್ಟ್ ಲುಯಿಸ್‌ನಲ್ಲಿ ಜಾನ್ ಪೋರ್ಟಿಯಸ್ ಮತ್ತು ಹ್ಯಾರಿ ವೈಟ್ ಮುಂದೇನು ಎಂದು ಯೋಚಿಸುತ್ತಿದ್ದಾಗ ತುಸು ಮುರಕಲು ಅವಸ್ಥೆಗೆ ಬಂದಿದ್ದರೂ ಒಂದಿಷ್ಟು ಹಣ ಖರ್ಚು ಮಾಡಿ ದುರಸ್ತಿ ಮಾಡಿದರೆ ಒಳ್ಳೆಯ ಕೆಲಸ ಕೊಡಬಲ್ಲ ಚಿಕ್ಕ ಹಡಗೊಂದು ಅವರ ಕಣ್ಣಿಗೆ ಬಿತ್ತು. ಆ ಹಡಗವನ್ನು ಖರೀದಿ ಮಾಡಿದರೆ ಇಂಗ್ಲಂಡ್, ಅಲ್ಲಿ ಪ್ರಯೋಜನವಾಗದಿದ್ದರೆ ಅಮೇರಿಕ, ಅದಲ್ಲದಿದ್ದರೆ ಮತ್ತೊಂದು ದೇಶಕ್ಕಾದರೂ ಹೋಗಿ ಸುಖಜೀವನ ರೂಪಿಸಿಕೊಳ್ಳಬಹುದು ಎಂಬ ಆಶೆ ಅವರಲ್ಲಿ ಉತ್ಪನ್ನವಾಯಿತು. ಅವರು ೩೦೦ ಪೌಂಡುಗಳನ್ನು ಕೊಟ್ಟು ಆ ಹಡಗನ್ನು ಕೊಂಡು ದುರಸ್ತಿ ಕಾರ್ಯ ನಡೆಸುತ್ತಿರುವಾಗಲೇ "ಇಂಗ್ಲಂಡಿಗೆ ಹೋಗ ಬಯಸುವ ಒಂದಿಬ್ಬರು ಮೂವರು ಪ್ರಯಾಣಿಕರು ಬೇಕು" ಎಂದು ಜಾಹೀರಾತು ಕೊಟ್ಟರು.

ಜಾಹೀರಾತಿಗೆ ಉತ್ತರ ಬರಲು ತಡವಾಗಲಿಲ್ಲ. ಜಾನ್ ಮತ್ತು ಹ್ಯಾರಿ ಹಡಗಿಗೆ ಬಣ್ಣ ಬಳಿಯುತ್ತಿರುವಾಗ ಧಷ್ಟಪುಷ್ಟ ವ್ಯಕ್ತಿಯೊಬ್ಬಾತ ಅವರಿದ್ದಲ್ಲಿಗೆ ಬಂದ. ಸೊಂಟಪಟ್ಟಿಗೆ ಆತ ಸಪೂರಾದ, ಉದ್ದನ್ನ ಚಾಕುವೊಂದನ್ನು ಸಿಕ್ಕಿಸಿಕೊಂಡಿದ್ದ. ಆತ ಬಂದವನೇ ಪತ್ರಿಕೆಯ ತುಣುಕೊಂದನ್ನು ಅವರೆದುರು ಹಿಡಿದು ಫ್ರೆಂಚ್ಚರು ಮಾತಾಡುವ ಧ್ವನಿಯಲ್ಲಿ "ಪ್ರಯಾಣಿಕರು ಬೇಕೆಂದು ಜಾಹೀರಾತು ಕೊಟ್ಟವರು ನೀವೆಯೊ?" ಎಂದು ಕೇಳಿದ.

"ನಮ್ಮೊಂದಿಗೆ ಇಂಗ್ಲಂಡಿಗೆ ಬರಬೇಕೆನ್ನುವಿರೇನು?" ಜಾನ್ ಪೋರ್ಟಿಯಸ್ ಕೇಳಿದ.

"ಹೌದು. ನನ್ನ ಬಳಿ ಹಣ ಇದೆ." ಎಂದು ಆಗಂತುಕ ತನ್ನ ಕಿಸೆಯಿಂದ ನೋಟಿನ ಕಟ್ಟು ತೆಗೆದು ತೋರಿಸಿ, "ನಾವು ಹೊರಡುವುದು ಎಂದು?" ಎಂದು ಕೇಳಿ ನೋಟಿನ ಕಟ್ಟನ್ನು ಜಾನನ ಕೈಗಿತ್ತ.

"ಹೊರಡುವ ದಿನ ತಿಳಿಸುತ್ತೇನೆ. ಹಡಗಿನ ಒಳಭಾಗವನ್ನಷ್ಟು ನೋಡುತ್ತೀರೇನು?" ಜಾನ್ ಹಣ ಎಣಿಸುತ್ತ ಅಂದ.

"ಛೆ! ಛೆ! ಹಡಗು ಸರಿಯಾಗಿ ಹೋಗುತ್ತದಲ್ಲ, ಅಷ್ಟೇ ನನಗೆ ಸಾಕು. ನನ್ನ ಹೆಸರು ಮಿಚೆಲ್ ಬೆಡ್ರುಕ್ಸ್. ನಾನು ಲೆಟ್ರೋಯಿ ಅಬ್ರೆಸ್‌ನಲ್ಲಿರುತ್ತೇನೆ. ಆದರೆ ಒಂದು ಮಾತು. ನಾನು ನಿಮ್ಮ ಜೊತೆಯಲ್ಲಿ ಪ್ರಯಾಣ ಮಾಡುವ ವಿಚಾರ ಯಾರಿಗೂ ತಿಳಿಯಕೂಡದು. ನಾನು ಮಾರಿಶಸ್ ದ್ವೀಪವನ್ನು ಬಿಟ್ಟು ಹೋಗಬಾರದೆಂದು ಪೋಲೀಸರು ವಿಧಿಸಿದ್ದಾರೆ."

"ಅಂದರೆ ನೀವು ಪೆರೊಲ್ ಮೇಲೆ ಇದ್ದೀರೇನು?"

"ಹೌದು. ಆದರೆ ನಾನು ಹಣ ಕೊಟ್ಟಿದ್ದೇನೆ. ನೀವು ವಚನ ಕೊಟ್ಟಿದ್ದೀರಿ."

"ಹುಂ. ನಾವು ಇಲ್ಲದ ಪ್ರಶ್ನೆ ಕೇಳುವವರಲ್ಲ. ಹೊರಡುವ ದಿನ ನಿಮಗೆ ತಿಳಿಸುತ್ತೇವೆ."

ಬೆಡ್ರುಕ್ಸ್ ಹೋದ ಮೇಲೆ "ತುಂಬ ಒರಟು ಮನುಷ್ಯ ಅಂತ ಕಾಣುತ್ತದೆ" ಎಂದ ಹ್ಯಾರಿ.

"ಇರಬಹುದು. ಆದರೆ ಅವನು ಕೊಡುವ ಹಣವೇನೂ ಒರಟಲ್ಲ" ಜಾನ್ ಉತ್ತರವಿತ್ತ.

ಅಂದು ಸಂಜೆ ಹ್ಯಾರಿ ವೈಟ್ ಸಂಜೆಯ ಊಟದ ಸಾಮಾನುಗಳನ್ನು ತೆಗೆದುಕೊಂಡು ಬಂದಾಗ ಹಡಗಿನ ಬಳಿ ಒಬ್ಬ ಹುಡುಗಿ ನಿಂತಿರುವುದನ್ನು ಕಂಡ. ಅವಳು ಅಲ್ಲಿ ಬಂದದ್ದೇಕೆ ಎಂಬ ಅಂದಾಜು ಹತ್ತಿದ್ದರೂ ಆತ "ಏನು ಬೇಕು?" ಎಂದು ಎಣಿಸಿಕೊಂಡಿದ್ದಕ್ಕಿಂತಲೂ

ತುಸು ಬಿರುಸಾಗಿಯೆ ಕೇಳಿದ.

ಬೂದುಬಣ್ಣದ ಕಣ್ಣಿನ ಆ ಹುಡುಗಿ ಲಕ್ಷಣವಾಗಿದ್ದಳು. ಅವಳು "ಹೌದು. ನೀವು ಕೊಟ್ಟಿರುವ ಜಾಹೀರಾತು ನೋಡಿ ಬಂದೆ. ನನಗೆ ಇಂಗ್ಲಂಡಿಗೆ ಹೋಗಬೇಕು. ಬಾಡಿಗೆ ಕೊಡಲು ನನ್ನಲ್ಲಿ ಹಣವಿದೆ" ಎಂದಳು.

"ಆದರೆ ನೀನು ಹುಡುಗಿ. ಇದೇನೂ ಸುಖ ವಸ್ತು ಹಡಗಲ್ಲ."

"ಗೊತ್ತಿದೆ. ಆದರೆ ಸನಿಹದಲ್ಲಿ ಇಲ್ಲಿಂದ ಹೊರಡುವ ಒಳ್ಳೆಯ ಹಡಗ ಯಾವುದೂ ಇಲ್ಲ. ನನಗೊ ಸಾಧ್ಯವಿರುವಷ್ಟು ಬೇಗ ಇಂಗ್ಲಂಡಿಗೆ ಹೋಗಬೇಕಾಗಿದೆ. ಜಾಹೀರಾತಿನಲ್ಲಿ ನೀವು ಪ್ರಯಾಣಿಕರು ಗಂಡಸರೇ ಆಗಿರಬೇಕು ಎಂದೇನೂ ಕಾಣಿಸಿಲ್ಲವಲ್ಲ."

ಅಷ್ಟರಲ್ಲಿ ಇವರ ಧ್ವನಿ ಕೇಳಿ ಜಾನ್ ಹಡಗಿನೊಳಗಿಂದ ಹೊರಗೆ ಬಂದು "ಏನದು?" ಎಂದು ಕೇಳಿದ. "ಎಲಾ! ಇಂಥ ಸುಂದರ ಹುಡುಗಿಯನ್ನೆಲ್ಲಿ ಸಂಪಾದಿಸಿದ ಹ್ಯಾರಿ" ಎಂದು ಅವನು ಆ ಹುಡುಗಿಯನ್ನು ಕಂಡಾಕ್ಷಣದಲ್ಲಿ ಯೋಚಿಸಿದ. ಮರುಕ್ಷಣದಲ್ಲಿ ಮುಗುಳ್ನಗುತ್ತ "ಏನಾಗಬೇಕಿತ್ತು ನಿಮಗೆ?" ಎಂದು ಅವಳನ್ನು ಕೇಳಿದ.

"ನಾನು ನಿಮ್ಮ ಹಡಗಿನಲ್ಲಿ ಇಂಗ್ಲಂಡಿಗೆ ಬರಬೇಕೆನ್ನುತ್ತೇನೆ. ಆದರೆ ಈತ..."

"ಛೆ! ಛೆ! ಅವನು ಹುಡುಗಾಟಿಕೆ ಮಾಡಿರಬೇಕೇಳಿ. ಬರೀ ಮೂವರು ಗಂಡಸರು ಮಾತ್ರ ಇರುವ ಹಡಗಿನಲ್ಲಿ ಪ್ರವಾಸ ಮಾಡಲು ನೀವು ಒಪ್ಪಿದರೆ ನಮ್ಮ......"

"ಅದಕ್ಕೇನಂತೆ? ನಾನೊಬ್ಬ ದಾಯಿ. ಮನೆಗೆ ಅಂದರೆ ಇಂಗ್ಲಂಡಿಗೆ ಹೋಗುವ ವೆಚ್ಚವನ್ನು ಸರಕಾರ ಕೊಡುತ್ತದೇನೊ ನಿಜ. ಆದರೆ ಸದ್ಯ ಯಾವ ಹಡಗೂ ಇಲ್ಲ. ಆದ್ದರಿಂದ ಕಷ್ಟವಾದರೆ ಆಗಲಿ, ನಿಮ್ಮ ಹಡಗಿನಲ್ಲಿ ಬರಬೇಕೆನ್ನುತ್ತೇನೆ. ಹಿಡಿಯಿರಿ ಹಣ "ಎಂದಳು ಹುಡುಗಿ.

"ಸರಿ. ನನ್ನ ಹೆಸರು ಜಾನ್ ಪೋರ್ಟಿಯಸ್. ಈತ ಹ್ಯಾರಿ ವೈಟ್. ಈತ ತೋರಿಕೆಯಲ್ಲಿ ಒರಟಾಗಿ ಕಂಡರೂ ಒಳ್ಳೆಯ ಮನುಷ್ಯ."

"ನನ್ನ ಹೆಸರು ಸುಸಾನ್ ಲಿಡ್‌ವೆಲ್. ಸರಿ. ನಿಶ್ಚಯವಾದಂತಾಯಿತು ತಾನೆ? ಆಗಾಗ ಬರುತ್ತಿರುತ್ತೇನೆ. ನೀವು ಹೇಳಿದಾಗ ಹೊರಡಲು ನಾನು ಸಿದ್ಧ." ಎಂದು ಸುಸಾನ್ ಹೊರಟು ಹೋದಳು.

ಅವಳು ಹೋದಮೇಲೆ ವೈಟ್ "ನೀನು ಬರದಿದ್ದರೆ ಅವಳನ್ನು ಅಟ್ಟಿಬಿಡುತ್ತಿದ್ದೆ. ಹೆಂಗಸರಿದ್ದಲ್ಲಿ ಗಲಾಟೆ ತಪ್ಪಿದ್ದಲ್ಲ." ಎಂದು ಗೊಣಗಿದ.

ಪೋರ್ಟಿಯಸ್ ಅವನ ಭುಜ ತಟ್ಟಿ "ಥತ್! ಅವಳಿದ್ದರೆ ಪ್ರವಾಸ ಸುಖದ್ದಾಗುವುದು" ಎಂದ.

ವೈಟ್‌ನ ಅಸಮಾಧಾನ ಹೆಚ್ಚುವುದಕ್ಕೆ ಇನ್ನೂ ಒಂದು ಕಾರಣ ಎರಡು ದಿನಗಳ ಮೇಲೆ ಸಂಭವಿಸಿತು. ಅಂದು ರಾತ್ರಿ ಬೆರ್ಡುಕ್ಸ್ ಒಬ್ಬ ಹುಡುಗಿಯನ್ನು ಜೊತೆಯಲ್ಲಿ ಕರೆದುಕೊಂಡು ಬಂದ. ಇವಳೂ ಸುಂದರಿಯಾಗಿದ್ದಳು. ಅವಳ ಕಣ್ಣುಗಳು, ಅವಳ ತುಟಿಗಳು ಪುರುಷರನ್ನು ಆಹ್ವಾನಿಸುವಂತಿದ್ದವು. ಬೆರ್ಡುಕ್ಸ್ ಬಂದವನೇ ಒಂದು ಮದ್ಯದ ಬಾಟಲಿಯನ್ನು ಹೀರುತ್ತ "ಇನ್ನೆರಡು ದಿನಗಳಲ್ಲಿ ಹೊರಡುವೆವು ಅಲ್ಲವೆ? ಇನ್ನೊಬ್ಬರಿಗೆ ಸ್ಥಳವಿದೆಯೆ?" ಎಂದು ಕೇಳಿದ.

ಛೇ! ಖಂಡಿತ ಏನೊ ಪ್ರಮಾದ ಜರುಗಲಿದೆ ಎಂದೆನಿಸಿದರೂ ವೈಟ್ ಸುಮ್ಮನುಳಿದ.

"ಸ್ಥಳ ಇರಬಹುದು. ಯಾಕೆ?" ಎಂದು ಜಾನ್ ಕೇಳಿದ.

"ಅಂದರೆ ಓವಿಲಾ ನನ್ನ ಜೊತೆ ಬರುತ್ತಾಳೆ. ಯುರೋಪಿಗೆ ಹೋದೊಡನೆ ನಾವು ಲಗ್ನವಾಗಲಿದ್ದೇವೆ. ಅವಳಿಂದ ನಿಮಗೇನೂ ತೊಂದರೆಯಾಗದು" ಬೆರ್ಡುಕ್ಸ್ ಹೇಳಿದ.

ವೈಟ್ ಹೇಗೊ ತನ್ನನ್ನು ನಿಯಂತ್ರಿಸಿಕೊಂಡ. ಈ ಹುಡುಗಿಯಿರುವಲ್ಲಿ ಗಲಾಟೆ ಇಲ್ಲವೆಂದರೆ—ಗಲಾಟೆ ಹುಟ್ಟಿಸಲೆಂದೇ ಹೇಳಿ ಮಾಡಿಸಿದಂತಿದ್ದಳಿವಳು. ಆದರೂ ಆ ದಾಯಿ ಮತ್ತು ಇವಳು ಇಬ್ಬರು ಹೆಂಗಸರಿರುವದು ಒಬ್ಬಳಿರುವದ

ಕ್ಕಿಂತಲೂ ವಾಸಿ. ಎಂದಾತ ಯೋಚಿಸಿದ.

ಓವಿಲಾ, ಮಾರಿಶಸ್‌ನಲ್ಲಿ ನೆಲೆಸಿದ ಹಲವಾರು ರಕ್ತ ಮಿಶ್ರಣಗಳಿಂದ ನಿರ್ಮಿತವಾದ ಜಾತಿಯ ಹುಡುಗಿಯಂತೆ ಕಾಣಿಸುತ್ತಿದ್ದಳು.

ಬೆರ್ಡುರ್ಕ್ಸ್ ಹಣ ಕೊಟ್ಟ. ಈ ಬೆರ್ಡುರ್ಕ್ಸ್ ತಮ್ಮ ಜೊತೆ ಬರದಿದ್ದರೇನೇ ಒಳಿತಾಗುತ್ತಿತ್ತು ಎಂದು ವೈಟ್‌ನಿಗೆ ಅನಿಸುತ್ತಿತ್ತು. ಬೆರ್ಡುರ್ಕ್ಸ್ ಹಣ ಸಂಪಾದಿಸುತ್ತಿದ್ದ ರೀತಿ, ಅವನಿಗಾದ ಶಿಕ್ಷೆ, ಅವನು ಪೆರೊಲ್ ಮೇಲೆ ಬಿಡುಗಡೆ ಹೊಂದಿದ ವಿಚಾರ ಎಲ್ಲವನ್ನೂ ಆತ ಒಬ್ಬ ನಾವಿಕನಿಂದ ಕೇಳಿ ತಿಳಿದಿದ್ದ. ಆದರೆ ಈಗ ಮಾತು ಮಿಂಚಿತ್ತು. ಜಾನ್ ಫೋರ್ಟಿಯಸ್‌ನಿಗೆ ಈಗ ಈ ಕಥೆಯನ್ನು ಹೇಳಿ ಪ್ರಯೋಜನವೇನು? ಹಡಗಿನಲ್ಲಿ ಬೆರ್ಡುರ್ಕ್ಸ್‌ನ ಮೇಲೆ ಯಾವಾಗಲೂ ಒಂದು ಕಣ್ಣಿಟ್ಟರಾಯಿತು ಎಂದು ಯೋಚಿಸಿ ಹ್ಯಾರಿ ವೈಟ್ ಸುಮ್ಮನುಳಿದ.

ಎರಡು ದಿನಗಳ ನಂತರ ಹಡಗು ಹೊರಟಿತು.

ನಾಣ್ಯವೊಂದನ್ನು ಹಾರಿಸಿ ಅವರು ತಮ್ಮ ಹಾದಿಯನ್ನು ಗೊತ್ತುಮಾಡಿಕೊಂಡಿದ್ದರು. ಮಡಾಗಾಸ್ಕರ ಮಾರ್ಗವಾಗಿ ಡರ್ಬಾನಿಗೆ ಹೋಗಿ ಅಲ್ಲಿ ನೀರು ಆಹಾರಾದಿಗಳನ್ನು ತುಂಬಿಕೊಂಡು ಮುಂದೆ ಪ್ರಯಾಣ ಬೆಳೆಸಲಿದ್ದರು.

ಹಡಗು ಸಾಗಿತ್ತು. ಚುಕ್ಕಾಣಿಯನ್ನು ಹಿಡಿದು ಕೂಡ್ರುವ ಪಾಳಿ ಬೆರ್ಡುರ್ಕ್ಸ್‌ನದಾಗಿದ್ದುದರಿಂದ ಆತ ಅದರ ಮೇಲೆ ಕೈಯಿಟ್ಟು ಕುಳಿತಿದ್ದ. ವೈಟ್ ಅರೆ ನಿದ್ದೆಯಲ್ಲಿ ಮಲಗಿದ್ದ. ಸುಸಾನ್ ಲಿಡ್‌ವೆಲ್ ಒಂದು ಮೂಲೆಯಲ್ಲಿ ಓದುತ್ತ ಕುಳಿತಿದ್ದಳು. ಆಗ ಆ ಮಾರಿಶಿಯನ್ ಹುಡುಗಿ ಓವಿಲಾ, ಸ್ನಾನದ ಉಡುಪಿನಲ್ಲಿ ಕೇಬಿನ್ನಿನ ಹೊರಗೆ ಬಂದಳು. ಜಾನನ ಕಣ್ಣು ತನ್ನ ದೇಹದ ಮೇಲಿದೆಯೆಂದರಿವಾದರೂ ಅವಳು ಅದರ ಪರಿವೆಯಿಲ್ಲದವರಂತೆ ನಿದಾನವಾಗಿ ನಡೆದು ಡೆಕ್ಕಿನ ಮೇಲೆ ಬಿಸಿಲಿನಲ್ಲಿ ಅಡ್ಡಾದಳು.

ಅವಳ ಆ ಅರೆನಗ್ನ ಸೌಂದರ್ಯವನ್ನು ಕಂಡು ಭ್ರಮಿಷ್ಟನಂತಾದ ಜಾನ್ ಅವಳತ್ತ ನಡೆದ. ಅವನನ್ನು ಕಂಡು ಅವಳು "ಬಿಸಿಲಿನ ಝಳವೆಂದರೆ ನನಗೆ ಪ್ರೀತಿ" ಎಂದಳು.

ಅಷ್ಟರಲ್ಲಿ ಜಾನನ ಹಿಂದೆ ಬಂದು ನಿಂತ ಬೆರ್ಡುರ್ಕ್ಸ್‌ನ ಧ್ವನಿ ಜಾನನ ಕಿವಿಗಳಿಗೆ ಕಾದ ಸೀಸದಂತನಿಸಿತು. "ಓವಿಲಾ ನನ್ನವಳು. ಅವಳಿಂದ ದೂರವಿರು" ಎಂದು ಭುಸುಗುಟ್ಟಿದ ಬೆರ್ಡುರ್ಕ್ಸ್.

ಜಾನನ ಮುಷ್ಟಿಗಳು ಬಿಗಿದವಾದರೂ ಆತ ಅಲ್ಲಿಂದ ಸರಿದ. ಈ ಚಿಕ್ಕ ಹಡಗಿನಲ್ಲಿ ಜಗಳ ಕಾದು ಪ್ರಯೋಜನವಿರಲಿಲ್ಲ. ಮತ್ತೆ ಓವಿಲಾ ಸುಂದರಳಾಗಿದ್ದರೂ ಹೊಡೆದಾಟ ಬಡಿದಾಟ ಮಾಡುವಷ್ಟೇನೂ ಬೆಲೆಯುಳ್ಳವಳಾಗಿರಲಿಲ್ಲ. ಜಾನ್ ಸುಸಾನ್ ಕುಳಿತಲ್ಲಿಗೆ ಬಂದ.

"ಈ ಲ್ಯಾಟಿನ್ನರು ಬಹಳ ಸಂಶಯ ಪ್ರಕೃತಿಯವರು" ಎಂದನಾತ.

ಸುಸಾನ್ ನಕ್ಕು "ಓವಿಲಾಳಂಥ ಹುಡುಗಿಯ ಪ್ರಿಯಕರರಾಗಿದ್ದರೆ ನೀವೂ ಹಾಗೆಯೆ ಆಗುತ್ತಿರಲಿಲ್ಲವೆ?" ಎಂದುತ್ತರವಿತ್ತಳು.

"ನನಗೇನೂ ಅಂಥ ಹುಡುಗಿ ಬೇಕಾಗಿಲ್ಲ." ಜಾನ್ ಈ ಮಾತನ್ನಾಡಿದಾಗ ಸುಸಾನಳ ಅಚ್ಚರಿಯ ಮುಖಭಾವ ಕಂಡು ಅವಳ ಮನದಿಂಗಿತವನ್ನು ತಿಳಿದುಕೊಂಡ. ಹಡಗು ಹೊರಟನಂತರ ಸುಸಾನಳ ಬಿಗಿ ವರ್ತನೆ ಸಡಿಲಾಗಿತ್ತು. ತನ್ನನ್ನವಳು ಮೆಚ್ಚಿದ್ದಾಳೆಂದು ಜಾನನಿಗರಿವಾಗಿತ್ತು. ಆದರೆ ಇಂಗ್ಲಂಡ್ ಮುಟ್ಟುವವರೆಗೂ ಅವನು ಯಾವ ಬಂಧನಕ್ಕೂ ತನ್ನನ್ನು ಸಿಕ್ಕಿಹಾಕಿಕೊಳ್ಳಲು ಸಿದ್ಧನಿರಲಿಲ್ಲ.

ಮರುದಿನ ಅವನು ನಿದ್ದೆಯ ಅಮಲನ್ನು ನಿಯಂತ್ರಿಸಿಕೊಳ್ಳುತ್ತ ಕಂಪಾಸಿನ ಮುಳ್ಳಿನ ಮೇಲೆ ಕಣ್ಣಿಟ್ಟು ಕುಳಿತಿದ್ದಾಗ ಒಮ್ಮಿಂದೊಮ್ಮೆ ಇಂಜಿನ್ ಸಪ್ಪಳ ಬದಲಾಗಿಬಿಟ್ಟಿದ್ದನ್ನು ಕೇಳಿದ. ಹಡಗಿನ ವೇಗ ಮಂದವಾಯಿತು.

ವೈಟ್ ಇಂಜಿನ್ ಇದ್ದಲ್ಲಿಗೆ ಹೋದ. ಜಾನ್

ಮತ್ತು ಇತರರು ಅವನ ಹಿಂದೆ ಹೋದರು. "ಗಂಭೀರ ಸ್ವರೂಪದ ತೊಂದರೆಯೇನೂ ಇಲ್ಲ ತಾನೆ ?" ಸುಸಾನ್ ಕೇಳಿದಳು. ಅವಳ ಕಣ್ಣುಗಳಲ್ಲಿ ಮೂಡಿದ್ದ ಅಂಜಿಕೆಯನ್ನು ಕಂಡ ಜಾನ್ "ಹಾಗೇನಿಲ್ಲ. ಒಂದರೆಕ್ಷಣದಲ್ಲಿ ನಾನದನ್ನು ದುರಸ್ತಿ ಮಾಡುತ್ತೇನೆ" ಎಂದ.

ಆದರೆ ಹಾಗಾಗಲಿಲ್ಲ. ಇಂಜಿನ್ನು ಅಲ್ಲಿ ಸಮುದ್ರಮಧ್ಯದಲ್ಲಿ ದುರಸ್ತಿ ಮಾಡಲಾರದ ರೀತಿಯಲ್ಲಿ ಕೆಟ್ಟುಹೋಗಿತ್ತು.

ಎಲ್ಲರ ಮುಖದ ಮೇಲೆ ಹತಾಶಭಾವ ಮೂಡಿದಾಗ ಪೋರ್ಟಿಯಸ್ ಹೇಳಿದ: "ಚಿಂತೆಗೆ ಕಾರಣವಿಲ್ಲ. ಯಾವುದಾದರೂ ಹಡಗು ನಮ್ಮ ಕಣ್ಣಿಗೆ ಬಿದ್ದೀತು."

ಅಷ್ಟರಲ್ಲಿ ಸುಸಾನ್ ಹೇಳಿದಳು "ಹಾಯಿ ಕಟ್ಟಿದರೆ ಹೇಗೆ? ಹಾಯಿಗೆ ಅನುಕೂಲವಾದಂಥ ಬಟ್ಟೆಗಿಟ್ಟೆ ಇಲ್ಲವೆ ?"

ಹ್ಯಾರಿ ವೈಟ್ ಗೌರವದಿಂದ ಅವಳ ಮುಖ ನೋಡಿದ. "ನಾವೆಲ್ಲ ಗಂಡಸರು ಮೂರ್ಖರಂತೆ ನಿಂತಿರುವಾಗ ಹೆಂಗಸೊಬ್ಬಳು ವಿವೇಕದ ಮಾತನ್ನು ಹೇಳುತ್ತಿದ್ದಾಳೆ" ಎಂದು ಆತ ಹಾಯಿಗಾಗಿ ಬಟ್ಟೆ ಹುಡುಕಲು ಹೊರಟ.

ಆದರೆ ಹಾಯಿ ಕಟ್ಟಿದರೂ ಪ್ರಯೋಜನವಾಗಲಿಲ್ಲ. ಗಾಳಿಯೆ ಇರದ್ದರಿಂದ ಹಾಯಿ ಅಸಹಾಯಕನಂತೆ ಪಟಪಟ ಬಡಿದುಕೊಳ್ಳತೊಡಗಿತಷ್ಟೆ.

"ನಾಳೆಯಾದರೂ ಯಾವುದಾದರೊಂದು ಹಡಗ ಕಣ್ಣಿಗೆ ಬಿದ್ದೀತು" ಎಂದವರು ಅಂದುಕೊಳ್ಳುತ್ತಿದ್ದಂತೆಯೆ ದಿನಗಳುರುಳಿದವು. "ಹಂ! ನೀರು ಮತ್ತು ಆಹಾರವನ್ನು ಇನ್ನು ದಿನಕ್ಕಿಂತಿಷ್ಟು ಎಂದು ನಿಶ್ಚಯಿಸಬೇಕು" ಎಂದ ಬೆರ್ಡ್ಸಿಕ್ಸ್. ಅವನ ಯಜಮಾನತ್ವವನ್ನು ಯಾರೂ ಪ್ರತಿಭಟಿಸಲಿಲ್ಲ.

ಈಗ ಹುಡುಗಿಯರಿಬ್ಬರೂ ಡೆಕ್ಕಿನ ಮೇಲೆ ಗಂಡಸರ ಜೊತೆಯಲ್ಲಿಯೆ ಮಲಗುತ್ತಿದ್ದರು. ಬೆರ್ಡ್ಸಿಕ್ಸ್ ಮಾತನಾಡಿಸಿದರೂ ಉತ್ತರವೀ

ಯದೆ ಸುಸಾನ್ ಮೌನವಾಗಿರುತ್ತಿದ್ದಳು. ಆತನೊ ಅವಳನ್ನು ತೆರಪಿಲ್ಲದೆ ಮಾತನಾಡಿಸುತ್ತಲೇ ಇರುತ್ತಿದ್ದ. ಜೀವ ಹಿಡಿದುಕೊಂಡರೆ ಸಾಕು ಎನ್ನುವ ಸ್ಥಿತಿಗೆ ಬಂದಿದ್ದ ಸುಸಾನಳಲ್ಲಿ ಪ್ರತಿಭಟಿಸುವ ಶಕ್ತಿಯಿರಲಿಲ್ಲ. ಬೆರ್ಡುಕ್ಸ್ ತನ್ನ ಬೆನ್ನುಹತ್ತಿರುವದನ್ನು ಕಂಡು ಮತ್ಸರದಿಂದ ಕುದಿಯುತ್ತ ತನ್ನನ್ನು ಕೆಂಗಣ್ಣಿನಿಂದ ನೋಡುತ್ತಲಿದ್ದ ಓವಿಲಾಳನ್ನೂ ಅವಳು ಗಮನಿಸುತ್ತಿರಲಿಲ್ಲ.

ಇಂಜಿನ್ ಕೆಟ್ಟು ೨೫ ದಿನಗಳಾಗಿ ಹೋಗಿದ್ದವು. ಪ್ರತಿಯೊಬ್ಬರ ಚರ್ಮವೂ ಒಣಗಿ ಸುಕ್ಕುಗಟ್ಟಿಹೋಗಿತ್ತು. ದಿನಕ್ಕೆ ಎರಡೇ ಎರಡು ಚಮಚೆ ನೀರು ಕುಡಿಯಬೇಕಾದ ಸ್ಥಿತಿಗೆ ಮುಟ್ಟಿದ್ದ ಅವರ ತುಟಿಗಳು ಬಿರಿದು ಉರಿಯುತ್ತಲಿದ್ದವು.

೨೬ ನೆಯ ದಿನ ಹ್ಯಾರಿ ವೈಟ್ ಕೂಗಿದ. "ಹಡಗು... ಒಂದು ಹಡಗು!" ಮಲಗಿದ್ದವರೆಲ್ಲ ಜಿಗಿದು ನಿಂತರು. ಮಂತ್ರಮುಗ್ಧರಂತೆ ದೂರದಲ್ಲಿ ಕಾಣುತ್ತಿದ್ದ ಹಡಗವನ್ನು ನೋಡುತ್ತ ನಿಂತರು. ಎಲ್ಲಿ ಅದು ತಮ್ಮನ್ನು ಕಾಣದೆ ಮುಂದೆ ಸಾಗಿಬಿಡುವದೊ ಎಂಬ ಶಂಕೆಯಿಂದ ಅವರ ಎದೆ ಹೊಡೆದುಕೊಳ್ಳುತ್ತಲಿತ್ತು.

ಅದರಂತೆಯೆ ಆಯಿತು. ಆ ಹಡಗ ಕಣ್ಣಿಗೆ ಬಿದ್ದಂತೆಯೆ ದೃಷ್ಟಿಪಥದಿಂದ ಕರಗಿಹೋಯಿತು ಅವರೆಲ್ಲ ಕೆಳಗೆ ಕುಸಿದರು. ಕೆಳಗೆ ಬಿದ್ದ ಸುಸಾನಳಿಗೆ ಆಧಾರವಿತ್ತು ನೆರಳಿಗೊಯ್ದು ಮಲಗಿಸಿದ ಬೆರ್ಡುಕ್ಸ್. ಅದನ್ನು ಕಂಡ ಓವಿಲಾಳ ಸಹನೆ ಮೀರಿ ಅವಳು "ಬಿಡವನನ್ನು, ಅವನು ನನ್ನವನು" ಎಂದು ಕೂಗಿಕೊಂಡವಳೇ ಸುಸಾನಳ ಮೇಲೇರಿ ಹೋದಳು. ಆದರೆ ಪೋರ್ಟಿಯಸ್ ಅವಳನ್ನು ಹಿಡಿದೆಳೆದು ನೆಲಕ್ಕೆ ಕೆಡವಿದ. ನೂಕುವಾಗ ಅವನ ಮೊಣಕೈ ಅವಳ ತುಟಿಗೆ ಬಡಿದು ಅಲ್ಲಿ ರಕ್ತ ಬಂತು.

ಅವಾಚ್ಯವಾದೊಂದು ಬೈಗಳನ್ನು ಬೈದವನೇ ಬೆರ್ಡುಕ್ಸ್ ಜಾನನ ಮೇಲೆ ಜಗಿದ. ಅವನ ಕೈಲಿದ್ದ ಚಾಕು ಥಳಥಳ ಹೊಳೆಯುತ್ತಿತ್ತು. ತನ್ನ ರಕ್ಷಣೆಗಾಗಿ ಜಾನ್ ಸಿದ್ಧನಾಗಿರಲಿಲ್ಲ. ಅಷ್ಟರಲ್ಲಿ ಹ್ಯಾರಿ ಅವರಿಬ್ಬರ ನಡುವೆ ಪಿಸ್ತೂಲು ಹಿಡಿದು ನಿಂತ.

"ಬೆರ್ಡುಕ್ಸ್, ಚಾಕುವನ್ನು ತೆಗೆದಿಡು. ಜಾನ್ ಬೇಕೆಂತಲೇ ಅವಳನ್ನು ಹೊಡೆಯಲಿಲ್ಲ."

"ಆತ-ಆತ ಅವಳನ್ನುಹೊಡೆದು ಗಾಯಗೊಳಿಸಿದ್ದಾನೆ. ಆತನಿಗೆ ಪ್ರಾಯಶ್ಚಿತ್ತವಾಗಲೇಬೇಕು" ಉದ್ವೇಗಭರದಲ್ಲಿ ಬೆರ್ಡುಕ್ಸ್‌ನಿಗೆ ತಾನೇ ಕೆಲ ದಿನಗಳಲ್ಲಿ ಓವಿಲಾಳೊಡನೆ ಮಾತು ಕೂಡ ಸರಿಯಾಗಿ ಆಡಿರಲಿಲ್ಲ ಎಂಬುದು ಮರೆತೇ ಹೋಗಿತ್ತು.

"ಚಾಕು ಕೆಳಗಿಡದಿದ್ದರೆ ಗುಂಡು ಹಾರಿಸುತ್ತೇನೆ" ವೈಟ್ ನಿರ್ಧಾರದಿಂದ ಹೇಳಿದ.

ಬೆರ್ಡುಕ್ಸ್ ಸಾವಕಾಶವಾಗಿ ಚಾಕುವನ್ನು ಸೊಂಟಕ್ಕೆ ಸಿಗಿಸಿಕೊಂಡು ಓವಿಲಾಳ ಬಳಿಗೆ ಹೋಗಿ ಮುದುಡಿಕೊಂಡು ಕುಳಿತ. ಸದ್ಯದ ಗಂಡಾಂತರ ತಪ್ಪಿತೆಂದು ಹ್ಯಾರಿಗೆ ತಿಳಿಯಿತು.

ಆದರೂ ಅವನಿಗೆ ಬೆರ್ಡುಕ್ಸ್‌ನನ್ನು ಜೊತೆಗೆ ತಂದದ್ದು ಮಹಾಮೂರ್ಖತನವಾಗಿ ಹೋಯಿತು ಎಂದೆನಿಸದಿರಲಿಲ್ಲ. ಪ್ರತಿ ಪ್ರಸಂಗವೂ ಇಷ್ಟು ಸುಲಭದಲ್ಲಿ ನಿವಾರಣೆಯಾಗಲಿಕ್ಕಿಲ್ಲ. ಆದರೆ ಈಗ ಬಂದದ್ದನ್ನನುಭವಿಸದೆ ಗತ್ಯಂತರವಿರಲಿಲ್ಲ.

ಪ್ರತಿನಿತ್ಯ ಎರಡು ಸಲ ಬೆರ್ಡುಕ್ಸ್ ಅವರಿಗೆಲ್ಲ ಒಂದೊಂದು ಚಮಚೆ ನೀರು ಕೊಡುತ್ತಿದ್ದ. ಬಿಸಿಲಿನಿಂದ ಒಣಗಿಹೋಗಿದ್ದ ಗಂಟಲಿನಲ್ಲಿ ಆ ನೀರು ಇಳಿಸುವದು ಕೂಡ ಅವರಿಗೆ ಕಠಿಣವಾಗುತ್ತಿತ್ತು. ನೀರು ಹಂಚಿಯಾದೊಡನೆ ಬೆರ್ಡುಕ್ಸ್ ಸುಸಾನಳ ಬಳಿ ಹೋಗುತ್ತಿದ್ದ. "ನೀನು ಸಾಯುವುದಿಲ್ಲ. ನಾನು ನಿನ್ನನ್ನು ಸಾಯಗೊಡುವದಿಲ್ಲ" ಎಂದಾತ ಹೇಳುತ್ತಿದ್ದ. ಆದರೆ ಆ ಮಾತುಗಳು ಅವಳಿಗೆ ಕೇಳಿಸುತ್ತಿರುವಂತೆ ಕಾಣುತ್ತಿರಲಿಲ್ಲ.

ಆ ಸದ್ದು ವೈಟ್‌ನಿಗೆ ಕೇಳಿಸಿದಾಗ ನಸುಕಾಗಿತ್ತು. ಆತ ಜಾನನ ಅಂಗಿ ಹಿಡಿದು ಜಗ್ಗಿ

"ತೆರೆಗಳ ಸಪ್ಪಳ ಕೇಳಿದಿಯಾ? ಇಲ್ಲಿಯೆ ಸಮೀಪದಲ್ಲೆಲ್ಲೊ ನೆಲವಿರಬೇಕು" ಎಂದ.

"ಛೆ! ಛೆ! ನಿನಗೆಲ್ಲೊ ಭ್ರಮೆ."

"ಹುಂ. ಕೇಳು. ನಿಜ ನಾನಂದದ್ದು."

ಜಾನ್ ಪೋರ್ಟಿಯಸ್ ಎದ್ದು ಕುಳಿತು ಆಲಿಸಿದ. "ಹೌದು. ಬೆಡ್ರುಕ್ಸ್, ಸಮೀಪದಲ್ಲಿ ನೆಲವಿದೆ. ನಾವಲ್ಲಿಗೆ ಹೇಗಾದರೂ ತಲುಪಬೇಕು." ಆತನ ಧ್ವನಿ ಉತ್ಸುಕತೆ ಆಶೆಗಳಿಂದ ಕೂಡಿತ್ತು. ಜಾನ್ ಸುಸಾನ್ ಮತ್ತು ಓವಿಲಾರನ್ನು ಅಲುಗಾಡಿಸಿ ಎಬ್ಬಿಸಿ "ಏಳಿ ಏಳಿ, ನೆಲ ಸಮೀಪದಲ್ಲಿದೆ." ಎಂದ.

ಅಷ್ಟರಲ್ಲಿ ದೊಡ್ಡದೊಂದು ತೆರೆ ಹಡಗಕ್ಕೆ ಅಪ್ಪಳಿಸಿತು. ಡೆಕ್ಕಿನ ಮೇಲೆಲ್ಲ ನೀರುಹರಿಯಿತು. ಆ ತೆರೆ ಹಡಗನ್ನು ಬಂಡೆಗಲ್ಲಿಗೆ ಬಡಿಸಿತು. "ಬಂಡೆಗಲ್ಲು. ನಾವು ಬಂಡೆಗಲ್ಲುಗಳ ಮೇಲಿದ್ದೇವೆ" ಎಂದು ಕೂಗುತ್ತ ಬೆಡ್ರುಕ್ಸ್ ಅಪಾಯ ಸಂದರ್ಭಗಳಲ್ಲಿ ಉಪಯೋಗಿಸುವ ತೆಪ್ಪದತ್ತ ಹಾರಿ ಅದನ್ನು ಕಟ್ಟಿದ್ದ ಹಗ್ಗವನ್ನು ಜಗ್ಗಿ ಹರಿದ. ಸುತ್ತಲೂ ತೆರೆಗಳು ಬಂದು ಅಪ್ಪಳಿಸುತ್ತಿದ್ದವು. ಹಡಗ ಮೇಲೆದ್ದು ಕೆಳಗೆ ಬಿದ್ದು ಅತ್ತಿತ್ತ ತೂಗುತ್ತಿತ್ತು. ಇನ್ನು ಮರಣವೇ ಗತಿ ಎಂದು ಎಲ್ಲರೂ ನಂಬಿದರು.

ಹೇಗೊ ಅವರೆಲ್ಲ ತೆಪ್ಪವನ್ನೇರಿದರು. ಹಡಗದಿಂದ ದೂರವಾದರು. ಆದರೆ ಒಂದು ತೆರೆ ಆ ತೆಪ್ಪವನ್ನು ಎತ್ತಿ ಮೇಲಕ್ಕೆ ಹಾರಿಸಿದಾಗ ಅವರೆಲ್ಲ ದಡದಡ ನೀರಲ್ಲಿ ಬಿದ್ದು ಬಿಟ್ಟರು. ಜಾನನಿಗೆ ಸುಸಾನಳ ಭಯಪೂರ್ಣ ಮುಖ ಕಾಣಿಸಿತು. ಆತ ಅವಳನ್ನು ಹಿಡಿಯಲೆತ್ನಿಸಿದ. ಆದರೆ ತೆರೆ ಇಬ್ಬರನ್ನೂ ಮುಳುಗಿಸಿತು. ಜಾನನಿಗೆ ತನ್ನ ಮೈಗೆ ಯಾರದೊ ದೇಹ ಬಡಿದಂತೆನಿಸಲು ಆತ "ದೇವರು ದೊಡ್ಡವ. ಸುಸಾನಳು ಸಿಕ್ಕಳು" ಎಂದುಕೊಂಡ. "ವೈಟ್, ಬೆಡ್ರುಕ್ಸ್" ಎಂದಾತ ಕೂಗಿದ್ದು ತೆರೆಗಳ ಗರ್ಜನೆಯಲ್ಲಿ ಲೀನವಾಗಿ ಹೋಯಿತು. ಜಾನ್ ಎಡಗೈಯಿಂದ ಮೂರ್ಛೆ ಹೋಗಿದ್ದ ಹುಡುಗಿಯನ್ನು ಅವಚಿಕೊಂಡು

ಎದುರು ಕಾಣಿಸುತ್ತಿದ್ದ ದೊಡ್ಡ ಬಂಡೆಗಲ್ಲಿನತ್ತ ಈಜತೊಡಗಿದ. ಚಿಪ್ಪಿನ ಬಂಡೆಯೊಂದರ ತುದಿ ಅವನ ಕಾಲನ್ನು ಚಾಕುವಿನಂತೆ ಹರಿಯಿತು. ಅವನ ಹೊಟ್ಟೆಗೆ ಯಾವುದೊ ಒಂದು ಪದಾರ್ಥ ಗುಂಡಿನಂತೆ ಬಡಿಯಿತು.

ಆ ಮೇಲೆ ಆತ ಒಂದು ಚಿಕ್ಕ ಆಘಾತದ ಸೆಳವಿನಿಂದ ತೇಲಿಹೋದ. ಅವನ ಕಾಲ ಕೆಳಗೆ ಗಟ್ಟಿ ನೆಲಹತ್ತಿತು. ಇನ್ನೊಂದು ತೆರೆ ಅವನನ್ನು ಮತ್ತೆ ನೀರಿಗೆ ಜಗ್ಗುತ್ತಿದ್ದಾಗಲೇ ಆತ ಮಹಾ ಸಾಹಸದಿಂದ ಬಂಡೆಗಲ್ಲನ್ನು ಹಿಡಿದುಕೊಂಡು ಅದನ್ನೇರಿದ. ಆಗಲೇ ಅವನು ತಾನು ಅವಚಿಕೊಂಡಿದ್ದ ಹುಡುಗಿಯ ಮುಖ ನೋಡಿದ್ದು. ಅವಳು ಸುಸಾನಳಾಗಿರದೆ ಓವಿಲಾಳಾಗಿದ್ದಳು.

ನೀರಡಿಕೆ ಅವನನ್ನು ಹೈರಾಣಗೊಳಿಸುತ್ತಿತ್ತು. ಸುತ್ತಲೆಲ್ಲ ನೀರು, ಬಂಡೆಗಲ್ಲುಗಳನ್ನು ಬಿಟ್ಟರೆ ಮತ್ತೇನೂ ಕಾಣುತ್ತಿರಲಿಲ್ಲ. ಓವಿಲಾ ಅತಿ ಮೆಲ್ಲಗೆ ನರಳತೊಡಗಿದ್ದಳು. ಉಳಿದವರ ಅವಸ್ಥೆಯೇನಾಗಿರಬಹುದು? ಸತ್ತಿರಬಹುದೇ ಎಂದು ಜಾನ್ ಯೋಚಿಸುತ್ತಿದ್ದಾಗಲೇ ಅವನಿಗೊಂದು ಕೂಗು ಕೇಳಿಸಿತು. ಕಣ್ಣೆತ್ತಿ ಆ ದಿಕ್ಕಿನಲ್ಲಿ ನೋಡಿದರೆ ತುಸು ದೂರದಲ್ಲಿ ಒಂದು ಬಂಡೆಗಲ್ಲಿನಮೇಲೆ ಹ್ಯಾರಿ ವೈಟ್ ನಿಂತಿದ್ದು ಕಾಣಿಸಿತು. ಜಾನ್ ಸಾವಕಾಶವಾಗಿ, ಜಾಗರೂಕತೆಯಿಂದ ಕಾಲುಜಾರುತ್ತಿದ್ದ ಆ ಬಂಡೆಗಲ್ಲುಗಳ ಮೇಲೆ ನಡೆಯುತ್ತ ವೈಟ್‌ನತ್ತ ಹೋದ. ಇಬ್ಬರೂ ಒಬ್ಬರೊಬ್ಬರ ಕೈ ಹಿಡಿದುಕೊಂಡರು. ಬದುಕಿದ್ದೇವಲ್ಲ ಎಂಬ ವಿಚಾರ ಏಕಕಾಲದಲ್ಲಿ ಇಬ್ಬರಿಗೂ ಹೊಳೆಯಿತೊ ಏನೊ, ಅವರ ಮುಖದಲ್ಲಿ ಮುಗುಳ್ನಗು ಮೂಡಿತು.

"ತಲೆಗೆ ಗಾಯವಾಗಿದ್ದರೂ ಬೆರ್ಡುಕ್ಸ್ ಬದುಕಿಕೊಂಡಿದ್ದಾನೆ" ಎಂದ ವೈಟ್. "ಮತ್ತೆ ಅವಳು—ಸುಸಾನ್" ಎಂದು ಜಾನ್ ಕೇಳಿದ. "ಅವಳ ಪತ್ತೆಯೇ ಇಲ್ಲ" ಎಂದು ವೈಟ್ ಹೇಳುತ್ತಿದ್ದಾಗಲೇ ಅವರಿಗೆ ತಮ್ಮ ಹಿಂದಿನಿಂದ ಕ್ಷೀಣ ಕೂಗೊಂದು ಕೇಳಿಸಿತು. ಹಿಂತಿರುಗಿ ನೋಡಿದ ಜಾನನಿಗೆ ಕಪ್ಪು ಬಂಡೆಯೊಂದರ ಮೇಲೆ ಸುಸಾನ್ ಅಸ್ತವ್ಯಸ್ತವಾಗಿ ಬಿದ್ದಿರುವುದು ಕಾಣಿಸಿತು. ಜಾನ್ ತನ್ನ ನೋವು, ಸಂಕಟಗಳನ್ನೆಲ್ಲ ಮರೆತು ಅತ್ತ ಧಾವಿಸಿದ. ಸುಸಾನಳನ್ನೆತ್ತಿಕೊಂಡು ಬರಬೇಕಾದರೆ ಆತನಿಗೆ ಸಾವಿನ ದವಡೆಯಿಂದಲೇ ಪಾರಾಗಿ ಬಂದಂತೆನಿಸಿತು.

ಅಂತೂ ಹಡಗಿನಲ್ಲಿದ್ದವರೆಲ್ಲ ಸಮುದ್ರದಿಂದ ಪಾರಾಗಿದ್ದರು. ಆದರೆ ಈ ಅಜ್ಞಾತ ನಡುಗಡ್ಡೆಯಲ್ಲಿ ಅವರಿಗೆ ಏನೇನು ವಿಪತ್ತುಗಳು ಕಾದಿದ್ದವೊ ಯಾರು ಬಲ್ಲರು?

ಇನ್ನೂ ಹೊತ್ತೇರಿರದಿದ್ದರೂ ಬಿಸಿಲು ಆಗಲೇ ಸುಡತೊಡಗಿತ್ತು. ಜಾನ್‌ಪೋರ್ಟಿಯಸ್ ಹಿಂತಿರುಗಿ ಮೊದಲಿನ ಬಂಡೆಗಲ್ಲಿಗೆ ಬಂದು ಓವಿಲಾಳನ್ನು ಮೆಲ್ಲಗೆ ನಡೆಸಿಕೊಂಡು ಉಳಿದವರಿದ್ದಲ್ಲಿಗೆ ಕರೆತಂದ. ಬಿಸಿಲು ಮೊದಲೆ ಒಣಗಿ ಬಿರಿದಿದ್ದ ಅವರ ಚರ್ಮವನ್ನು ಹುರಿದಂತೆ ಮಾಡುತ್ತಿತ್ತು. ಅವರ ನೀರಡಿಕೆ ಅಸಾಧ್ಯ ತಾಪವನ್ನೀಯುತ್ತಿತ್ತು.

ಅವರು ಅಲ್ಲಿಯೆ ಇರುವುದು ಸಾಧ್ಯವಿರಲಿಲ್ಲ. ವೈಟ್ ಬೆರ್ಡುಕ್ಸ್‌ನ ತಲೆಗೆ ಪಟ್ಟಿ ಕಟ್ಟಿದ್ದ. ಆತ ಕಣ್ಮುಚ್ಚಿ ಬಿದ್ದುಕೊಂಡಿದ್ದ. ಹುಡುಗಿಯರಿಬ್ಬರನ್ನೂ ಅವನ ಜೊತೆ ಬಿಟ್ಟು ತಾವಿಬ್ಬರೂ ಆಶ್ರಯದ ಶೋಧ ಮಾಡಬೇಕೆಂದು ನಿರ್ಧರಿಸಿ ಪೋರ್ಟಿಯಸ್ ಹಾಗೆಂದು ಹ್ಯಾರಿಗೆ ಹೇಳಿದ.

ಅವರಿಬ್ಬರೂ ಮೆಲ್ಲ-ಮೆಲ್ಲಗೆ ಜಾಗರೂಕತೆಯಿಂದ ಬಂಡೆಗಳಗುಂಟ ಸಾಗತೊಡಗಿದರು. ಅವರು ಪ್ರಯಾಸದಿಂದ ನಡುಗಡ್ಡೆಯ ತೀರವನ್ನು ತಲುಪಿದಾಗ ಅಲ್ಲಿ ಗಿಡಗಂಟಿಗಳ ಹಿಂದೆ ಹರಿಯುತ್ತಿದ್ದ ಸ್ವಚ್ಛ ನೀರಿನ ಹಳ್ಳವೊಂದನ್ನು ಕಂಡರು. ಅವರಿಬ್ಬರೂ ಸಾಗರಬಿದ್ದು ಮನದಣಿಯೆ ನೀರು ಕುಡಿದರು. ಮುಖಮೈಗಳಿಗೆ ನೀರು ಉಗ್ಗಿಕೊಂಡರು. "ಅಹಾ! ನೀರಿನಂಥ ಪೇಯ ಇನ್ನೊಂದಿಲ್ಲವೆಂದು ಇಂದು ನನಗೆ ಗೊತ್ತಾಯಿತು" ಎಂದ ವೈಟ್. ಆತ ಮತ್ತೆ "ನೀನಿಲ್ಲೆ ಇರು. ಉಳಿದವರನ್ನೂ ಕರೆದುಕೊಂಡು ಬರುತ್ತೇನೆ" ಎಂದು

ಜಾನ್‌ನಿಗೆ ಹೇಳಿ ಹೊರಟ.

ಅವನನ್ನೆ ನೋಡುತ್ತಲಿದ್ದ ಜಾನನಿಗೆ ಅವನು ಕಣ್ಮರೆಯಾದಮೇಲೆ ಕಂಡವು ಆ ಗುಡಿಸಲುಗಳು. ಅವುಗಳಲ್ಲಿ ಎರಡಕ್ಕೆ ತೆಂಗಿನಗರಿಗಳನ್ನು ಹೊಚ್ಚಿದ್ದರು. "ಎಲಾ! ಇಲ್ಲಿ ಯಾರಿದ್ದಾರಪ್ಪಾ?" ಎನ್ನುತ್ತ ಅವನು ಗುಡಿಸಲುಗಳತ್ತ ನಡೆದ.

ಆದರೆ ಗುಡಿಸಲುಗಳಲ್ಲಿ ಯಾರೂ ಇದ್ದಂತಿರಲಿಲ್ಲ. ಯಾವ ಸಪ್ಪಳವೂ ಕೇಳಿಸುತ್ತಿರಲಿಲ್ಲ. ಜಾನ್ ಬಾಗಿಲಿನಿಂದ ಇಣಿಕಿನೋಡಿದಾಗ ಒಳಗೆ ಪಾತ್ರೆಪಗಡೆಗಳು ಕಾಣಿಸಿದವು. ಧೂಳುಮುಚ್ಚಿದ್ದ ಮೇಜಿನ ಮೇಲೆ ಹಳಸಿದ ಆಹಾರವಿದ್ದ ಮೂರು ತಗಡಿನ ಪ್ಲೇಟುಗಳು ಕಾಣಿಸಿದವು. ಇನ್ನೊಂದು ಗುಡಿಸಲಿನಲ್ಲಿ ಮೂರು ಹಾಸಿಗೆಗಳಿದ್ದವು. ಅವುಗಳ ಮೇಲಿನ ಅರಿವೆ ಮಾತ್ರ ಕೊಳೆತು ಉದುರತೊಡಗಿತ್ತು. ಗುಡಿಸಲುಗಳಲ್ಲಿ ಬಹುಕಾಲದಿಂದ ಯಾರೂ ಇದ್ದಂತಿರಲಿಲ್ಲ. ಅಷ್ಟರಲ್ಲಿ ಜಾನನಿಗೆ ಹೊರಗಡೆ ಏನೋ ಸದ್ದು ಕೇಳಲು ಆತ ಭೀತನಾಗಿ ಬಾಗಿಲಿನ ಬಳಿ ಇದ್ದ ಕಲ್ಲೊಂದನ್ನು ಎತ್ತಿಕೊಂಡು ಹೊರಗೆ ಬಂದ. ಗಿಡಗಂಟಿಗಳ ಮರೆಯಲ್ಲಿ ಆತನಿಗೆ ಆಡೊಂದು ಕಾಣಿಸಿತು.

ತುಸು ಹೊತ್ತಿನಲ್ಲಿ ಉಳಿದವರು ಅಲ್ಲಿಗೆ ಬಂದರು. ಎಲ್ಲರೂ ಅತ್ತಿತ್ತ ಅಡ್ಡಾಡಿ ನೋಡಿದಾಗ ಕೋಳಿಗಳು ಕಾಣಿಸಿದವು. ಮತ್ತೊಂದು ಆಡೂ ಕಾಣಿಸಿತು. ಅವರು ಉರಿ ಮಾಡಿದರು. ಬೇಯುತ್ತಿದ್ದ ಕೋಳಿಯ ಮಾಂಸದ ವಾಸನೆ ಈ ಐವರಿಗೆ ಸ್ವರ್ಗ ಸುಖದ ಭಾಸವನ್ನುಂಟುಮಾಡಹತ್ತಿತು. ಸೀಯಾಳದ (ಎಳೆತೆಂಗಿನಕಾಯಿ) ನೀರು ಅವರಿಗೆ ಅಮೃತವಾಗಿ ಕಂಡಿತು. ಹೊಟ್ಟೆ ತುಂಬಿದ ಮೇಲೆ ಅವರೆಲ್ಲ ಮಲಗಿದರು. ಕಣ್ಮುಚ್ಚುತ್ತಿದ್ದಂತೆ ಜಾನ್ ಯೋಚಿಸಿದ, "ಈಗಿನದೆಲ್ಲ ಒಳ್ಳೆಯದೇ ಆಯಿತು. ಆದರೆ ಮುಂದೆ?"

ದಿನಗಳುರುಳಿದವು. ನಡುಗಡ್ಡೆಯಲ್ಲಿ ಆಡು, ಹಂದಿ, ಕೋಳಿಗಳು ಇದ್ದವು. ಜಾನ್ ಮೀನು ಹಿಡಿಯುವುದಕ್ಕಾಗಿ ಗಾಳವನ್ನೂ ತಯಾರಿಸಿದ್ದ. ನಡುಗಡ್ಡೆಯಲ್ಲಿ ಐವರ ಗೋರಿಗಳೂ ಅವರಿಗೆ ಕಾಣಿಸಿದವು. ಆದರೆ ಯಾರಾಗಿದ್ದರವರು ಎಂದು ತಿಳಿಯುವುದಕ್ಕೆ ಮಾತ್ರ ಯಾವ ಸಾಧನವೂ ಇರಲಿಲ್ಲ.

ಸುಸಾನ್ ಮತ್ತು ಓವಿಲಾ ಎಲೆಗಳಿಂದ ಸ್ಕರ್ಟ್, ಬ್ಲೌಜ್‌ಗಳನ್ನು ಮಾಡಿಕೊಂಡಿದ್ದರು. ನಡುಗಡ್ಡೆಯ ಅನ್ನ-ನೀರುಗಳಿಂದ ಸಮುದ್ರ ಪ್ರವಾಸದಲ್ಲಿ ಬಣ್ಣಗೆಟ್ಟಿದ್ದ ಅವರ ದೇಹಗಳೀಗ ಮೊದಲಿನ ಬಣ್ಣಕ್ಕೆ ತಿರುಗಿದ್ದವು.

ಯಾವುದಾದರೂ ಹಡಗ ಅಲ್ಲಿಗೆ ಸಮೀಪದಲ್ಲಿ ಹೋಗುತ್ತಿದ್ದರೆ ಅದರಲ್ಲಿರುವವರಿಗೆ ತಮ್ಮ ಅಸ್ತಿತ್ವ ತಿಳಿಯಲೆಂದು ಒಂದು ದಿನ ಜಾನ್ ಒಂದು ಎತ್ತರವಾದ ಗಿಡದ ತುದಿಗೆ ತನ್ನ ಶರ್ಟನ್ನು ಕಟ್ಟಿದ. ಈ ಬಾವುಟ ಕಟ್ಟಿದ ಮೇಲೆ ಆತ ಮತ್ತು ಸುಸಾನ್ ನೆಲದ ಮೇಲೆ ಅಡ್ಡಾದರು. ಯಾರಿಗಾದರೂ ಈ ಶರ್ಟು ಕಾಣದೆ ಇರುವುದಿಲ್ಲ, ಬೇಗನೆ ತಾವಿಲ್ಲಿಂದ ಪಾರಾಗು

ವೆವು ಎಂದವರು ಕನಸು ಕಾಣುತ್ತ ಮಲಗಿದ್ದರು. "ಜಾನ್, ನೀನು ಬಳಿಯಲ್ಲಿರುವುದು ನನಗೆ ತುಂಬ ಸಂತೋಷ" ಎಂದಳು ಸುಸಾನ್. ಜಾನನ ಹೃದಯದ ಬಡಿತ ತೀವ್ರವಾಯಿತು. "ನನಗೂ ಹಾಗೆಯೆ" ಎಂದನಾತ. ಆತ ಹೊರಳಿ ಅವಳ ತುಟಿಗಳನ್ನು ಚುಂಬಿಸಿದ. ಅವಳು ಬೇಡವೆನ್ನುವಳು ಎಂದವನಿಗೆ ಗೊತ್ತಿದ್ದರೂ ಸುಸಾನಳು ಅವನ ಚುಂಬನವನ್ನು ಸ್ವೀಕರಿಸಿದ ರೀತಿ ಅವನಿಗೆ ಇನ್ನಿಷ್ಟು ಸಂತೋಷವನ್ನುಂಟು ಮಾಡಿತು. ಸುಸಾನಳು ತನ್ನನ್ನು ಪ್ರೀತಿಸುತ್ತಾಳೆಂಬ ಅರಿವಿನಿಂದ ಅವನಿಗೆ ರೋಮಾಂಚನವಾಯಿತು.

ಆವನು ಅವಳನ್ನು ಮುದ್ದಿಸುತ್ತಿದ್ದಂತೆಯೆ "ಇದು ಗೊತ್ತಾದರೆ ಓವಿಲಾ ಏನಂದಾಳು?" ಎಂದು ಸುಸಾನ್ ಕೇಳಿದಳು. ಸುಸಾನ್ ಹುಡುಗಾಟಿಕೆ ಮಾಡುತ್ತಿದ್ದಾಳೆಂದು ಜಾನನಿಗೆ ತಿಳಿದಿತ್ತು. ನಡುಗಡ್ಡೆಗೆ ಬಂದಾಗಿನಿಂದಲೂ ಓವಿಲಾ ಜಾನನನ್ನು ಮೋಹಪಾಶದಲ್ಲಿ ಬಂಧಿಸಲು ಸರ್ವ ಪ್ರಯತ್ನ ನಡೆಸಿದ್ದಳು.

ಅವರಿಬ್ಬರೂ ಗುಡಿಸಲಿಗೆ ಬರುತ್ತಿದ್ದಾಗ ಬೆರ್ಡುರ್ಕ್ಸ್ ಅವರನ್ನು ಕಂಡ. "ಹುಂ. ಹೀಗೇನು?" ಎಂದಾತ ತನ್ನಷ್ಟಕ್ಕೆ ಅಂದುಕೊಂಡ. ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಚಾಕುವನ್ನು ಅವನ ಬೆರಳುಗಳು ನೇವರಿಸಿದವು. ಈ ಜಾನನ ಸಂಗಡ ಲಲ್ಲೆಯಾಡುವ ಸುಸಾನ್ ತನ್ನನ್ನು ಕಣ್ಣೆತ್ತಿ ಕೂಡ ನೋಡುವುದಿಲ್ಲ. ಸ್ತ್ರೀಯರಿಂದ ಇಂಥ ತಿರಸ್ಕಾರವನ್ನು ಹೊಂದಿ ಬೆರ್ಡುರ್ಕ್ಸ್‌ನಿಗೆ ಅನುಭವವೇ ಇರಲಿಲ್ಲ. ಅವನಿಗೆ ಸುಸಾನ್ ಬೇಕಾಗಿದ್ದಳು.

ಜಾನ್ ಗುಡಿಸಲಿನೊಳಗೆ ಹೋದ. ಸುಸಾನ್ ಸಮುದ್ರ ದಂಡೆಯತ್ತ ನಡೆದಳು. ಬೆರ್ಡುರ್ಕ್ ಅವಳನ್ನು ಹಿಂಬಾಲಿಸಿದ. ವೈಟ್ ಮೀನ್ಸ

ಹಿಡಿಯುವದಕ್ಕಾಗಿ ಎಲ್ಲಿಗೊ ಹೋಗಿದ್ದ. ಓವಿಲಾ ಎಲ್ಲಿಯೊ ಮೂಲೆಯಲ್ಲಿ "ಯಾರೂ ತನ್ನನ್ನು ಮಾತಾಡಿಸುವುದಿಲ್ಲವಲ್ಲ" ಎಂದು ಮುಖ ಬಿಗಿದು ಕುಳಿತಿದ್ದಿರಬೇಕು.

ಸುಸಾನ್ ಬಗ್ಗಿ ಏನನ್ನೋ ನೋಡುತ್ತಿರುವಾಗ ಬೆರ್ಡ್ಯುಕ್ಸ್ ಬಂದು ಅವಳನ್ನು ಹಿಡಿದುಕೊಂಡ. "ನಮಗೂ ಒಂದು ಚುಂಬನ ಸಿಗಲಾರದೆ?" ಎಂದಾತ ಕೇಳುತ್ತಿದ್ದಂತೆ ಸುಸಾನಳು ತನ್ನೆಲ್ಲ ಶಕ್ತಿಯಿಂದ ಅವನ ಕಪಾಳಕ್ಕೆ ಬಿಗಿದಳು. ಆಶ್ಚರ್ಯಚಕಿತನಾದ ಬೆರ್ಡ್ಯುಕ್ಸ್ "ವ್ಹಾ! ಹೀಗಿರಬೇಕು ಹೆಂಗಸರು? ಅದರಲ್ಲಿಯೂ ನನ್ನ ಹೆಂಗಸು" ಎಂದ. "ನಾನು ನಿನ್ನ ಹೆಂಗಸಲ್ಲ" ಎಂದವಳೇ ಸುಸಾನ್ ಅಲ್ಲಿಂದ ನಡೆದಳು.

ಆ ಐವರಲ್ಲಿ ಪ್ರತಿಯೊಬ್ಬರೂ ಪ್ರತಿನಿತ್ಯವೂ ಪಾಳಿಯ ಮೇಲೆ ಜಾನ್ ಕಟ್ಟಿದ್ದ ಬಾವುಟದ ಹತ್ತಿರ ಕಾವಲಿರುತ್ತಿದ್ದರು. ಯಾವುದಾದರೂ ಹಡಗಕ್ಕೆ ಅದು ಕಾಣಿಸಿ ಅದರ ಜನರು ಇತ್ತ ಬರತೊಡಗಿದರೆ ಅವರಿಗೆ ಮಾರ್ಗದರ್ಶನ ಮಾಡಲೆಂದು.

ಒಂದು ವಾರದ ನಂತರ ಬಾವುಟದ ಬಳಿ ಇರುವ ಸರತಿ ಜಾನನದಾದಾಗ ಆತನಿಗೆ ಸುಸಾನಳನ್ನು ಕಾಣುವ ಚಪಲವಾಯಿತು. ವೈಟ್ ಒಂದು ಆಡಿನ ಚರ್ಮ ಸುಲಿಯುವದರಲ್ಲಿ ಆಗ ಮಗ್ನನಾಗಿದ್ದ. ಬೆರ್ಡ್ಯುಕ್ಸ್ ಮಲಗಿದ್ದ. ಓವಿಲಾ ಎಂದಿನಂತೆ ಬುಸುಗುಡುತ್ತ ಎಲ್ಲಿಯಾದರೂ ಕುಳಿತಿದ್ದಿರಬೇಕು.

ಸುಸಾನ್ ಗಿಡಗಂಟಿಗಳ ನೆರಳಲ್ಲಿ ಕಣ್ಮುಚ್ಚಿಕೊಂಡು ಮಲಗಿದ್ದಳು. ಜಾನ್ ಮೆಲ್ಲಗೆ ಬಂದು ಅವಳನ್ನು ಮುತ್ತಿಟ್ಟುಕೊಂಡ. ಸುಸಾನಳ ಕಣ್ಣು ತೆರೆದವು. ಅವಳು ಅವನನ್ನು ತನ್ನತ್ತ ಸೆಳೆದು ಅಪ್ಪಿಕೊಂಡಳು.

ಅವರ ಸುಖಕ್ಷಣ ಒಂದು ತೀಕ್ಷ್ಣ ಸ್ವರದಿಂದ ಭಂಗವಾಯಿತು. "ಹಂ! ಗಂಡಸರನ್ನು ಬಿಟ್ಟು ನೀನು ಒಂದು ದಿನವನ್ನೂ ಕಳೆಯಲಾರೆಯಲ್ಲವೆ? ನಿನ್ನ ದೃಷ್ಟಿಗೆ ಬಿದ್ದ ಪ್ರತಿಯೊಬ್ಬನನ್ನೂ ನೀನು ನಿನ್ನವಳನ್ನಾಗಿ ಮಾಡಿಕೊಳ್ಳಬೇಕಲ್ಲವೆ?"

ಅವರ ಮಗ್ಗಲಲ್ಲಿ ಅಚಾನಕವಾಗಿ ಬಂದು ನಿಂತಿದ್ದಳು ಓವಿಲಾ. ಅವಳ ಕಣ್ಣುಗಳು ಉರಿಯುತ್ತಿದ್ದವು. ಅವಳ ಈ ಕಟುನುಡಿಗಳನ್ನು ಕೇಳಿದೊಡನೆ ಸುಸಾನ್ ಜಗಿದೆದ್ದು ನಿಂತು ಸಿಟ್ಟಿನಿಂದ ಕಂಪಿಸತೊಡಗಿದಳು. "ಏನನ್ನುತ್ತಿ ನೀನು?" ಎಂದವಳು ಕೇಳಿದಳು.

"ಮೊದಲು ಬೆರ್ಡ್ಯುಕ್ಸನನ್ನು ನನ್ನಿಂದ ಅಪಹರಿಸಿದಿ. ಈಗ ಇವನನ್ನೂ ಅಪಹರಿಸಿರುವಿ." ಓವಿಲಾಳ ಧ್ವನಿ ಕಠೋರವಾಗಿತ್ತು. ಮುಖ ಗಂಟಿಕ್ಕಿತ್ತು.

"ನಿನ್ನ ಬೆರ್ಡ್ಯುಕ್ಸನು ನನಗೆ ಬೇಡ. ನಾನವನನ್ನು ದ್ವೇಷಿಸುತ್ತೇನೆ. ಈ ಜಾನ್ ಯಾರ ಸ್ವಾಮಿತ್ವಕ್ಕೂ ಒಳಪಟ್ಟಿಲ್ಲ. ಆತ ನೀನು ಬಯಸಿದ ಉಳಿದೆಲ್ಲರಂತೆ ನಿನ್ನ ದಾಸಾನುದಾಸನಾಗಲಿಲ್ಲವೆಂದು ನೀನು ಮತ್ಸರದಿಂದ ಕುದಿಯುತ್ತಿರುವಿ." ಸುಸಾನ್ ಇಷ್ಟನ್ನುತ್ತಿರುವಾಗ ಓವಿಲಾ ಅವಳ ಮೇಲೆ ಜಗಿದಳು. ಸುಸಾನಳನ್ನು ಉಗುರಿನಿಂದ ಘಾತಿಸಿ ಅವಳ ಕೂದಲನ್ನು ಹಿಡಿದೆಳೆದಳು. ಸುಸಾನಳ ಕೋಪ ಮಿತಿಮೀರಿ ಅವಳು ಪ್ರತೀಕಾರ ಮಾಡತೊಡಗಿದಳು. ಜಾನ್ ಇಬ್ಬರನ್ನೂ ನೋಡತೊಡಗಿದ. ಇಬ್ಬರು ಸುಂದರ ತರುಣಿಯರು ಒಬ್ಬನಿಗಾಗಿ ಕಾದಾಡುವ ಈ ದೃಶ್ಯ ಅಪೂರ್ವವಾಗಿತ್ತು. ಕಾದಲಿ ಒಂದಿಷ್ಟು ಹೊತ್ತು, ಆ ಮೇಲೆ ನೋಡೋಣ ಎಂದು ಜಾನ್ ಸುಮ್ಮನೆ ನಿಂತ.

ಅಷ್ಟರಲ್ಲಿ ಅವನ ಕುತೂಹಲ ಭಯಕ್ಕೆ ತಿರುಗಿತು. ಓವಿಲಾಳ ಕೈಯಲ್ಲಿ ಏನೋ ಮಿನುಗಿತು. ಜಾನ್ ಅವರತ್ತ ಜಗಿದ. ಆದರೆ ಅಷ್ಟರಲ್ಲಿ ಓವಿಲಾಳ ಕೈಲಿದ್ದ ಹರಿತವಾದ ಕಲ್ಲು ಸುಸಾನಳ ಭುಜವನ್ನು ಘಾತಿಸಿತು. ಓವಿಲಾ ಸುಸಾನಳನ್ನು ಕೊಲ್ಲಲು ಬಯಸಿದ್ದಳೆಂಬುದಕ್ಕೆ ಈಗ ಸಂಶಯ ವುಳಿಯಲಿಲ್ಲ ಜಾನನಿಗೆ.

ಆತ ಅವರಿಬ್ಬರನ್ನೂ ಪ್ರತ್ಯೇಕಿಸಲು ಹೆಣಗತೊಡಗಿದ. ಅದು ವ್ಯರ್ಥವಾಗಲು ಆತ ಒಂದು

ಕಲ್ಲನ್ನೆತ್ತಿ ಓವಿಲಾಳ ಮೇಲೆ ಬೀಸಿದ. ಅದು ಅವಳ ತಲೆಗೆ ಬಡಿದು ರಕ್ತ ಸೋರತೊಡಗಿತು. ಅವಳ ಕೂಗನ್ನು ಕೇಳಿದ ಬೆರ್ಡುಕ್ಸ್ ಗುಡಿಸಲಿನಿಂದ ಓಡುತ್ತ ಬಂದ.

ಆ ದೃಶ್ಯವನ್ನು ಕಂಡು ಅವನಿಗೆ ಇವರು ತನ್ನ ಪ್ರೇಯಸಿಯನ್ನು ಕೊಲ್ಲಬಯಸಿದ್ದಾರೆಂದು ಅನಿಸಿತು. ತನಗೆ ಓವಿಲಾಳಲ್ಲಿ ಬೇಸರ ಬಂದಿದೆ, ತನಗೆ ಸುಸಾನಳಲ್ಲಿ ಮೋಹವುಂಟಾಗಿದೆ ಎಂಬುದನ್ನು ಆತ ಮರೆತ. ಸೇಡಿನ ಭಾವನೆಯು ಅವನನ್ನು ಆಕ್ರಮಿಸಿತು. ಅವನು ಬರುವುದನ್ನು ಕಂಡು ಜಾನ್ ಹೊಡೆದಾಟಕ್ಕೆ ಸಿದ್ಧನಾಗಿನಿಂತ. ಬರಲಿ, ಒಮ್ಮೆ ಯಾರು ಯಜಮಾನರು ಎಂಬುದು ನಿಶ್ಚಯವಾಗಿ ಬಿಡಲಿ ಎಂದಾತ ಯೋಚಿಸಿದ. ಬೆರ್ಡುಕ್ಸ್ ಬಂದ ಎನ್ನುವದರೊಳಗೆ ಜಾನನ ಬಲಗೈ ಮುಷ್ಟಿ ಅವನ ಮುಖಕ್ಕೆ ಪ್ರಹಾರ ಮಾಡಲು ಆತ ಹಿಂದಕ್ಕೆ ಜರಿದ.

ಇಬ್ಬರೂ ತೆಕ್ಕೆ ಬಿದ್ದರು. ಇಬ್ಬರೂ ಬಲಿಷ್ಠರು. ಇಬ್ಬರಿಗೂ ಕುಸ್ತಿಯ ಪೇಚುಗಳು ಗೊತ್ತಿದ್ದವು. ಆದರೆ ಬರಬರುತ್ತ ಬೆರ್ಡುಕ್ಸ್‌ನಿಗೆ ತಾನು ಸೋಲುತ್ತಿದ್ದೇನೆಂಬ ಅರಿವಾಯಿತು. ಅಷ್ಟರಲ್ಲಿ ಅವನಿಗೆ ಒಂದು ಅವಕಾಶ ಸಿಕ್ಕಂತೆ ಅನಿಸಿತು. ಹೊಡೆದಾಡುತ್ತಲೇ ಅವರು ಬಂಡೆಗಲ್ಲುಗಳ ಸಮೀಪ ಬಂದಿದ್ದರು. ಹೇಗಾದರೂ ಮಾಡಿ ಜಾನ್ ಬಂಡೆಗಲ್ಲನ್ನೇರುವಂತೆ ಮಾಡಿದರೆ ಮುಂದೆ ಸುಲಭವಾದೀತು. ಅಷ್ಟರಲ್ಲಿ ಅವರಿಬ್ಬರ ಕಾಲೂ ಕುಸಿದು ಅವರು ಒಂದು ತಗ್ಗಿನಲ್ಲಿ ಬಿದ್ದರು. ಇಬ್ಬರಿಗೂ ಕಣ್ಣು ಕತ್ತಲೆ ಕವಿಯಿತು. ಜಾನ್ ಚೇತರಿಸಿಕೊಳ್ಳುವದರೊಳಗೆ ಬೆರ್ಡುಕ್ಸ್ ಎದ್ದು ಒಂದು ದೊಡ್ಡ ಕಲ್ಲನ್ನೆತ್ತಿ ಜಾನನ ತಲೆಯ ಮೇಲೆ ಹಾಕಿದ.

ಅಲ್ಲಿಗೆ ಮುಗಿಯಿತು ಈ ಹೊಡೆದಾಟ. ಸುಸಾನಳು ಜಾನನ ದೇಹದ ಬಳಿ ಕುಳಿತು "ಜಾನ್

ಜಾನ್" ಎಂದು ರೋದಿಸತೊಡಗಿದಳು. ಅವಳು ಜಾನನ ಎದೆಯ ಮೇಲೆ ಕೈಯಿಟ್ಟು ನೋಡುತ್ತಿರುವಾಗ ವೈಟ್ ಅವಳ ಕೈಯನ್ನು ಹಿಡಿದೆಳೆದ. "ಇಲ್ಲಿಂದ ಹೋಗು. ನಾನವನನ್ನು ನೋಡಿಕೊಳ್ಳುತ್ತೇನೆ" ಎಂದನಾತ.

"ನಾನು ದಾಯಿ. ಅವನಿಗೆ......"

"ಹೋಗಿಲ್ಲಿಂದ. ನೀನೇನೂ ಮಾಡುವಂತಿಲ್ಲ. ಜಾನ್ ಸತ್ತಿರದಿದ್ದರೆ ಬೆರ್ಡುಕ್ಸ್ ಇಲ್ಲಿಂದ ಹೋಗುತ್ತಲೇ ಇರಲಿಲ್ಲ. ಬೆರ್ಡುಕ್ಸನ ಬಗ್ಗೆ ಜಾಗರೂಕಳಾಗಿರು. ಏನು ಮಾಡಬೇಕೆಂದು ನಾವೀಗ ಯೋಚಿಸಿಬೇಕಾಗಿದೆ."

ಸುಸಾನಳು ವೈಟನನ್ನು ದಿಟ್ಟಿಸಿ ನೋಡುತ್ತ "ಹ್ಯಾರಿ, ನೀನು ಅವನನ್ನು ಕೊಲ್ಲಬೇಕು. ನೀನವನನ್ನು ಕೊಲ್ಲದಿದ್ದರೆ ಅವನು ನಮ್ಮಿಬ್ಬರನ್ನೂ ಕೊಲ್ಲದೆ ಬಿಡುವುದಿಲ್ಲ."

ವೈಟ್ ಗುಡಿಸಲಿನತ್ತ ನೋಡಿದ. "ಅವನೊಂದಿಗೆ ಏನಾದರೊಂದು ಬಗೆಯ ಸಂಧಾನ ಮಾಡಿಕೊಳ್ಳುವುದು ಒಳ್ಳೆಯದಾಗದೆ? ನಾನೇನೂ ಹೇಡಿಯಲ್ಲ. ಆದರೆ ಬೆರ್ಡುಕ್ಸ್ ನನಗಿಂತಲೂ ದೊಡ್ಡ ಆಳು."

ಹ್ಯಾರಿಯ ಮಾತು ನಿಜವಾಗಿತ್ತು. ಆದರೆ ಬೆರ್ಡುಕ್ಸ್‌ನನ್ನು ಹೇಗಾದರೂ ಮಾಡಿ ಕೊಲ್ಲದೆ ವಿಧಿಯಿರಲಿಲ್ಲ. "ಆತ ಜಾನನನ್ನು ಕೊಂದಿದ್ದಾನೆ. ಇನ್ನು ಕೆಲ ಕಾಲದ ಮೇಲಾದರೂ ನಾವಿಲ್ಲಿಂದ ಪಾರು ಮಾಡಲ್ಪಟ್ಟಾಗ ನಾವು ಅವನ ವಿರುದ್ಧ ಸಾಕ್ಷಿಗಳಾಗುವೆವೆಂದು ಅವನು ಬಲ್ಲ. ನಮ್ಮನ್ನು ಸ್ವರಕ್ಷಣೆಗಾಗಿ ಎಂದು ಆತ ಕೊಲ್ಲದೆ ಇರುವದಿಲ್ಲ." ಸುಸಾನ್ ಹೇಳಿದಳು.

ಗಾಳಿ ವಿರುದ್ಧ ದಿಕ್ಕಿನಲ್ಲಿ ಬೀಸುತ್ತಿದ್ದುದರಿಂದ ಅವರಿಗೆ ಬೆರ್ಡುಕ್ಸನ ಹೆಜ್ಜೆಯ ಸಪ್ಪಳ ಕೇಳಿಸಲಿಲ್ಲ. "ಸರಿ ದೂರ, ವೈಟ್. ಅವಳು ನನ್ನವಳು" ಎಂದು ಕೂಗಿದನಾತ.

ಅವನ ಕೈಲಿ ಚಾಕು ಹೊಳೆಯುತ್ತಿತ್ತು. ವೈಟ್ ಏನಾದರೊಂದು ಬಗೆಯ ಆಯುಧ ಸಿಕ್ಕುತ್ತದೆಯೇ ಎಂದು ಅತ್ತಿತ್ತ ನೋಡಿದ. ಆದರೆ ಸುಸಾನಳಿಗೆ ಈ ಕ್ಷಣದಲ್ಲಿ ಬೆರ್ಡುಕ್ಸ್‌ನ ಕೈ ಮೇಲಾಗಿದೆ ಎಂದು ತಿಳಿದದ್ದರಿಂದ ಅವಳು "ಹ್ಯಾರಿ, ನಾನವನ ಜೊತೆ ಹೋಗುತ್ತೇನೆ. ಗಂಡಾಂತರ ತಂದುಕೊಳ್ಳಬೇಡ" ಎಂದಳು.

ಬೆರ್ಡುಕ್ಸ್ ಅವಳ ಕೈಹಿಡಿದು ಗುಡಿಸಲಿನತ್ತ ಎಳೆದೊಯ್ದ.

ಗುಡಿಸಲಿನಲ್ಲಿ ಮಬ್ಬುಗತ್ತಲೆಯಿತ್ತು. ಬೆರ್ಡುಕ್ಸ್ ಚಾಕುವನ್ನು ನೆಲದ ಮೇಲೆಸೆದು ಸುಸಾನಳನ್ನು ಬರಸೆಳೆದುಕೊಂಡ. ಹೆಗಲಿಗಾದ ಗಾಯದ ವೇದನೆಯಿಂದ ಅವಳು ವಿಹ್ವಲಳಾಗಿದ್ದರೂ ಅವನಿಂದ ಬಿಡಿಸಿಕೊಳ್ಳಲೆತ್ನಿಸುತ್ತ "ನನ್ನನ್ನು ಬಿಡು ದಯವಿಟ್ಟು" ಎಂದಳು.

"ಎಂದೂ ಇಲ್ಲ. ಈಗ ನೀನು ನನ್ನನ್ನು ನಿರಾಶೆಗೊಳಿಸಿದರೆ ನಿನ್ನನ್ನು ಕೊಂದುಬಿಡುತ್ತೇನೆ."

ಅವನ ತುಟಿಗಳು ಸಮೀಪಿಸಿದಂತೆ ಸುಸಾನ್ ಭಯದಿಂದ ಕಂಪಿಸಿ ಹೋದಳು. ಈಗ ಅವಳನ್ನು ರಕ್ಷಿಸಬಲ್ಲವರು ಯಾರೂ ಇರಲಿಲ್ಲ.

ಇತ್ತ ಏನು ಮಾಡಲಿ ಎಂದು ವೈಟ್ ಚಡಪಡಿಸುತ್ತಿದ್ದ. ಬೆರ್ಡುಕ್ಸ್ ಸುಸಾನಳನ್ನು ಎಳೆದೊಯ್ಯುವುದನ್ನು ಕಂಡೂ ಆತ ಅಸಹಾಯಕನಂತೆ ನಿಲ್ಲಬೇಕಾಗಿ ಬಂದಿತ್ತು. ಜಾನನ ಹಣೆಬರಹ ಏನಾಗಿದೆಯೆಂದು ನೋಡೋಣವೆಂದು ಆತ ಹೋಗಬೇಕೆನ್ನುವಷ್ಟರಲ್ಲಿ ಅವನಿಗೆ ಸುಸಾನಳು ಚೀರಿಕೊಂಡಿದ್ದು ಕೇಳಿಸಿತು. ಆತ ಮುರಿದು ಬಿದ್ದಿದ್ದ ಒಂದು ಟೊಂಗೆಯನ್ನೆತ್ತಿಕೊಂಡು ಗುಡಿಸಲಿಗೆ ಓಡಿದ.

ಉಸುಕಿನಲ್ಲಿ ಅವನ ಹೆಜ್ಜೆಯ ಸಪ್ಪಳ ಕೇಳಿಸುತ್ತಿರಲಿಲ್ಲ. ಆದರೂ ಅದು ಹೇಗೊ ಯಾವುದೊ ಒಂದು ಅಜ್ಞಾತ ಪ್ರೇರಣೆ ಬೆರ್ಡುಕ್ಸನನ್ನು ಎಚ್ಚರಿಸಿರಬೇಕು. ಹ್ಯಾರಿ ಗುಡಿಸಲಿನ ಬಾಗಿಲ ಬಳಿ ಬಂದನೊ ಇಲ್ಲವೊ ಬೆರ್ಡುಕ್ಸ್‌ನ ಮುಷ್ಟಿ ಅವನ ದವಡೆಗೆ ಬಲವಾದ ಪ್ರಹಾರವನ್ನು ಮಾಡಲು ಹ್ಯಾರಿ ಹಿಂದಕ್ಕೆ ಹಾರಿ ಬಿದ್ದ.

ಇನ್ನೊಂದು ಗುಡಿಸಲಿನಲ್ಲಿದ್ದ ಓವಿಲಾ ಇದನ್ನು ನೋಡುತ್ತಲಿದ್ದಳು. ಸುಸಾನಳೊಂದಿಗೆ

ಕಾಮತ್ತಿದ್ದಾಗ ಬೆರ್ಡುರ್ಕ್ಸ್ ತನ್ನ ಸಹಾಯಕ್ಕೆ ಬಂದಿದ್ದನ್ನು ಕಂಡು ಅವಳಿಗೆ ಆತ ಸುಸಾನಳನ್ನು ಮರೆತು ತನ್ನನ್ನು ಮತ್ತೆ ಪ್ರೀತಿಸುತ್ತಾನೆಂದು ಭಾವನೆಯಾಗಿತ್ತು. ಜಾನನನ್ನು ಬೆರ್ಡುರ್ಕ್ಸ್ ಸಾಯಹೊಡೆದದ್ದನ್ನೂ ಅವಳು ಕಂಡಿದ್ದಳು. ಆದರೆ ಈಗ . . . ಹ್ಯಾರಿಯನ್ನು ನೆಲಕ್ಕೆ ಕೆಡವಿದ ಬೆರ್ಡುರ್ಕ್ಸ್ ಮತ್ತೆ ಸುಸಾನಳತ್ತ ಹೋಗಿದ್ದ. ತಾನು ಬೆರ್ಡುರ್ಕ್ಸನಿಗೆ ಬೇಡವೆಂದರೆ– ತನ್ನ ಸಹಾಯಕ್ಕೆ ಬಂದ ನಂತರ ಆತ ತನ್ನನ್ನು ಹತ್ತಿರ ಕೂಡ ಬರಗೊಟ್ಟಿರಲಿಲ್ಲ- ಆತ ಮತ್ತಾವ ಹೆಂಗಸನ್ನೂ ಹೊಂದಲಾಗದು. ಏನು ಮಾಡಬೇಕು ?

ಅವಳಿಗೆ ಹೊಳೆಯಿತು ಒಂದು ಮಾರ್ಗ. ಅವಳು ಒಂದು ದೊಡ್ಡ ಚಮಚೆಯನ್ನು ಕಲ್ಲಿಗೆ ಉಜ್ಜಿ ಉಜ್ಜಿ ಅದೊಂದು ಚೂಪಾದ ಆಯುಧವಾಗುವಂತೆ ಮಾಡಿದ್ದಳು. ಈಗ ಅದು ಹ್ಯಾರಿಯ ಕೈಗೆ ಸಿಕ್ಕರೆ . . .

ಅವಳು ಹ್ಯಾರಿ ಬಿದ್ದಲ್ಲಿಗೆ ಹೋಗಿ ಅವನ ಮುಖಕ್ಕೆ ನೀರೆರಚಿದಳು. "ಏಳು, ಬೆರ್ಡುರ್ಕ್ಸ್ ಸುಸಾನಳನ್ನು ಬಲಾತ್ಕರಿಸುತ್ತಿದ್ದಾನೆ. ನೀನು ಅವಳಿಗೆ ಸಹಾಯ ಮಾಡಬೇಕು."

ಹ್ಯಾರಿ ಪೂರ್ಣವಾಗಿ ಕಣ್ತೆರೆದ. ಎದ್ದು ನಿಂತ. ಎಲ್ಲ ನೆನಪಿಗೆ ಬಂದು ಆತ ಗುಡಿಸಲಿನತ್ತ ಹೊರಟ. ಓವಿಲಾ ಅವನ ಕೈಗೆ ಚಮಚೆಯನ್ನಿತ್ತು "ಹಿಡಿ. ಅವನನ್ನು ಕೊಲ್ಲು. ಅದೊಂದೇ ಉಳಿದಿರುವ ಮಾರ್ಗ" ಎಂದಳು.

ಸಿಟ್ಟಿನಿಂದ ನಡುಗತ್ತಲೇ ಆ ಚಮಚೆಯನ್ನು ಹಿಡಿದುಕೊಂಡು ಹ್ಯಾರಿ ಗುಡಿಸಲಿನತ್ತ ಧಾವಿಸಿದ. ಬೆರ್ಡುರ್ಕ್ಸ್‌ನ ಮೇಲಿನ ಸೇಡು ತೀರಿಸಿಕೊಳ್ಳುತ್ತಿದ್ದೇನಲ್ಲ ಎಂಬ ಸಂತೋಷದಲ್ಲಿ ಓವಿಲಾ ತನ್ನ ಗುಡಿಸಲಿಗೆ ಹೋದಳು.

ಮೂಲೆಯಲ್ಲಿ ಮುದುಡಿ ಕುಳಿತಿದ್ದ ಸುಸಾನಳನ್ನೇ ಬೆರ್ಡುರ್ಕ್ಸ್ ನೋಡುತ್ತ ನಿಂತಿದ್ದ. ಅವಳೊಂದಿಗೆ ಸುಖಿಸುವ ಕಲ್ಪನೆಯಲ್ಲಿ ತಲ್ಲೀನನಾಗಿದ್ದ ಅವನಿಗೆ ಹ್ಯಾರಿಯ ಹೆಜ್ಜೆಯ ಸದ್ದು ಕೇಳಿಸಲಿಲ್ಲ. ಆತ ಒಂದು ಹೆಜ್ಜೆ ಮುಂದಿಟ್ಟ. ಅಷ್ಟರಲ್ಲಿ ತನ್ನ ಹಿಂದೆಯೆ ಕಾಲ ಸಪ್ಪಳ ಕೇಳಲು ಆತ ಸರ್ರನೆ ತಿರುಗಿ ಬಾಗಿದ. ಆದರೆ ಹರಿತವಾದೊಂದು ಆಯುಧ ತನ್ನ ಭುಜವನ್ನು ಇರಿದು ಉಂಟಾದ ನೋವು ಅವನಿಗೆ ಅನುಭವವಾಯಿತು. ಹ್ಯಾರಿ ತನ್ನೆಲ್ಲ ಬಲದಿಂದ ತಿವಿದಿದ್ದನಾದರೂ ಬೆರ್ಡುರ್ಕ್ಸನ ಅದೃಷ್ಟದಿಂದ ಅದು ಭುಜದ ಅಂಚಿಗೆ ತಾಗಿ ಹೋಗಿತ್ತು. ಅವನು ತಿವಿಯುವ ಭರದಲ್ಲಿ ಮುಗ್ಗರಿಸಿ ಬೆರ್ಡುಕ್ಸನ ಮೇಲೇ ಬಿದ್ದಿದ್ದ. ಸಾವರಿಸಿಕೊಳ್ಳುವಷ್ಟರಲ್ಲಿ ಬೆರ್ಡುರ್ಕ್ಸನ ಕೈ

ಅವನ ಕುತ್ತಿಗೆಯನ್ನು ಸುತ್ತಿತ್ತು. ತನ್ನ ಕಥೆ ಮುಗಿಯಿತು ಎಂದು ಹ್ಯಾರಿಗೆ ತಿಳಿದು ಹೋಯಿತು.

"ಬಿಡವನನ್ನು" ಎಂದು ಸುಸಾನ್ ಚೀರುತ್ತ ಬೆಡ್ರ್‍ಕ್ಸನನ್ನು ಪರಚಿ ಗುದ್ದಿ ಮಾಡತೊಡಗಿದಳು. ಆದರೆ ಹ್ಯಾರಿಯನ್ನು ಕೊಲ್ಲದೆ ಮಾರ್ಗ ನಿಷ್ಕಂಟಕವಾಗದು ಎಂದು ಬೆಡ್ರ್‍ಕ್ಸ್ ತನ್ನೆಲ್ಲ ಶಕ್ತಿಯಿಂದ ಹ್ಯಾರಿಯ ಕುತ್ತಿಗೆ ಹಿಸುಕಿದ. ಓಡಿ ಹೋಗದಿದ್ದರೆ ಉಳಿಗಾಲವಿಲ್ಲ ಎಂದುಕೊಂಡು ಸುಸಾನ್ ಹ್ಯಾರಿಯ ದೇಹ ನೆಲಕ್ಕೆ ಕುಸಿಯುತ್ತಿದ್ದಂತೆಯೆ ಹೊರಗೋಡಿದಳು. ಓವಿಲಾ ಅವಳನ್ನು ತಡೆಯಲೆತ್ನಿಸಿದಳು. ಆದರೆ ಅಂಜಿಕೆಯಿಂದ ಇಮ್ಮಡಿ ಬಲ ಬಂದಿದ್ದ ಸುಸಾನ್ ಅವಳನ್ನು ಕೊಸರಿಕೊಂಡು ಓಡಿದಳು.

ಸುಸಾನ್ ಜೀವದ ಪರಿವೆಯಿಲ್ಲದೆ ಗಿಡಗಳ ಮಧ್ಯದಲ್ಲಿ ಓಡಿದಳು. ಗುಡ್ಡದ ತುದಿಗೆ ಬರುವವರೆಗೂ ಅವಳಿಗೆ ಅಡಗಲು ಸ್ಥಳ ಕಾಣಲಿಲ್ಲ. ತುದಿಯಲ್ಲಿ ಮಾತ್ರ ಅವಳಿಗೊಂದು ಗವಿ ಕಾಣಿಸಿತು. ಇಲ್ಲಿ ಅಡಗಿ ಕೊಳ್ಳಬೇಕು ಎಂದವಳು ಒಳಗೇನಿರಬಹುದು ಎಂದು ಯೋಚನೆ ಕೂಡ ಮಾಡದೆ ಗವಿಯಲ್ಲಿ ಹೊಕ್ಕಳು. ಆಯಾಸ, ಅಂಜಿಕೆಗಳಿಂದ ಅವಳ ಶ್ವಾಸ ಬಲವಾಗಿ ಹೊಡೆದುಕೊಳ್ಳುತ್ತಿತ್ತು. ಇನ್ನೇನು ಮಾಡಲಿ ಎಂದು ಅವಳು ಚಿಂತಿಸುತ್ತಿದ್ದಾಗಲೇ "ಸುಸಾನ್ ಬಾ, ಅಂಜಬೇಡ. ನಾವಿಬ್ಬರೂ ಶಾಂತ ಚಿತ್ತದಿಂದ ಮಾತಾಡೋಣ. ಎಲ್ಲ ಸರಿಯಾಗುವದು. ಚಿಂತಿಸಬೇಡ. ಅಡಗಿ ಕೂಡ್ರಬೇಡ" ಎಂದು ಬೆಡ್ರ್‍ಕ್ಸ್ ಕೂಗಿದ್ದು ಕೇಳಿಸಿತು. ಅವನ ಜೊತೆ ಓವಿಲಾ ಕೂಡ ಇದ್ದಳು. ಅವರಿಬ್ಬರೂ ಫ್ರೆಂಚ್ ಭಾಷೆಯಲ್ಲಿ ಮಾತನಾಡಿಕೊಳ್ಳುವುದು ಅವಳಿಗೆ ಕೇಳಿಸಿತು. ಅವಳ ಮೈ ನಡುಗತೊಡಗಿತು. ಅವರ ಕಾಲಿಗೆ ತಾಕಿ ದೂರ ಸಿಡಿದ ಕಲ್ಲಿನ ಸಪ್ಪಳ ಕೇಳಿಸಲು ಅವರು ಸಮೀಪದವಲ್ಲಿಯೆ ಬಂದಿದ್ದಾರೆಂದು ಅವಳು ಇನ್ನಷ್ಟು ಮುದುಡಿ ಕುಳಿತಳು. ಶ್ವಾಸೋಚ್ಛ್ವಾಸ ಮಾಡುವ ಧೈರ್ಯ ಕೂಡ ಅವಳಿಗಿರಲಿಲ್ಲ. ಅವರೇನೇ ಹೇಳಲಿ, ತಾನೆಂದೂ ಹೊರಬೀಳುವುದಿಲ್ಲ ಎಂದು ಅವಳು ನಿರ್ಧರಿಸಿದಳು. ಇಬ್ಬರ ಕೊಲೆಯಾಯಿತು, ಇನ್ನು ತನ್ನ ಸರತಿ ಎಂದವಳಿಗೆ ನಂಬಿಕೆಯಾಯಿತು.

ಅವರಿಬ್ಬರ ಧ್ವನಿಗಳು ದೂರ ದೂರ ಹೋದವು. ಅವರು ಗುಡಿಸಲಿಗೆ ತಿರುಗಿದರೆಂದು ತಿಳಿದು ಅವಳು ಸದ್ಯ ಉಳಿದೆ ಎಂದು ಉಸಿರು ಬಿಟ್ಟಳು.

ಆದರೆ ನಡುಗಡ್ಡೆ ಚಿಕ್ಕದಾಗಿತ್ತು. ಅವಳನ್ನು ಹುಡುಕಿ ತೆಗೆಯುವುದೇನೂ ಅಸಾಧ್ಯ ಮಾತಾಗಿರಲಿಲ್ಲ. ಅವಳಿಗೆ ಅನ್ನ ನೀರು ಬೇಡವೇ! ಅದು ಸಿಗಬೇಕಾದರೆ ಮತ್ತೆ ಅವಳು ತಾನೆಲ್ಲಿಂದ ಓಡಿ ಬಂದಿದ್ದಳೊ ಅಲ್ಲಿಗೇ ಹೋಗಬೇಕು.

ಅವಳು ಗವಿಯಿಂದ ಹೊರಬಿದ್ದಳು. ಜಾಗರೂಕತೆಯಿಂದ ನಡೆಯುತ್ತ ಸಮುದ್ರ ತೀರಕ್ಕೆ ಬಂದು ಪೂರ್ಣ ಕತ್ತಲಾಗಲಿ ಎಂದು ಕಾದು ಕುಳಿತಳು.

ಬೆಡ್ರ್‍ಕ್ಸ್‌ನ ಗುಡಿಸಲಿನಲ್ಲಿ ದೀಪ ಉರಿಯುತ್ತಿತ್ತು. ಅವಳಿಗೆ ಸಂಭಾಷಣೆಯ ಸದ್ದೂ ಕೇಳಿಸುತ್ತಿತ್ತು. ಕೊನೆಗೊಮ್ಮೆ ಇನ್ನು ಸುರಕ್ಷಿತಳಾದೆ ಎಂದೆನಿಸಿತು ಅವಳಿಗೆ. ಅವಳು ಮೆಲ್ಲಗೆ ಬಂದು ಮತ್ತೊಂದು ಗುಡಿಸಲಿನಲ್ಲಿದ್ದ ಒಣಗಿದ ಮಾಂಸವನ್ನಿಟ್ಟಿದ್ದ ಚೀಲವನ್ನೆತ್ತಿಕೊಂಡಳು. ನೀರು ತುಂಬಿದ ಬಾಲ್ದಿಯನ್ನು ಇನ್ನೊಂದು ಕೈಲಿ ಹಿಡಿದುಕೊಂಡು ಹೊರಟಳು. ಏನೂ ಸಪ್ಪಳವಾಗದಿರಲಿ ದೇವರೇ ಎಂದು ಮನದಲ್ಲೆ ಪ್ರಾರ್ಥಿಸಿಕೊಂಡಳು.

ಹಾಗೆ ಅವಳು ಸಾಗಿದ್ದಾಗ ಒಂದು ತಿರುವಿನಲ್ಲಿ ಯಾರೊ ನರಳಿದ್ದು ಅವಳ ಕಿವಿಗೆ ಬಿತ್ತು. ಅವಳು ಭೀತಿಯಿಂದ ತತ್ತರಿಸಿ ನಿಂತಳು. ಮತ್ತೆ ಅದೇ ನರಳುವಿಕೆ ಅವಳು ಚೀಲ ಬಾಲ್ದಿಗಳನ್ನು ಕೆಳಗಿಟ್ಟು ಜಾಗ್ರತೆಯಿಂದ ಆ ಸದ್ದು ಬಂದಲ್ಲಿಗೆ ಹೋದಳು. ಅಲ್ಲಿ ಅವಳು ಸತ್ತ ಎಂದು ಭಾವಿ

ಸಿದ್ದ, ತಾನು ಮನಸಾರೆ ಪ್ರೀತಿಸಿದ್ದ ಜಾನ್ ಮೊಣಕಾಲೂರಿ ಮುಂದೆ ಸಾಗಲೆತ್ನಿಸುತ್ತಿರುವುದು ಕಾಣಿಸಿತು.

ಸುಸಾನ್ ಅವನ ಬಳಿ ಓಡಿದಳು. "ಜಾನ್, ಜಾನ್, ನಾನು ಸುಸಾನ್, ಗುರುತು ಸಿಗುವದಿಲ್ಲವೆ ?" ಅವಳು ಅನುಕಂಪದಿಂದ ಕೇಳಿದಳು.

ಅವನ ಮುಖ ಹೆಣದಂತೆ ನಿಸ್ತೇಜವಾಗಿತ್ತು. ಕೂದಲೆಲ್ಲ ರಕ್ತಲೇಪಿತವಾಗಿ ಜಡೆಗಟ್ಟಿತ್ತು. ಆತ ಮಾತಾಡದಿದ್ದರೂ ಅವನ ಕಣ್ಣುಗಳು ಅವಳನ್ನು ಗುರುತಿಸಿದವು.

"ನಡೆಯ ಬಲ್ಲಿಯಾ ? ನನ್ನನ್ನು ಹಿಡಿದುಕೊ. ನಾವಿಲ್ಲಿಂದ ಪಾರಾಗಬೇಕು. ಇಲ್ಲವಾದರೆ ಬೆರ್ಡುಕ್ಸ್ ನಮ್ಮನ್ನು ಹುಡುಕಿ ಕೊಲ್ಲುವನು." ಇಷ್ಟೆಂದು ಸುಸಾನ್ ಅವನ ಬಗಲಿಗೆ ಕೈಹಾಕಿ ಎಬ್ಬಿಸಿದಳು. ಅವಳ ಮೃದುಧ್ವನಿ, ಪ್ರಿಯವಚನಗಳಿಂದ ಜಾನನಿಗೂ ಏನೊ ಒಂದು ವಿಧವಾದ ಶಕ್ತಿ ಬಂದಂತಾಗಿ ಆತ ಮೆಲ್ಲನೆ ಅವಳ ಮೇಲೆ ಭಾರ ಹಾಕಿಕೊಂಡು ನಡೆಯತೊಡಗಿದ.

ಹಾದಿಯಲ್ಲಿ ಒಂದು ನೂರಾರು ಸಲವಾದರೂ ಆತ ಮುಗ್ಗರಿಸಿರಬೇಕು. ಆದರೂ ಅವರು ಕೊನೆಗೆ ಸುಸಾನ್ ಕಂಡು ಹಿಡಿದದ್ದ ಗವಿಯನ್ನು ಮುಟ್ಟಿದರು. ಗವಿಯಲ್ಲಿ ಜಾನ್ ಅಡ್ಡಾದನೊ ಇಲ್ಲವೊ ಆತ ಮೂರ್ಛೆ ಹೋಗಿ ಬಿಟ್ಟ. ಆತನಿಗೆ ಎಚ್ಚರ ಬರುವದರೊಳಗಾಗಿ ಸುಸಾನ್ ನೀರಿನ ಬಾಲ್ದಿಯನ್ನೂ ಮಾಂಸದ ಚೀಲವನ್ನೂ ತಂದಿದ್ದಳು.

ಅವಳು ಅವನ ಗಾಯಗಳನ್ನು ತೊಳೆದಳು. ತುಟಿಗೆ ನೀರು ಸವರಿದಳು. "ಏನಾಗಿದೆ ? ನಾನೆಲ್ಲಿದ್ದೇನೆ ?" ಜಾನ್ ಪಿಸು ಮಾತಿನಲ್ಲಿ ಕೇಳಿದ.

"ಬೆರ್ಡುಕ್ಸ್‌ನೊಂದಿಗೆ ಆದ ಹೊಡೆದಾಟದಲ್ಲಿ ನಿನಗೆ ಬಲವಾದ ಗಾಯವಾಗಿದೆ. ಆದರೆ ಈಗ ನೀನು ಸುರಕ್ಷಿತನಾಗಿರುವಿ." ಎಂದಳು ಸುಸಾನ್.

ಅವಳ ಧ್ವನಿ ಕಂಪಿಸಲಿಲ್ಲ. ಅವಳ ಕಣ್ಣೀರು ಕೆಳಗೆ ಬೀಳಲಿಲ್ಲ. ಆದರೆ ಅವಳೆಂದಂತೆ ಎಲ್ಲವೂ ಸರಿಯಾಗಿರಲಿಲ್ಲ. ಅವನ ತಲೆಗಾದ ಗಾಯದಿಂದ ಆತ ಬಹುಶಃ ಬದುಕುಳಿಯುವುದಿಲ್ಲ ಎಂದು ಅವಳ ವೈದ್ಯಕೀಯಜ್ಞಾನ ಹೇಳುತ್ತಿತ್ತು.

"ನನ್ನ ತಲೆ ಸಿಡಿಯುತ್ತದೆ" ಎಂದ ಜಾನ್. "ಸ್ವಲ್ಪ ತಾಳಿಕೊ ಗುಣವಾಗುತ್ತದೆ" ಎನ್ನುತ್ತ ಸುಸಾನ್ ಜಾನ್‌ನು ತನ್ನ ಕೈಯಿಂದ ಗಾಯವನ್ನು ಮುಟ್ಟಿ ನೋಡದಂತೆ ತಡೆದಳು. "ನೀನು ಇಲ್ಲಿಯೆ ನನ್ನ ಬಳಿ ಇರು" ಎಂದು ಜಾನ್ ಅಂಜಿಕೆಯ ಸ್ವರದಲ್ಲಿ ಹೇಳಿದ.

"ಹೂಂ" ಸುಸಾನ್ ಹೊರಗೆ ಹೋಗಿ ಒಂದಿಷ್ಟು ಹುಲ್ಲು ಕಿತ್ತು ತಂದು ಅದರಿಂದ ಅವನಿಗೊಂದು ತಲೆಗಿಂಬು ಮಾಡಿಕೊಟ್ಟಳು.

ಮರುದಿನ ಮುಂಜಾನೆ ಜಾನ್ ತುಸು ಚೇತರಿಸಿಕೊಂಡಂತಿತ್ತು. ಆತ ಒಂದು ತುಣುಕು ಮಾಂಸ ತಿಂದು ಒಂದು ಗುಟುಕು ನೀರು ಕುಡಿದ. ಆದರೆ ಸುಸಾನ್ ಒಂದು ನಿಮಿಷವೂ ಅವನನ್ನು ಬಿಟ್ಟಿರಲು ಆತ ಬಿಡಲಿಲ್ಲ. "ನೀನೂ ನನ್ನ ಮಗ್ಗಲಲ್ಲಿ ಮಲಗಿರು" ಎಂದನಾತ.

"ನೀನು ಬಹು ಸುಂದರಿಯಾಗಿರುವಿ. ನಾವಿಲ್ಲಿಂದ ಹೋದಮೇಲೆ ಲಗ್ನವಾಗೋಣ" ಜಾನ್ ಹೇಳಿದ. ಸುಸಾನ್ ಮಹತ್ಪ್ರಯಾಸದಿಂದ ಉಕ್ಕಿಬರುತ್ತಿದ್ದ ಅಳುವನ್ನು ನುಂಗಿಕೊಂಡು ಅವನೆಂದದ್ದಕ್ಕೆ "ಹೂಂ" ಅನ್ನುತ್ತಿದ್ದಳು.

ಒಂದೈದು ನಿಮಿಷ ಹೀಗೆ ಮಾತಾಡಿದ ಜಾನ್ ನಿದ್ದೆ ಹೋದ. ಎಚ್ಚರಾದಾಗ ಆತನಿಗೆ ಸನ್ನಿಪಾತವಾಗಿತ್ತು. ಮೈ ಕೆಂಡದಂತೆ ಉರಿಯುತ್ತಿತ್ತು. ಆತ ಸುಸಾನಳ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು-ಅವಳು ತನ್ನಕೈಯನ್ನು ಸುಲಭದಲ್ಲಿ ಬಿಡಿಸಲಾರದಷ್ಟು ಗಟ್ಟಿಯಾಗಿ ಹಿಡಿದುಕೊಂಡು ಹುಚ್ಚುಚ್ಚಾಗಿ ಬಡಬಡಿಸತೊಡಗಿದ. ಸುಸಾನ್ ಮೃತ್ಯುವನ್ನು ಕಾಯುತ್ತ ಅಸಹಾಯಳಾಗಿ ಬಿದ್ದುಕೊಂಡಿದ್ದಳು. ಹೀಗೆಯೆ ಮೂರು ದಿನಗಳು ಕಳೆದವು. ಕುಡಿಯುವ ನೀರು ಮುಗಿದು ಹೋಗಿತ್ತು. ನೀರಿಲ್ಲದೆ ನಡೆಯುವಂತಿರಲಿಲ್ಲ. ಆದರೆ ಈಗಲೊ ಇನ್ನೊಂದು ಕ್ಷಣದಲ್ಲೋ ಸಾಯಲಿದ್ದ ಜಾನ್‌ನನ್ನು ಬಿಟ್ಟು ಹೋಗುವದಾ

ದರೂ ಹೇಗೆ ?

ನಾಲ್ಕನೆಯ ದಿನ ರಾತ್ರಿ ಅವಳು ನಿರ್ಧಾರ ಮಾಡಿದಳು. ಈ ನಾಲ್ಕು ದಿನಗಳಲ್ಲಿ ಬೆರ್ಡುಕ್ಸ್‌ನ ಸುಳಿವಿರಲಿಲ್ಲ. ಆದರೆ ಇಂದು ರಾತ್ರಿ ಅವನು ಅವಳ ಹೆಸರನ್ನು ಹಿಡಿದು ಕೂಗುತ್ತಿರುವದು ಕೇಳಲು ಅವಳೊಂದು ನಿರ್ಧಾರ ಮಾಡಲೇಬೇಕಾಯಿತು.

ಬೆರ್ಡುಕ್ಸ್‌ನ ಧ್ವನಿ ಸಮೀಪ ಸಮೀಪಕ್ಕೆ ಬರತೊಡಗಿತು. "ಸುಸಾನ, ಸುಸಾನ್ ಬಾ. ನಾನು ನಿನ್ನನ್ನು ನೋಯಿಸುವದಿಲ್ಲ. ನಿನಗಾಗಿ ಓವಿಲಾಳನ್ನು ತ್ಯಜಿಸುತ್ತೇನೆ. ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಕೂಗುತ್ತಿದ್ದನಾತ.

ಅವಳ ಮಗ್ಗಲಲ್ಲಿ ಮಲಗಿದ್ದ ಜಾನ್ ನರಳಿದ. ಆ ಧ್ವನಿ ಬೆರ್ಡುಕ್ಸನಿಗೆ ಕೇಳಿಸದಿರಲೆಂದು ಸುಸಾನ್ ಅವನ ಬಾಯನ್ನು ತನ್ನ ಕೈಯಿಂದ ಮುಚ್ಚಿದಳು. ಬೆರ್ಡುಕ್ಸನ ಧ್ವನಿ ಮತ್ತೆ ದೂರ ದೂರ ಹೋಯಿತು. ಕೊನೆಗೆ ಕೇಳದಂತಾಯಿತು.

ಅವಳು ನಿಟ್ಟುಸಿರು ಬಿಟ್ಟು ಜಾನನನ್ನು ದಿಟ್ಟಿಸಿ ನೋಡಿದಳು. ಬೆರ್ಡುಕ್ಸನ ಅಂಜಿಕೆಯಲ್ಲಿ ಅವಳು ಇದ್ದ ಈ ಕೆಲವು ನಿಮಿಷಗಳಲ್ಲಿ ಜಾನ್ ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿ ಬಿಟ್ಟಿದ್ದ. ಸುಸಾನ್ ಪ್ರೀತಿಸಿದ ತರುಣ ಸತ್ತಿದ್ದ. ಅವಳ ಕಣ್ಣೀರು ಈಗ ಧಾರೆ ಧಾರೆಯಾಗಿ ಹರಿಯಿತು.

ಬೆಳಗಿನ ಝಾವದ ವರೆಗೂ ಅಳುತ್ತಲಿದ್ದ ಅವಳು ಒಂದು ನಿರ್ಧಾರಕ್ಕೆ ಬಂದಳು. ಅದಾವ ಅಜ್ಞಾತಶಕ್ತಿಯಿಂದಲೊ ಅವಳು ಜಾನನ ಹೆಣವನ್ನೂ ಹೊರಗೆಳೆದಳು. ಗುಡ್ಡದ ತುದಿಯಿಂದ ಕೆಳಗಿನ ಆಳವಾದ ಸಮುದ್ರದಲ್ಲಿ ಕಣ್ಮುಚ್ಚಿಕೊಂಡೇ ಜಾನನ ಶವವನ್ನು ದೂಡಿಬಿಟ್ಟಳು.

ಬೆರ್ಡುಕ್ಸ್ ತನ್ನ ಗುಡಿಸಲಿನಲ್ಲಿ ಅಡ್ಡಾಗಿ ಬಿಸುಸುಯ್ಯುತ್ತಲಿದ್ದ. ಸುಸಾನ್ ಓಡಿಹೋಗಿ ಮೂರು ವಾರಗಳಾಗಿದ್ದವು. ಆದರೂ ಅವಳ ಸುಳಿವು ಕಿಂಚಿತ್ತಾದರೂ ಹತ್ತಿರಲಿಲ್ಲ. ಗುಡಿಸಲಿನ ಬಳಿ ಅವಳ ಹೆಜ್ಜೆಗಳ ಗುರುತು ಅವನಿಗೆ ಕಾಣಿಸಿತ್ತು. ಗುಡಿಸಲಿನಲ್ಲಿದ್ದ ಆಹಾರ ಮಾಯವಾಗಿತ್ತು. ಆದರೆ ಅವನು ಅವಳನ್ನು ಹುಡುಕಲು ಪಟ್ಟ ಶ್ರಮವೆಲ್ಲ ವ್ಯರ್ಥವಾಗಿತ್ತು.

ಆತ ಮಲಗಿದಲ್ಲಿಂದಲೇ ಹೂಂಕರಿಸಿದ. ಆ ಸದ್ದು ಕೇಳಿ ಗುಡಿಸಲಿನ ಇನ್ನೊಂದು ಮೂಲೆಯಲ್ಲಿ ಮುದುಡಿಯಾಗಿ ಬಿದ್ದಿದ್ದ ಓವಿಲಾ ಎದ್ದು ಬಂದು "ಏನನ್ನು ತರಲಿ? " ಎಂದು ಕೇಳಿದಳು. ಈ ಮೂರು ವಾರಗಳಲ್ಲಿ ಅವಳು ಅವನ ನೆರಳಾಗಿದ್ದುಕೊಂಡು ಅವನ ಸೇವೆಯನ್ನು ಮಾಡಿದ್ದಳು. ಅವನ ಮನವೊಲಿಸಲು ತನ್ನೆಲ್ಲ ಒಯ್ಯಾರ ಶೃಂಗಾರಗಳನ್ನು ಖರ್ಚು ಮಾಡಿದ್ದಳು.

ಆದರೆ ಅದೆಲ್ಲ ವ್ಯರ್ಥವಾಗಿತ್ತು. ಬೆರ್ಡುಕ್ಸ್‌ನ ಮನವೆಲ್ಲ ಸುಸಾನಳಲ್ಲಿ ನೆಟ್ಟುಹೋಗಿತ್ತು. ಓವಿಲಾಳ ಪ್ರಶ್ನೆಯನ್ನು ಕೇಳಿ ಆತ ವ್ಯಂಗವಾಗಿ "ತರುತ್ತೀಯಾ ನನಗೆ ಬೇಕಾದ್ದನ್ನು? ಹೋಗು. ಸುಸಾನಳನ್ನು ಹುಡುಕಿಕೊಂಡು ಬಾ. ಅಂದರೆ ನನಗೆ ಸಂತೋಷವಾಗುವದು" ಎಂದ.

ಅವಳ ಮುಖ ಮುದುಡಿತು. ಪೈಶಾಚಿಕ ನಗುವನ್ನು ನಗುತ್ತ ಬೆರ್ಡುಕ್ಸ್ ಅವಳ ಕೈಯನ್ನು ಹಿಡಿದು ತಿರುವುತ್ತ "ಹೋಗು ಹೋಗು. ಅವಳನ್ನು ಹುಡುಕಿಕೊಂಡು ಬಾ." ಎಂದ.

ಈಗ ಓವಿಲಾಳ ಸಹನೆ ಮೀರಿತು. ಅವಳ ದೈನ್ಯ-ಅಂಜಿಕೆಗಳು ಮಾಯವಾದವು. ಅವಳು "ನೋಡಿ ಈ ಗಂಡಸನ್ನು! ಈ ಮಹಾ ಪರಾಕ್ರಮಿಯನ್ನು ! ಈ ಚಿಕ್ಕ ನಡುಗಡ್ಡೆಯಲ್ಲಿ ಅಡಗಿರುವ ಒಬ್ಬ ಹುಡುಗಿಯನ್ನು ಹುಡುಕಲಾರದ ಷಂಡ ನೀನು!" ಎಂದು ಬೆರ್ಡುಕ್ಸನನ್ನು ಜರೆದಳು.

"ಬಾಯ್ಮುಚ್ಚು."

"ಯಾಕೆ? ಆ ಇಂಗ್ಲಿಷ್ ಹುಡುಗಿ ನಿನ್ನ ಅಪಜಯವನ್ನು ಕಂಡು ನಗುತ್ತಿದ್ದಾಳೆ. ಥೂತ್"

ಬೆರ್ಡುಕ್ಸ್‌ನ ಕಣ್ಣುಗಳಲ್ಲಿ ಮಿನುಗಿದ ರುದ್ರ ನೋಟವನ್ನು ಕಂಡು ಅಂಜಿದ ಅವಳು ಹೊರ

ಗೋಡಿಡಿದಳು. ಬೆರ್ಡುಕ್ಸ್ ಅವಳನ್ನು ಬೆನ್ನಟ್ಟಿ ಹಿಡಿದು "ನಿನ್ನ ಬಾಯಿ ಬಹು ಸಡಿಲಾಯಿತು. ನೀನು ಇಲ್ಲಿರುವುದು ನನಗೆ ಬೇಡವಾಗಿದೆ" ಎಂದರಚಿದ.

ಈತ ತನ್ನನ್ನಿನ್ನು ಕೊಲ್ಲುತ್ತಾನೆ ಎಂದು ತಿಳಿದು ಬಂದ ಓವಿಲಾ ಅವನ ಮೈಗೆ ಅಂಟಿಕೊಂಡು "ದಮ್ಮಯ್ಯ! ನಾನು ಸುಸಾನಳನ್ನು ಹುಡುಕಿಕೊಂಡು ಬರುತ್ತೇನೆ. ನನ್ನ ಮೇಲಿನ ಪ್ರೇಮ..."

ಬೆರ್ಡುಕ್ಸ್ ಅವಳ ಅನುನಯಕ್ಕೆ ಜಗ್ಗಲಿಲ್ಲ. ಆತ ಅವಳನ್ನೆತ್ತಿ ಬೀಸಿ ಕೆಳಕ್ಕೆ ಒಗೆದ. ಬಂಡೆಗಲ್ಲುಗಳಿಗಪ್ಪಳಿಸುತ್ತ ಹೋಗಿ ಓವಿಲಾಳ ದೇಹ ಸಮುದ್ರ ತಳವನ್ನು ಕಂಡಿತು.

ಗುಡ್ಡದ ತುದಿಯ ಮೇಲೆ ಗವಿಯ ಬಾಗಿಲಲ್ಲಿ ನಿಂತಿದ್ದ ಸುಸಾನಳಿಗೆ ಓವಿಲಾಳು ಚೀರಿದ್ದು ಕೇಳಿಸಿತ್ತು. ಸಮುದ್ರದಲ್ಲಿ ಬೀಳುತ್ತಲಿದ್ದ ದೇಹ ಕಂಡಿತ್ತು. ಇನ್ನೆಷ್ಟು ದಿನ ತಾನು ಈ ಕೊಲೆಪಾತಕಿಯಿಂದ ಉಳಿದುಕೊಳ್ಳಬಲ್ಲೆ ? ಎಂದು ಅವಳು ನಡುಗಿದಳು.

ಬೆರ್ಡುಕ್ಸ್‌ನಿಗೆ ಮಾರ್ಗ ಸುಗಮವಾದಂತನಿಸಿತು. ಮಾಡಿದ ಮೂರು ಕೊಲೆಗಳ ಬಗ್ಗೆ ಅವನಿಗೆ ಎಳ್ಳಷ್ಟೂ ಪಶ್ಚಾತ್ತಾಪವೆನಿಸುತ್ತಿರಲಿಲ್ಲ. ಸುಸಾನ್ ಅನ್ನ ನೀರುಗಳಿಗಾಗಿ ಬರಲೇಬೇಕಾಗುತ್ತದೆಂದು ಆತನಿಗೆ ಗೊತ್ತು. ಅವಳು ಬರುವದನ್ನು ಕಾಯ್ದು ಕುಳಿತಿರಲು ಆತ ನಿರ್ಧರಿಸಿದ.

ಈ ಮಾತು ಸುಸಾನಳಿಗೂ ತಿಳಿದಿತ್ತು. ಅಂತೇ ಅವಳು ಗವಿ ಬಿಟ್ಟು ಕದಲಲಿಲ್ಲ. ರಾತ್ರಿ ನಿದ್ದೆ ಮಾಡಲು ಕೂಡ ಅವಳಿಗೆ ಭಯವಾಗುತ್ತಿತ್ತು. ಐದು ದಿನ ಹಗಲು ರಾತ್ರಿಗಳನ್ನು ಅವಳು ಐದು ಯುಗಗಳಂತೆ ಕಳೆದಳು. ಹುಡುಕುತ್ತ ಹುಡುಕುತ್ತ ಅಲೆದಾಡುತ್ತಿದ್ದ ಬೆರ್ಡುಕ್ಸ್ ಆರನೆಯ ದಿನ ಸುಸಾನಳ ಗವಿಗೆ ತೀರ ಸಮೀಪಕ್ಕೆ ಕೇವಲ ನೂರು ಯಾರ್ಡು ಅಂತರದಲ್ಲಿ ಬಂದು ನಿಂತ. ಇನ್ನು ಈತನಿಗೆ ತಾನಿರುವ ಸ್ಥಳ ಕಾಣಿಸುತ್ತದೆ, ಇಲ್ಲಿಂದ ಓಡದೆ ಗತಿಯಿಲ್ಲ ಎಂದುಕೊಂಡ ಸುಸಾನ ಮೆಲ್ಲಗೆ ಗವಿಯಿಂದ ಹೊರಸುಸುಳಿ ಗಿಡಗಂಟೆಗಳ ನಡುವೆ ನಡೆಯತೊಡಗಿದಳು.

ಆದರೆ ಅವಳ ಅದೃಷ್ಟ ಅಲ್ಲಿಗೆ ಮುಗಿಯಿತು. ಬೆರ್ಡುಕ್ಸ್‌ನ ಕಣ್ಣಿಗೆ ಗವಿ ಬಿದ್ದಿತು. ಆತ ಒಂದೇ ನೆಗೆತಕ್ಕೆ ಗವಿಯನ್ನು ತಲುಪಿ ಒಳಹೊಕ್ಕು ನೋಡಿದ. ಅಲ್ಲಿ ಅವಳು ಕಾಣಿಸದಿರಲು ಹೊರಗೆ ಬಂದು ಹದ್ದಿನ ಕಣ್ಣಿನಿಂದ ಸುತ್ತೆಲ್ಲ ನೋಡಿದ. ಅಕೊ, ಅಲ್ಲಿ—ಏನದು ? ಹಾ ! ಸುಸಾನ್.

" ಅಂತೂ ಭೆಟ್ಟಿಯಾಯಿತು " ಎಂದು ಆತ ಬಹು ಮೆತ್ತಗಿನ ಸ್ವರದಲ್ಲಿ ಹೇಳಿದ. ಆದರೆ ಆ ಮೃದು ಧ್ವನಿಯಲ್ಲಿ ಅಡಕವಾಗಿದ್ದ ಅಮಾನುಷ ಭಾವ ಸ್ಪಷ್ಟವಾಗಿತ್ತು. ಬೆರ್ಡುಕ್ಸ್‌ನ ಬಟ್ಟೆಗಳೆಲ್ಲ ಹರಿದು ಚಿಂದಿಯಾಗಿದ್ದವು. ಕೂದಲು ಜಡೆಗಟ್ಟಿತ್ತು. ಆತ ಕಾಡು ಮಾನವನಂತೆ ಭೀಕರನಾಗಿ ಕಾಣಿಸುತ್ತಿದ್ದ.

"ವ್ಯರ್ಥ ಇಷ್ಟು ದಿನ ಅಡಗಿ ಕುಳಿತು ಕಷ್ಟಪಟ್ಟೆ. ನನಗೆ ಸಿಟ್ಟು ಬಂದಿತ್ತು. ಆದರೆ ನಾನು ನಿನ್ನನ್ನು ಕ್ಷಮಿಸುತ್ತೇನೆ. ಬಾ ಪ್ರಿಯೆ."

ಸುಸಾನ್ ನಿಂತಲ್ಲಿಂದ ಕದಲಲಿಲ್ಲ. ಒಂದು ಶಬ್ದವನ್ನೂ ಆಡಲಿಲ್ಲ. "ಬಾ ಸುಸಾನ್, ಇಲ್ಲಿನ್ನು ನಿನಗೆ ಸಹಾಯಮಾಡುವವರು ಯಾರೂ ಉಳಿದಿಲ್ಲ ಬಾ." ಎಂದ ಬೆರ್ಡುಕ್ಸ್. ಬೆರ್ಡುಕ್ಸನ ಕಣ್ಣುಗಳ ವಿಚಿತ್ರ ಹೊಳಪು, ಮುಖಲಕ್ಷಣಗಳಿಂದ ಅವನ ಬುದ್ಧಿ ಭ್ರಂಶವಾಗಿದೆ ಎಂದು ಸುಸಾನಳಿಗೆ ತಿಳಿಯಲು ತಡವಾಗಲಿಲ್ಲ. ಅವಳು ಓಡಲೆಂದು ಕಾಲುಕೀಳುವಷ್ಟರಲ್ಲಿ ಬೆರ್ಡುಕ್ಸ್ ಅವಳ ರಟ್ಟೆಯನ್ನು ಹಿಡಿದ.

ಆತ ಅವಳನ್ನು ಹಿಡಿದು ಕಾಲುಹಾದಿಯತ್ತ ಎಳೆದೊಯ್ಯತೊಡಗಿದ. ಬಂಡೆಗಲ್ಲುಗಳ ಬಳಿ ಆತ ತನ್ನ ಹಿಡಿತವನ್ನು ಸರಿಪಡಿಸಿಕೊಳ್ಳುತ್ತಿರುವಾಗ ಅವಳು ಕೊಸರಿಕೊಂಡು ಹಿಂದೆ ಸರಿದಳು. ಆತ ಅವಳನ್ನು ಹಿಡಿಯಲೆಂದು ಜಿಗಿದ. ಓಡಬೇಕೆಂದ ಅವಳ ಕಾಲು ಜಾರಿ ಅವಳು



ASP/N 2

ಮುಗ್ಗರಿಸಿ ಬಿದ್ದಳು. ಅದರಿಂದ ಬೆರ್ಡ್ರುಕ್ಸ್ಸನಿಗೆ ಅವಳನ್ನು ಹಿಡಿಯುವದಾಗಲಿಲ್ಲ.

ನೆಲಕ್ಕೆ ಬಿದ್ದ ತನ್ನ ಮೇಲಿನ್ನು ಆತ ಹದ್ದಿನಂತೆರಗುತ್ತಾನೆ, ಎಂದುಕೊಂಡ ಸುಸಾನಳಿಗೆ ಅವನ ಸ್ಪರ್ಶವಾಗಲೇ ಇಲ್ಲ. ಆತನ ಜಿಗಿತದ ವೇಗ ಅವನನ್ನು ಬಂಡೆಗಲ್ಲಿನಾಚೆ ಒಯ್ದಿತ್ತು. ಆತ ತನ್ನನ್ನು ನಿಯಂತ್ರಿಸಿಕೊಳ್ಳಲು ಮಾಡಿದ ಯತ್ನ ವ್ಯರ್ಥವಾಗಲು ಆತ ಭೀತಿಯಿಂದ ಕಂಗೆಟ್ಟು ಪಶುವಿನಂತೆ ಚೀರುತ್ತಾ ಧುಡುಂ ಎಂದು ಕೆಳಗೆ ಬಿದ್ದ.

ಸುಸಾನ್ ಮೆಲ್ಲಗೆ ಆ ಬಂಡೆಯನ್ನೇರಿ ಕೆಳಗೆ ಇಣಿಕಿ ನೋಡಿದಳು. ಅಲ್ಲಿ ಕೆಳಗೆ ಬಂಡೆಗಲ್ಲುಗಳಿಗಪ್ಪಳಿಸಿ ಛಿನ್ನವಿಚ್ಛಿನ್ನವಾದ ಬೆರ್ಡ್ರುಕ್ಸನ ದೇಹ ಅವಳಿಗೆ ಕಾಣಿಸಿತು.

ಸುಸಾನ್ ಅಲ್ಲಿಂದ ಹೇಗೆ ತನ್ನ ಗವಿಗೆ ಮರಳಿದಳೊ ಅವಳಿಗೆ ತಿಳಿಯಲಿಲ್ಲ. ಎಷ್ಟು ಕಾಲ ಅವಳು ಅಸ್ವಸ್ಥ ನಿದ್ದೆಯಲ್ಲಿದ್ದಳೊ ಅದೂ ಅವಳಿಗೆ ತಿಳಿಯಲಿಲ್ಲ. ಒಂದು ಮುಂಜಾನೆ ಅವಳೆಚ್ಚತ್ತಾಗ ಹಸಿವೆ-ನೀರಡಿಕೆಯಿಂದ ಅವಳು ಕಂಗಾಲಾಗಿದ್ದಳು. ತುಂಬ ಅಶಕ್ತಳಾಗಿದ್ದಳು. ಆದರೆ ಅವಳ ಮನಸ್ಸು ತಿಳಿಯಾಗಿತ್ತು. ಇಷ್ಟೆಲ್ಲ ಅನುಭವಿಸಿಯೂ ಬದುಕಿರುವ ತಾನು ಪಾರಾಗಲು ಸಕಲ ಪ್ರಯತ್ನಗಳನ್ನು ಮಾಡಬೇಕೆಂದು ಅವಳು ನಿರ್ಧರಿಸಿದಳು.

ದಿನಗಳುರುಳಿದವು. ನಿತ್ಯವೂ ಗುಡ್ಡದ ತುದಿಯನ್ನೇರಿ ಹಡಗವೇನಾದರೂ ಕಾಣಿಸುವುದೇ ಎಂದು ಅವಳು ದಿಟ್ಟಿಸಿ ನೋಡುತ್ತ ಕುಳಿತಿರುತ್ತಿದ್ದಳು. ಆದರೆ ದಿನಗಳು ದಾಟುತ್ತಿದ್ದವೇ ವಿನಾ ಹಡಗು ಕಾಣಿಸುತ್ತಿರಲಿಲ್ಲ.

ಒಂದು ಮುಂಜಾನೆ ಅವಳು ಎಂದಿಗಿಂತ ತಡವಾಗಿ ಎದ್ದಳು. ಹತಬಲಳಂತೆ ಅವಳೆದ್ದು ಗುಡಿಸಲಿನ ಬಾಗಿಲು ತೆರೆದು ನೋಡುತ್ತಾಳೆ—ಅದ್ಭುತ ಆಶ್ಚರ್ಯ ಅವಳಿಗಾಗಿ ಕಾದಿತ್ತು.

ಒಂದು ದೋಣಿ ಸಮುದ್ರದಲ್ಲಿ ಬಂಡೆಗಲ್ಲುಗಳ ನಡುವೆ ಹಾಯ್ದು ದಂಡೆಯತ್ತ ಬರತೊಡಗಿತ್ತು. ದೂರದಲ್ಲಿ ಒಂದು ಹಡಗು ನಿಂತಿತ್ತು. ಇದೆಲ್ಲ ತನ್ನ ಭ್ರಮೆ ಎಂದು ಸುಸಾನ್ ಕಣ್ಣುಜ್ಜಿಕೊಂಡಳು. ಇನ್ನೇನು, ಈ ದೋಣಿ ಈ ಹಡಗ ಮಾಯವಾಗುತ್ತವೆ ಎಂದು ಅವಳೆಂದುಕೊಳ್ಳುತ್ತಿದ್ದಂತೆಯೆ ದೋಣಿಯಲ್ಲಿದ್ದವನೊಬ್ಬ ಅವಳನ್ನು ಕಂಡು ಕೂಗಿದ. ದೋಣಿಯಲ್ಲಿದ್ದ ಜನರ ಮಾತುಗಳು ಅವಳಿಗೆ ಕೇಳಿಸತೊಡಗಿದವು. ಅವಳು ದಂಡೆಗೆ ಓಡಿದಳು.

ಸುಸಾನಳ ಕಷ್ಟ ಮುಗಿಯಿತು. ಜಾನ್ ಪೋರ್ಟಿಯಸ್ ಗಿಡದ ತುದಿಗೆ ಕಟ್ಟಿದ್ದ ಶರ್ಟನ್ನು ಕಂಡು ಹಡಗಿನ ಕಪ್ತಾನ ದೋಣಿಯನ್ನು ಕಳಿಸಿದ್ದ. ಸುಸಾನಳ ದಾರುಣ ಕಥೆಯನ್ನು ಕೇಳಿ ಹಡಗಿನಲ್ಲಿದ್ದವರೆಲ್ಲ ಮರಮರ ಮರುಗಿದರು.

ಹಡಗಿನ ಕಪ್ತಾನನ ಸಹಾಯದಿಂದ ಅವಳು ಅಧಿಕಾರಿಗಳಿಗೆ ಒಪ್ಪಿಸಲೆಂದು ನಡುಗಡ್ಡೆಯಲ್ಲಿ ನಡೆದ ಹತ್ಯಾಕಾಂಡದ ವರದಿಯನ್ನು ಬರೆದಳು. ಅಧಿಕಾರಿಗಳು ಅವಳ ಹೇಳಿಕೆಯಲ್ಲಿ ವಿಶ್ವಾಸವಿಟ್ಟು ಅವಳನ್ನು ಮನ್ನಿಸಿದರು.

ಹಡಗಿನ ಕಪ್ತಾನ ಸದ್ಗೃಹಸ್ಥನಾಗಿದ್ದ. ಆತ ಸುಸಾನಳನ್ನು ತನ್ನ ಮನೆಗೆ ಕರೆದೊಯ್ದ. "ಇಂಗ್ಲೆಂಡಿಗೆ ಹೋಗುವ ಹಡಗು ಬರುವವರೆಗೆ ಇಲ್ಲಿ ನನ್ನ ಹೆಂಡತಿ ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾಳೆ" ಎಂದನಾತ.

ಫ್ರೆಂಚರು ಪ್ಯಾಶನ್ ಐಲಂಡ್ ಎಂದು ಕರೆಯುವ ಆ ನಡುಗಡ್ಡೆಯಲ್ಲಿ ಜರುಗಿದ ದುರಂತ ನಾಟಕದ ಕಥೆ ಈ ಬಗೆಯಾಗಿ ಕೊನೆಗೊಂಡಿತು.

*

ನಿಮ್ಮ ದೋಷಗಳು ಯಾವವು ಎಂದು ನಿಮಗೆ ಗೊತ್ತಿರದಿದ್ದರೆ ನಿಮ್ಮ ಹೆಂಡತಿಯನ್ನು ಕೇಳಿ-ಹೇಳುತ್ತಾಳೆ.

This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.